ಗುರುವಾರ, ಸೆಪ್ಟೆಂಬರ್ 9, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 252 | ಪುಟ 14

• www.prajavani.net

/prajavani.net @prajavani /prajavani http://bit.ly/Prajavani



ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾ ವಾಣಿ
ಕೆಪಿಎಸ್‌ಸಿ ಎಸ್‌ಡಿಎ ಹುದ್ದೆಗಳಿಗೆ ಸ್ಪರ್ಧಾತ್ಮಕ ಪರೀಕ್ಷೆ ನಡೆಸಲಿದ್ದು, ಈ ಪರೀಕ್ಷೆಯಲ್ಲಿ ಸಾಮಾನ್ಯ ಕನ್ನಡ ಪತ್ರಿಕೆ ಸಿದ್ಧತೆ ಹೇಗಿರಬೇಕು?



ವಿಶೇಷ ಲೇಖನ 10
ಗೌರಿ ಹಬ್ಬದ ಶುಭಾಶಯಗಳು

ಸೆನ್ಸೆಕ್ಸ್	ನಿಫ್ಟಿ	₹/$
58,250 ▼	17,353 ▼	73.60 ▼

ರಾಷ್ಟ್ರೀಯ ರಕ್ಷಣಾ ಅಕಾಡೆಮಿ: ಮಹಿಳೆಯರ ಪ್ರವೇಶಕ್ಕೆ ಕೇಂದ್ರ ಒಪ್ಪಿಗೆ

ನವದೆಹಲಿ (ಪಿಟಿಐ): ರಾಷ್ಟ್ರೀಯ ರಕ್ಷಣಾ ಅಕಾಡೆಮಿಯಲ್ಲಿ (ಎನ್‌ಡಿಎ) ಮಹಿಳೆಯರ ಸೇರ್ಪಡೆಗೆ ಅವಕಾಶ ಕೊಡಲಾಗುವುದು ಎಂದು ಕೇಂದ್ರ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಬುಧವಾರ ತಿಳಿಸಿದೆ. ಇದರಿಂದಾಗಿ, ರಕ್ಷಣಾ ಪಡೆಗಳಲ್ಲಿ ಮಹಿಳೆಯರ ಕಾಯಂ ನೇರ ನೇಮಕಾತಿಗೆ ಅವಕಾಶ ಲಭ್ಯವಾಗಲಿದೆ. ಇದೊಂದು ಚಾರಿತ್ರಿಕ ನಿರ್ಧಾರ ಎಂದು ಹೇಳಲಾಗಿದೆ.

ಮಹಿಳೆಯರಿಗೆ ಎನ್‌ಡಿಎ ಮೂಲಕ ಕಾಯಂ ನೇಮಕಾತಿ ಸಾಧ್ಯವಾಗಿಸಲು ಸಶಸ್ತ್ರ ಪಡೆಗಳು ಮತ್ತು ಕೇಂದ್ರ ಸರ್ಕಾರದ ಅತ್ಯುನ್ನತ ಹಂತಗಳಲ್ಲಿ ಈ ನಿರ್ಧಾರಕ್ಕೆ ಬರಲಾಗಿದೆ ಎಂದು ಹೆಚ್ಚುವರಿ ಸಾಲಿಸಿಟರ್ ಜನರಲ್ ಐಶ್ವರ್ಯಾ ಬಾಟಿ ಅವರು ಕೋರ್ಟ್‌ಗೆ ತಿಳಿಸಿದರು.

ಪ್ರವೇಶ ಅವಕಾಶಕ್ಕೆ ಸಂಬಂಧಿಸಿದ ವಿವರಗಳನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸಲು ಅವಕಾಶ ಕೊಡುವಂತೆ ನ್ಯಾಯಾಲಯವನ್ನು ಐಶ್ವರ್ಯಾ ಅವರು ಕೋರಿದರು. ಪ್ರಕ್ರಿಯೆ ಮತ್ತು ಮೂಲಸೌಕರ್ಯಗಳಲ್ಲಿ ಬದಲಾವಣೆಗಳು ಆಗಬೇಕಿರುವುದರಿಂದ ಈ ವರ್ಷದ ಎನ್‌ಡಿಎ ಪರೀಕ್ಷೆಯಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳಲು ಅನುಮತಿ ನೀಡುವಂತೆಯೂ ಅವರು ವಿನಂತಿಸಿಕೊಂಡರು.


ಎನ್‌ಡಿಎ ಪರೀಕ್ಷೆಯನ್ನು ಸೆಪ್ಟೆಂಬರ್ 5ರಂದು ನಡೆಸಲು ಉದ್ದೇಶಿಸಲಾಗಿತ್ತು. ಆದರೆ, ಈ ಪ್ರಕರಣವು ವಿಚಾರಣೆ ಹಂತದಲ್ಲಿದ್ದ ಕಾರಣ ನವೆಂಬರ್ 14ಕ್ಕೆ ಮುಂದೂಡಲಾಗಿದೆ.

ಎನ್‌ಡಿಎ ಪ್ರವೇಶದ ವಿಚಾರ ಸಶಸ್ತ್ರ ಪಡೆಗಳ ಗಮನದಲ್ಲಿ ಇದ್ದರೂ ಅದಿನ್ನೂ ಪ್ರಾಥಮಿಕ ಹಂತದಲ್ಲಿಯೇ ಇದೆ ಎಂಬುದನ್ನು ಐಶ್ವರ್ಯಾ ಅವರು ನ್ಯಾಯಾಲಯದ ಗಮನಕ್ಕೆ ತಂದರು.

ಲಿಂಗ ತಾರತಮ್ಯ: ಎನ್‌ಡಿಎ ಪ್ರವೇಶದ ಮಹಿಳೆಯರ ಅವಕಾಶವನ್ನು ಲಿಂಗದ ಏಕೈಕ ಕಾರಣಕ್ಕೆ ನಿರಾಕರಿಸುವುದು ಸಮಾನತೆಯ ಮೂಲಭೂತ ಹಕ್ಕಿನ ಉಲ್ಲಂಘನೆ ಎಂದು ವಕೀಲರಾದ ಕುಶ್ ಕಾಲ್ರಾ ಅವರು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಅರ್ಹ ಪುರುಷರಿಗೆ ಮಾತ್ರ ಎನ್‌ಡಿಎ ಪ್ರವೇಶ ಪರೀಕ್ಷೆ ಬರೆಯಲು ಅವಕಾಶ ಇದೆ. ಮಹಿಳೆಯರಿಗೆ ಈ ಅವಕಾಶ ನಿರಾಕರಣೆಗೆ ಸಂವಿಧಾನದಲ್ಲಿ ಸಮರ್ಥನೀಯವಾದ ಯಾವ ಕಾರಣವೂ ಇಲ್ಲ ಎಂದು ಅರ್ಜಿಯಲ್ಲಿ ವಾದಿಸಲಾಗಿತ್ತು.

ಮಹಿಳೆಯರನ್ನು ಹೀಗೆ ಹೊರಗೆ ಇರಿಸುವುದು ಸಂವಿಧಾನದಲ್ಲಿರುವ ಸಮಾನತೆ ಮತ್ತು ತಾರತಮ್ಯರಹಿತತೆಯ ಮೌಲ್ಯಗಳಿಗೆ ಮಾಡಿದ ಅವಮಾನ ಎಂದೂ ಅರ್ಜಿದಾರರು ವಾದಿಸಿದ್ದರು. ಈ ಅರ್ಜಿಯ ವಿಚಾರಣೆ ನಡೆಸಿದ್ದ ಸುಪ್ರೀಂ ಕೋರ್ಟ್, ಮಹಿಳೆಯರಿಗೆ ಅವಕಾಶ ನಿರಾಕರಣೆಯ ಮನಸ್ಥಿತಿಯನ್ನು ಬದಲಾಯಿಸಿಕೊಳ್ಳಬೇಕು. ಎನ್‌ಡಿಎ ಪ್ರವೇಶಕ್ಕೆ ಅವಕಾಶ ಕಲ್ಪಿಸಬೇಕು ಎಂದು ಆಗಸ್ಟ್ 18ರಂದು ನಡೆದ ವಿಚಾರಣೆ ವೇಳೆ ಹೇಳಿತ್ತು. ಸರ್ಕಾರವು ಈಗ ಏನು ಮಾಡುತ್ತಿದೆ ಮತ್ತು ಮುಂದಿನ ದಿನಗಳಲ್ಲಿ ಏನು ಮಾಡಲಿದೆ ಎಂಬುದನ್ನು ಲಿಖಿತವಾಗಿ ಸಲ್ಲಿಸುವಂತೆ ಪೀಠವು ಸೂಚಿಸಿದೆ. ಇದನ್ನು ಇದೇ 22ರಂದು ನಡೆಯಲಿರುವ ವಿಚಾರಣೆಯ ವೇಳೆಪರಿಶೀಲನೆಗೆ ಒಳಪಡಿಸಲಾಗುವುದು ಎಂದಿದೆ.

‘ಲಿಂಗ ಸಮಾನತೆಗೆ ಕೆಲಸ ಮಾಡಿ’



ಲಿಂಗ ಸಮಾನತೆ ಸಾಧಿಸುವುದಕ್ಕಾಗಿ ರಕ್ಷಣಾ ಪಡೆಗಳೇ ಸ್ವಯಂಪ್ರೇರಿತವಾಗಿ ಕ್ರಮಗಳನ್ನು ಕೈಗೊಳ್ಳಬೇಕು. ಅದಕ್ಕಾಗಿ ನ್ಯಾಯಾಲಯವು ನಿರ್ದೇಶನ ನೀಡುವುದಕ್ಕೆ ಕಾಯಬಾರದು. ಇಂತಹ ತೀರ್ಮಾನ ತೆಗೆದುಕೊಳ್ಳುವಂತೆ ಸಂಬಂಧಪಟ್ಟ ಪ್ರಾಧಿಕಾರಗಳಿಗೆ ನ್ಯಾಯಾಲಯವು ನೆನಪು ಮಾಡುತ್ತಲೇ ಇದೆ ಎಂದು ಪೀಠವು ಹೇಳಿತು.

‘ಏನೂ ಆಗುವುದಿಲ್ಲ ಎಂದಿದ್ದಾಗ ಮಾತ್ರ ನ್ಯಾಯಾಲಯವು ಹಸ್ತಕ್ಷೇಪ ಮಾಡುತ್ತದೆ. ಹಸ್ತಕ್ಷೇಪ ನಡೆಸುವುದು ಖುಷಿಯ ವಿಚಾರ ಏನೂ ಅಲ್ಲ. ಸಶಸ್ತ್ರ ಪಡೆಗಳೇ ಇಂತಹ ನಿರ್ಧಾರಗಳನ್ನು ತೆಗೆದುಕೊಳ್ಳಬೇಕು. ದೇಶದ ಗೌರವಾನ್ವಿತ ಪಡೆಗಳು ಲಿಂಗ ಸಮಾನತೆಗಾಗಿ ಕೆಲಸ ಮಾಡಬೇಕು’ ಎಂದು ಪೀಠವು ಹೇಳಿತು.

ಮುಂಬಡ್ತಿ ಮೀಸಲು: ಸಮಾಜ ಕಲ್ಯಾಣ ಇಲಾಖೆ ಮತ್ತು ಡಿಪಿಎಆರ್ ಮಧ್ಯ ಸಂಘರ್ಷ

ಬಡ್ತಿ: ಪರಿಶಿಷ್ಟರಿಗೆ ಅನ್ಯಾಯ?

• ರಾಜೇಶ್ ರೈ ಚಟ್ಲ

ಬೆಂಗಳೂರು: ‘ಮುಂಬಡ್ತಿಯಲ್ಲಿ ಮೀಸಲಾತಿ ನೀಡುವಾಗ ಒಟ್ಟು ಕಾರ್ಯನಿರತ ವೃಂದ ಬಲದಲ್ಲಿ ಪರಿಶಿಷ್ಟ ಜಾತಿ (ಎಸ್‌ಸಿ) ಮತ್ತು ಪರಿಶಿಷ್ಟ ಪಂಗಡದ (ಎಸ್‌ಟಿ) ಪ್ರಾತಿನಿಧ್ಯ ಶೇ 15 ಮತ್ತು ಶೇ 3ರನ್ನು ತಲುಪಿದ ಬಳಿಕ, ರೋಸ್ಟರ್ ಪದ್ಧತಿ ಬಿಟ್ಟು ಸಾಮಾನ್ಯ ವರ್ಗದವರಿಗೆ ಬಡ್ತಿ ನೀಡಬಹುದು’ ಎಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಡಿಪಿಎಆರ್) ನೀಡಿರುವ ವಿವರಣೆಗೆ ಸಮಾಜ ಕಲ್ಯಾಣ ಇಲಾಖೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ.

ಹೀಗಾಗಿ, ಬಡ್ತಿ ಮೀಸಲಾತಿಯ ವಿಷಯವೀಗ ವಿವಿಧ ಇಲಾಖೆಗಳ ಮಧ್ಯೆ ಸಂಘರ್ಷಕ್ಕೆ ಕಾರಣವಾಗಿದೆ.

ಮುಂಬಡ್ತಿಯಲ್ಲಿ ಮೀಸಲಾತಿ ಕುರಿತು ಉಡುಪಿ ಜಿಲ್ಲಾಧಿಕಾರಿ ಕೇಳಿದ ಪ್ರಶ್ನೆಗಳಿಗೆ, ಡಿಪಿಎಆರ್ ಕಾರ್ಯದರ್ಶಿ ಆಗಸ್ಟ್ 4ರಂದು ನೀಡಿರುವ ಸ್ಪಷ್ಟೀಕರಣದಲ್ಲಿ, ‘ಅಂಥ ಸಂದರ್ಭದಲ್ಲಿ ಮೀಸಲಾತಿ ಬಿಂದುವಿನ ಎದುರು ಸಾಮಾನ್ಯ ವರ್ಗದ ನೌಕರರನ್ನು ಪದೋನ್ನತಿಗೆ ಪರಿಗಣಿಸಬಹುದು. ಆ ಮೀಸಲಾತಿ ಬಿಂದುವನ್ನು ಬ್ಯಾಕ್‌ಲಾಗ್ ಎಂದು ಪರಿಗಣಿಸುವ ಅಗತ್ಯ ಇಲ್ಲ’ ಎಂದೂ ತಿಳಿಸಿದ್ದರು.

ಈ ಸ್ಪಷ್ಟೀಕರಣವನ್ನು ವಾಪಸ್ ಪಡೆಯುವಂತೆ ಡಿಪಿಎಆರ್‌ಗೆ ಸೂಚಿಸಿರುವ ಸಮಾಜ ಕಲ್ಯಾಣ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎನ್. ನಾಗಾಂಬಿಕಾ ದೇವಿ, ‘ಮುಂಬಡ್ತಿ ನೀಡುವಾಗಲೆಲ್ಲ ಕಡ್ಡಾಯವಾಗಿ ಮೀಸಲಾತಿ ಬಿಂದುಗಳನ್ನು ಅಳವಡಿಸಿಯೇ ಮುಂಬಡ್ತಿ ನೀಡಬೇಕು. ಮೀಸಲಾತಿ ರೋಸ್ಟರ್ ಪಾಲಿಸದೆ ಮುಂಬಡ್ತಿ ನೀಡಿದರೆ ನಿಯಮಾನುಸಾರ ಕ್ರಮ ತೆಗೆದುಕೊಳ್ಳಲಾಗುವುದು' ಎಂದು ಎಲ್ಲ ಇಲಾಖೆಗಳ ಮುಖ್ಯಸ್ಥರಿಗೆ ಪತ್ರ ಬರೆದಿದ್ದಾರೆ.

‘ಕೆಲವು ಇಲಾಖೆಗಳಲ್ಲಿ 1999ರ ಫೆ. 3 ಮತ್ತು ಏ. 13ರ ಆದೇಶಗಳನ್ನು ಅನ್ವಯಿಸಿ, ಕಾರ್ಯನಿರತ ವೃಂದ ಬಲದಲ್ಲಿ ಎಸ್‌ಸಿ, ಎಸ್‌ಟಿ ಪ್ರಾತಿನಿಧ್ಯ ನಿಗದಿಯಷ್ಟು ಇದ್ದರೆ ರೋಸ್ಟರ್ ಪದ್ಧತಿ ಕೈಬಿಟ್ಟು ಸಾಮಾನ್ಯ ವರ್ಗದ ನೌಕರರನ್ನು ಪದೋನ್ನತಿಗೆ ಪರಿಗಣಿಸಲಾಗುತ್ತಿದೆ. ಅಂಥ ಮೀಸಲಾತಿ ಬಿಂದುಗಳನ್ನು ಬ್ಯಾಕ್‌ಲಾಗ್ ಎಂದು ಪರಿಗಣಿಸದೆ ಮುಂಬಡ್ತಿ ನೀಡುತ್ತಿರುವ ಬಗ್ಗೆ ದೂರುಗಳು ಬಂದಿವೆ. ಆದ್ದರಿಂದ, ಮುಂಬಡ್ತಿ ನೀಡುವಾಗ 1978 ಏ. 27 ಮತ್ತು 1979 ಆ. 30ರ ಸರ್ಕಾರದ ಆದೇಶ ಪಾಲಿಸಬೇಕು’ ಎಂದು ಸೆ. 6ರಂದು ನಾಗಾಂಬಿಕಾ ದೇವಿ ಸೂಚನೆ ನೀಡಿದ್ದಾರೆ.

ರಾಜ್ಯದ ಸಿವಿಲ್ ಸೇವೆಗಳಲ್ಲಿ ಎಸ್‌ಸಿ, ಎಸ್‌ಟಿ ನೌಕರರಿಗೆ ಜೂನಿಯರ್ ಕ್ಲಾಸ್–1 ಹುದ್ದೆಯವರೆಗೆ ಮುಂಬಡ್ತಿಯಲ್ಲಿ ಮೀಸಲಾತಿ ಕಲ್ಪಿಸುವ ಸಂದರ್ಭದಲ್ಲಿ ರೋಸ್ಟರ್ ಬಿಂದುಗಳನ್ನು ಅನುಸರಿಸುವ ಕುರಿತು 1978 ಏ. 27ರ ಆದೇಶದಲ್ಲಿ ತಿಳಿಸಲಾಗಿದೆ. ಆದರೆ, ಅದರಂತೆ ಮೀಸಲಾತಿ ನೀಡುತ್ತಿಲ್ಲ ಎಂಬ ಕಾರಣಕ್ಕೆ, ಹಿಂದೆ ಸಮಾಜ ಕಲ್ಯಾಣ ಸಚಿವರಾಗಿದ್ದ ಬಿ. ಶ್ರೀರಾಮುಲು ನೇತೃತ್ವದಲ್ಲಿ 2021ರ ಜ. 21ರಂದು ಸಭೆ ನಡೆದಿತ್ತು. ಅಲ್ಲಿ ತೆಗೆದುಕೊಂಡಿದ್ದ ತೀರ್ಮಾನಗಳ ಬಗ್ಗೆ ಅನುಪಾಲನಾ ವರದಿ ಸಲ್ಲಿಸುವಂತೆ ಡಿಪಿಎಆರ್‌ಗೆ ಸಮಾಜ ಕಲ್ಯಾಣ ಇಲಾಖೆ ಆಯುಕ್ತರು ನಾಲ್ಕು ಬಾರಿ ಪತ್ರ ಬರೆದಿದ್ದರೂ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಅಲ್ಲದೆ, ಉಡುಪಿ ಜಿಲ್ಲಾಧಿಕಾರಿಗೆ ನೀಡಿದ ವಿವರಣೆ, ಸಚಿವರ ಸಭೆಯಲ್ಲಿ ತೆಗೆದುಕೊಂಡಿದ್ದ ತೀರ್ಮಾನಗಳಿಗೆ ವ್ಯತಿರಿಕ್ತವಾಗಿದೆ.

ಡಿಪಿಎಆರ್‌ನ ಈ ಸ್ಪಷ್ಟೀಕರಣದ ವಿರುದ್ಧ ಎಸ್‌ಟಿ, ಎಸ್‌ಟಿ ನೌಕರರು ಆಕ್ರೋಶ ವ್ಯಕ್ತಪಡಿಸುತ್ತಿದ್ದಂತೆ, ಸೆ. 3ರಂದು ನಾಗಾಂಬಿಕಾ ದೇವಿ ಅಧ್ಯಕ್ಷತೆಯಲ್ಲಿ ಹಿರಿಯ ಅಧಿಕಾರಿಗಳ ಸಭೆ ನಡೆದಿದೆ.ಈಸಭೆಯಲ್ಲಿ, ‘ಡಿಪಿಎಆರ್‌ನಸ್ಪಷ್ಟೀಕರಣದಿಂದ ಎಸ್‌ಸಿ, ಎಸ್‌ಟಿ ನೌಕರರಿಗೆ ಮೀಸಲಾತಿ ಕಲ್ಪಿಸುವಲ್ಲಿ ಅನ್ಯಾಯವಾಗಿದೆ’ ಎಂದು ಸಮಾಜ ಕಲ್ಯಾಣ ಇಲಾಖೆ ಆಯುಕ್ತರು ಸ್ಪಷ್ಟಪಡಿಸಿದ್ದಾರೆ.

‘ತಕ್ಷಣವೇ ಸರ್ಕಾರದ 1999ರ ಫೆ. 3 ಮತ್ತು ಏ. 13ರ ಆದೇಶ, 2019ರ ಜೂನ್ 24ರ ಸುತ್ತೋಲೆ ಮತ್ತು ಉಡುಪಿ ಜಿಲ್ಲಾಧಿಕಾರಿಗೆ ನೀಡಿರುವ ಸ್ಪಷ್ಟೀಕರಣವನ್ನು ಹಿಂಪಡೆದು ಪರಿಷ್ಕೃತ ಆದೇಶವನ್ನು ಡಿಪಿಎಆರ್ ಹೊರಡಿಸಬೇಕು. ಈ ವಿಷಯವನ್ನು ಮುಖ್ಯ ಕಾರ್ಯದರ್ಶಿ ಮತ್ತು ಮುಖ್ಯಮಂತ್ರಿಯವರ ಗಮನಕ್ಕೆ ತರಲು ಕಡತ ಮಂಡಿಸಿ‘ ಎಂದು ಇಲಾಖೆಯ ಉಪ ಕಾರ್ಯದರ್ಶಿಗೆ ನಾಗಾಂಬಿಕಾ ದೇವಿ ಸೂಚಿಸಿದ್ದಾರೆ.

ಪ್ರಜಾವಾಣಿ ವಿಶೇಷ

ಎಸ್‌ಸಿ, ಎಸ್‌ಟಿ ಮುಂಬಡ್ತಿ ಹೇಗೆ?

ಮುಂಬಡ್ತಿ ನೀಡುವಾಗ ಯಾವ ಮಾರ್ಗ ಅನುಸರಿಸಬೇಕು ಎಂಬ ಬಗ್ಗೆ ಸಮಾಜ ಕಲ್ಯಾಣ ಸಚಿವರಾಗಿದ್ದ ಶ್ರೀರಾಮುಲು ನೇತೃತ್ವದಲ್ಲಿ ನಡೆದಿದ್ದ ಸಭೆಯಲ್ಲಿ ಈ ಕೆಳಕಂಡಂತೆ ತೀರ್ಮಾನಗಳನ್ನು ತೆಗೆದುಕೊಳ್ಳಲಾಗಿತ್ತು.

- ಎಲ್ಲ ಇಲಾಖೆಗಳು ಸರ್ಕಾರದ 1978 ಏ. 27ರ ಆದೇಶ ಪಾಲಿಸಬೇಕು
- 1999ರ ಫೆ. 3 ಮತ್ತು ಏ. 13ರ ಆದೇಶಗಳನ್ನು ಬ್ಯಾಕ್‌ಲಾಗ್ ಹುದ್ದೆ ತುಂಬಲು ಮಾತ್ರ ಅನುಸರಿಸಬೇಕು. ಈ ಆದೇಶ ಮುಂಬಡ್ತಿ ಮತ್ತು ತತ್ಪರಿಣಾಮದ ಜ್ಯೇಷ್ಠತೆಗೆ ಸಂಬಂಧಿಸುವುದಿಲ್ಲ.
- ಮುಂಬಡ್ತಿ ನೀಡುವಾಗ ಮಂಜೂರಾದ ವೃಂದ ಬಲವನ್ನು ಮಾತ್ರ ಪರಿಗಣಿಸಬೇಕು. ಕಾರ್ಯನಿರ್ವಹಿಸುತ್ತಿರುವ ಬಲವನ್ನು ಅಲ್ಲ.
- ಸಾಮಾನ್ಯ ಅರ್ಹತೆಯಲ್ಲಿ ಜ್ಯೇಷ್ಠತೆ ಆಧಾರದಲ್ಲಿ ಮುಂಬಡ್ತಿ ಹೊಂದಿದ ಎಸ್‌ಸಿ, ಎಸ್‌ಟಿ ನೌಕರರನ್ನು ಶೇ 15 ಮತ್ತು ಶೇ 3ಕ್ಕೆ ಪರಿಗಣಿಸುವಂತಿಲ್ಲ.



ಮೀಸಲಾತಿ ವಿಚಾರದಲ್ಲಿ ಮುಖ್ಯ ಕಾರ್ಯದರ್ಶಿ ಮತ್ತು ಡಿಪಿಎಆರ್ ಕಾರ್ಯದರ್ಶಿ ದಲಿತ ವಿರೋಧಿ ನಡವಳಿಕೆ ತೋರಿಸುತ್ತಿದ್ದಾರೆ. ಅವರ ಮೇಲೆ ಪ್ರಕರಣ ದಾಖಲಿಸುತ್ತೇವೆ

ಡಿ. ಚಂದ್ರಶೇಖರಯ್ಯ ಅಧ್ಯಕ್ಷ, ರಾಜ್ಯ ಸರ್ಕಾರಿ ಎಸ್‌ಸಿ, ಎಸ್‌ಟಿ ನೌಕರರ ಸಂಘ



ಪ್ರತಿಭಟನೆ ಪೆಟ್ರೋಲ್, ಡೀಸೆಲ್ ಹಾಗೂ ಅಡುಗೆ ಅನಿಲ ಬೆಲೆ ಏರಿಕೆ ಖಂಡಿಸಿ ಕೆಪಿಸಿಸಿ ಮಹಿಳಾ ಘಟಕ ಅಧ್ಯಕ್ಷೆ ಪುಷ್ಪಾ ಅಮರನಾಥ್ (ಮಧ್ಯದಲ್ಲಿ) ನೇತೃತ್ವದಲ್ಲಿ ಕಾಂಗ್ರೆಸ್ ಕಾರ್ಯಕರ್ತೆಯರು ಬೆಂಗಳೂರಿನ ಮೌರ್ಯ ವೃತ್ತದ ಬಳಿ ಬುಧವಾರ ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ಚಿತ್ರ

ಸುದ್ದಿ 6

ಡ್ರಗ್ಸ್ ಪ್ರಕರಣ: ಆರೋಪಿ ಹೇಳಿಕೆ ಆಧರಿಸಿ ಚಾರ್ಜ್‌ಶೀಟ್

ಅನುಶ್ರೀ ಹೆಸರು ಉಲ್ಲೇಖ

ಪ್ರಜಾವಾಣಿ ವಾರ್ತೆ

ಮಂಗಳೂರು: ಮಾದಕವಸ್ತು ಪ್ರಕರಣಕ್ಕೆ ಸಂಬಂಧಿಸಿದಂತೆ ಮಂಗಳೂರು ಸಿಸಿಬಿ ಪೊಲೀಸರು ನ್ಯಾಯಾಲಯಕ್ಕೆ ಚಾರ್ಜ್‌ಶೀಟ್ ಸಲ್ಲಿಸಿದ್ದು, ಅದರಲ್ಲಿ ನಿರೂಪಕಿ ಹಾಗೂ ನಟಿ ಅನುಶ್ರೀ ಅವರ ಹೆಸರು ಉಲ್ಲೇಖ ಮಾಡಲಾಗಿದೆ.



ಅನುಶ್ರೀ

ಅನುಶ್ರೀ ಡ್ರಗ್ಸ್ ಸೇವನೆ ಜೊತೆಗೆ ಅದರ ಸಾಗಾಟವನ್ನೂ ಮಾಡುತ್ತಿದ್ದರು ಎಂದು ಪ್ರಕರಣದ ಎರಡನೇ ಆರೋಪಿ ಕಿಶೋರ್ ಅಮಾನ್ ಶೆಟ್ಟಿ ಪೊಲೀಸರಿಗೆ ಹೇಳಿಕೆ ನೀಡಿದ್ದಾನೆ. ಇದನ್ನು ಆಧರಿಸಿ ಚಾರ್ಜ್‌ಶೀಟ್‌ನಲ್ಲಿ ಅನುಶ್ರೀ ಹೆಸರು ಪ್ರಸ್ತಾಪಿಸಲಾಗಿದೆ.

‘ರೂಮ್‌ಗೆ ಅನುಶ್ರೀ ಡ್ರಗ್ಸ್ ತರುತ್ತಿದ್ದರು. ಕಿಶೋರ್ ಮತ್ತು ತರುಣ್ ಜೊತೆ ಸಾಕಷ್ಟು ಬಾರಿ ಅನುಶ್ರೀ ಕೂಡ ಡ್ರಗ್ಸ್ ಸೇವನೆ ಮಾಡಿದ್ದರು. 2007-08ರಲ್ಲಿ ರಿಯಾಲಿಟಿ ಶೋ ಒಂದಕ್ಕೆ ಸಂಬಂಧಿಸಿದಂತೆ ತರುಣ್ ರೂಮ್‌ನಲ್ಲಿ ಅನುಶ್ರೀಗೆ ಡಾನ್ಸ್ ತರಬೇತಿ ನೀಡುತ್ತಿದ್ದೆ. ಈ ಸಂದರ್ಭದಲ್ಲಿ ಅನುಶ್ರೀ ಡ್ರಗ್ಸ್ ಖರೀದಿಸಿ ತರುತ್ತಿದ್ದರು. ನಮಗೂ ಡ್ರಗ್ಸ್ ನೀಡಿ, ಅನುಶ್ರೀ ಕೂಡ ಊಟದ ಮೊದಲು ಡ್ರಗ್ಸ್ ಸೇವಿಸುತ್ತಿದ್ದರು’ ಎಂದು ಕಿಶೋರ್ ಶೆಟ್ಟಿ ವಿಚಾರಣೆ ವೇಳೆ ಬಹಿರಂಗ ಪಡಿಸಿದ್ದಾನೆ.

ಮಾದಕ ವಸ್ತು ಪ್ರಕರಣಕ್ಕೆ ಸಂಬಂಧಿಸಿದಂತೆ 2020ರ ಸೆಪ್ಟೆಂಬರ್ 26ರಂದು ಅನುಶ್ರೀ ಅವರನ್ನು ಮಂಗಳೂರು ಪೊಲೀಸರು ವಿಚಾರಣೆಗೆ ಒಳಪಡಿಸಿದ್ದರು. ಆದರೆ, ಮತ್ತೆ ವಿಚಾರಣೆಗೆ ಕರೆಸಿರಲಿಲ್ಲ. ಪ್ರಕರಣದಲ್ಲಿ ಅನುಶ್ರೀ ಹೆಸರು ಕೈಬಿಡುವಂತೆ ಪ್ರಭಾವಿ ರಾಜಕಾರಣಿಗಳು ಪೊಲೀಸರ ಮೇಲೆ ಒತ್ತಡ ಹೇರುತ್ತಿದ್ದಾರೆ ಎಂಬ ಆರೋಪವೂ ಕೇಳಿ ಬಂದಿತ್ತು.

ಡಿಸೆಂಬರ್‌ನಲ್ಲೇ ಚಾರ್ಜ್‌ಶೀಟ್: ಮಾದಕ ವಸ್ತುವಿಗೆ ಸಂಬಂಧಿಸಿದಂತೆ 2020 ಸೆಪ್ಟೆಂಬರ್ 19ರಂದು ಪ್ರಕರಣ ದಾಖಲಾಗಿತ್ತು. 2020ರ ಡಿಸೆಂಬರ್ 11ರಂದು ಕೋರ್ಟ್‌ಗೆ ಜಾರ್ಜ್‌ಶೀಟ್ ಸಲ್ಲಿಸಿರುವುದಾಗಿ ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

‘ಈ ಜಾರ್ಜ್‌ಶೀಟ್‌ನಲ್ಲಿ ಅನುಶ್ರೀಯನ್ನು ಆರೋಪಿ ಎಂದು ಉಲ್ಲೇಖಿಸಲಾಗಿಲ್ಲ. ಆರೋಪಿ ಕಿಶೋರ್ ಶೆಟ್ಟಿ ಹೇಳಿಕೆಯಲ್ಲಿ ಅನುಶ್ರೀ ಬಗ್ಗೆ ಪ್ರಸ್ತಾಪಿಸಿರುವುದನ್ನು ಉಲ್ಲೇಖಿಸಲಾಗಿದೆ. ಕಿಶೋರ್ ಶೆಟ್ಟಿಯನ್ನು ಮತ್ತೆ ವಿಚಾರಣೆ ನಡೆಸುವ ಅಗತ್ಯವಿಲ್ಲ. ಪ್ರಕರಣದ ತನಿಖೆಯನ್ನು ಮುಗಿಸಿ ಚಾರ್ಜ್ ಶೀಟ್ ಸಲ್ಲಿಕೆ ಮಾಡಿದ್ದೇವೆ’ ಎಂದು ಸ್ಪಷ್ಟಪಡಿಸಿದ್ದಾರೆ.

ಅನುಶ್ರೀ ಮೇಲೆ ಬಂದ ಆರೋಪಕ್ಕೆ ಪೂರಕ ಸಾಕ್ಷಿಗಳು ಪೊಲೀಸರಿಗೆ ಲಭ್ಯವಾಗಿಲ್ಲ. ಹಾಗಾಗಿ ಅವರನ್ನು ಆರೋಪಿಯಾಗಿ ಮಾಡಿಲ್ಲ. ಬಂಧಿತ ಆರು ಆರೋಪಿಗಳ ಮೇಲೆ ಪೊಲೀಸರು ಜಾರ್ಜ್‌ಶೀಟ್ ಸಲ್ಲಿಸಿದ್ದು, ಐವರಿಗೆ ಜಾಮೀನು ಸಿಕ್ಕಿದೆ. ಒಬ್ಬ ಆರೋಪಿ ನ್ಯಾಯಾಂಗ ಬಂಧನದಲ್ಲಿದ್ದಾನೆ.

‘ಯಾರನ್ನೂ ಬಿಡುವ ಪ್ರಶ್ನೆಯೇ ಇಲ್ಲ’

ಬೆಳಗಾವಿ: ‘ಮಾದಕವಸ್ತು ಪ್ರಕರಣದಲ್ಲಿ ಯಾರನ್ನೂ ಕೈಬಿಡುವ ಪ್ರಶ್ನೆಯೇ ಇಲ್ಲ’ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಹೇಳಿದರು.



ಇಲ್ಲಿ ಬುಧವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ‘ಚಲನಚಿತ್ರ ನಟಿ, ನಿರೂಪಕಿ ಅನುಶ್ರೀ ಇರಲಿ, ಯಾರೇ ಆಗಿರಲಿ ಅವರ ವಿಷಯದಲ್ಲಿ ರಾಜಕೀಯ ಒತ್ತಡವೇ ನಿಲ್ಲ. ಮಾದಕವಸ್ತು ಪ್ರಕರಣಕ್ಕೆ ಯಾರೂ ಒತ್ತಡ ಹಾಕುವುದಿಲ್ಲ. ಇಂತಹ ಪ್ರಕರಣದಲ್ಲಿ ನಮ್ಮ ಸರ್ಕಾರವು ಬಹಳಷ್ಟು ಕಠಿಣಕ್ರಮಗಳನ್ನು ಕೈಗೊಂಡಿದೆ. ಅಪರಾಧಿಗಳು ಶಿಕ್ಷೆಗೆ ಗುರಿಯಾಗುವುದು ಖಚಿತ. ಎಷ್ಟೇ ಪ್ರಭಾವಿಗಳಾಗಿದ್ದರೂ ಕ್ರಮ ಕೈಗೊಳ್ಳಲಾಗುತ್ತದೆ’ ಎಂದರು. ‘ಪೊಲೀಸರ ಮೇಲೆ ಒತ್ತಡವಿದೆ ಎನ್ನುವುದು ಊಹಾಪೋಹ. ಯಾರ ಒತ್ತಡಕ್ಕೂ ನಮ್ಮ ಪೊಲೀಸರು ಬಗ್ಗುವುದಿಲ್ಲ’ ಎಂದು ತಿಳಿಸಿದರು

ಇನ್ನೊಂದು ಸುದ್ದಿ 6

ಆಳ–ಅಗಲ
ಎನ್‌ಡಿಎ: ಸೇನೆಯಲ್ಲಿ ಅವಕಾಶಗಳ ಹೆಬ್ಬಾಗಿಲು

ಒಳ ಪುಟ



ಅಫ್ಗಾನಿಸ್ತಾನಕ್ಕೆ ‘ಉಗ್ರರ ಸರ್ಕಾರ’ 7

ಸಾರಿಗೆ ಬಸ್‌ಗಳ ಮೇಲೆ ಕೋವಿಡ್ ದರಪಟ್ಟಿ

ಬೆಂಗಳೂರು: ಖಾಸಗಿ ಆಸ್ಪತ್ರೆಗಳಲ್ಲಿ ಕೋವಿಡ್ ಸೋಂಕಿತರ ಚಿಕಿತ್ಸೆಗೆ ನಿಗದಿಪಡಿಸಿರುವ ದರದ ಬಗ್ಗೆ ವ್ಯಾಪಕ ಪ್ರಚಾರ ನೀಡುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ. ಸಾಧ್ಯವಾದರೆ ಸಾರಿಗೆ ಸಂಸ್ಥೆ ಬಸ್‌ಗಳ ಮೇಲೆ ದರ ಪಟ್ಟಿ ಪ್ರಕಟಿಸುವಂತೆ ತಿಳಿಸಿದೆ.

ಕೋವಿಡ್ ಸಂಬಂಧಿಸಿದ ವಿಷಯಗಳ ಕುರಿತು ಸಲ್ಲಿಕೆಯಾಗಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳ ವಿಚಾರಣೆ ನಡೆಸುತ್ತಿರುವ ನ್ಯಾಯಮೂರ್ತಿ ಅರವಿಂದಕುಮಾರ್ ನೇತೃತ್ವದ ವಿಭಾಗೀಯ ಪೀಠ, ಈ ಸೂಚನೆ ನೀಡಿದೆ.

‘ಸರ್ಕಾರ ನಿಗದಿಪಡಿಸಿರುವ ದರಕ್ಕಿಂತ ಹೆಚ್ಚಿನ ದರವನ್ನು ಕೆಲ ಆಸ್ಪತ್ರೆಗಳಲ್ಲಿ ಪಡೆಯಲಾಗುತ್ತಿದೆ. ತಿಳಿವಳಿಕೆ ಕೊರತೆಯಿಂದ ಜನ ಕೂಡ ಕೇಳಿದಷ್ಟು ಹಣ ಪಾವತಿಸುತ್ತಿದ್ದಾರೆ’ ಎಂದು ಅರ್ಜಿದಾರರು ಆರೋಪಿಸಿದರು. ‘ದರ ಪಟ್ಟಿ ಬಗ್ಗೆ ಪ್ರಚಾರಕ್ಕೆ ಕೈಗೊಂಡಿರುವ ಕ್ರಮಗಳ ಬಗ್ಗೆ ವಿವರ ಸಲ್ಲಿಸಿ’ ಎಂದು ಸರ್ಕಾರಕ್ಕೆ ಪೀಠ ಆದೇಶಿಸಿತು.

‘ಗೌರಿ ಗಣೇಶ ಹಬ್ಬ ಆಚರಣೆ ವಿಷಯದಲ್ಲಿ ತಜ್ಞರು ನೀಡಿರುವ ಸಲಹೆಯನ್ನು ಕಟ್ಟುನಿಟ್ಟಾಗಿ ಪಾಲನೆ ಮಾಡಲಾಗುತ್ತಿದೆ. ಕೇರಳದಿಂದ ಬರುವ ಪ್ರಯಾಣಿಕರ ವಿಷಯದಲ್ಲೂ ನಿಗಾ ವಹಿಸಲಾಗುತ್ತಿದೆ’ ಎಂದು ಸರ್ಕಾರದ ಪರ ವಕೀಲರು ವಿವರಿಸಿದರು. ‘ಬೆಂಗಳೂರಿನಲ್ಲಿ ವಾರ್ಡ್ ಮಟ್ಟದ ಎಲ್ಲಾ ಅಧಿಕಾರಿಗಳೂ ಕೋವಿಡ್ ಕುರಿತ ಸಲಹೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು’ ಎಂದು ಪೀಠ ತಿಳಿಸಿತು.

ಸೆಪ್ಟೆಂಬರ್‌ಗೆ 22.5 ಲಕ್ಷ ಡೋಸ್ ಕೋವಿಡ್ ಲಸಿಕೆ ಲಭ್ಯವಿದೆ. ಎರಡನೇ ಅಲೆಯಷ್ಟೇ ತೀವ್ರವಾಗಿ ಮೂರನೇ ಅಲೆ ಬಂದರೆ 1,200 ಟನ್ ಆಮ್ಲಜನಕದ ಅಗತ್ಯವಿದೆ ಎಂದು ಸರ್ಕಾರ ವಿವರಿಸಿತು.

ಅ.7 ರಂದು ದಸರಾ ಉದ್ಘಾಟನೆ

ಪ್ರಜಾವಾಣಿ ವಾರ್ತೆ

ಮೈಸೂರು: ದಸರಾ ಮಹೋತ್ಸವವು ಅ.7 ರಂದು ಬೆಳಿಗ್ಗೆ 8.15 ರಿಂದ 8.45 ರೊಳಗಿನ ಶುಭಮುಹೂರ್ತದಲ್ಲಿ ಚಾಮುಂಡಿಬೆಟ್ಟದಲ್ಲಿ ಉದ್ಘಾಟನೆಗೊಳ್ಳಲಿದೆ.

‘ಅ.15 ರಂದು ವಿಜಯದಶಮಿ ದಿನ ಸಂಜೆ 4.36 ರಿಂದ 4.46ರ ಅವಧಿಯಲ್ಲಿ ನಂದಿಧ್ವಜ ಪೂಜೆ ನಡೆಯಲಿದೆ. 5.00 ರಿಂದ 5.30ರ ಒಳಗೆ ಜಂಬೂ ಸವಾರಿ ನಡೆಯಲಿದ್ದು, ಅರಮನೆ ಆವರಣಕ್ಕೆ ಮಾತ್ರ ಸೀಮಿತವಾಗಿರಲಿದೆ. ಜಂಬೂ ಸವಾರಿಯಲ್ಲಿ ಎಂಟು ಆನೆಗಳು ಪಾಲ್ಗೊಳ್ಳಲಿವೆ. ನವರಾತ್ರಿಯ ಎಲ್ಲಾ ದಿನ ಅರಮನೆ ಆವರಣದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ’ ಎಂದು ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಅವರು ಬುಧವಾರ ದಸರಾ ಕಾರ್ಯಕಾರಿ ಸಮಿತಿ ಸಭೆಯ ಬಳಿಕ ತಿಳಿಸಿದರು.

ಸೆ.16 ರಂದು ಗಜಪಡೆಗೆ ಸ್ವಾಗತ: ‘ಉತ್ಸವದಲ್ಲಿ ಪಾಲ್ಗೊಳ್ಳಲಿರುವ ಗಜಪಡೆಯನ್ನು ಸೆ.16 ರಂದು ಬೆಳಿಗ್ಗೆ 8.36ಕ್ಕೆ ಅರಮನೆಗೆ ಸ್ವಾಗತಿಸಲಾಗುವುದು. ಹುಣಸೂರು ತಾಲ್ಲೂಕಿನ ವೀರನಹೊಸಹಳ್ಳಿಯಲ್ಲಿ ಸೆ.13 ರಂದು ಗಜಪಯಣ ಕಾರ್ಯಕ್ರಮ ಸರಳವಾಗಿ ನಡೆಯಲಿದೆ’ ಎಂದು ಮಾಹಿತಿ ನೀಡಿದರು.

ಈ ಬಾರಿ 150 ರಸ್ತೆಮತ್ತು 77 ವೃತ್ತಗಳು ಸೇರಿದಂತೆ ಒಟ್ಟು 100 ಕಿ.ಮೀ ದೀಪಾಲಂಕಾರ ಮಾಡಲು ನಿರ್ಧರಿಸಲಾಗಿದೆ. ಹಿಂದಿನ ವರ್ಷ 60 ಕಿಮೀ ದೀಪಾಲಂಕಾರ ಮಾಡಲಾಗಿತ್ತು.

ರಾಜ್ಯ ಕೋವಿಡ್ ೨೦೨೦-೨೦೨೧

29,58,090 ▲ ಒಟ್ಟು ಸೋಂಕಿತರು (29,56,988 ನಿನ್ನೆಯ ವಿವರ)

17,058 ▼ ಸಕ್ರಿಯ ಪ್ರಕರಣಗಳು

29,03,547 ▲ ಗುಣಮುಖರಾದವರು

37,458 ಒಟ್ಟು ಸಾವು ▲

ದಿನದ ಏರಿಕೆ		
ಹೊಸ ಪ್ರಕರಣ	1,102	▲
ಗುಣಮುಖ	1,458	▲
ಸಾವು	17	▲

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಚಿನಕುರಳಿ

ಪ್ರಕಾಶ್ ಶೆಟ್ಟಿ



ಗೋಧಿ, ಸಾಸಿವೆ ಮೇಲಿನ ಕನಿಷ್ಠ ಬೆಂಬಲ ಬೆಲೆ ಹೆಚ್ಚಳ

ನವದೆಹಲಿ (ಪಿಟಿಐ): ಗೋಧಿ ಮೇಲಿನ ಕನಿಷ್ಠ ಬೆಂಬಲ ಬೆಲೆಯನ್ನು ಕೇಂದ್ರ ಸರ್ಕಾರವು ಬುಧವಾರ ₹40ರಷ್ಟು ಹೆಚ್ಚಳ ಮಾಡಿದ್ದು, ಕ್ವಿಂಟಲ್‌ಗೆ ₹2,015 ನಿಗದಿಪಡಿಸಿದೆ. ಸಾಸಿವೆ ಮೇಲಿನ ಕನಿಷ್ಠ ಬೆಂಬಲ ಬೆಲೆಯನ್ನು ₹400 ಹೆಚ್ಚಳ ಮಾಡಲಾಗಿದ್ದು, ಕ್ವಿಂಟಲ್‌ಗೆ ₹5,050 ನಿಗದಿಪಡಿಸಲಾಗಿದೆ.

ಆರ್ಥಿಕ ವ್ಯವಹಾರಗಳ ಸಚಿವ ಸಂಪುಟ ಸಮಿತಿ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ.

ಸೂರ್ಯಕಾಂತಿಯ ಬೆಂಬಲ ಬೆಲೆಯನ್ನು ₹114 (ಕ್ವಿಂಟಲ್‌ಗೆ ₹5,327ರಿಂದ ₹5,441) ಹಾಗೂ ಕಡಲೆ ₹130ರಷ್ಟು (ಕ್ವಿಂಟಲ್‌ಗೆ ₹5,100ರಿಂದ ₹5,230) ಹೆಚ್ಚಿಸಲಾಗಿದೆ.

ಸದ್ಯ ಮುಂಗಾರು ಮತ್ತು ಹಿಂಗಾರು ಅವಧಿಯ 23 ಬೆಳೆಗಳಿಗೆ ಕೇಂದ್ರ ಸರ್ಕಾರವು ಕನಿಷ್ಠ ಬೆಂಬಲ ಬೆಲೆ ನಿಗದಿಪಡಿಸಿದೆ. ಅಕ್ಟೋಬರ್‌ನಿಂದ ಹಿಂಗಾರು ಬೆಳೆ ಅವಧಿ ಆರಂಭವಾಗಲಿದೆ.

ದುರಸ್ತಿ ಕಾರ್ಯ ಪೂರ್ಣಗೊಳಿಸಿದ ಹಟ್ಟಿ ಗೋಲ್ಡ್ ಮೈನ್ ಕಂಪನಿ

ಗುಹಾ ದೇಗುಲ: ಮತ್ತೆ ಶುದ್ಧಗಾಳಿ ಪೂರೈಕೆ

• ಚಂದ್ರಕಾಂತ ಮಸಾನಿ

ಬೀದರ್: ನಗರದ ಹೊರವಲಯದಲ್ಲಿರುವ ನರಸಿಂಹ ಝರಣಾ ಗುಹಾ ದೇಗುಲದಲ್ಲಿ 22 ವರ್ಷಗಳ ಹಿಂದೆ ಅಳವಡಿಸಿದ್ದ ಶುದ್ಧ ಗಾಳಿ ಪೂರೈಕೆ ಪೈಪ್ ದುರಸ್ತಿ ಕಾಮಗಾರಿ ಮುಕ್ತಾಯವಾಗಿದೆ. ಹಟ್ಟಿ ಗೋಲ್ಡ್ ಮೈನ್ ಕಂಪನಿಯ ಕಾರ್ಮಿಕರು ಸತತ 10 ದಿನ ಕಾರ್ಯನಿರ್ವಹಿಸಿ, ಕಾಮಗಾರಿ ಪೂರ್ಣಗೊಳಿಸಿದ್ದಾರೆ.

ಪುರಾತನ ಗುಹಾ ದೇವಾಲಯದಲ್ಲಿ ವಿಷ್ಣುವಿನ ಅವತಾರವಾದ ಉಗ್ರನರಸಿಂಹನ ಮೂರ್ತಿ ಇದೆ. ಗುಹೆಯಲ್ಲಿರುವ ಉದ್ಭವ ಮೂರ್ತಿಯ ದರ್ಶನ ಪಡೆಯಲು, ಎದೆ ಮಟ್ಟವಿರುವ ನೀರಿನಲ್ಲಿ 103 ಮೀಟರ್ ನಡೆಯಬೇಕು. ಹಬ್ಬ, ಹುಣ್ಣಿಮೆಯಲ್ಲಿ ಹೆಚ್ಚು ಭಕ್ತರು ಗುಹೆಯೊಳಗೆ ಹೋದಾಗ, ಶುದ್ಧ ಗಾಳಿ ಕೊರತೆಯಾಗಿ ಸಮಸ್ಯೆಯಾಗುತ್ತಿತ್ತು.

ಹಟ್ಟಿ ಗೋಲ್ಡ್ ಮೈನ್ ಕಂಪನಿ 1999ರ ಮೇ 11 ರಂದು ಗುಹೆಯಲ್ಲಿ ಪೈಪ್ ಅಳವಡಿಸಿ ಶುದ್ಧ ಗಾಳಿ ಪೂರೈಕೆಗೆ ವ್ಯವಸ್ಥೆ ಮಾಡಿತ್ತು. ಅದು ಕೆಟ್ಟ ಬಳಿಕ, 2009–2010ರಲ್ಲಿ ಜಿಲ್ಲಾಧಿಕಾರಿಯಾಗಿದ್ದ ಮುನಿಷ್ ಮೌದ್ಗಿಲ್ ದುರಸ್ತಿ ಮಾಡಿಸಿದ್ದರು. ಆದರೆ ಮತ್ತೆ ತಾಂತ್ರಿಕ ದೋಷ ಕಾಣಿಸಿಕೊಂಡಿತ್ತು.

ಅತಿವೃಷ್ಟಿ ಮತ್ತು ಅನಾವೃಷ್ಟಿಯಿಂದ ಯಾವುದೇ ರೀತಿ ಧಕ್ಕೆಯಾಗದಂತೆ ಪೈಪ್ ಆಧಾರಕ್ಕೆ ಅಳವಡಿಸಿದ್ದ ಕಬ್ಬಿಣದ ಸಲಾಕೆಗಳು ತುಕ್ಕು ಹಿಡಿದಿದ್ದವು. ಈಗಿನ ಜಿಲ್ಲಾಧಿಕಾರಿ ರಾಮಚಂದ್ರನ್ ಕೋರಿಕೆ ಮೇರೆಗೆ ಹಟ್ಟಿ ಗೋಲ್ಡ್ ಮೈನ್ ಕಂಪನಿ ಮತ್ತೆ ದುರಸ್ತಿ ಕಾರ್ಯ ಆರಂಭಿಸಿ ಸೆಪ್ಟೆಂಬರ್ 1ರಂದು ಪೂರ್ಣಗೊಳಿಸಿದೆ.

ಈಗ 100 ವರ್ಷ ಗಟ್ಟಿಯಾಗಿ ಉಳಿಯುವಂತಹ ರೈಲ್ವೆ ಹಳಿಯ ಕಬ್ಬಿಣದ ಕೊಳವೆಯನ್ನು ಗುಹೆಯೊಳಗೆ ಅಳವಡಿಸಿ, ಅದಕ್ಕೆ ಕಪ್ಪು ಬಣ್ಣ ಬಳಿದು ಸಿಮೆಂಟ್‌ನಿಂದ ಮುಚ್ಚಲಾಗಿದೆ. ಒಂದೂವರೆ ವರ್ಷದಿಂದ ಕೋವಿಡ್ ಕಾರಣ ಭಕ್ತರ ಪ್ರವೇಶಕ್ಕೆ ಅವಕಾಶ ಇರಲಿಲ್ಲ. ಈ ಸಮಯವನ್ನು ಜಿಲ್ಲಾಡಳಿತ ದುರಸ್ತಿ ಕಾರ್ಯಕ್ಕೆ ಬಳಸಿಕೊಂಡಿದೆ.



ಬೀದರ್ ಹೊರವಲಯದಲ್ಲಿರುವ ನರಸಿಂಹ ಝರಣಾ ಗುಹಾದೇಗುಲ



ನರಸಿಂಹ ಝರಣಾ ಗುಹಾದೇಗುಲದಲ್ಲಿ ಶುದ್ಧ ಗಾಳಿ ಪೂರೈಕೆ ಪೈಪ್ ದುರಸ್ತಿ ಮಾಡಲಾಗಿದೆ

‘ಬಳಕೆಯಾಗದೆ ಉಳಿದಿದ್ದ ಕಬ್ಬಿಣದ ಹಳಿಗಳನ್ನು ಗುಹೆಯೊಳಗೆ ಬಳಸಲಾಗಿದೆ. ಗುಹೆಯೊಳಗಿನ ಶುದ್ಧ ಗಾಳಿ ಪೂರೈಕೆ ಪೈಪ್‌ನಲ್ಲಿ ಕಾಣಿಸಿಕೊಂಡಿದ್ದ ತಾಂತ್ರಿಕ ದೋಷವನ್ನೂ ಸರಿಪಡಿಸಲಾಗಿದೆ’ ಎಂದು ಹಟ್ಟಿ ಗೋಲ್ಡ್ ಮೈನ್ ಕಂಪನಿಯ ವ್ಯವಸ್ಥಾಪಕ ಮಂಜುನಾಥ ತಿಳಿಸಿದರು.

‘ತೆಲಂಗಾಣ ಹಾಗೂ ಮಹಾರಾಷ್ಟ್ರದ ಭಕ್ತರು ನರಸಿಂಹ ಝರಣಾ ದೇವಸ್ಥಾನಕ್ಕೆ ಹೆಚ್ಚು ಬರುತ್ತಾರೆ. ನಾಲ್ಕು ವರ್ಷಗಳ ಹಿಂದೆ ಬರ ಬಂದ ಕಾರಣ ಗುಹೆಯಲ್ಲಿನ ನೀರು ಒಣಗಿ ಹೋಗಿತ್ತು. ಅಂತರ್ಜಲವೂ ಬತ್ತಿ ಹೋಗಿತ್ತು. ಹೀಗಾಗಿ ಅಂತರ್ಜಲ ಮಟ್ಟ ಕಾಯ್ದುಕೊಳ್ಳಲು ಮಂದಿರ ಸಮೀಪ ಚಿಕ್ಕದಾದ ಚೆಕ್‌ಡ್ಯಾಮ್ ನಿರ್ಮಿಸಲಾಗಿದೆ’ ಎಂದು ನರಸಿಂಹ ಝರಣಾ ದೇವಸ್ಥಾನದ ಕಾರ್ಯನಿರ್ವಾಹಕ ಅಧಿಕಾರಿ ಅನಂತರಾವ್ ಕುಲಕರ್ಣಿ ವಿವರಿಸಿದರು.

‘ಪ್ರಸ್ತುತ ಉತ್ತಮ ಮಳೆಯಾಗುತ್ತಿರುವ ಕಾರಣ ಗುಹೆಯೊಳಗೆ ಎದೆ ಮಟ್ಟದಲ್ಲಿ ನೀರು ಹರಿದು ಬರುತ್ತಿದೆ. ಮೂರು ವರ್ಷಗಳಲ್ಲಿ ಸಾಕಷ್ಟು ಸುಧಾರಣೆ ಮಾಡಲಾಗಿದೆ. ಭಕ್ತರು ಗುಹಾದೇವಾಲಯಕ್ಕೆ ಹೋಗಿ ಬಂದ ಬಳಿಕ ಬಟ್ಟೆ ಬದಲಿಸಿಕೊಳ್ಳಲು ಕೊಠಡಿ, ಸ್ನಾನಗೃಹ ಮತ್ತು ಇನ್ನಷ್ಟು ಶೌಚಾಲಯಗಳ ಬ್ಲಾಕ್ ನಿರ್ಮಿಸಲು ಯೋಜನೆ ರೂಪಿಸಲಾಗಿದೆ’ ಎಂದರು.

‘ಮಂದಿರದ ಆವರಣದಲ್ಲಿ ಪುಷ್ಕರಣಿ ಇರುವ ಕಾರಣ ದೇಗುಲ ಪ್ರವೇಶಕ್ಕೆ ಸರ್ಕಾರ ಅನುಮತಿ ನೀಡಿಲ್ಲ. ಸರ್ಕಾರ ಈಜುಕೊಳಗಳ ಪ್ರವೇಶಕ್ಕೆ ಅನುಮತಿ ನೀಡಿದ ನಂತರ ಜಿಲ್ಲಾಧಿಕಾರಿಯೊಂದಿಗೆ ಚರ್ಚಿಸಿ ಪ್ರವೇಶ ನೀಡಲಾಗುವುದು’ ಎಂದು ತಿಳಿಸಿದರು.

‘ಸದಸ್ಯ ಕಾರ್ಯದರ್ಶಿ ಅಧಿಕೃತಗೊಳಿಸದ ಹೊರತು ವರದಿಗೆ ಮಾನ್ಯತೆ ಇಲ್ಲ’

ಉಡುಪಿ: ‘ಹಿಂದುಳಿದ ವರ್ಗಗಳ ಆಯೋಗ ಸಲ್ಲಿಸುವ ಪ್ರತಿ ವರದಿಯನ್ನೂ ಸದಸ್ಯ ಕಾರ್ಯದರ್ಶಿ ಅಧಿಕೃತಗೊಳಿಸದ ಹೊರತು, ಸರ್ಕಾರಕ್ಕೆ ಸಲ್ಲಿಸಲು ಸಾಧ್ಯವಿಲ್ಲ. ಈ ಕಾರಣದಿಂದ ಸಾಮಾಜಿಕ ಹಾಗೂ ಶೈಕ್ಷಣಿಕ ಗಣತಿಯ ವರದಿ ಸರ್ಕಾರಕ್ಕೆ ಸಲ್ಲಿಕೆಯಾಗಿಲ್ಲ’ ಎಂದು ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಜಯಪ್ರಕಾಶ್ ಹೆಗ್ಡೆ ತಿಳಿಸಿದರು.



ಜಯಪ್ರಕಾಶ್ ಹೆಗ್ಡೆ

ಬುಧವಾರ ನಗರದಲ್ಲಿ ಹಮ್ಮಿಕೊಂಡಿದ್ದ ‘ಅಂತ್ಯೋದಯ’ ಮಾಹಿತಿ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ಆಯೋಗದ ಹಿಂದಿನ ಸದಸ್ಯ ಕಾರ್ಯದರ್ಶಿ ಸಾಮಾಜಿಕ ಹಾಗೂ ಶೈಕ್ಷಣಿಕ ಗಣತಿಯ ವರದಿಯನ್ನು ಅಧಿಕೃತಗೊಳಿಸಿಲ್ಲ. ಹಾಗಾಗಿ, ಕಾನೂನಾತ್ಮಕ ತೊಡಕು ಉಂಟಾಗಿ, ಸರ್ಕಾರಕ್ಕೆ ವರದಿ ಸಲ್ಲಿಕೆಯಾಗಿಲ್ಲ ಎಂದರು.

ಮಾಧ್ಯಮಗಳಲ್ಲಿ ‘ಜಾತಿ ಜನಗಣತಿ’ಯ ಬಗ್ಗೆ ಹೆಚ್ಚು ಚರ್ಚೆಯಾಗುತ್ತಿದೆ. ವಾಸ್ತವವಾಗಿ ಅದು ಜಾತಿ ಜನಗಣತಿ ಅಲ್ಲ; ಸಾಮಾಜಿಕ ಹಾಗೂ ಶೈಕ್ಷಣಿಕ ಗಣತಿ. ವ್ಯಕ್ತಿಯೊಬ್ಬನ ಸಾಮಾಜಿಕ, ಶೈಕ್ಷಣಿಕ ಸ್ಥಿತಿಗತಿ ಸೇರಿದಂತೆ 54 ಬಗೆಯ ಮಾಹಿತಿ ವರದಿಯಲ್ಲಿ ಅಡಕವಾಗಿದೆ ಎಂದರು.

ಯಾವ ಜಾತಿ ಯಾವ ಪ್ರವರ್ಗದಡಿ ಬರುತ್ತದೆ ಎಂಬ ಮಾಹಿತಿಯನ್ನೊಳಗೊಂಡ ಚಿಕ್ಕ ಪುಸ್ತಕವನ್ನು ಮುದ್ರಿಸಿ ಪ್ರತಿ ಗ್ರಾಮ ಪಂಚಾಯಿತಿಗೆ ವಿತರಿಸಲು ಹಿಂದುಳಿದ ವರ್ಗಗಳ ಆಯೋಗ ನಿರ್ಧರಿಸಿದೆ. ಇದರಿಂದ ಜನಸಾಮಾನ್ಯರಿಗೆ ತಮ್ಮ ಜಾತಿ ಯಾವ ಪ್ರವರ್ಗಕ್ಕೆ ಸೇರಿದೆ ಎಂಬ ಮಾಹಿತಿ ಪಂಚಾಯಿತಿಯಲ್ಲಿ ಸಿಗಲಿದ್ದು, ಸರ್ಕಾರದ ಸೌಲಭ್ಯಗಳನ್ನು ಪಡೆಯಲು ಅನುಕೂಲವಾಗುತ್ತದೆ ಎಂದರು.

ಗಣೇಶ ಕಲಾಕೃತಿಗಳ ಪ್ರದರ್ಶನ ಪ್ರಾರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಲಾರಾಧನಾ ಸಂಸ್ಥೆಯು ಕಲಾವಿದೆ ಶಕುಂತಲಾ ಜೈನ್ ಅವರು ರಚಿಸಿದ ಕಲಾಕೃತಿಗಳ ಪ್ರದರ್ಶನವನ್ನು ಜಯನಗರ 4ನೇ ಬ್ಲಾಕ್‌ನಲ್ಲಿರುವ ಕಲಾರಾಧನಾ ಕೇಂದ್ರದಲ್ಲಿ ಇದೇ 12ರವರೆಗೆ ಹಮ್ಮಿಕೊಂಡಿದೆ.

'ವಿವಿಧ ಅವತಾರಗಳಲ್ಲಿ ಗಣೇಶ, ಬುದ್ಧ ಮತ್ತು ಅಮೂರ್ತಚಿತ್ರಗಳು' ಶೀರ್ಷಿಕೆಯಡಿ ಬೆಳಿಗ್ಗೆ 11ರಿಂದ ಸಂಜೆ 6 ಗಂಟೆಯವರೆಗೆ ಪ್ರತಿನಿತ್ಯ ಕಲಾ ಪ್ರದರ್ಶನ ನಡೆಯಲಿದೆ. ಗಣೇಶನ ವಿವಿಧ ಭಂಗಿಗಳ ಕಲಾಕೃತಿಗಳು ಪ್ರದರ್ಶನದಲ್ಲಿ ಇರಲಿವೆ ಎಂದು ಸಂಸ್ಥೆ ತಿಳಿಸಿದೆ.


ಶಕುಂತಲಾ ಅವರು ರಚಿಸಿದ ಕಲಾಕೃತಿ

ಇಬ್ಬರು ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಶಿಫಾರಸು

731 ನಿವೇಶನ ಅಕ್ರಮ ನೋಂದಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಲಹಂಕ ತಾಲ್ಲೂಕಿನ ಹೆಸರಘಟ್ಟ ಮತ್ತು ಯಲಹಂಕ ಹೋಬಳಿ ವ್ಯಾಪ್ತಿಯ ಗ್ರಾಮಗಳಲ್ಲಿರುವ 731 ಕಂದಾಯ ನಿವೇಶನಗಳನ್ನು ಗ್ರಾಮ ಪಂಚಾಯಿತಿಯ ಇ–ಸ್ವತ್ತು ದಾಖಲೆ ಇಲ್ಲದೇ ಕಾಚರಕನಹಳ್ಳಿ ಉಪ ನೋಂದಣಿ ಕಚೇರಿಯಲ್ಲಿ ಅಕ್ರಮವಾಗಿ ನೋಂದಣಿ ಮಾಡಿರುವುದು ಪತ್ತೆಯಾಗಿದೆ.

ಕಾಚರಕನಹಳ್ಳಿ ಉಪ ನೋಂದಣಿ ಕಚೇರಿಯಲ್ಲಿ ಅಕ್ರಮವಾಗಿ ನಿವೇಶನಗಳ ನೋಂದಣಿ ನಡೆಸುತ್ತಿರುವ ಆರೋಪ ಕುರಿತು ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಗಾಂಧಿನಗರ ಜಿಲ್ಲಾ ನೋಂದಣಾಧಿಕಾರಿ ಎ.ಎನ್. ಭಾರತಿ ತನಿಖೆ ನಡೆಸಿದ್ದರು. 'ಉಪ ನೋಂದಣಾಧಿಕಾರಿಗಳಾದ ರೂಪಾ ಮತ್ತು ರಾಘವೇಂದ್ರ ಒಡೆಯರ್ ಕಂದಾಯ ನಿವೇಶನಗಳ ನೋಂದಣಿಯಲ್ಲಿ ಕಾನೂನು ಉಲ್ಲಂಘಿಸಿರುವುದು ಪತ್ತೆಯಾಗಿದೆ' ಎಂದು ಇಲಾಖೆಯ ಆಯುಕ್ತರಿಗೆ ಸಲ್ಲಿಸಿರುವ ವರದಿಯಲ್ಲಿ ತಿಳಿಸಿದ್ದಾರೆ.

ಗ್ರಾಮ ಠಾಣಾ ವ್ಯಾಪ್ತಿಯಲ್ಲಿರುವ ಕಂದಾಯ ನಿವೇಶನಗಳನ್ನು ನೋಂದಣಿ ಮಾಡುವಾಗ ಗ್ರಾಮ ಪಂಚಾಯಿತಿಯಿಂದ ನಮೂನೆ–9 ಮತ್ತು ನಮೂನೆ– 11–ಎ ಅಥವಾ 11–ಬಿ ಪಡೆಯುವುದನ್ನು ಕಡ್ಡಾಯಗೊಳಿಸಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ 2013 ಹಾಗೂ 2014ರಲ್ಲಿ ಆದೇಶ ಹೊರಡಿಸಿತ್ತು. ಇ–ಸ್ವತ್ತು (ನಮೂನೆ–9, ನಮೂನೆ– 11–ಎ ಅಥವಾ 11–ಬಿ) ದಾಖಲೆಗಳಿಲ್ಲದೇ ಗ್ರಾಮ ಠಾಣಾ ನಿವೇಶನಗಳ ನೋಂದಣಿ ಮಾಡುವಂತಿಲ್ಲ.

'ಕಾಚರಕನಹಳ್ಳಿ ಉಪ ನೋಂದಣಾಧಿಕಾರಿ ಕಚೇರಿಯಲ್ಲಿ, 2021ರ ಜೂನ್ 28ರಿಂದ ಜುಲೈ 5ರ ಅವಧಿಯಲ್ಲಿ 731 ಕಂದಾಯ ನಿವೇಶನಗಳನ್ನು ಗ್ರಾಮ ಪಂಚಾಯಿತಿಗಳಿಂದ ಪಡೆದ ಇ–ಸ್ವತ್ತು ದಾಖಲೆ ಇಲ್ಲದೇ ನೋಂದಣಿ ಮಾಡಲಾಗಿದೆ. ಈ ಎಲ್ಲ ನೋಂದಣಿಗಳು ಅಕ್ರಮ' ಎಂದು ಜಿಲ್ಲಾ ನೋಂದಣಾಧಿಕಾರಿ ತನಿಖಾ ವರದಿಯಲ್ಲಿ ತಿಳಿಸಿದ್ದಾರೆ.

ಇದೇ ಕಚೇರಿಯಲ್ಲಿ 2021ರ ಮಾರ್ಚ್ 1ರಿಂದ ಜೂನ್ 21ರವರೆಗಿನ ಅವಧಿಯಲ್ಲಿ 18 ಸಂಖ್ಯೆಗಳುಳ್ಳ ಇ–ಖಾತಾ ಇಲ್ಲದೇ 256 ಆಸ್ತಿಗಳನ್ನು ನೋಂದಣಿ ಮಾಡಿರುವುದು ಕಂಡು ಬಂದಿದೆ. ಈ ಎಲ್ಲ ನೋಂದಣಿಗಳನ್ನೂ ಅಮಾನತಿನಲ್ಲಿಡಲಾಗಿದೆ. ಸಾರ್ವಜನಿಕರಿಂದ ಬಂದ ದೂರನ್ನು ಆಧರಿಸಿ ತನಿಖೆ ನಡೆಸಿದಾಗ ಈ ಎಲ್ಲ ಅಕ್ರಮಗಳೂ ಪತ್ತೆಯಾಗಿವೆ ಎಂದು ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

'ಇಬ್ಬರೂ ಅಧಿಕಾರಿಗಳು ನಿಯಮ ಉಲ್ಲಂಘಿಸಿ ಕಂದಾಯ ನಿವೇಶನಗಳ ನೋಂದಣಿ ಮಾಡಿರುವುದು ಪತ್ತೆಯಾಗಿದೆ. ಆದರೆ, ಈ ಪ್ರಕ್ರಿಯೆಯಲ್ಲಿ ಸರ್ಕಾರಕ್ಕೆ ಯಾವುದೇ ನಷ್ಟವಾಗಿಲ್ಲ' ಎಂದು ತನಿಖಾ ವರದಿಯಲ್ಲಿ ಉಲ್ಲೇಖಿಸಲಾಗಿದೆ. ನಿಯಮ ಉಲ್ಲಂಘನೆ ಆರೋಪದ ಮೇಲೆ ಇಬ್ಬರ ವಿರುದ್ಧವೂ ಕ್ರಮಕ್ಕೆ ಶಿಫಾರಸು ಮಾಡಲಾಗಿತ್ತು.

ಅಮಾನತಿಗೆ ತಡೆ

ತನಿಖಾ ವರದಿಯನ್ನು ಆಧರಿಸಿ ರೂಪಾ ಮತ್ತು ರಾಘವೇಂದ್ರ ಒಡೆಯರ್ ಅವರನ್ನು ಸೇವೆಯಿಂದ ಅಮಾನತು ಮಾಡಲಾಗಿತ್ತು. ಆದರೆ, ಅಮಾನತು ಆದೇಶ ಪ್ರಶ್ನಿಸಿ ಇಬ್ಬರೂ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು. ಅಮಾನತಿಗೆ ನ್ಯಾಯಾಲಯ ತಡೆಯಾಜ್ಞೆ ನೀಡಿರುವುದರಿಂದ ಇಬ್ಬರೂ ಕರ್ತವ್ಯಕ್ಕೆ ಮರಳಿದ್ದಾರೆ ಎಂದು ಇಲಾಖೆಯ ಮೂಲಗಳು ತಿಳಿಸಿವೆ.

1 ಎಕರೆ 12 ಗುಂಟೆ ಜಾಗದ ಒತ್ತುವರಿ ತೆರವು

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಬನಶಂಕರಿ ಮೂರನೇ ಹಂತದ ಆವಲಹಳ್ಳಿಯಲ್ಲಿ 1 ಎಕರೆ 6 ಗುಂಟೆ ಮತ್ತು ಎಚ್‌ಆರ್‌ಬಿಆರ್ ಬಡಾವಣೆಯಲ್ಲಿ 6 ಸಾವಿರ ಚದರಡಿಯ ನಿವೇಶನದ ಒತ್ತುವರಿಯನ್ನು ಬುಧವಾರ ತೆರವುಗೊಳಿಸಿದೆ. ಇವುಗಳ ಮೌಲ್ಯ ₹ 75 ಕೋಟಿ ಎಂದು ಬಿಡಿಎ ಅಂದಾಜಿಸಿದೆ.

ಆವಲಹಳ್ಳಿಯಲ್ಲಿ ಬಿಡಿಎಗೆ ಸೇರಿದ ಜಾಗದಲ್ಲಿ 6 ತಾತ್ಕಾಲಿಕ ಶೆಡ್‌ಗಳನ್ನು ಅಕ್ರಮವಾಗಿ ನಿರ್ಮಿಸಲಾಗಿತ್ತು. ಈ ಜಾಗದ ಮಾಲೀಕತ್ವದ ವ್ಯಾಜ್ಯದಲ್ಲಿ ಬಿಡಿಎ ಪರವಾಗಿ ನ್ಯಾಯಾಲಯ ತೀರ್ಪು ನೀಡಿತ್ತು. ಪ್ರಾಧಿಕಾರದ ವಿಶೇಷ ಜಾಗೃತ ದಳದ ಪೊಲೀಸ್ ವರಿಷ್ಠಾಧಿಕಾರಿ ಭಾಸ್ಕರ್ ಮತ್ತು ಇನ್‌ಸ್ಪೆಕ್ಟರ್ ರವಿಕುಮಾರ್ ನೇತೃತ್ವದಲ್ಲಿ ಸ್ಥಳೀಯ ಪೊಲೀಸರ ಸಹಕಾರದಿಂದ ಶೆಡ್‌ಗಳನ್ನು ನೆಲಸಮ ಮಾಡಲಾಯಿತು. ಇದರ ಈಗಿನ ಮಾರುಕಟ್ಟೆ ದರ ಸುಮಾರು ₹65 ಕೋಟಿ ಎಂದು ಅಂದಾಜಿಸಲಾಗಿದೆ.

ಎಚ್‌ಆರ್‌ಬಿಆರ್ ಬಡಾವಣೆಯ ಮೂರನೇ ಹಂತದಲ್ಲಿರುವ ಕಾಚರಕನಹಳ್ಳಿಯ ಸರ್ವೆ ನಂಬರ್ 60/1ರಲ್ಲಿ 6 ಸಾವಿರ ಚದರ ಅಡಿ ವಿಸ್ತೀರ್ಣದ ನಿವೇಶನದಲ್ಲಿ ಒತ್ತುವರಿದಾರರು ಅಕ್ರಮವಾಗಿ ಕಟ್ಟಡ ನಿರ್ಮಿಸಿದ್ದರು. ಕಾರ್ಯಪಾಲಕ ಎಂಜಿನಿಯರ್ ಕುಮಾರ್ ನೇತೃತ್ವದ ಅಧಿಕಾರಿಗಳ ತಂಡ ನಿವೇಶನವನ್ನು ಸ್ವಾಧೀನಕ್ಕೆ ಪಡೆಯಿತು. ಈ ನಿವೇಶನದ ಮಾರುಕಟ್ಟೆ ದರ ₹ 10 ಕೋಟಿ ಎಂದು ಅಂದಾಜಿಸಲಾಗಿದೆ.

'ನಗರದ ವಿವಿಧ ಬಡಾವಣೆಗಳಲ್ಲಿ ಬಿಡಿಎಗೆ ಸೇರಿದ ಸ್ವತ್ತುಗಳನ್ನು ಗುರುತಿಸುವ ಕಾರ್ಯ ಪ್ರಗತಿಯಲ್ಲಿದೆ. ಈಗಾಗಲೇ ₹ 1 ಸಾವಿರ ಕೋಟಿಗೂ ಅಧಿಕ ಮೌಲ್ಯದ ಸ್ವತ್ತುಗಳನ್ನು ಗುರುತಿಸಲಾಗಿದ್ದು, ಅವುಗಳನ್ನು ವಶಕ್ಕೆ ತೆಗೆದುಕೊಳ್ಳುವ ಪ್ರಕ್ರಿಯೆಗೆ ಚಾಲನೆ ನೀಡಲಾಗಿದೆ. ಭೂಕಬಳಿಕೆದಾರರು ಎಷ್ಟೇ ಪ್ರಭಾವಿಗಳಾಗಿದ್ದರೂ ಮುಲಾಜಿಲ್ಲದೇ ನಮ್ಮ ಸ್ವತ್ತುಗಳನ್ನು ವಶಕ್ಕೆ ಪಡೆಯಲಿದ್ದೇವೆ' ಎಂದು ಬಿಡಿಎ ಅಧ್ಯಕ್ಷ ಎಸ್.ಆರ್.ವಿಶ್ವನಾಥ್ ತಿಳಿಸಿದರು.

'ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣದಲ್ಲಿ ಕನ್ನಡ' ಕುರಿತು ವಿಚಾರ ಸಂಕಿರಣ

'ಮಕ್ಕಳ ವ್ಯಕ್ತಿತ್ವ ವಿಕಸನಕ್ಕೆ ಮಾತೃಭಾಷೆ ಸಾಧನ'

ಪ್ರಜಾವಾಣಿ ವಾರ್ತೆ



ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸಿ. ಸೋಮಶೇಖರ್ (ಎಡದಿಂದ ನಾಲ್ಕನೇಯವರು) ಸಸಿಗೆ ನೀರು ಹಾಕುವ ಮೂಲಕ ವಿಚಾರ ಸಂಕಿರಣವನ್ನು ಉದ್ಘಾಟಿಸಿದರು. (ಎಡದಿಂದ) ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಸಂತೋಷ್ ಹಾನಗಲ್ಲ, ಶಾಸಕ ಎನ್. ಮಹೇಶ್, ವಿಧಾನಪರಿಷತ್ ಸದಸ್ಯ ಎಚ್. ವಿಶ್ವನಾಥ್, ಕನ್ನಡ ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಟಿ.ಎಸ್. ನಾಗಾಭರಣ, ಶಾಸಕ ತನ್ವೀರ್ ಸೇಠ್, ಮಾಜಿ ಸಚಿವ ಕಿಮ್ಮನೆ ರತ್ನಾಕರ ಮತ್ತು ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಬಿ.ವಿ. ವಸಂತಕುಮಾರ್ ಇದ್ದರು ಪ್ರಜಾವಾಣಿ ಚಿತ್ರ

ಬೆಂಗಳೂರು: 'ಮಕ್ಕಳ ಚಿಂತನೆ, ಕ್ರಿಯಾಶೀಲತೆ ಮತ್ತು ವ್ಯಕ್ತಿತ್ವ ವಿಕಸನಕ್ಕೆ ಮಾತೃಭಾಷೆ ಅತ್ಯುತ್ತಮ ಸಾಧನ. ಮಾತೃಭಾಷೆಯಲ್ಲಿ ಪ್ರಭುತ್ವ ಸಾಧಿಸಿದರೆ ಮಾತ್ರ ಅನ್ಯಭಾಷೆಗಳನ್ನು ಕಲಿಯುವುದು ಮತ್ತು ಕಲಿಸುವುದು ಸುಲಭ' ಎಂದು ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸಿ. ಸೋಮಶೇಖರ್ ಅಭಿಪ್ರಾಯಪಟ್ಟರು.

'ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣದಲ್ಲಿ ಕನ್ನಡ' ಎಂಬ ವಿಷಯದ ಕುರಿತು ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಹಾಗೂ ಕರ್ನಾಟಕ ಸಾಹಿತ್ಯ ಅಕಾಡೆಮಿ ಸಹಯೋಗದಲ್ಲಿ ಬುಧವಾರ ನಡೆದ ರಾಜ್ಯಮಟ್ಟದ ವಿಚಾರ ಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು.

'ರಾಜ್ಯ ಭಾಷೆಯಲ್ಲಿ ಸ್ಪಂದಿಸುವ ಶಕ್ತಿಯನ್ನು ಬಹು ಸುಲಭವಾಗಿ ಮಕ್ಕಳು ಪಡೆದುಕೊಳ್ಳುತ್ತಾರೆ. ಮಕ್ಕಳು ಮಾತೃಭಾಷೆಯಲ್ಲಿ ಸ್ವಂತಿಕೆಯ ಅಭಿಪ್ರಾಯಗಳನ್ನು ಸ್ಪಷ್ಟವಾಗಿ ಮಂಡಿಸಬಹುದು' ಎಂದೂ ಹೇಳಿದರು.

ವಿಧಾನ ಪರಿಷತ್ ಸದಸ್ಯ ಎಚ್. ವಿಶ್ವನಾಥ್, 'ಜಗತ್ತಿನ ಎಲ್ಲ ದೇಶಗಳು ಮಾತೃಭಾಷೆಯಲ್ಲಿ ಶಿಕ್ಷಣ ನೀಡುತ್ತಿರುವ ಸಂದರ್ಭದಲ್ಲಿ ಕರ್ನಾಟಕ ಇಂಗ್ಲಿಷ್ ಭಾಷೆಯಲ್ಲಿ ಶಿಕ್ಷಣ ನೀಡಲು ಒತ್ತು ನೀಡುತ್ತಿರುವುದು ವಿಪರ್ಯಾಸ. ಖಾಸಗಿ ಶಾಲೆಗಳ ಹಾವಳಿ ದಿನೇ ದಿನೇ ಹೆಚ್ಚುತ್ತಿರುವುದರಿಂದ ಅವುಗಳ ನಿಯಂತ್ರಣ ಅಸಾಧ್ಯವಾಗಿದೆ' ಎಂದರು.

> **ಮುಖ್ಯಮಂತ್ರಿ ಹಾಗೂ ಮುಖ್ಯ ಕಾರ್ಯದರ್ಶಿ ಅವರನ್ನೂ ಸೇರಿಸಿಕೊಂಡು ಇಂಥ ವಿಚಾರ ಸಂಕಿರಣ ಆಯೋಜಿಸಿದರೆ ಶಿಕ್ಷಣದಲ್ಲಿ ಕನ್ನಡದ ಅನುಷ್ಠಾನ ಸಾಧ್ಯವಾಗಲಿದೆ**
> **ಎಚ್. ವಿಶ್ವನಾಥ್**
> ವಿಧಾನ ಪರಿಷತ್ ಸದಸ್ಯ

ಶಾಸಕ ತನ್ವೀರ್ ಸೇಠ್, 'ಪ್ರತಿಯೊಂದು ಶಾಲೆಯಲ್ಲಿ ಕನ್ನಡ ಕಲಿಕೆ ಹೇಗೆ ಇರಬೇಕು ಎಂಬುದನ್ನು ತಿಳಿಸಬೇಕು. ಸರ್ಕಾರಿ, ಅನುದಾನಿತ ಮತ್ತು ಖಾಸಗಿ ಶಾಲೆಗಳಲ್ಲಿರುವ ಕನ್ನಡ ಭಾಷಾ ಕಲಿಕೆಯ ಸಮಸ್ಯೆ ಬಗೆಹರಿಸಿದರೆ ಭಾಷಾ ಕಲಿಕಾ ವಿಚಾರದ ಸಮಸ್ಯೆ ಬಗೆಹರಿಯಲಿದೆ' ಎಂದರು.

ಶಾಸಕ ಎನ್. ಮಹೇಶ್, 'ಹಿಂದಿ ರಾಷ್ಟ್ರೀಯ ಭಾಷೆ ಎಂಬ ಅವ್ಯಕ್ತ ವಾತಾವರಣ ಬಹಳ ಅಪಾಯಕಾರಿ. ಕೇಂದ್ರ ಲೋಕಸೇವಾ ಆಯೋಗ, ಬ್ಯಾಂಕಿಂಗ್ ಪರೀಕ್ಷೆಗಳ ಪ್ರಶ್ನೆ ಪತ್ರಿಕೆಗಳು ಸ್ಥಳೀಯ ಭಾಷೆಯಲ್ಲಿರಬೇಕು. ಎಲ್ಲ ಮಕ್ಕಳಿಗೂ ಸಮಾನ ಶಿಕ್ಷಣ ನೀಡುವ ನೀತಿ ಜಾರಿಗೊಳಿಸಬೇಕು' ಎಂದರು.

ಮಾಜಿ ಸಚಿವ ಕಿಮ್ಮನೆ ರತ್ನಾಕರ, 'ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಮುಂದಿನ ಶೈಕ್ಷಣಿಕ ವರ್ಷದಿಂದ ಜಾರಿಗೊಳಿಸಬೇಕು. ಈ ವರ್ಷವಿಡೀ ಈ ಬಗ್ಗೆ ಚರ್ಚೆ ಮಾಡಬೇಕು' ಎಂದರು.

ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಬಿ.ವಿ. ವಸಂತಕುಮಾರ್, 'ಕನ್ನಡ ಕಟ್ಟುವುದು ಎಂದರೆ ಕನ್ನಡದ ಬೀಜಗಳನ್ನು ಮಕ್ಕಳ ಎದೆಯಲ್ಲಿ, ಭೂಮಿಯಲ್ಲಿ ಬಿತ್ತಬೇಕು. ಭಾರತೀಯತೆಗೆ ಭಂಗ ಬಾರದಂತೆ, ಸಿದ್ಧಾಂತ ಮತ್ತು ರಾಜಕೀಯ ಪಕ್ಷಗಳನ್ನು ಮೀರಿ ಶಿಕ್ಷಣದಲ್ಲಿ ಕನ್ನಡವನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಮಾಡುವ ಕೆಲಸ ಆಗಬೇಕು' ಎಂದರು.

'ತೇಜಸ್ವಿ ಬದುಕು ಯುವಜನತೆಗೆ ಪ್ರೇರಣೆಯಾಗಲಿ'

ಪ್ರಜಾವಾಣಿ ವಾರ್ತೆ



ಕಾರ್ಯಕ್ರಮದಲ್ಲಿ ಸಿದ್ದರಾಮಯ್ಯ, ಡಾ.ಕೆ. ಸುಧಾಕರ್ ಹಾಗೂ ಬಿ.ಎಲ್. ಶಂಕರ್ ಅವರು ಛಾಯಾಚಿತ್ರಗಳನ್ನು ವೀಕ್ಷಿಸಿದರು – ಪ್ರಜಾವಾಣಿ ಚಿತ್ರ

ಬೆಂಗಳೂರು: 'ಪೂರ್ಣಚಂದ್ರ ತೇಜಸ್ವಿ ಅವರು ಪರಿಸರ ಕುರಿತಾದ ಲೇಖನಗಳ ಮೂಲಕ ಸ್ಫೂರ್ತಿಯಾಗಿದ್ದಾರೆ. ಅವರ ಬದುಕು ಹಾಗೂ ಬರಹವು ಯುವಜನರಿಗೆ ಪ್ರೇರಣೆಯಾಗಬೇಕು' ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ತಿಳಿಸಿದರು.

ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಅವರ 84ನೇ ಜನ್ಮದಿನದ ಅಂಗವಾಗಿ ನಗರದಲ್ಲಿ ಬುಧವಾರ ಪರಿಸರ, ನಿಸರ್ಗ ಸಂರಕ್ಷಣಾ ಸಂಸ್ಥೆಯು ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಪ್ರತಿಷ್ಠಾನ ಮತ್ತು ಪೀಣ್ಯ ಕೈಗಾರಿಕಾ ಸಂಘಗಳ ಸಹಯೋಗದಲ್ಲಿ ಆಯೋಜಿಸಿದ್ದ 'ತೇಜಸ್ವಿ ಜೀವಲೋಕ -9 ಹಾಗೂ ಕುರಿಂಜಿ ಲೋಕ' ಛಾಯಾಚಿತ್ರ ಮತ್ತು ಸಾಕ್ಷ್ಯಚಿತ್ರ ಪ್ರದರ್ಶನ ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದರು.

'ಪ್ರಕೃತಿಯನ್ನು ತೇಜಸ್ವಿ ಅವರಷ್ಟು ಪ್ರೀತಿಸಿದವರನ್ನು ನಾನು ನೋಡಿಯೇ ಇಲ್ಲ. ತಮ್ಮ ಬದುಕು ಬರಹದ ಮೂಲಕ ಅವರು ಹೆಸರು ಮಾಡಿದವರು. ಎಂದಿಗೂ ತಾನು ಕುವೆಂಪು ಮಗ ಎಂದು ಹೇಳಿ, ಲಾಭ ಪಡೆಯುವ ಪ್ರಯತ್ನ ಮಾಡಿಲ್ಲ. ಎಲ್ಲರೂ ತೇಜಸ್ವಿಯಾಗಲು ಸಾಧ್ಯವಿಲ್ಲ. ಆದರೆ, ನಮ್ಮ ಸುತ್ತಲಿನ ಪರಿಸರವನ್ನು ಸಂರಕ್ಷಣೆ ಮಾಡುವ ಮೂಲಕ ನಮ್ಮನ್ನು ನಾವು ರಕ್ಷಣೆ ಮಾಡಿಕೊಳ್ಳಬೇಕು' ಎಂದು ತಿಳಿಸಿದರು.

ಕರ್ನಾಟಕ ಚಿತ್ರಕಲಾ ಪರಿಷತ್ತು ಅಧ್ಯಕ್ಷ ಬಿ.ಎಲ್. ಶಂಕರ್, 'ಅರಣ್ಯ ಬೆಳೆಸುವುದು ಕೇವಲ ಗ್ರಾಮೀಣ ಪ್ರದೇಶಕ್ಕೆ ಸೀಮಿತಗೊಳಿಸಬಾರದು. ರಾಜ್ಯ ಸರ್ಕಾರ ನಗರ ಪ್ರದೇಶಗಳಲ್ಲಿ ಕೈಗಾರಿಕೆಗಳಿಗೆ ನೀಡುವ ಭೂಮಿಯಲ್ಲಿ ಶೇ 25ರಷ್ಟು ಪ್ರದೇಶದಲ್ಲಿ ಅರಣ್ಯ ಬೆಳೆಸಬೇಕು ಎಂದು ನಿಯಮ ರೂಪಿಸಬೇಕು' ಎಂದು ಮನವಿ ಮಾಡಿದರು.

ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್ ಮಾತನಾಡಿದರು.

ವಿದ್ಯುತ್ ವ್ಯತ್ಯಯ 11ರಂದು

ಬೆಂಗಳೂರು: ನಿರ್ವಹಣಾ ಕಾರ್ಯ ಕೈಗೆತ್ತಿಕೊಳ್ಳುತ್ತಿರುವುದರಿಂದ ನಗರದ ವಿವಿಧ ಪ್ರದೇಶಗಳಲ್ಲಿ ಇದೇ 11ರ ಸಂಜೆ 4ರಿಂದ 12ರ ರಾತ್ರಿ 8ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಹೇಳಿದೆ.

ತಿಗಳರ ಪಾಳ್ಯ, ವಿನಾಯಕನಗರ, ರಾಘವೇಂದ್ರ ನಗರ, ರಾಘವೇಂದ್ರ ಕೈಗಾರಿಕಾ ಪ್ರದೇಶ, ಬಾಲಾಜಿನಗರ, ಕರಿವೋಬನಹಳ್ಳಿ, ಇಂದಿರಾನಗರ, ಬ್ಲೂಜಾಯ್ ಬಡಾವಣೆ, ಗಂಗೊಂಡನಹಳ್ಳಿ ಮುಖ್ಯರಸ್ತೆ, ತಿಪ್ಪೇನಹಳ್ಳಿ ಸರ್ಕಾರಿ ಆಸ್ಪತ್ರೆ, ಅನ್ನಪೂರ್ಣೇಶ್ವರಿ ಬಡಾವಣೆ, ಎಸ್‌ಎಲ್‌ವಿ ಕೈಗಾರಿಕಾ ಪ್ರದೇಶ, ನಂದಗೋಕುಲ ಕೈಗಾರಿಕಾ ಪ್ರದೇಶ, ಚೇತನ್ ಸರ್ಕಲ್, ಸಪ್ತಗಿರಿ ಬಡಾವಣೆ, ವೇಣುಗೋಪಾಲ ನಗರ, ದೊಡ್ಡ ಬಿದರಕಲ್ಲು, ಸುವರ್ಣ ನಗರ, ಮಾರಣ್ಣ ಬಡಾವಣೆ, ತಿಪ್ಪೇನಹಳ್ಳಿ, ಅಂದಾನಪ್ಪ ಬಡಾವಣೆ, ಮುನೇಶ್ವರ ಬಡಾವಣೆ ಮತ್ತು ಸುತ್ತಮುತ್ತಲಿನ ಪ್ರದೇಶ.





ಜಯನಗರದ ಆರ್‌.ವಿ. ರಸ್ತೆಯಲ್ಲಿ ಗೌರಿ–ಗಣೇಶ ಮೂರ್ತಿ ಖರೀದಿ ಮಾಡಿ ಮನೆಯತ್ತ ಹೆಜ್ಜೆ ಹಾಕುತ್ತಿರುವ ಯುವತಿಯರು (ಎಡಚಿತ್ರ), ಹಬ್ಬದ ಹಿನ್ನಲೆ ಕೆ.ಆರ್‌. ಮಾರುಕಟ್ಟೆಯಲ್ಲಿ ಜನರು ಬುಧವಾರ ಹೂ ಖರೀದಿಸಿದರು. ಪ್ರಜಾವಾಣಿ ಚಿತ್ರಗಳು

ನಗರದಲ್ಲಿ ಗೌರಿ–ಗಣೇಶ ಹಬ್ಬದ ಸಂಭ್ರಮ • ಮಾರುಕಟ್ಟೆಯಲ್ಲಿ ಗರಿಗೆದರಿದ ಹಬ್ಬದ ಪರಿಕರಗಳ ಮಾರಾಟ

ದರ ಏರಿಕೆ ನಡುವೆಯೂ ಖರೀದಿ ಭರಾಟೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೌರಿ– ಗಣೇಶ ಹಬ್ಬದ ಸಂದರ್ಭದಲ್ಲಿ ಹೂವು ಮತ್ತು ಹಣ್ಣುಗಳ ದರಗಳು ಗಗನಕ್ಕೇರಿವೆ. ಆದರೂ, ಹಬ್ಬದ ಮುನ್ನ ದಿನ ಮಾರುಕಟ್ಟೆಗಳಲ್ಲಿ ಖರೀದಿಗೆ ಗ್ರಾಹಕರು ಮುಗಿಬಿದ್ದರು.

ವಾರದಿಂದ ಈಚೆಗೆ ಮಾರುಕಟ್ಟೆಗಳಲ್ಲಿ ಹಬ್ಬದ ಪರಿಕರಗಳ ಮಾರಾಟ ಗರಿಗೆದರಿತ್ತು. ನಗರದ ಹಲವೆಡೆ ತಾತ್ಕಾಲಿಕ ಕಿರು ಮಾರುಕಟ್ಟೆಗಳು ತಲೆ ಎತ್ತಿವೆ.

ಸಗಟು ದರದಲ್ಲಿ ಭಾರಿ ಏರಿಕೆ: ಹೂವು, ಹಣ್ಣಿನ ಚಿಲ್ಲರೆ ಮತ್ತು ಸಗಟು ದರದಲ್ಲಿ ಭಾರಿ ಏರಿಕೆಯಾಗಿದೆ. ಪ್ರತಿ ಕೆ.ಜಿ. ದಾಳಿಂಬೆ ಹಣ್ಣಿಗೆ ₹120 ರಷ್ಟಿದ್ದ ದರ, ₹140ರಿಂದ ₹150 ತನಕ ಹೆಚ್ಚಳವಾಗಿದೆ.

ಕಳೆದ ವಾರ ₹150ರಿಂದ ₹ 200ರ ಆಸುಪಾಸಿನಲ್ಲಿದ್ದ ಇದ್ದ ಸೇಬು ಹಣ್ಣಿನ ದರ ಕೆ.ಜಿಗೆ ₹200ರಿಂದ ₹300ರ ತನಕ ಹೆಚ್ಚಳವಾಗಿದೆ. ಕಿತ್ತಳೆ ಹಣ್ಣಿನ ದರವೂ ₹100ರ ಗಡಿ ದಾಟಿದೆ. ಮೂಸಂಬಿ ಹಣ್ಣಿನ ದರ ಮಾತ್ರ ಕೆ.ಜಿ.ಗೆ ₹30ರಲ್ಲಿ ಉಳಿದಿದೆ.

‘ಇನ್ನು ಎರಡು ಮೂರು ದಿನಗಳಲ್ಲಿ ಮೂಸಂಬಿ ಹಣ್ಣಿನ ದರ ಕೆ.ಜಿ.ಗೆ ₹15ರಿಂದ ₹20ಕ್ಕೆ ಇಳಿಕೆಯಾಗುವ ಸಾಧ್ಯತೆ ಇದೆ’ ಎನ್ನುತ್ತಾರೆ ಹಣ್ಣಿನ ವ್ಯಾಪಾರಿಗಳು.

‘ಹೂವಿಗೆ ಹೆಚ್ಚಿನ ಬೇಡಿಕೆ ಇಲ್ಲದಿದ್ದರೂ, ಕಳೆದ ಕೆಲ ದಿನಗಳಿಂದ ದರಗಳು ನಿರಂತರವಾಗಿ ಏರಿಕೆಯಾಗುತ್ತಿವೆ. ಕನಕಾಂಬರ ಮತ್ತು ಮಲ್ಲಿಗೆ ಹೂವುಗಳಿಗೆ ಅಷ್ಟಾಗಿ ಬೇಡಿಕೆ ಇಲ್ಲ. ಈ ಹೂವುಗಳನ್ನು ನಾವು ಮಾರಾಟಕ್ಕೇ ಇಡುತ್ತಿಲ್ಲ’ ಎಂದು ಚಿಲ್ಲರೆ ವ್ಯಾಪಾರಿಗಳು ತಿಳಿಸಿದರು.

ಸಣ್ಣ ಗುಲಾಬಿ ಹೂವಿಗೆ ದರ ಕಳೆದ ವಾರ ₹100 ಇದ್ದದ್ದು, ₹120ಕ್ಕೆ ಏರಿಕೆಯಾಗಿದೆ. ಒಂದು ಮಾರು ಸೇವಂತಿಗೆ ಹೂವಿನ ದರ ಕೂಡ ₹80ರಿಂದ 100ಕ್ಕೆ ಜಿಗಿದಿದೆ. ಮೊಳ ಮಲ್ಲಿಗೆ ಹೂವಿಗೆ ಸಗಟು ಮಾರುಕಟ್ಟೆಯಲ್ಲೇ ₹20 ಇದೆ. ತರಕಾರಿಗಳ ಬೆಲೆಗಳು ಹೆಚ್ಚು ಕಡಿಮೆ ಅದೇ ರೀತಿ ಇದೆ ಎಂದು ಕಲಾಸಿಪಾಳ್ಯದ ಸಗಟು ವ್ಯಾಪಾರಿಗಳು ಹೇಳುತ್ತಾರೆ.

ಅಂತರ ಮರೆತ ಜನರು: ಹಬ್ಬದ ಸಂಭ್ರಮದಲ್ಲಿದ್ದ ಜನ ಸಾರ್ವಜನಿಕ ಸ್ಥಳಗಳಲ್ಲಿ ಕೋವಿಡ್ ನಿಯಮದ ಪ್ರಕಾರ ಅಂತರ ಕಾಪಾಡಬೇಕೆಂಬ ನಿಯಮವನ್ನು ಗಾಳಿಗೆ ತೂರಿ ಮಾರುಕಟ್ಟೆಯಲ್ಲಿ ಮುಗಿ ಬಿದ್ದಿದ್ದರು.

ಪುಟ್ಟ ಗಣೇಶ ಮೂರ್ತಿಗಳಿಗೆ ಬಲು ಬೇಡಿಕೆ

ಹಬ್ಬದ ವೇಳೆ ಪೂಜಿಸಲು ಭಕ್ತರು ಗೌರಿ–ಗಣೇಶ ಮೂರ್ತಿಗಳನ್ನು ಉತ್ಸಾಹದಿಂದ ಖರೀದಿಸುತ್ತಿದ್ದಾರೆ. ಸಾರ್ವಜನಿಕ ಸ್ಥಳದಲ್ಲಿ 4 ಅಡಿ ಎತ್ತರ ಮೀರದಂತೆ ಮತ್ತು ಮನೆಯಲ್ಲಿ 2 ಅಡಿ ಎತ್ತರ ಮೀರದ ಗಣೇಶ ಮೂರ್ತಿ ಪ್ರತಿಷ್ಠಾಪಿಸಲು ಮಾತ್ರ ಅವಕಾಶ ಇರುವುದರಿಂದ ಚಿಕ್ಕ–ಚಿಕ್ಕ ಮೂರ್ತಿಗಳನ್ನು ಹುಡುಕಿ ಗ್ರಾಹಕರು ಖರೀದಿಸಿದರು.

ಮಲ್ಲೇಶ್ವರ, ಮಾವಳ್ಳಿ,ಜಯ ನಗರ, ಬಸವನಗುಡಿ, ಕೆ.ಆರ್‌. ಮಾರುಕಟ್ಟೆ ಸೇರಿದಂತೆ ಹಲವೆಡೆ ಗಣೇಶ ಮೂರ್ತಿಗಳ ಮಾರಾಟ ಜೋರಾಗಿ ನಡೆದಿತ್ತು.

ಕೋವಿಡ್ ನಿರ್ಬಂಧಗಳಿದ್ದರೂ, ಹಬ್ಬದ ಸಂಭ್ರಮಕ್ಕೆ ಯಾವುದೇ ಅಡೆ–ತಡೆ ಇಲ್ಲ ಎನ್ನುತ್ತಾರೆ ಸಾರ್ವಜನಿಕರು.

ಪರಿಸರ ಸ್ನೇಹಿ ಮತ್ತು ಔಷಧಿಯ ಗುಣ ಹೊಂದಿರುವ ಅರಿಸಿನದಿಂದ ಗಣೇಶ ಮೂರ್ತಿಗಳನ್ನು ಮಾಡಬೇಕು ಎಂದು ಮಾಲಿನ್ಯ ನಿಯಂತ್ರಣ ಮಂಡಳಿ ಅಭಿಯಾನ ನಡೆಸಿದ್ದರಿಂದ ಇಂಥ ಮೂರ್ತಿಗಳ ತಯಾರಿಕೆ, ಬಳಕೆಯೂ ಹೆಚ್ಚಾಗಿದೆ.

‘ಹಬ್ಬಕ್ಕೆ ಕೆಲವೇ ದಿನಗಳು ಮುನ್ನ ಸಾರ್ವಜನಿಕ ಗಣೇಶೋತ್ಸವಕ್ಕೆ ಸರ್ಕಾರ ಅನುಮತಿ ನೀಡಿದೆ. ಒಬ್ಬೊಬ್ಬರು ಒಂದೊಂದು ರೀತಿ ಹೇಳಿಕೆ ನೀಡಿದ್ದರಿಂದ, ಸರ್ಕಾರ ದಿನಕ್ಕೊಂದೊಂದು ರೀತಿ ಆದೇಶ ಹೊರಡಿಸಿದ್ದರಿಂದ ವಿಗ್ರಹಗಳ ಮಾರಾಟಕ್ಕೆ ತೊಂದರೆಯಾಯಿತು’ ಎನ್ನುತ್ತಾರೆ ಗಣೇಶ ಮೂರ್ತಿ ತಯಾರಕರು.

‘ಯಾವುದೇ ನಿಯಮ ಮಾಡುವುದಾದರೂ, ಸಾಕಷ್ಟು ಮುನ್ನವೇ ತೀರ್ಮಾನ ಮಾಡಬೇಕು. ಗಣೇಶ ಮೂರ್ತಿಗಳು ಒಣಗಲು ಮೂರು ತಿಂಗಳು ಬೇಕಾಗುತ್ತದೆ. ಕೊನೆಯ ಗಳಿಗೆಯಲ್ಲಿ ತೀರ್ಮಾನ ಮಾಡಿದರೆ ಅನನುಕೂಲವಾಗುತ್ತದೆ’ ಎಂದು ಅವರು ಬೇಸರ ವ್ಯಕ್ತಪಡಿಸುತ್ತಾರೆ.



ಬಂಡಿಕೊಡಿಗೆಹಳ್ಳಿ ಪಾಳ್ಯದಲ್ಲಿ ಕಾಂಕ್ರೀಟ್ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿಗೆ ಶಾಸಕ ಕೃಷ್ಣಬೈರೇಗೌಡ ಚಾಲನೆ ನೀಡಿದರು.

ರಸ್ತೆ ಕಾಮಗಾರಿಗೆ ಚಾಲನೆ

ಯಲಹಂಕ: ಬ್ಯಾಟರಾಯನಪುರ ಕ್ಷೇತ್ರ ವ್ಯಾಪ್ತಿಯ ಹುಣಸೂರು ಮತ್ತು ಬಂಡಿಕೊಡಿಗೆಹಳ್ಳಿಪಾಳ್ಯದಲ್ಲಿ ಲೋಕೋಪಯೋಗಿ ಇಲಾಖೆ ಅನುದಾನದಡಿಯಲ್ಲಿ ಕೈಗೆತ್ತಿಕೊಂಡಿರುವ ಕಾಂಕ್ರೀಟ್ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿಗೆ ಶಾಸಕ ಕೃಷ್ಣಬೈರೇಗೌಡ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ‘ಹುಣಸೂರು ಮತ್ತು ಬಂಡಿಕೊಡಿಗೆಹಳ್ಳಿ ಪಾಳ್ಯ ಗ್ರಾಮಗಳಲ್ಲಿ ಕೊರೊನಾ ಕಾರಣದಿಂದ ಬಾಕಿಯಿದ್ದ ಕಾಂಕ್ರೀಟ್ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿಯನ್ನು ₹40 ಲಕ್ಷ ವೆಚ್ಚದಲ್ಲಿ ಕೈಗೊಳ್ಳಲಾಗಿದೆ’ ಎಂದು ತಿಳಿಸಿದರು.

ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯೆ ಸುಷ್ಮಾಮುನಿರಾಜು, ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ಬಿ.ಕೆ.ನಾರಾಯಣಸ್ವಾಮಿ, ಮಾಜಿ ಅಧ್ಯಕ್ಷ ಸಿಂಗಹಳ್ಳಿ ವೆಂಕಟೇಶ್, ಗ್ರಾಮಪಂಚಾಯಿತಿ ಮಾಜಿ ಅಧ್ಯಕ್ಷರಾದ ಅನುರಾಧಿಕ ಮಂಜುನಾಥ್, ಎನ್. ಕೆ.ಮಹೇಶ್ ಕುಮಾರ್ ಇದ್ದರು.

ರಸ್ತೆ ಗುಂಡಿ ಮುಚ್ಚುವ ಕಾಮಗಾರಿ ಪರಿಶೀಲಿಸಿದ ಮುಖ್ಯ ಆಯುಕ್ತ

ಕಾಮಗಾರಿ ಗುಣಮಟ್ಟ ಕಾಪಾಡಲು ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಮುಖ್ಯ ರಸ್ತೆಗಳು, ಉಪಮುಖ್ಯ ರಸ್ತೆಗಳು ಹಾಗೂ ಅತಿ ದಟ್ಟಣೆ ಕಾರಿಡಾರ್‌ಗಳಲ್ಲಿನ ಗುಂಡಿಗಳನ್ನು ಮುಚ್ಚಲು ಬಿಬಿಎಂಪಿ ಕ್ರಮಕೈಗೊಂಡಿದೆ.

ಪುಲಿಕೇಶಿನಗರ ಕ್ಷೇತ್ರದ ವ್ಯಾಪ್ತಿಯ ಬೋರ್ ಬಂಡ್ ರಸ್ತೆಯಲ್ಲಿ ಬಿದ್ದಿರುವ ಗುಂಡಿಗಳನ್ನು ಹಾಗೂ ರಸ್ತೆ ಕತ್ತರಿಸಿರುವ ಭಾಗವನ್ನು ದುರಸ್ತಿಪಡಿಸುವ ಕಾಮಗಾರಿ ನಡೆಯುತ್ತಿದ್ದ ಸ್ಥಳಕ್ಕೆ ಮುಖ್ಯ ಆಯುಕ್ತ ಗೌರವ್ ಗುಪ್ತ ಬುಧವಾರ ದಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಗುಂಡಿ ಬಿದ್ದಿರುವ ಸ್ಥಳವನ್ನು ಮೊದಲು ಸ್ವಚ್ಛಗೊಳಿಸಬೇಕು. ಕಾಮಗಾರಿಯ ಗುಣಮಟ್ಟ ಕಾಪಾಡಬೇಕು. ಹೆಚ್ಚು ಗುಂಡಿಗಳು ಬಿದ್ದಿರುವ ರಸ್ತೆಗಳಲ್ಲಿ ಆದ್ಯತೆ ಮೇರೆಗೆ ಗುಂಡಿ ಮುಚ್ಚಬೇಕು. ಕಾಮಗಾರಿ ಸಂದರ್ಭದಲ್ಲಿ ವಾಹನ ಸವಾರರ ಸುಗಮ ಸಂಚಾರಕ್ಕೆ ಅನುವು ಮಾಡಿ ಕೊಡಬೇಕೆಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

‘ನಗರದ ಎಲ್ಲ ವಲಯಗಳಲ್ಲಿ ರಸ್ತೆ ಗುಂಡಿಗಳನ್ನು ಸಮರೋಪಾದಿಯಲ್ಲಿ ಮುಚ್ಚಲಾಗುತ್ತಿದೆ. ಕಣ್ಣೂರಿನಲ್ಲಿರುವ ಪಾಲಿಕೆಯ ಜಲ್ಲಿ–ಬಿಸಿ ಡಾಂಬರು ಮಿಶ್ರಣ ಘಟಕದಿಂದ ಅಗತ್ಯಕ್ಕೆ ತಕ್ಕಂತೆ ಮಿಶ್ರಣವನ್ನು ಪಡೆದು ತ್ವರಿತಗತಿಯಲ್ಲಿ ರಸ್ತೆಗುಂಡಿಗಳನ್ನು ಮುಚ್ಚುವಂತೆ ಸೂಚಿಸಿದ್ದೇನೆ’ ಎಂದು ತಿಳಿಸಿದರು.

ಶಾಸಕ ಅಖಂಡ ಶ್ರೀನಿವಾಸ ಮೂರ್ತಿ, ರಸ್ತೆ ಮೂಲಸೌಕರ್ಯ ವಿಭಾ ಗದ ಮುಖ್ಯ ಎಂಜಿನಿಯರ್ ಬಿ.ಎಸ್.ಪ್ರಹ್ಲಾದ್ ಇತರ ಅಧಿಕಾರಿಗಳು ಉಪಸ್ಥಿತರಿದ್ದರು.




ನಗರದ ಹೊರ ವರ್ತುಲ ರಸ್ತೆ, ಕೆಂಪೆಗೌಡ ಲೇಔಟ್, ಲಗ್ಗೆರೆಯ ರಸ್ತೆ ಹಾಳಾಗಿದ್ದು ವಾಹನ ಸವಾರರು ಓಡಾಡಲು ಕಷ್ಟಪಡುತ್ತಿರುವ ದೃಶ್ಯ ಬುಧವಾರ ಕಂಡುಬಂತು –ಪ್ರಜಾವಾಣಿ ಚಿತ್ರ

ಸುದ್ದಿ 2 ನಿಮಿಷ

ಕೆಎಂಸಿ ಚುನಾವಣೆ ರದ್ದು ಆದೇಶಕ್ಕೆ ತಡೆ

ಬೆಂಗಳೂರು: ಕರ್ನಾಟಕ ವೈದ್ಯಕೀಯ ಪರಿಷತ್ತಿಗೆ (ಕೆಎಂಸಿ) ನಡೆದಿದ್ದ ಚುನಾವಣೆ ರದ್ದುಗೊಳಿಸಿರುವ ಹೈಕೋರ್ಟ್ ಏಕ ಸದಸ್ಯ ಪೀಠದ ಆದೇಶಕ್ಕೆ ವಿಭಾಗೀಯ ಪೀಠ ತಡೆ ನೀಡಿದೆ.

ಡಾ.ಮಧುಸೂದನ ಕರಿಗನೂರು ಮತ್ತು ಇತರರು ಸಲ್ಲಿಸಿದ್ದ ರಿಟ್ ಮೇಲ್ಮನವಿ ಪರಿಶೀಲಿಸಿದ ನ್ಯಾಯಮೂರ್ತಿ ಕೆ.ಎಸ್. ಮುದಗಲ್ ನೇತೃತ್ವದ ವಿಭಾಗೀಯ ಪೀಠ, ಮಧ್ಯಂತರ ಆದೇಶ ನೀಡಿದೆ. ಈ ವಿಷಯದ ಬಗ್ಗೆ



ವಿವರಣೆ ಅಗತ್ಯವಿದೆ ಎಂದು ತಿಳಿಸಿದ ಪೀಠ, ಕೆಎಂಸಿ ರಿಜಿಸ್ಟ್ರಾರ್ ಅವರಿಗೆ ನೋಟಿಸ್ ನೀಡಲು ಆದೇಶಿಸಿತು.

‘2020ರ ಜನವರಿ 23ರಂದು ಚುನಾವಣೆ ನಡೆದಿದ್ದು, ಮತದಾರರ ಪಟ್ಟಿ ಅಂತಿಮಗೊಳಿಸುವಲ್ಲಿಯೂ ಲೋಪ ಆಗಿದೆ. ಮತದಾರರ ಪಟ್ಟಿಗೆ ಸಲ್ಲಿಸಿದ್ದ ಆಕ್ಷೇಪಣೆಗಳನ್ನು ಚುನಾವಣಾಧಿಕಾರಿ ಪರಿಗಣಿಸಿರಲಿಲ್ಲ. ಈ ಕ್ರಮಗಳು ಕಾನೂನುಬಾಹಿರ’ ಎಂದು ಏಕ ಸದಸ್ಯ ಪೀಠ ತಿಳಿಸಿತ್ತು. ಹೊಸದಾಗಿ ಚುನಾವಣೆ ನಡೆಸಲು 2021ರ ಜೂನ್ 7 ರಂದು ಆದೇಶಿಸಿತ್ತು.

‘ಚುನಾವಣಾಧಿಕಾರಿಯಿಂದ ಆಗಿರುವ ಲೋಪದ ಬಗ್ಗೆ ಅನುಮಾನ ಇದೆಯೇ ಹೊರತು ಸಾಬೀತಾಗಿಲ್ಲ’ ಎಂದು ಮೇಲ್ಮನವಿಯಲ್ಲಿ ವಾದಿಸಲಾಗಿದೆ. ವಿಚಾರಣೆಯನ್ನು ಪೀಠ ಸೆ.22ಕ್ಕೆ ಮುಂದೂಡಿತು.

ಚಿನ್ನಪ್ಪನಹಳ್ಳಿ : ಸ್ಮಶಾನಕ್ಕೆ ಬೇಡಿಕೆ

ಬೆಂಗಳೂರು: ಸಾರ್ವಜನಿಕ ಸ್ಮಶಾನಕ್ಕೆ ಅಗತ್ಯ ಜಮೀನು ಮಂಜೂರು ಮಾಡಿ ಆದೇಶ ಹೊರಡಿಸುವಂತೆ ಬೆಂಗಳೂರು ಪೂರ್ವ ತಾಲ್ಲೂಕಿನ ಕೆ.ಆರ್. ಪುರ ಹೋಬಳಿಯ ಚಿನ್ನಪ್ಪನಹಳ್ಳಿ ಗ್ರಾಮಸ್ಥರು ಜಿಲ್ಲಾಧಿಕಾರಿ ಹಾಗೂ ಬಿಬಿಎಂಪಿ ಮುಖ್ಯ ಆಯುಕ್ತರಿಗೆ ಮನವಿ ಸಲ್ಲಿಸಿದ್ದಾರೆ.

ಆಗಸ್ಟ್ 24ರಂದು ಮನವಿ ಸಲ್ಲಿಸಿರುವ ಚಿನ್ನಪ್ಪನಹಳ್ಳಿ ಗ್ರಾಮಸ್ಥರು, ಸಾರ್ವಜನಿಕ ಸ್ಮಶಾನಕ್ಕೆ ಜಮೀನು ಕಾಯ್ದಿರಿಸಿ ಆದೇಶ ಹೊರಡಿಸುವಂತೆ ಒತ್ತಾಯಿಸಿದ್ದಾರೆ. 30ಕ್ಕೂ ಹೆಚ್ಚು ಜನರು ಸಹಿ ಮಾಡಿದ್ದಾರೆ.

‘ನಗರ ಮಧ್ಯ ಭಾಗದಲ್ಲೇ ಇರುವ ಚಿನ್ನಪ್ಪನಹಳ್ಳಿ ಗ್ರಾಮದಲ್ಲಿ ನೂರಾರು ಕುಟುಂಬಗಳು ವಾಸಿಸುತ್ತಿವೆ. ಜನಸಂಖ್ಯೆಗೆ ಅನುಗುಣವಾಗಿ ಸಾರ್ವಜನಿಕ ಸ್ಮಶಾನ ಒದಗಿಸಿಲ್ಲ. ಯಾರಾದರೂ ಮೃತಪಟ್ಟರೆ ಗೌರವಯುತವಾಗಿ ಅಂತ್ಯಸಂಸ್ಕಾರ ನಡೆಸಲು ಸಾಧ್ಯವಾಗದ ಸ್ಥಿತಿ ಇದೆ. ಗ್ರಾಮದ ವ್ಯಾಪ್ತಿಯಲ್ಲಿ ಸಾಕಷ್ಟು ಪ್ರಮಾಣದ ಸರ್ಕಾರಿ ಜಮೀನು ಲಭ್ಯವಿದ್ದರೂ ಸ್ಮಶಾನಕ್ಕೆ ಜಮೀನು ಕಾಯ್ದಿರಿಸಿಲ್ಲ’ ಎಂದು ಸ್ಥಳೀಯ ನಿವಾಸಿಗಳು ಮನವಿಯಲ್ಲಿ ಉಲ್ಲೇಖಿಸಿದ್ದಾರೆ.

ಎಲ್ಲ ಗ್ರಾಮಗಳಲ್ಲೂ ಸಾರ್ವಜನಿಕ ಸ್ಮಶಾನಕ್ಕೆ ಜಮೀನು ಕಾಯ್ದಿರಿಸುವುದನ್ನು ಕಡ್ಡಾಯಗೊಳಿಸಿ 2014 ಮತ್ತು 2019ರಲ್ಲಿ ಕಂದಾಯ ಇಲಾಖೆ ಆದೇಶ ಹೊರಡಿಸಿದೆ. ಆ ಬಳಿಕ ತಮ್ಮ ಗ್ರಾಮಕ್ಕೆ ಸಾರ್ವಜನಿಕ ಸ್ಮಶಾನ ಮಂಜೂರು ಮಾಡುವಂತೆ ಮನವಿ ಸಲ್ಲಿಸಲಾಗಿತ್ತು. ಈವರೆಗೆ ಯಾವುದೇ ಕ್ರಮ ಆಗಿಲ್ಲ ಎಂದು ಹೇಳಿದ್ದಾರೆ.

ಚಿನ್ನಪ್ಪನಹಳ್ಳಿ ಗ್ರಾಮದ ಸರ್ವೆ ನಂಬರ್ 20ರಲ್ಲಿ 19 ಎಕರೆ 19 ಗುಂಟೆ ಜಮೀನು ಲಭ್ಯವಿದೆ. ಅದರಲ್ಲಿ 10 ಎಕರೆ 20 ಗುಂಟೆ ಸರ್ಕಾರಿ ‘ಎ’ ಖರಾಬು ಮತ್ತು 3 ಎಕರೆ 27 ಗುಂಟೆ ಸರ್ಕಾರಿ ‘ಬಿ’ ಖರಾಬು ಜಮೀನು ಇದೆ. ಅಲ್ಲಿ, 3 ಎಕರೆ 27 ಗುಂಟೆ ಸರ್ಕಾರಿ ‘ಬಿ’ ಖರಾಬು ಜಮೀನು ಸಂಪೂರ್ಣ ಖಾಲಿ ಇದೆ. ಅದನ್ನು ಚಿನ್ನಪ್ಪನಹಳ್ಳಿ ಗ್ರಾಮದ ಜನರ ಬಳಕೆಗಾಗಿ ಸಾರ್ವಜನಿಕ ಸ್ಮಶಾನಕ್ಕಾಗಿ ಕಾಯ್ದಿರಿಸಿ ಆದೇಶ ಹೊರಡಿಸಬೇಕು ಎಂದು ಮನವಿ ಮಾಡಿದ್ದಾರೆ.

ನಗರದಲ್ಲಿ ಇಂದು

ಬಾಲಕಾರ್ಮಿಕರ ಸಮಸ್ಯೆ ಕುರಿತ ಸಂವಾದ: ಮುಖ್ಯ ಅತಿಥಿಗಳು: ಭಾಸ್ಕರ್ ರಾವ್, ಆಂಥೋನಿ ಸೆಬಾಸ್ಟಿಯನ್, ಆಯೋಜನೆ: ರೈಲ್ವೆ ಪೊಲೀಸ್, ವಿಹಾನ್, ಸ್ಥಳ: ಸಮ್ಮೇಳನ ಸಭಾಂಗಣ, ಕಾರ್ಲ್‌ಟನ್ ಹೌಸ್, ಅರಮನೆ ರಸ್ತೆ, ಬೆಳಿಗ್ಗೆ 10.30

ಸಂಸ್ಕೃತ ಮಹೋತ್ಸವ: ಸಂಸ್ಕೃತ ಗ್ರಂಥ ಪುರಸ್ಕಾರ ಪ್ರದಾನ: ರಾಜ್ಯಪಾಲ ಥಾವರ ಚಂದ್ ಗೆಹಲೋತ್, ಮುಖ್ಯ ಅತಿಥಿ: ಪ್ರೊ. ರಾಮಚಂದ್ರ ಭಟ್ ಕೋಟೆಮನೆ, ಉಪಸ್ಥಿತಿ: ಪ್ರೊ.ಕೆ.ಇ. ದೇವನಾಥನ್, ಆಯೋಜನೆ: ಕರ್ನಾಟಕ ಸಂಸ್ಕೃತ ವಿ.ವಿ, ಸ್ಥಳ: ಬೆಂಗಳೂರು ಗಾಯನ ಸಮಾಜ, ಕೃಷ್ಣರಾಜೇಂದ್ರ ರಸ್ತೆ, ಬೆಳಿಗ್ಗೆ 11

ಪರಿಸರಸ್ನೇಹಿ ನಮ್ಮ ಗಣಪ: ಮಣ್ಣಿನ ಗಣೇಶ ತಯಾರಿ, ಉದ್ಘಾಟನೆ: ಸಚಿವ ಕೆ. ಗೋಪಾಲಯ್ಯ, ಆಯೋಜನೆ: ಶ್ರೀ ಮಂಜುನಾಥ ಟ್ರಸ್ಟ್, ಸ್ಥಳ: ಯೋಗ ಮಂದಿರ, ಶಂಕರ ಮಠ, ಬೆಳಿಗ್ಗೆ 11.

‘ಎನ್‌ಇಪಿ: ಜ್ಞಾನ, ಉದ್ಯೋಗ, ಕೌಶಲದ ಸಂಗಮ’

ಕೆಂಗೇರಿ: ‘ನೂತನ ರಾಷ್ಟ್ರೀಯ ಶಿಕ್ಷಣ ನೀತಿಯು ಜ್ಞಾನಾರ್ಜನೆಯೊಂದಿಗೆ, ಉದ್ಯೋಗಾವಕಾಶ ಮತ್ತು ಕೌಶಲ ನೀಡುವ ಶಕ್ತಿ ಹೊಂದಿದೆ’ ಎಂದು ಎಂದು ಬೆಳಗಾವಿಯ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಕುಲಪತಿ ಡಾ.ಎಂ. ರಾಮಚಂದ್ರಗೌಡ ಹೇಳಿದರು.

ಬೆಂಗಳೂರು ವಿಶ್ವವಿದ್ಯಾಲಯ ಮತ್ತು ಬೆಂಗಳೂರು ಯುನಿವರ್ಸಿಟಿ ಟೀಚರ್ ಕೌನ್ಸಿಲ್ ಫಾರ್ ಕಾಮರ್ಸ್ ಆ್ಯಂಡ್ ಮ್ಯಾನೇಜ್‌ಮೆಂಟ್ (ಬಿಯುಟಿಸಿಸಿಎಮ್) ಸಹಯೋಗದಲ್ಲಿ ಇಲ್ಲಿನ ಶೇಷಾದ್ರಿಪುರ ಅಕಾಡೆಮಿ ಆಫ್ ಬಿಸಿನೆಸ್ ಸ್ಟಡೀಸ್ ಕಾಲೇಜಿನಲ್ಲಿ ಆಯೋಜಿಸಿದ್ದ ರಾಷ್ಟ್ರೀಯ ಶಿಕ್ಷಣ ನೀತಿ ಕುರಿತ ರಾಷ್ಟ್ರೀಯ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

‘ಕಾಲೇಜು ಕೇಂದ್ರಿತವಾಗಿದ್ದ ಶಿಕ್ಷಣ ಕ್ರಮ ಹಾಗೂ ಅಧ್ಯಯನ ವಿಷಯಗಳು ನೂತನ ರಾಷ್ಟ್ರೀಯ ಶಿಕ್ಷಣದಡಿ ವಿದ್ಯಾರ್ಥಿ ಕೇಂದ್ರಿತವಾಗಿ ಮಾರ್ಪಾಡಾಗಲಿವೆ. ವಿದ್ಯಾರ್ಥಿಗಳು ಸೂಚಿತ ವಿಷಯಗಳೊಂದಿಗೆ ತಮ್ಮಿಚ್ಛೆಯ ವಿಷಯಗಳನ್ನು ಒಂದೇ ಬಾರಿಗೆ 60:40ರ ಅನುಪಾತದಲ್ಲಿ ಅಧ್ಯಯನ ಮಾಡಲು ಅವಕಾಶ ದೊರಕುತ್ತದೆ’ ಎಂದರು.



ಕಾರ್ಯಾಗಾರದಲ್ಲಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಕುಲಪತಿ ಡಾ.ಎಂ.ರಾಮಚಂದ್ರಗೌಡ ಅವರನ್ನು ಸನ್ಮಾನಿಸಲಾಯಿತು

ದಾವಣಗೆರೆ ವಿಶ್ವವಿದ್ಯಾಲಯದ ಕುಲಸಚಿವೆ ಡಾ.ಅನಿತಾ ಎಚ್‌.ಎಸ್., ‘ನೂತನ ನೀತಿಗಳನ್ನು ಜಾರಿಗೆ ತರುವಾಗ ಅಡ್ಡಿಗಳು ಸಹಜ. ಉನ್ನತಿಯತ್ತ ಸಾಗಲು ಅಗತ್ಯ ಬದಲಾವಣೆಯನ್ನು ಅಪ್ಪಿಕೊಳ್ಳುವುದು ಅನಿವಾರ್ಯ. ಇದರಿಂದ ಶೈಕ್ಷಣಿಕ ರಂಗ ಮತ್ತಷ್ಟು ಅಭ್ಯುದಯ ಹೊಂದಲು ಸಾಧ್ಯವಾಗಲಿದೆ’ ಎಂದು ಹೇಳಿದರು.

ಶೇಷಾದ್ರಿಪುರ ಶಿಕ್ಷಣ ದತ್ತಿ ಕಾರ್ಯದರ್ಶಿ ವೂಡೇ ಪಿ.ಕೃಷ್ಣ ಅಧ್ಯಕ್ಷತೆ ವಹಿಸಿದ್ದರು.

ಬೆಂಗಳೂರು ವಿಶ್ವವಿದ್ಯಾಲಯದ ವಾಣಿಜ್ಯ ವಿಭಾಗದ ಮುಖ್ಯಸ್ಥೆ ನಿರ್ಮಲಾ, ಬಿಯುಟಿಸಿಸಿಎಂ ಸಮಿತಿಯ ಡಾ.ಕರುಣಾಕರ ರೆಡ್ಡಿ, ಡಾ.ಮೊಹಮ್ಮದ್ ಫಾರೂಕ್ ಪಾಷಾ, ಡಾ. ಚೇತನಾ ಎಂ., ಕಾಲೇಜು ಪ್ರಾಂಶುಪಾಲ ಪ್ರೊ.ಜಯರಾಮ್, ಸೌಮ್ಯಾ ಡಿ.ಎನ್. ಪಾಲ್ಗೊಂಡಿದ್ದರು.

ಗಣೇಶನ ಹೆಸರಿದ್ದರೆ ವಂಡರ್‌ಲಾಗೆ ಉಚಿತ ಪಾಸ್

ರಾಮನಗರ: ಗಣೇಶ ಚತುರ್ಥಿ ದಿನದ ಅಂಗವಾಗಿ ಬಿಡದಿಯ ವಂಡರ್ ಲಾ ಅಮ್ಯೂಸ್‌ಮೆಂಟ್ ಪಾರ್ಕ್ ವತಿಯಿಂದ ವಿಭಿನ್ನ ಕೊಡುಗೆ ನೀಡಿದೆ.

ಗಣೇಶನ 108 ಹೆಸರುಗಳ ಪೈಕಿ ಯಾವುದೇ ಹೆಸರು ನೀವು ಇಟ್ಟುಕೊಂಡಿದ್ದರೆ ಅಂತಹವರಿಗೆ ಇದೇ 10ರಂದು ವಂಡರ್‌ಲಾ ಪ್ರವೇಶಕ್ಕೆ ಉಚಿತ ಪಾಸ್ ಸಿಗಲಿದೆ.

ಮೊದಲು ಬರುವ 100 ಗ್ರಾಹಕರಿಗೆ ಈ ಪಾಸ್ ಲಭ್ಯವಿದೆ. ವಂಡರ್‌ಲಾಗೆ ನೇರವಾಗಿ ಭೇಟಿ ನೀಡಿ ಪಾಸ್ ಪಡೆಯಬಹುದು. ಅಂತಹವರು ತಮ್ಮ ಹೆಸರಿನ ಗುರುತಿನ ಚೀಟಿ ತರುವುದು ಕಡ್ಡಾಯವಾಗಿದೆ.

ಹೆಚ್ಚಿನ ವಿವರಗಳಿಗೆ ದೂರವಾಣಿ 080-372 30333, 080-35073966 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

‘ಉಪನಗರ ವರ್ತುಲ ರಸ್ತೆ: ಆರು ತಿಂಗಳಲ್ಲಿ ಯೋಜನೆ ಆರಂಭ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನಗರದ ಸಂಚಾರ ದಟ್ಟಣೆ ಕಡಿಮೆಗೊಳಿಸಲು ಉಪನಗರ ವರ್ತುಲ ರಸ್ತೆ ನಿರ್ಮಾಣ ಯೋಜನೆಯನ್ನು ಆದಷ್ಟು ಬೇಗ ಆರಂಭಿಸುವುದಾಗಿ ಕೇಂದ್ರ ಭೂಸಾರಿಗೆ, ರಾಷ್ಟ್ರೀಯ ಹೆದ್ದಾರಿಗಳ ಸಚಿವ ನಿತಿನ್ ಗಡ್ಕರಿ ಭರವಸೆ ನೀಡಿದ್ದಾರೆ.

ನವದೆಹಲಿಯಲ್ಲಿ ಬುಧವಾರ ಗಡ್ಕರಿ ಜತೆಗಿನ ಭೇಟಿಯ ಬಳಿಕ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸುದ್ದಿಗಾರರಿಗೆ ಈ ವಿಷಯ ತಿಳಿಸಿದರು.

ಇನ್ನು ಆರು ತಿಂಗಳಲ್ಲಿ ಈ ಯೋಜನೆ ಪ್ರಾರಂಭಗೊಳ್ಳಲಿದೆ. ಈ ಉಪನಗರ ವರ್ತುಲ ರಸ್ತೆ ಬೆಂಗಳೂರು, ದಾಬಸ್‌ಪೇಟೆ ಮತ್ತು ಹೊಸೂರುಗಳಿಗೆ ಸಂಪರ್ಕ ಕಲ್ಪಿಸುತ್ತದೆ. ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಭಾರತ್‌ಮಾಲ ಅಡಿ ಯೋಜನೆ ಕೈಗೆತ್ತಿಕೊಳ್ಳಲಾಗುವುದು. ಇದಕ್ಕೆ ₹15,000 ಕೋಟಿ ಹೂಡಿಕೆ ಮಾಡಲಾಗುವುದು ಎಂದರು.

ಮುಖ್ಯಾಂಶಗಳು

- ಬೆಂಗಳೂರು ದಾಬಸ್‌ಪೇಟೆ ಹೊಸೂರು ಸಂಪರ್ಕ ಕಲ್ಪಿಸುವಿಕೆ
- ಭಾರತ್‌ಮಾಲ ಯೋಜನೆ ಅಡಿಯಲ್ಲಿ ₹ 15 ಸಾವಿರ ಕೋಟಿ ಹೂಡಿಕೆ
- ಉಪನಗರ ವರ್ತುಲ ರಸ್ತೆ ಯೋಜನೆಯ ಶೇ 30ರಷ್ಟು ವೆಚ್ಚ ರಾಜ್ಯ ಸರ್ಕಾರದ್ದು

ಈ ಯೋಜನೆಯ ಶೇ 30 ರಷ್ಟು ರಾಜ್ಯ ಸರ್ಕಾರ ಭರಿಸಲಿದೆ. ರಾಜ್ಯದ ಪಾಲಿನಲ್ಲಿ ₹1,560 ಕೋಟಿಯನ್ನು ಭೂಸ್ವಾಧೀನ ಪ್ರಕ್ರಿಯೆಗೆ ಬಳಸಲಾಗುವುದು. ಅಲ್ಲದೆ, ರಸ್ತೆ ನಿರ್ಮಾಣಕ್ಕೆ ಬಳಸುವ ಉಕ್ಕು, ಸಿಮೆಂಟ್, ಮರಳು ಇತ್ಯಾದಿಗಳಿಗೆ ವಿಧಿಸುವ ರಾಜ್ಯ ಜಿಎಸ್‌ಟಿಯಿಂದ ವಿನಾಯ್ತಿ ನೀಡಲಾಗುವುದು. ಇದರ ಮೊತ್ತ ₹1,000 ಕೋಟಿ ಆಗುತ್ತದೆ ಎಂದು ಬೊಮ್ಮಾಯಿ ಹೇಳಿದರು.

ನಾಲ್ಕುಪಥಗಳ ವರ್ತುಲ ರಸ್ತೆ ನಿರ್ಮಾಣಗೊಳ್ಳಲಿದ್ದು, ತಮಿಳುನಾಡಿಗೆ ಹೋಗಬೇಕಾದ ವಾಹನಗಳು ಬೆಂಗಳೂರು ನಗರವನ್ನು ಪ್ರವೇಶಿಸದೇ ದಾಬಸ್‌ಪೇಟೆಯ ಮೂಲಕ ವರ್ತುಲ ರಸ್ತೆಯಲ್ಲಿ ಸಾಗಿ ಹೊಸೂರನ್ನು ಸೇರುತ್ತವೆ ಎಂದು ಬೊಮ್ಮಾಯಿ ಹೇಳಿದರು.

ಎಲೆಕ್ಟ್ರಾನಿಕ್ ಕ್ಲಸ್ಟರ್: ಬೆಂಗಳೂರು–ಕೋಲಾರ ಮಧ್ಯೆ ಎಲೆಕ್ಟ್ರಾನಿಕ್ ಉಪಕರಣಗಳ ಉತ್ಪಾದನಾ ಕ್ಲಸ್ಟರ್ ಸ್ಥಾಪಿಸಲಾಗುವುದು ಎಂದು ಬೊಮ್ಮಾಯಿ ತಿಳಿಸಿದರು.

ಕೇಂದ್ರ ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವ ರಾಜೀವ್ ಚಂದ್ರಶೇಖರ್ ಜತೆ ಮಾತುಕತೆಯ ಬಳಿಕ ಅವರು ಸುದ್ದಿಗಾರರಿಗೆ ಈ ವಿಷಯ ತಿಳಿಸಿದರು.

ಬೆಂಗಳೂರು– ಚೆನ್ನೈ ಎಕ್ಸ್‌ಪ್ರೆಸ್ ಹೆದ್ದಾರಿಗೆ ಸಮೀಪ 400 ಎಕರೆಯಲ್ಲಿ ಕ್ಲಸ್ಟರ್ ನಿರ್ಮಾಣಗೊಳ್ಳಲಿದೆ. ರೈಲು, ರಸ್ತೆ ಮತ್ತು ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಂಪರ್ಕ ವ್ಯವಸ್ಥೆಯೂ ಇದೆ ಎಂದರು.

ಬಿಬಿಎಂಪಿ ವಿರುದ್ಧ ದಲಿತ ಸಂಘಟನೆಗಳ ಒಕ್ಕೂಟದ ಪ್ರತಿಭಟನೆ

ಕಲ್ಯಾಣ ಕಾರ್ಯಕ್ರಮಗಳಿಗೆ ಕತ್ತರಿ: ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಬಡವರ ಅಭಿವೃದ್ಧಿಗಾಗಿ ಕೈಗೊಳ್ಳುವ ಕಲ್ಯಾಣ ಕಾರ್ಯಕ್ರಮಗಳಿಗೆ ಕತ್ತರಿ ಹಾಕಿರುವುದನ್ನು ವಿರೋಧಿಸಿ ಹಾಗೂ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಕರ್ನಾಟಕ ದಲಿತ ಸಂಘಟನೆಗಳ ಒಕ್ಕೂಟದ ನೇತೃತ್ವದಲ್ಲಿ ಬಿಬಿಎಂಪಿ ವಿರುದ್ಧ ಬುಧವಾರ ಪ್ರತಿಭಟನೆ ನಡೆಯಿತು.

ಬಿಬಿಎಂಪಿ ಕೇಂದ್ರ ಕಚೇರಿ ಬಳಿ ಧರಣಿ ನಡೆಸಿದ ಪ್ರತಿಭಟನಕಾರರು, ‘ಕೋವಿಡ್ ನೆಪವೊಡ್ಡಿ 2020–21 ಹಾಗೂ 2021–22ನೇ ಸಾಲಿನಲ್ಲಿ ಒಂಟಿ ಮನೆ, ಲ್ಯಾಪ್‌ಟಾಪ್ ವಿತರಣೆ ಸೇರಿದಂತೆ ಅನೇಕ ಕಲ್ಯಾಣ ಕಾರ್ಯಕ್ರಮಗಳ ಅನುಷ್ಠಾನ ಸ್ಥಗಿತಗೊಳಿಸಲಾಗಿದೆ. ಈ ಸವಲತ್ತುಗಳನ್ನು ಮತ್ತೆ ಆರಂಭಿಸಬೇಕು. ಇವುಗಳನ್ನು ಜನಪ್ರತಿನಿಧಿಗಳ ಜನ್ಮದಿನದಂದು ವಿತರಿಸುವುದು ಸಂವಿಧಾನ ವಿರೋಧಿ ನಡೆ. ಈ ಪರಿಪಾಟ ಬಿಡಬೇಕು’ ಎಂದು ಒತ್ತಾಯಿಸಿದರು.

‘ರಾಜೀವ ಗಾಂಧಿ ವಸತಿ ಯೋಜನೆ ಅಡಿ ವಸತಿ ಮಂಜೂರಾಗಿರುವ ದೊಡ್ಡಕನ್ನಲ್ಲಿ ಗ್ರಾಮದ 482 ಕುಟುಂಬಗಳಿಗೆ ಹಾಗೂ ದೇವರಬೀಸನಹಳ್ಳಿ ಗ್ರಾಮದ 480 ಕುಟುಂಬಗಳಿಗೆ ಹಕ್ಕುಪತ್ರ ವಿತರಣೆಯಾಗಿದ್ದರೂ, ಅವರ ಖಾತಾ ನೋಂದಣಿ ಮಾಡಿಲ್ಲ. ಪಾಲಿಕೆ ವತಿಯಿಂದಲೇ ಅವರ ಖಾತಾ ನೋಂದಣಿ ಮಾಡಿಸಬೇಕು. ಈ ವಸತಿಗಳಿಗೆ ಮೂಲ ಸೌಕರ್ಯ ಕಲ್ಪಿಸಬೇಕು. ಕೂಡ್ಲು ಗ್ರಾಮದ ಬಸವಲಿಂಗಪ್ಪ ಬಡಾವಣೆಯ ಮೂಲಸೌಕರ್ಯ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು’ ಎಂದು ಕೋರಿದರು.



ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಕರ್ನಾಟಕ ದಲಿತ ಸಂಘಟನೆಗಳ ಒಕ್ಕೂಟದವರು ಬಿಬಿಎಂಪಿ ಕೇಂದ್ರ ಕಚೇರಿ ಬಳಿ ಬುಧವಾರ ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ಚಿತ್ರ

ಎಸ್‌ಸಿಪಿ– ಟಿಎಸ್‌ಪಿ ಅನುದಾನವನ್ನು ಕೆಲ ಬಿಬಿಎಂಪಿ ಅಧಿಕಾರಿಗಳು ದುರ್ಬಳಕೆ ಮಾಡಿದ್ದಾರೆ ಎಂದು ಆರೋಪಿಸಿದ ಪ್ರತಿಭಟನಕಾರರು, ತಪ್ಪಿತಸ್ಥರ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ಆಗ್ರಹಿಸಿದರು.

‘ಪಾಲಿಕೆ ವ್ಯಾಪ್ತಿಯಲ್ಲಿ ಕೆಲವೆಡೆ ಕುಡಿಯುವ ನೀರಿನ ಸಮಸ್ಯೆಗಳನ್ನು ಬಗೆಹರಿಸಲು ಕ್ರಮ ಕೈಗೊಳ್ಳುತ್ತಿಲ್ಲ. ಟ್ಯಾಂಕರ್ ನೀರು ಪೂರೈಕೆ ಹೆಸರಿನಲ್ಲಿ ಲಕ್ಷಗಟ್ಟಲೆ ಬಿಲ್ ಮಾಡಲಾಗುತ್ತಿದೆ. ಇದಕ್ಕೆ ಶೇ 24.10ರ ಮೀಸಲು ಅನುದಾನವನ್ನೂ ದುರ್ಬಳಕೆ ಮಾಡಲಾಗಿದೆ. ಈ ಟ್ಯಾಂಕರ್ ಮಾಫಿಯಾ ವಿರುದ್ಧ ಕ್ರಮಕೈಗೊಳ್ಳಬೇಕು’ ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಒಕ್ಕೂಟದ ಅಧ್ಯಕ್ಷ ಬಿ.ಚನ್ನಕೃಷ್ಣಪ್ಪ, ಪ್ರಧಾನ ಕಾರ್ಯದರ್ಶಿ ಆರ್.ಎಂ.ಎನ್. ರಮೇಶ, ಕಾರ್ಯಾಧ್ಯಕ್ಷ ಪಿ.ಮೂರ್ತಿ, ಹಿರಿಯ ಉಪಾಧ್ಯಕ್ಷ ಸೋರುಣಿಸೆ ವೆಂಕಟೇಶ್, ಉಪಾಧ್ಯಕ್ಷರಾದ ಜೆ. ಚಂದ್ರಪ್ಪ, ಕೃಷ್ಣಪ್ಪ, ರಾಜ್ಯ ಸಮಿತಿ ಸದಸ್ಯ ಕನ್ನಲ್ಲಿ ಕೃಷ್ಣಪ್ಪ ಉಪಸ್ಥಿತರಿದ್ದರು.

ಮರ್ಸಿಡೀಸ್–ಬೆಂಜ್ ಕಂಪನಿಯ ಸಿಇಒ ಮಾರ್ಟಿನ್ ಶ್ವೆಂಕ್ ಅಭಿಮತ

‘ವಾಹನ ಮಾರಾಟದಲ್ಲಿ ತ್ವರಿತ ಚೇತರಿಕೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮರ್ಸಿಡೀಸ್–ಬೆಂಜ್ ಕಂಪನಿಯು ವಾಹನ ಮಾರಾಟದಲ್ಲಿ ತ್ವರಿತವಾದ ಚೇತರಿಕೆಯನ್ನು ಕಾಣುತ್ತಿದೆ ಎಂದು ಕಂಪನಿಯ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ (ಸಿಇಒ) ಮಾರ್ಟಿನ್ ಶ್ವೆಂಕ್ ಹೇಳಿದರು.

ಸುಂದರಂ ಮೋಟರ್ಸ್ ಹಾಗೂ ತಮ್ಮ ಕಂಪನಿ ನಡುವಿನ ಸಂಬಂಧಕ್ಕೆ 20 ವರ್ಷಗಳು ತುಂಬಿದ್ದರ ಹಿನ್ನೆಲೆಯಲ್ಲಿ, ನಗರದ ಸುಂದರಂ ಮೋಟರ್ಸ್ ಮಳಿಗೆಯಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಶ್ವೆಂಕ್ ಅವರು ಪಾಲ್ಗೊಂಡಿದ್ದರು. ಸುಂದರಂ ಮೋಟರ್ಸ್, ಮರ್ಸಿಡೀಸ್–ಬೆಂಜ್ ಕಾರುಗಳ ವಿತರಕ ಕಂಪನಿ.

ವಿದ್ಯುತ್ ಚಾಲಿತ ವಾಹನಗಳಿಗೆ ಒಳ್ಳೆಯ ಭವಿಷ್ಯವಿದೆ ಎಂದರು.

‘ನಮ್ಮ ಕಂಪನಿಯ ಬ್ರ್ಯಾಂಡ್‌ನ ಬೆಳವಣಿಗೆಯಲ್ಲಿ ಸುಂದರಂ ಮೋಟರ್ಸ್ ಪ್ರಮುಖ ಪಾತ್ರ ವಹಿಸುವುದನ್ನು ಮುಂದುವರಿಸಲಿದೆ’ ಎಂದು ಹೇಳಿದರು.



ಮರ್ಸಿಡೀಸ್–ಬೆಂಜ್ ಕಂಪನಿಯ ಸಿಇಒ ಮಾರ್ಟಿನ್ ಶ್ವೆಂಕ್ ಮತ್ತು ಸುಂದರಂ ಮೋಟರ್ಸ್‌ನ ಕಾರ್ಯನಿರ್ವಾಹಕ ನಿರ್ದೇಶಕ ಶರತ್ ವಿಜಯರಾಘವನ್ ಅವರು, ಎರಡೂ ಕಂಪನಿಗಳ ನಡುವಿನ ಒಡನಾಟಕ್ಕೆ 20 ವರ್ಷಗಳು ತುಂಬಿದ್ದರ ಹಿನ್ನೆಲೆಯಲ್ಲಿ ಬೆಂಗಳೂರಿನಲ್ಲಿ ಬುಧವಾರ ಆಯೋಜಿಸಿದ್ದ ಕಾರ್ಯಕ್ರಮಕ್ಕೆ ನಗಾರಿ ಬಾರಿಸಿ ಚಾಲನೆ ನೀಡಿದರು. –ಪ್ರಜಾವಾಣಿ ಚಿತ್ರ

‘ಗ್ರಾಹಕ ಕೇಂದ್ರಿತ ನಡೆಯು ನಮ್ಮ ಯಶಸ್ಸಿಗೆ ಕಾರಣ. ಮೊದಲ ಐದು ಸಾವಿರ ಕಾರುಗಳನ್ನು ಮಾರಾಟ ಮಾಡಲು ನಮಗೆ 15 ವರ್ಷಗಳು ಬೇಕಾದವು. ಆದರೆ, ನಂತರದ ಐದು ಸಾವಿರ ಕಾರುಗಳನ್ನು ಮಾರಾಟ ಮಾಡಲು ನಮಗೆ ಐದೇ ವರ್ಷಗಳು ಸಾಕಾದವು’ ಎಂದು ಸುಂದರಂ ಮೋಟರ್ಸ್‌ನ ಕಾರ್ಯನಿರ್ವಾಹಕ ನಿರ್ದೇಶಕ ಶರತ್ ವಿಜಯರಾಘವನ್ ಹೇಳಿದರು.

ಗ್ರಾಹಕರಿಗೆ ದಿನದ 24 ಗಂಟೆಗಳ ಕಾಲವೂ ಕಾರು ಸರ್ವಿಸಿಂಗ್ ಸೇವೆ ಒದಗಿಸುವ ಯೋಜನೆಗೆ ಚಾಲನೆ ನೀಡಲಾಯಿತು. ನಗರದಲ್ಲಿ ರಾತ್ರಿ ಕರ್ಫ್ಯೂ ತೆರವಾದ ನಂತರದಲ್ಲಿ ಇದು ಪೂರ್ಣ ಪ್ರಮಾಣದಲ್ಲಿ ಲಭ್ಯವಾಗಲಿದೆ. ಹೊಸದಾಗಿ ಕಾರು ಖರೀದಿಸುವವರಿಗೆ, ಮುಂದೆ ಅದೇ ಕಾರನ್ನು ಸುಂದರಂ ಮೋಟರ್ಸ್ ಕಂಪನಿಯು ಮರಳಿ ಖರೀದಿಸುವಾಗ ಎಷ್ಟು ಬೆಲೆ ನಿಗದಿ ಮಾಡಲಿದೆ ಎಂಬುದನ್ನು ಈಗಲೇ ತಿಳಿಸುವ ಯೋಜನೆಗೂ ಚಾಲನೆ ನೀಡಲಾಯಿತು.

ಇಬ್ಬರು ವಿದ್ಯಾರ್ಥಿಗಳಿಗೆ ರಾಷ್ಟ್ರಪತಿ ಪದಕ

ಪ್ರಜಾವಾಣಿ ವಾರ್ತೆ

ಧಾರವಾಡ: ಐಐಟಿ ಧಾರವಾಡದ ಮೊದಲ ಹಾಗೂ ಎರಡನೇ ಘಟಿಕೋತ್ಸವದಲ್ಲಿ ಗಣಕವಿಜ್ಞಾನ ವಿಭಾಗದಲ್ಲಿ ಉತ್ತಮ ಸಾಧನೆ ಮಾಡಿದ ಚಾರು ಅಗರ್ವಾಲ್ ಹಾಗೂ ಪ್ರತೀಕ್ ಜೈನ್ ಅವರಿಗೆ ಬಿಟೆಕ್ ಪದವಿಯೊಂದಿಗೆ ರಾಷ್ಟ್ರಪತಿ ಪದಕವನ್ನು ಬುಧವಾರ ಪ್ರದಾನ ಮಾಡಲಾಯಿತು.

2016ರಲ್ಲಿ ಅರಂಭವಾದ ಐಐಟಿ ಧಾರವಾಡದ ಮೊದಲ ಘಟಿಕೋತ್ಸವ ಕೋವಿಡ್ ಕಾರಣದಿಂದ ಮುಂದೂಡಲಾಗಿತ್ತು. ಈ ಬಾರಿ ಎರಡೂ ಘಟಿಕೋತ್ಸವಗಳನ್ನು ಆನ್‌ಲೈನ್ ವೇದಿಕೆಯಲ್ಲಿ ನೆರವೇರಿದವು.

ಬೇಟೆಗಾರರ ಗುಂಡಿನಿಂದ ಯುವಕನಿಗೆ ಗಾಯ

ಶ್ರೀರಂಗಪಟ್ಟಣ: ತಾಲ್ಲೂಕಿನ ಮೇಳಾಪುರ ಬಳಿ ಬುಧವಾರ ಬೇಟೆಗಾರರು ಹಾರಿಸಿದ ಗುಂಡು ತಗುಲಿ ಗ್ರಾಮದ ಯುವಕ ಮಾದೇಶ್ (22) ಗಾಯಗೊಂಡಿದ್ದು, ಮೈಸೂರಿನ ಖಾಸಗಿ ಆಸ್ಪತ್ರೆ ದಾಖಲಿಸಲಾಗಿದೆ.

ಅವರು ಊರಿನ ಹೊರಗಿರುವ ತಮ್ಮ ಮನೆ ಬಳಿ ಇದ್ದಾಗ ಪಕ್ಕದ ಕಬ್ಬಿನ ಗದ್ದೆಯಲ್ಲಿ ಕಾಡು ಹಂದಿ ಬೇಟೆಗಾರರು ಹಾರಿಸಿದ ಗುಂಡು ಗುರಿ ತಪ್ಪಿ ತಗುಲಿತು. ಈ ಸಂಬಂಧ ಮೈಸೂರು ನಗರ ಹಾಗೂ ರಮ್ಮನಹಳ್ಳಿಯ ಮೂವರನ್ನು ಗ್ರಾಮಸ್ಥರು ಹಿಡಿದು ಪೊಲೀಸರಿಗೆ ಒಪ್ಪಿಸಿದರು. ಬಂದೂಕುಗಳನ್ನು ವಶಪಡಿಸಿಕೊಂಡ ಗ್ರಾಮಾಂತರ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಯಲಹಂಕದಲ್ಲಿ ಬೃಹತ್ ಲಸಿಕಾ ಕೇಂದ್ರ ಉದ್ಘಾಟನೆ

ಮಹಿಳೆಯರಿಗಾಗಿ ಪಿಂಕ್ ಬೂತ್

ಪ್ರಜಾವಾಣಿ ವಾರ್ತೆ



ಯಲಹಂಕದ ಅಂಬೇಡ್ಕರ್ ಭವನದಲ್ಲಿ ಸ್ಥಾಪಿಸಿರುವ ಬೃಹತ್ ಲಸಿಕಾ ಕೇಂದ್ರದ ಪಿಂಕ್ ಬೂತ್

ಬೆಂಗಳೂರು: ಕೋವಿಡ್ ಲಸಿಕಾ ಅಭಿಯಾನವನ್ನು ಚುರುಕುಗೊಳಿಸುವ ಉದ್ದೇಶದಿಂದ ಹಾಗೂ ಜನರು ಸರತಿ ಸಾಲಿನಲ್ಲಿ ಕಾಯದೇ ಗೊಂದಲರಹಿತವಾಗಿ ಲಸಿಕೆ ಪಡೆಯಲು ಅವಕಾಶ ಕಲ್ಪಿಸುವ ಸಲುವಾಗಿ ಬಿಬಿಎಂಪಿಯು ಕೇರ್ ಇಂಡಿಯಾ ಸಂಸ್ಥೆಯ ಸಹಭಾಗಿತ್ವದೊಂದಿಗೆ 'ಬೃಹತ್ ಲಸಿಕಾ ಕೇಂದ್ರ'ಗಳನ್ನು ಸ್ಥಾಪಿಸುತ್ತಿದೆ.

ಮಹಿಳೆಯರು ಅಡ್ಡಿ ಆತಂಕಗಳಿಲ್ಲದೇ ಲಸಿಕೆ ಪಡೆಯಲು ಅನುವು ಮಾಡಿಕೊಡುವ ಸಲುವಾಗಿ ಬೃಹತ್ ಲಸಿಕಾ ಕೇಂದ್ರಗಳಲ್ಲಿ ಪಿಂಕ್ ಬೂತ್‌ಗಳನ್ನು ಸ್ಥಾಪಿಸಲಾಗುತ್ತದೆ. ಗರ್ಭಿಣಿಯರಿಗೆ ಹಾಗೂ ಬಾಣಂತಿಯರಿಗೂ ಲಸಿಕೆ ನೀಡುವ ವ್ಯವಸ್ಥೆ ಇಲ್ಲಿರಲಿದೆ.

ಲಸಿಕೆ ಪಡೆಯುವ ಹಿರಿಯ ನಾಗರಿಕರಿಗೆ, ಮಹಿಳೆಯರಿಗೆ ಮತ್ತು ಅಂಗವಿಕಲರನ್ನು ನೋಂದಣಿ ಮಾಡಿಸಲು ಪ್ರತ್ಯೇಕ ಕೌಂಟರ್ ವ್ಯವಸ್ಥೆ ಮಾಡಲಾಗಿದೆ. ಅಂಗವಿಕಲರಿಗಾಗಿ ಗಾಲಿ ಕುರ್ಚಿ ವ್ಯವಸ್ಥೆಯನ್ನೂ ಕಲ್ಪಿಸಲಾಗಿರುತ್ತದೆ.

ಯಲಹಂಕದ ಎನ್‌ಇಎಸ್ ವೃತ್ತದ ಬಳಿಯ ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಸ್ಥಾಪಿಸಿರುವ 'ಬೃಹತ್ ಲಸಿಕಾ ಕೇಂದ್ರ'ಕ್ಕೆ ಶಾಸಕ ಎಸ್.ಆರ್. ವಿಶ್ವನಾಥ್ ಹಾಗೂ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಬುಧವಾರ ಚಾಲನೆ ನೀಡಿದರು. ಯಲಹಂಕ ವಲಯ ಆಯುಕ್ತ ಕೆ.ಎ.ದಯಾನಂದ್, ವಿಶೇಷ ಆಯುಕ್ತ (ಆರೋಗ್ಯ) ಡಿ.ರಂದೀಪ್, ಯಲಹಂಕ ವಲಯ ಜಂಟಿ ಆಯುಕ್ತ ಡಾ. ಅಶೋಕ್ ಉಪಸ್ಥಿತರಿದ್ದರು.

'ಕಳೆದ 15 ದಿನಗಳಲ್ಲಿ ಬಿಬಿಎಂಪಿಗೆ ಪೂರೈಕೆಯಾಗುವ ಲಸಿಕೆ ಪ್ರಮಾಣ ಹೆಚ್ಚಾಗಿದೆ. ನಿತ್ಯ 1.5 ಲಕ್ಷ ಜನರಿಗೆ ಲಸಿಕೆ ಹಾಕುವ ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ. ಇದಕ್ಕೆ ಪೂರಕವಾಗಿ ಬೃಹತ್ ಲಸಿಕಾ ಕೇಂದ್ರಗಳನ್ನು ಪ್ರಾರಂಭಿಸುತ್ತಿದ್ದೇವೆ. ಆರಂಭದಲ್ಲಿ ಮೂರು ಕಡೆ ಇಂತಹ ಕೇಂದ್ರಗಳನ್ನು ಸ್ಥಾಪಿಸಿದ್ದೇವೆ. ಕ್ರಮೇಣ ಇವುಗಳ ಸಂಖ್ಯೆಯಲ್ಲಿ ಹೆಚ್ಚಿಸಲಿದ್ದೇವೆ' ಎಂದು ಗೌರವ್ ಗುಪ್ತ ತಿಳಿಸಿದರು.

ಲಸಿಕಾ ಕೇಂದ್ರಗಳು

- ಡಾ. ಬಿ.ಆರ್.ಅಂಬೇಡ್ಕರ್ ಭವನ, ಯಲಹಂಕ ವಲಯ
- ಸಾಂಕ್ರಾಮಿಕ ರೋಗಗಳ ಆಸ್ಪತ್ರೆ, ಸ್ವಾಮಿ ವಿವೇಕಾನಂದ ಮೆಟ್ರೊ ನಿಲ್ದಾಣ ಹಿಂಭಾಗ, ಪೂರ್ವ ವಲಯ.
- ಯಂಗ್ ಸ್ಟರ್ ಕಬಡ್ಡಿ ಕ್ಲಬ್ ಮೈದಾನ, ಮಲ್ಲೇಶ್ವರ, ಪಶ್ಚಿಮ ವಲಯ

ಬೃಹತ್ ಲಸಿಕಾ ಕೇಂದ್ರದ ವಿಶೇಷಗಳೇನು?: ಉಚಿತ ಲಸಿಕಾಕರಣ: ಲಸಿಕಾ ಕೇಂದ್ರದಲ್ಲಿ ಜನಜಂಗುಳಿ ಉಂಟಾಗುವುದನ್ನು ತಡೆಗಟ್ಟಲು ನಾಲ್ಕು ಲಸಿಕಾ ಬೂತ್‌ಗಳನ್ನು ತೆರೆಯಲಾಗಿದೆ. ಅರ್ಹತೆ ಹೊಂದಿರುವ ಎಲ್ಲ ಫಲಾನುಭವಿಗಳಿಗೂ ಇಲ್ಲಿ ಉಚಿತವಾಗಿ ಲಸಿಕೆ ನೀಡಲಾಗುವುದು.

ನಿರೀಕ್ಷಣಾ ವ್ಯವಸ್ಥೆ: ಕೋವಿಡ್ ಲಸಿಕೆಯನ್ನು ಪಡೆದವರು ತುಸು ಹೊತ್ತು ವಿಶ್ರಾಂತಿ ಪಡೆಯಲು ಪ್ರತ್ಯೇಕ ಕೊಠಡಿಯ ವ್ಯವಸ್ಥೆ ಇಲ್ಲಿರಲಿದೆ. ಲಸಿಕೆಯಿಂದ ಅಡ್ಡ ಪರಿಣಾಮ ಉಂಟಾದಲ್ಲಿ ತಕ್ಷಣ ಚಿಕಿತ್ಸೆ ಹಾಗೂ ಆರೈಕೆ ಒದಗಿಸಲು ವೈದ್ಯಾಧಿಕಾರಿಗಳು ಲಭ್ಯ ಇರುತ್ತಾರೆ.

ನೇರವಾಗಿ ಲಸಿಕೆ ಪಡೆಯುವ ವ್ಯವಸ್ಥೆ: ಕೇಂದ್ರಕ್ಕೆ ವಾಹನದಲ್ಲಿ ಬಂದು ಲಸಿಕೆ ಪಡೆಯಲು ಇಚ್ಛಿಸುವವರಿಗೆ ಪ್ರತ್ಯೇಕ ಕೌಂಟರ್ ಇರಲಿದೆ. ಅವರು ವಾಹನಗಳಲ್ಲಿಯೇ ಕುಳಿತು ಕೋವಿಡ್ ಲಸಿಕೆ ಪಡೆಯಬಹುದು. ವಾಹನದಲ್ಲೇ ನೋಂದಣಿ, ಪರಿಶೀಲನೆಗೆ ಅವಕಾಶವಿರಲಿದೆ. ಲಸಿಕೆ ಪಡೆದ ನಂತರ ನಿಗದಿತ ವಾಹನ ನಿಲುಗಡೆ ಸ್ಥಳದಲ್ಲಿ 30 ನಿಮಿಷಗಳ ಕಾಲ ಕಾಯಬಹುದು.

ಬೃಹತ್ ಲಸಿಕಾ ಕೇಂದ್ರದಲ್ಲಿರುವ ಸೌಕರ್ಯಗಳು

- ಕುಡಿಯುವ ನೀರು ಮತ್ತು ಶೌಚಾಲಯದ ವ್ಯವಸ್ಥೆ
- ಸರತಿ ಸಾಲಿನಲ್ಲಿ ಕಾಯದೆ ತ್ವರಿತವಾಗಿ ಲಸಿಕೆ ಪಡೆಯುವ ವ್ಯವಸ್ಥೆ
- ಸೆಲ್ಫಿ ಮತ್ತು ಫೋಟೋ ಕಾರ್ನರ್ ವ್ಯವಸ್ಥೆ
- ಆರೋಗ್ಯ ಜಾಗೃತಿ ಮೂಡಿಸುವ ವಿಡಿಯೊ ಮತ್ತು ಪೋಸ್ಟರ್‌ಗಳ ಪ್ರದರ್ಶನ
- ಲಸಿಕೆ ಪಡೆದ ಫಲಾನುಭವಿಗಳಿಗೆ ಕೋವಿನ್ ಪೋರ್ಟಲ್‌ನಿಂದ ಡಿಜಿಟಲ್ ಪ್ರಮಾಣಪತ್ರ ನೀಡಲಾಗುವುದು.

ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	22.30 ಕೋಟಿ ▲	3.31 ಕೋಟಿ
ಸಕ್ರಿಯ ಪ್ರಕರಣ	1.88 ಕೋಟಿ ▲	3.87 ಲಕ್ಷ ▲
ಗುಣಮುಖ	19.95 ಕೋಟಿ ▲	3.22 ಕೋಟಿ
ಸಾವು	46.05 ಲಕ್ಷ ▲	4.41 ಲಕ್ಷ

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	5.23 ಲಕ್ಷ ▲	43,378 ▲
ಗುಣಮುಖ	5.78 ಲಕ್ಷ ▲	40,598 ▲
ಸಾವು	8,469 ▲	339 ▼

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

ಅಮೆರಿಕ	ಬ್ರೆಜಿಲ್	ಬ್ರಿಟನ್
1.07 ಲಕ್ಷ ▲	13,645	37,326 ▼

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)

ಅಮೆರಿಕ	ಬ್ರಿಟನ್	ಬ್ರೆಜಿಲ್
89.56 ▲	12.54 ▲	3.96

(*ರಾತ್ರಿ 12ಗಂಟೆಯ ವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು (ಒಟ್ಟು)

ಮಹಾರಾಷ್ಟ್ರ	1.37 ಲಕ್ಷ ▲
ತಮಿಳುನಾಡು	35,073 ▲
ದೆಹಲಿ	25,083

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

ಮಹಾರಾಷ್ಟ್ರ	64.97 ▲
ಕೇರಳ	42.83 ▲
ತಮಿಳುನಾಡು	26.27 ▲

ಪ್ರಜಾವಾಣಿ ಗ್ರಾಫಿಕ್ಸ್

ನಗರದ ಕೋವಿಡ್ ಅಂಕಿ–ಅಂಶ

ಒಟ್ಟು ಪ್ರಕರಣಗಳು	12,40,310 ▲
ಸಕ್ರಿಯ ಪ್ರಕರಣಗಳು	7,119 ▲
ಗುಣಮುಖರಾದವರು	12,17,150 ▲
ಒಟ್ಟು ಸಾವು	16,040 ▲

ದಿನದ ಏರಿಕೆ

ಹೊಸ ಪ್ರಕರಣ	338 ▲
ಗುಣಮುಖ	277 ▼
ಸಾವು	5 ▲

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಕ್ಯಾಮ್ಸ್ ಪ್ರಧಾನ ಕಾರ್ಯದರ್ಶಿ ಡಿ.ಶಶಿಕುಮಾರ್ ಮೇಲೆ ಮಾರಕಾಸ್ತ್ರಗಳಿಂದ ಹಲ್ಲೆ ಪ್ರಕರಣ

ಸತ್ಯಮಂಗಲ ಕಾಡಿನಲ್ಲಿದ್ದ ಪ್ರಮುಖ ಆರೋಪಿ ಸೆರೆ

ಪ್ರಜಾವಾಣಿ ವಾರ್ತೆ



ಆರೋಪಿಗಳಿಂದ ಜಪ್ತಿ ಮಾಡಿರುವ ಮಾರಕಾಸ್ತ್ರಗಳು

ಬೆಂಗಳೂರು: ಖಾಸಗಿ ಶಾಲಾ ಆಡಳಿತ ಮಂಡಳಿಗಳ ಒಕ್ಕೂಟದ (ಕ್ಯಾಮ್ಸ್) ಪ್ರಧಾನ ಕಾರ್ಯದರ್ಶಿ ಡಿ.ಶಶಿಕುಮಾರ್ ಮೇಲೆ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿದ್ದ ಪ್ರಕರಣದ ಪ್ರಮುಖ ಆರೋಪಿ ರವಿ ಯಾನೆ ಆರ್‌ಟಿಐ ರವಿ ಎಂಬಾತನನ್ನು ಜಾಲಹಳ್ಳಿ ಪೊಲೀಸರು ಬಂಧಿಸಿದ್ದಾರೆ.

ಈತ ತಮಿಳುನಾಡಿನ ಸತ್ಯಮಂಗಲ ಕಾಡಿನಲ್ಲಿ ಅಡಗಿ ಕುಳಿತಿದ್ದ ಎಂಬುದು ಗೊತ್ತಾಗಿದೆ. ಆತನ ಸಹಚರರಾದ ಗಣೇಶ, ಮನೋಹರ್, ಸುರೇಶ್, ಶ್ರೀನಿವಾಸ್ ಹಾಗೂ ಅರಣ್ಯದಲ್ಲಿ ಆಶ್ರಯ ನೀಡಿದ್ದ ಚಿನ್ನರಸು ಎಂಬುವವರನ್ನೂ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಇವರು ಕೃತ್ಯಕ್ಕೆ ಬಳಸಿದ್ದ 2 ನಾಡ ಪಿಸ್ತೂಲ್, 3 ಖಾಲಿ ಮ್ಯಾಗ್ಜೀನ್, ಒಂದು ಕಾರು, ಎರಡು ದ್ವಿಚಕ್ರ ವಾಹನ, ಎರಡು ಲಾಂಗ್, ತಲಾ ಒಂದು ಮಚ್ಚು, ಫೋಲ್ಡಿಂಗ್ ಚಾಕು ಹಾಗೂ ಕುಡುಗೋಲನ್ನು ಜಪ್ತಿ ಮಾಡಿದ್ದಾರೆ.

'ಘಟನೆ ನಡೆದ ದಿನ ರಾತ್ರಿಯೇ ರವಿ ಹಾಗೂ ಆತನ ಸಹಚರರು ಬಸ್ ಮೂಲಕ ತಮಿಳುನಾಡಿಗೆ ಪರಾರಿಯಾಗಿದ್ದರು. ಮೊಬೈಲ್ ಸಿಗ್ನಲ್‌ಗಳನ್ನು ಆಧರಿಸಿ ಪೊಲೀಸರು ತಮ್ಮನ್ನು ಪತ್ತೆಹಚ್ಚಿ ಬಿಡಬಹುದು ಎಂಬುದು ಆರೋಪಿಗಳಿಗೆ ತಿಳಿದಿತ್ತು. ಹೀಗಾಗಿ ಮೊಬೈಲ್ ಬಳಸುವುದನ್ನೇ ನಿಲ್ಲಿಸಿದ್ದರು. ಆರೋಪಿಗಳು ಸತ್ಯಮಂಗಲ ಕಾಡಿನಲ್ಲಿ ಇರುವ ಬಗ್ಗೆ ಖಚಿತ ಮಾಹಿತಿ ಲಭ್ಯವಾಗಿತ್ತು. ಇದರ ಆಧಾರದಲ್ಲಿ ದಾಳಿ ನಡೆಸಿ 40 ದಿನಗಳ ನಂತರ ಆರೋಪಿಗಳನ್ನು ಬಂಧಿಸಲಾಯಿತು' ಎಂದು ಪೊಲೀಸರು ತಿಳಿಸಿದ್ದಾರೆ.

ಅಪರಾಧ ಸುದ್ದಿ

'ಆರೋಪಿ ರವಿ, ಕರ್ನಾಟಕ ವಿದ್ಯಾರ್ಥಿ ಪೋಷಕರ ಜಾಗೃತಿ ವೇದಿಕೆಯ ರಾಜ್ಯ ಘಟಕದ ಅಧ್ಯಕ್ಷನೆಂದು ಗುರುತಿಸಿಕೊಂಡಿದ್ದ. ಶಶಿಕುಮಾರ್ ಅವರನ್ನು ಹತ್ಯೆ ಮಾಡಿದರೆ ತನ್ನ ಸಂಘಟನೆ ಮತ್ತಷ್ಟು ಬಲಿಷ್ಠವಾಗುತ್ತದೆ. ಆಗ ಖಾಸಗಿ ಶಾಲೆಗಳ ಆಡಳಿತ ಮಂಡಳಿಯವರನ್ನು ಹೆದರಿಸಿ ಹಫ್ತಾ ವಸೂಲಿ ಮಾಡಬಹುದು ಎಂದು ಅಂದಾಜಿಸಿದ್ದ. ಹೀಗಾಗಿ ಜೈಲಿನಲ್ಲಿ ಇದ್ದುಕೊಂಡೇ ಸಂಚು ರೂಪಿಸಿದ್ದ. ಅಲ್ಲಿ ದಿಲೀಪ್ ಎಂಬಾತನನ್ನು ಪರಿಚಯಿಸಿಕೊಂಡಿದ್ದ ರವಿ, ಆತನಿಗೆ ತನ್ನ ಯೋಜನೆ ಬಗ್ಗೆ ಹೇಳಿದ್ದ. ಜಾಮೀನಿನ ಮೇಲೆ ಜೈಲಿನಿಂದ ಬಿಡುಗಡೆಗೊಂಡಿದ್ದ ದಿಲೀಪ್, ರವಿ ಸಹಚರರನ್ನು ಸೇರಿಸಿಕೊಂಡು ಶಶಿಕುಮಾರ್ ಹತ್ಯೆ ಮಾಡಲು ಮುಂದಾಗಿದ್ದ' ಎಂದು ಮಾಹಿತಿ ನೀಡಿದ್ದಾರೆ.

'ಜುಲೈ 29ರ ರಾತ್ರಿ ಮನೆಯ ಮುಂದೆ ಕಾರು ನಿಲ್ಲಿಸಿ ಕೆಳಗಿಳಿಯುವಾಗ ಶಶಿಕುಮಾರ್ ಮೇಲೆ ದುಷ್ಕರ್ಮಿಗಳು ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿದ್ದರು. ಆಗಸ್ಟ್ 6ರಂದು ಮೂವರು ಹಾಗೂ ಆಗಸ್ಟ್ 7ರಂದು ಇಬ್ಬರು ಆರೋಪಿಗಳನ್ನು ಬಂಧಿಸಲಾಗಿತ್ತು' ಎಂದೂ ಹೇಳಿದ್ದಾರೆ.

ರವಿ ವಿರುದ್ಧ ಹಲವು ಪ್ರಕರಣ

ಆರೋಪಿ ರವಿ 2009ರಿಂದ ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಿದ್ದ. ವಂಚನೆ, ಜೀವ ಬೆದರಿಕೆ, ಹಲ್ಲೆ, ಸುಲಿಗೆ, ಕೊಲೆ ಯತ್ನ ಸಂಬಂಧ ನಗರದ ವಿವಿಧ ಪೊಲೀಸ್ ಠಾಣೆಗಳಲ್ಲಿ ಆತನ ವಿರುದ್ಧ ಪ್ರಕರಣಗಳು ದಾಖಲಾಗಿವೆ.

'2019ರಲ್ಲಿ ವಿಜಯನಗರ ಠಾಣೆಯಲ್ಲಿ ಅಪಹರಣ ಮತ್ತು ಕೊಲೆ ಯತ್ನ ಪ್ರಕರಣಗಳೂ ದಾಖಲಾಗಿದ್ದವು. ಕೋಕಾ ಕಾಯ್ದೆಯ ಅಡಿಯಲ್ಲಿ ಆತನನ್ನು ಜೈಲಿಗೂ ಕಳುಹಿಸಲಾಗಿತ್ತು' ಎಂದೂ ಪೊಲೀಸರು ತಿಳಿಸಿದ್ದಾರೆ.

ಶಾಲೆ ಮುಖ್ಯಸ್ಥರ ಹತ್ಯೆಗೂ ಸಂಚು

'ಆರೋಪಿಗಳು ಶಶಿಕುಮಾರ್ ಹತ್ಯೆಗಾಗಿ ಮೂರು ತಂಡಗಳನ್ನು ರಚಿಸಿಕೊಂಡಿದ್ದರು. ಒಂದೊಮ್ಮೆ ಶಶಿಕುಮಾರ್ ತಪ್ಪಿಸಿಕೊಂಡು ಓಡಿದರೆ ಅವರ ಮೇಲೆ ದಾಳಿ ನಡೆಸಲು ಅನುವಾಗುವಂತೆ ರಸ್ತೆಯ ಎರಡು ಬದಿಗಳಲ್ಲಿ ತಂಡಗಳನ್ನು ನಿಯೋಜಿಸಲಾಗಿತ್ತು ಎಂಬುದನ್ನು ಆರೋಪಿಗಳು ವಿಚಾರಣೆ ವೇಳೆ ಬಹಿರಂಗಪಡಿಸಿದ್ದಾರೆ' ಎಂದೂ ಪೊಲೀಸ್ ಮೂಲಗಳು ಹೇಳಿವೆ.

'ಸತ್ಯಮಂಗಲ ಕಾಡಿನಲ್ಲಿ ಇದ್ದುಕೊಂಡೇ ಖಾಸಗಿ ಶಾಲೆ ಮುಖ್ಯಸ್ಥರೊಬ್ಬರ ಹತ್ಯೆಗೆ ರವಿ ಯೋಜನೆ ರೂಪಿಸಿದ್ದ. ಶಶಿಕುಮಾರ್ ಜೊತೆ ಒಡನಾಟ ಹೊಂದಿದ್ದ ಶಾಲಾ ಮುಖ್ಯಸ್ಥನ ಚಲನವಲನಗಳ ಮೇಲೆ ಆರೋಪಿಯ ಸಹಚರರು ನಿಗಾ ಇಟ್ಟಿದ್ದರು. ಹಲವು ಬಾರಿ ಮುಖ್ಯಸ್ಥರನ್ನು ಹಿಂಬಾಲಿಸಿದ್ದರು ಎಂಬುದೂ ವಿಚಾರಣೆಯಿಂದ ಗೊತ್ತಾಗಿದೆ' ಎಂದು ತಿಳಿಸಿವೆ.

ನಕಲಿ ಐಎಎಸ್ ಅಧಿಕಾರಿ ಬಂಧನ!



ಶಿಶಿರ್

ರಾಮನಗರ: ತಾನು ವಿಶೇಷ ಐಎಎಸ್ ಅಧಿಕಾರಿ ಎಂದು ನಂಬಿಸಿ ರವಿಶಂಕರ್ ಗುರೂಜಿ ಆಶ್ರಮ ಸೇರಿದಂತೆ ಹಲವರಿಗೆ ವಂಚಿಸುತ್ತಿದ್ದ ವ್ಯಕ್ತಿಯನ್ನು ಕಗ್ಗಲೀಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಬೆಂಗಳೂರು ದಕ್ಷಿಣ ತಾಲ್ಲೂಕಿನ ಸಾಲುಹುಣಸೆ ಪ್ರದೇಶದ ನಿವಾಸಿ ಶಿಶಿರ್ ಬಾಳಾಸಾಹೇಬ್ (24) ಬಂಧಿತ ವ್ಯಕ್ತಿ. ಮೂಲತಃ ಮಹಾರಾಷ್ಟ್ರದ ಜಲಗಾವ್ ಜಿಲ್ಲೆಯವನಾದ ಈತ ಡಿಪ್ಲೊಮಾ ಪದವೀಧರನಾಗಿದ್ದು, ಬೆಂಗಳೂರಿನಲ್ಲಿ ನೆಲೆಸಿದ್ದ. ನಿರುದ್ಯೋಗಿಯಾಗಿದ್ದ ಶಿಶಿರ್ ತಾನು ಕೇಂದ್ರ ಗೃಹ ಇಲಾಖೆಯಲ್ಲಿ ಐಎಎಸ್ ಅಧಿಕಾರಿಯಾಗಿದ್ದು, ದಕ್ಷಿಣ ವಲಯದ ವಿಶೇಷ ಕರ್ತವ್ಯ ಅಧಿಕಾರಿ (ಆಫೀಸರ್ ಆನ್ ಸ್ಪೆಷಲ್ ಡ್ಯೂಟಿ) ಎಂದು ನಕಲಿ ಐ.ಡಿ. ಕಾರ್ಡ್ ಮಾಡಿಸಿಕೊಂಡಿದ್ದ.

ಇದನ್ನೇ ಹಣ ವಸೂಲಿಗೆ ಅಸ್ತ್ರವನ್ನಾಗಿ ಮಾಡಿಕೊಂಡಿದ್ದ ಆರೋಪಿ ಬೆಂಗಳೂರು ಹೊರವಲಯದ ಉದಿಪಾಳ್ಯದಲ್ಲಿರುವ ರವಿಶಂಕರ್ ಗುರೂಜಿ ಆಶ್ರಮದವರಿಗೂ ಮಂಕುಬೂದಿ ಎರಚಿದ್ದ. ತಾನು ಐಎಎಸ್ ಅಧಿಕಾರಿಯಾಗಿದ್ದು, ಆಶ್ರಮಕ್ಕೆ ಸೇರಿದ ಸಿವಿಲ್ ವ್ಯಾಜ್ಯಗಳನ್ನು ಪರಿಹರಿಸಿಕೊಡುವುದಾಗಿ ನಂಬಿಸಿ ಹಣ ಸಹ ಪಡೆದಿದ್ದ ಎಂದು ಆರೋಪಿಸಲಾಗಿದೆ.

ಬಂಧಿತನಿಂದ ಒಂದು ಇನೋವಾ ಕ್ರಿಸ್ಟಾ ಕಾರು, ನಕಲಿ ಐ.ಡಿ. ಕಾರ್ಡ್ ಹಾಗೂ ಮೊಬೈಲ್‌ಗಳನ್ನು ವಶಕ್ಕೆ ಪಡೆಲಾಗಿದೆ. ಆರೋಪಿ ವಿರುದ್ಧ ಪ್ರಕರಣ ದಾಖಲಾಗಿದೆ.

ಪಶ್ಚಿಮಘಟ್ಟದಲ್ಲಿ ಕಾಳಿಂಗ ಸರ್ಪದ ಸಂತತಿ ಕ್ಷೀಣ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಪಶ್ಚಿಮಘಟ್ಟದಲ್ಲಿ ಕಾಳಿಂಗ ಸರ್ಪದ ಸಂತತಿ ಕಡಿಮೆಯಾಗುತ್ತಿದೆ ಎಂದು ಕಾಳಿಂಗ ಸರ್ಪಗಳ ಬಗ್ಗೆ ಅಧ್ಯಯನ ನಡೆಸುತ್ತಿರುವ ಗೌರಿಶಂಕರ್ ಹೇಳಿದರು.

'ಪಶ್ಚಿಮಘಟ್ಟಗಳು, ಆಂಧ್ರಪ್ರದೇಶ, ಉತ್ತರಾಖಂಡ, ಫಿಲಿಪ್ಪೀನ್ಸ್ ಹೀಗೆ ಹಲವು ಕಡೆ ಈ ಕಾಳಿಂಗ ಸರ್ಪಗಳು ಕಂಡುಬರುತ್ತವೆ. ಅಧ್ಯಯನದ ಪ್ರಕಾರ, ಸಾಮಾನ್ಯವಾಗಿ ಆಗುಂಬೆ ಹಾಗೂ ಪಶ್ಚಿಮ ಘಟ್ಟದಲ್ಲಿರುವ ಕಾಳಿಂಗ ಸರ್ಪಗಳಿಗೆ 45 ಪಟ್ಟಿಗಳು ಇದ್ದರೆ, ಆಂಧ್ರಪ್ರದೇಶ ಮತ್ತು ಉತ್ತರಾಖಂಡಗಳಲ್ಲಿ ಕಂಡುಬರುವ ಕಾಳಿಂಗ ಸರ್ಪಗಳಿಗೆ 60 ಪಟ್ಟಿಗಳು ಇರುತ್ತದೆ. ಫಿಲಿಪ್ಪೀನ್ಸ್ ಮುಂತಾದ ದೇಶಗಳಲ್ಲಿ ಕಂಡುಬರುವ ಕಾಳಿಂಗ ಸರ್ಪಗಳಿಗೆ 70 ಪಟ್ಟಿ ಇರುತ್ತವೆ. ಭಾರತದಲ್ಲಿ ಸಾಮಾನ್ಯವಾಗಿ ಕಾಳಿಂಗ ಸರ್ಪಗಳು 15 ಅಡಿ ಉದ್ದವಿರುತ್ತವೆ. ಆದರೆ, ವಿದೇಶಗಳಲ್ಲಿ 18 ಅಡಿಗೂ ಹೆಚ್ಚು ಉದ್ದವಿರುವ ಕಾಳಿಂಗ ಸರ್ಪಗಳಿವೆ' ಎಂದು ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಅಭಿವೃದ್ಧಿ ಹೆಸರಲ್ಲಿ ಕಾಡುಗಳ ವಿನಾಶದಿಂದ ಕಾಳಿಂಗ ಸರ್ಪಗಳ ಸಂತತಿ ಕೂಡ ಕಡಿಮೆಯಾಗುತ್ತಿದೆ. 25ರಿಂದ 30 ವರ್ಷಗಳ ಕಾಲ ಬದುಕುವ ಈ ಜೀವಿಗಳು ಮನುಷ್ಯನಿಗೆ ವಿನಾಕಾರಣ ತೊಂದರೆ ಕೊಡುವುದಿಲ್ಲ ಎಂದರು.

'ನಾನು ಕಾಳಿಂಗ ಸರ್ಪಗಳ ಬಗ್ಗೆ 7 ವರ್ಷಗಳಿಂದ ಪಿಎಚ್.ಡಿಗಾಗಿ ಅಧ್ಯಯನ ನಡೆಸುತ್ತಿದ್ದು, ಅಧ್ಯಯನ ಮುಗಿದಿದೆ. ಇಷ್ಟರಲ್ಲಿಯೇ ಸಂಶೋಧನಾ ಪ್ರಬಂಧ ಮಂಡಿಸುತ್ತೇನೆ. ಹಲವು ಕೋನದಲ್ಲಿ ಕಾಳಿಂಗ ಸರ್ಪಗಳ ಬಗ್ಗೆ ಅಧ್ಯಯನ ಮಾಡಿದ್ದೇನೆ. ಇದರ ಡಿಎನ್‌ಎ ಮಾದರಿಗಳನ್ನು ತೆಗೆದುಕೊಂಡಿದ್ದೇನೆ. ಕಾಳಿಂಗ ಸರ್ಪ ಸಾಮಾನ್ಯವಾಗಿ ಕಚ್ಚುವುದಿಲ್ಲ. ಅದು ನುಂಗುತ್ತದೆ. ಕಾಳಿಂಗ ಸರ್ಪಗಳು ಅನೇಕ ಮೊಟ್ಟೆಯನ್ನು ಇಟ್ಟರೂ ಶೇ 2ರಷ್ಟು ಮಾತ್ರ ಮರಿಯಾಗಿ ಬದುಕುತ್ತವೆ' ಎಂದು ತಿಳಿಸಿದರು.



ಬೆಸಿಲಿಕಾ ಮಾತೆ ಉತ್ಸವ

ಸೇಂಟ್ ಮೇರಿ ಬೆಸಿಲಿಕಾ ಮಾತೆ ಉತ್ಸವ ಅಂಗವಾಗಿ ಶಿವಾಜಿನಗರದ ಮುಖ್ಯರಸ್ತೆಯಲ್ಲಿ ಸೇಂಟ್ ಮೇರಿ ಮೆರವಣಿಗೆ ನಡೆಯಿತು –ಪ್ರಜಾವಾಣಿ ಚಿತ್ರ

ಸರ್ಕಾರಿ ಕೆಲಸ ಕೊಡಿಸುವುದಾಗಿ ವಂಚನೆ

ಬೆಂಗಳೂರು: ಹೈಕೋರ್ಟ್‌ನಲ್ಲಿ ಸರ್ಕಾರಿ ಕೆಲಸ ಕೊಡಿಸುವುದಾಗಿ ನಂಬಿಸಿ ವಂಚಿಸಿದ್ದ ಗಿರಿಧರ್ ಯಲ್ಲಪ್ಪ ನದೋಣಿ ವಿರುದ್ಧ ರಘುವನಹಳ್ಳಿ ನಿವಾಸಿ ಗಂಗಾಧರ ಸ್ವಾಮಿ ಎಂಬುವರು ದೂರು ನೀಡಿದ್ದು ತಲಘಟ್ಟಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ವಿಲ್ಸನ್ ಗಾರ್ಡನ್‌ನ ಖಾಸಗಿ ಶಿಕ್ಷಣ ಸಂಸ್ಥೆಯೊಂದರಲ್ಲಿ ಗ್ರಂಥಪಾಲಕರಾಗಿ ಕೆಲಸ ಮಾಡುತ್ತಿದ್ದ ಆರೋಪಿ ಗಿರಿಧರ್, 'ಹೈಕೋರ್ಟ್‌ನಲ್ಲಿ ವಾಹನ ಚಾಲಕರ ಹುದ್ದೆ ಖಾಲಿ ಇದೆ. ನನಗೆ ಗೊತ್ತಿರುವವರು ಅಲ್ಲಿದ್ದಾರೆ. ಅವರಿಗೆ ಹೇಳಿ ಕೆಲಸ ಕೊಡಿಸುವೆ' ಎಂದು 33 ವರ್ಷದ ಗಂಗಾಧರಸ್ವಾಮಿ ಅವರನ್ನು ನಂಬಿಸಿದ್ದ. 2019ರ ಏಪ್ರಿಲ್ 20ರಿಂದ ಆಗಸ್ಟ್ 6 ಅವಧಿಯಲ್ಲಿ ಒಟ್ಟು ₹6.1 ಲಕ್ಷ ಹಣ ಕೂಡ ಪಡೆದುಕೊಂಡಿದ್ದ. ಒಂದು ತಿಂಗಳೊಳಗೆ ನೇಮಕಾತಿ ಪತ್ರ ಕೊಡಿಸುವುದಾಗಿಯೂ ಹೇಳಿದ್ದ'.

'ಒಂದು ವರ್ಷವಾದರೂ ನೇಮಕಾತಿ ಪತ್ರ ಕೈಸೇರಿರಲಿಲ್ಲ. ಈ ಸಂಬಂಧ ಗಿರಿಧರ್ ಅವರನ್ನು ವಿಚಾರಿಸಿದಾಗ ಒಂದಲ್ಲ ಒಂದು ನೆಪ ಹೇಳಿ ದಿನ ದೂಡುತ್ತಲೇ ಇದ್ದ. ಇದರಿಂದ ಬೇಸತ್ತ ಗಂಗಾಧರ ಅವರು ಹಣವನ್ನು ಮರಳಿಸುವಂತೆ ಪಟ್ಟು ಹಿಡಿದಿದ್ದರು. ಆರೋಪಿಯು ಈ ವರ್ಷದ ಮಾರ್ಚ್‌ನಲ್ಲಿ ₹64 ಸಾವಿರ ಮರಳಿಸಿದ್ದ. ಉಳಿದ ₹5.4 ಲಕ್ಷ ಕೇಳಿದಾಗ ಆರೋಪಿ ಚೆಕ್ ನೀಡಿದ್ದ. ಅದು ಬೌನ್ಸ್ ಆಗಿತ್ತು. ಇದರಿಂದ ಬೇಸತ್ತ ಗಂಗಾಧರ ವಂಚನೆ ಪ್ರಕರಣ ದಾಖಲಿಸಿದ್ದರು'.

'ಆರೋಪಿ ವಿರುದ್ಧ ವಂಚನೆ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಯುವತಿ ಮೇಲೆ ಹಲ್ಲೆ: ವ್ಯಕ್ತಿ ಬಂಧನ

ಬೆಂಗಳೂರು: ತರಕಾರಿ ಖರೀದಿಸಲು ಸರತಿಯಲ್ಲಿ ಬರುವಂತೆ ಹೇಳಿದ್ದಕ್ಕಾಗಿ ಲಾವಣ್ಯ ಎಂಬ ಯುವತಿಯ ಮೇಲೆ ಹಲ್ಲೆ ನಡೆಸಿದ್ದ ಕಿಶೋರ್ ಎಂಬಾತನನ್ನು ಮೈಕೋ ಲೇಔಟ್ ಪೊಲೀಸರು ಬಂಧಿಸಿದ್ದಾರೆ.

'ಮೈಕೋ ಲೇಔಟ್‌ನ ಏಳನೇ ಮುಖ್ಯ ರಸ್ತೆಯಲ್ಲಿರುವ ಸೂಪರ್ ಮಾರ್ಕೆಟ್‌ನಲ್ಲಿ ತರಕಾರಿ ಖರೀದಿಸಲು ನಿಂತಿದ್ದರು. ಮುಂದಿದ್ದ ಯುವತಿಯನ್ನು ತಳ್ಳಿದ್ದ ಕಿಶೋರ್ ತರಕಾರಿ ಖರೀದಿಸಲು ಮುಂದಾಗಿದ್ದ. ಇದನ್ನು ಪ್ರಶ್ನಿಸಿದ್ದಕ್ಕೆ ಹಲ್ಲೆ ನಡೆಸಿದ್ದ' ಎಂದು ಪೊಲೀಸರು ತಿಳಿಸಿದ್ದಾರೆ.

₹2.75 ಕೋಟಿ ಮೌಲ್ಯದ ಆಂಬರ್‌ಗ್ರೀಸ್ ಜಪ್ತಿ

ಬೆಂಗಳೂರು: ಸುಗಂಧ ದ್ರವ್ಯ ತಯಾರಿಕೆಗೆ ಬಳಸುವ ₹2.75 ಕೋಟಿ ಮೌಲ್ಯದ ಆಂಬರ್ ಗ್ರೀಸ್ (ತಿಮಿಂಗಲ ವಾಂತಿ) ಜಪ್ತಿ ಮಾಡಿರುವ ಚಿಕ್ಕಜಾಲ ಪೊಲೀಸರು, ನಾಲ್ವರು ಆರೋಪಿಗಳನ್ನು ಬಂಧಿಸಿದ್ದಾರೆ. 'ಆರೋಪಿಗಳು ಆಡುಗೋಡಿ ಹಾಗೂ ಎಚ್‌ಎಸ್‌ಆರ್ ಬಡಾವಣೆ ನಿವಾಸಿಗಳು. ತಮಿಳುನಾಡಿನಿಂದ ವಾಹನದಲ್ಲಿ ಆಂಬರ್‌ಗ್ರೀಸ್ ತರುತ್ತಿದ್ದ ಅವರು ಅದನ್ನು ನಗರದ ವಿವಿಧ ಭಾಗಗಳಲ್ಲಿ ದುಬಾರಿ ಬೆಲೆಗೆ ಮಾರಾಟ ಮಾಡುತ್ತಿದ್ದರು. ಏರ್‌ಪೋರ್ಟ್ ರಸ್ತೆಯ ಗಂಗಾನಗರ ವೃತ್ತದಲ್ಲಿ ಇದನ್ನು ಮಾರುತ್ತಿದ್ದ ಬಗ್ಗೆ ಮಾಹಿತಿ ಲಭ್ಯವಾಗಿತ್ತು. ಅದರ ಆಧಾರದಲ್ಲಿ ದಾಳಿ ನಡೆಸಿ ಅವರನ್ನು ಬಂಧಿಸಲಾಗಿದೆ' ಎಂದು ಪೊಲೀಸರು ತಿಳಿಸಿದರು.

'ಆರೋಪಿಗಳಿಂದ ಒಟ್ಟು 11 ಕೆ.ಜಿ ಆಂಬರ್‌ಗ್ರೀಸ್ ಜಪ್ತಿ ಮಾಡಲಾಗಿದೆ. 1 ಕೆ.ಜಿ ಆಂಬರ್‌ಗ್ರೀಸ್‌ಗೆ ₹ 25 ಲಕ್ಷ ಹಣ ಪಡೆಯುತ್ತಿದ್ದರು ಎಂಬುದು ವಿಚಾರಣೆಯಿಂದ ಗೊತ್ತಾಗಿದೆ. ಆರೋಪಿಗಳು ಬಹಳ ದಿನಗಳಿಂದ ಈ ಕೆಲಸದಲ್ಲಿ ತೊಡಗಿದ್ದಾರೆ. ಹಿಂದೆ ಯಾರಿಗೆಲ್ಲಾ ಮಾರಾಟ ಮಾಡಿದ್ದಾರೆ ಎಂಬುದು ಇನ್ನೂ ಗೊತ್ತಾಗಿಲ್ಲ. ವಿಚಾರಣೆ ಮುಂದುವರಿಸಿ ಮತ್ತಷ್ಟು ಮಾಹಿತಿಗಳನ್ನು ಕಲೆಹಾಕಲಾಗುತ್ತದೆ' ಎಂದರು.

'ಬವಾರಿಯಾ' ಗ್ಯಾಂಗ್‌ನ ಮೂವರು ಸೆರೆ

ಬೆಂಗಳೂರು: ವಿಮಾನ ಮತ್ತು ರೈಲಿನ ಮೂಲಕ ನಗರಕ್ಕೆ ಬಂದು ಯಾರೂ ಇಲ್ಲದ ಸಮಯದಲ್ಲಿ ಮನೆಗಳಿಗೆ ನುಗ್ಗಿ ಕಳ್ಳತನ ಮಾಡುತ್ತಿದ್ದ ಬವಾರಿಯಾ ಗ್ಯಾಂಗ್‌ನ ಮೂವರನ್ನು ಅಮೃತಹಳ್ಳಿ ಪೊಲೀಸರು ಬಂಧಿಸಿದ್ದಾರೆ. ಇವರಿಂದ ₹6.5 ಲಕ್ಷ ಮೌಲ್ಯದ 200 ಗ್ರಾಂ ಚಿನ್ನಾಭರಣ ಜಪ್ತಿ ಮಾಡಲಾಗಿದೆ.

ರಾಜಸ್ಥಾನದ ಮುಕೇಶ್, ಲಕ್ಷ್ಮಣ್ ಹಾಗೂ ಧರ್ಮ ಬಂಧಿತರು.

'ಆರೋಪಿಗಳು ತಮ್ಮ ಗುಂಪಿನ ಇತರ ಸದಸ್ಯರ ಜೊತೆಗೆ ಆಗಸ್ಟ್ 10ರಂದು ಅಮೃತನಗರ ನಿವಾಸಿ ಪ್ರಿಯದರ್ಶಿನಿ ಎಂಬುವರ ಮನೆಗೆ ನುಗ್ಗಿ ಕಳ್ಳತನ ಮಾಡಿದ್ದರು. ಶಿಕ್ಷಕಿಯಾಗಿರುವ ಅವರು ಬೆಳಿಗ್ಗೆ 11.20ರ ಸುಮಾರಿಗೆ ಶಾಲೆಗೆ ಹೋಗಿದ್ದರು. ಈ ವೇಳೆ ಮನೆಯ ಬಾಗಿಲು ಒಡೆದು ಒಳಗೆ ನುಗ್ಗಿದ್ದ ಆರೋಪಿಗಳು 212 ಗ್ರಾಂ ಚಿನ್ನಾಭರಣ ಹಾಗೂ ₹1.7 ಲಕ್ಷ ನಗದು ಕದ್ದು ರಾಜಸ್ಥಾನಕ್ಕೆ ಮರಳಿದ್ದರು. ಈ ಸಂಬಂಧ ಪ್ರಿಯದರ್ಶಿನಿ ಅವರು ಠಾಣೆಗೆ ದೂರು ನೀಡಿದ್ದರು' ಎಂದಿದ್ದಾರೆ.

'ಇದು ಬವಾರಿಯಾ ಗ್ಯಾಂಗ್‌ನ ಕೃತ್ಯ ಎಂಬುದು ಸಿಸಿಟಿವಿ ದೃಶ್ಯಾವಳಿಗಳ ಪರಿಶೀಲನೆಯಿಂದ ತಿಳಿದುಬಂದಿತ್ತು. ಹೀಗಾಗಿ ನಮ್ಮ ತಂಡವು ರಾಜಸ್ಥಾನಕ್ಕೆ ತೆರಳಿತ್ತು. ಅಲ್ಲಿ ಒಂದು ವಾರ ಇದ್ದು ಆರೋಪಿಗಳನ್ನು ಬಂಧಿಸಲಾಯಿತು. ಆರೋಪಿಗಳು, ಕದ್ದ ಚಿನ್ನಾಭರಣಗಳನ್ನು ಮಾರಿ ಅದರಿಂದ ಬಂದ ಹಣದಿಂದ ಜೀವನ ನಡೆಸುತ್ತಿದ್ದರು ಎಂಬುದು ವಿಚಾರಣೆಯಿಂದ ತಿಳಿದುಬಂದಿದೆ' ಎಂದರು.

ಎಲೆಕ್ಟ್ರಾನಿಕ್ ಸಿಟಿಯಲ್ಲಿ ಪೊಲೀಸರಿಗೇ ಗದರಿದ ಮಹಿಳೆ

'ಕಾರು ಯಾಕ್ರೀ ಟೋಯಿಂಗ್ ಮಾಡ್ತಿದ್ದೀರಾ'

ಪ್ರಜಾವಾಣಿ ವಾರ್ತೆ



ಸಂಚಾರ ವಿಭಾಗದ ಪೊಲೀಸರೊಂದಿಗೆ ಜಟಾಪಟಿ ನಡೆಸಿದ ಮಹಿಳೆ

ಬೆಂಗಳೂರು: 'ಕಾರು ನನ್ನದು. ಯಾಕ್ರೀ ಟೋಯಿಂಗ್ ಮಾಡ್ತಿದ್ದೀರಾ'...

ಮಹಿಳೆಯೊಬ್ಬರು ಸಂಚಾರ ಪೊಲೀಸರಿಗೆ ಬುಧವಾರ ಗದರಿದ್ದು ಹೀಗೆ..

ಎಲೆಕ್ಟ್ರಾನಿಕ್ ಸಿಟಿಯಲ್ಲಿರುವ ಏರ್‌ಟೆಲ್ ಮಳಿಗೆಗೆ ಬಂದಿದ್ದ ಮಹಿಳೆ ಕಾರನ್ನು 'ನೋ ಪಾರ್ಕಿಂಗ್' ಸ್ಥಳದಲ್ಲಿ ನಿಲ್ಲಿಸಿದ್ದರು. ಹೀಗಾಗಿ ಸಂಚಾರ ಪೊಲೀಸರು ಟೋಯಿಂಗ್ ಮಾಡಲು ಮುಂದಾದರು. ಇದರಿಂದ ಕೆರಳಿದ ಮಹಿಳೆ ಟೋಯಿಂಗ್ ವಾಹನ ಏರಿ ಗಲಾಟೆ ಮಾಡಿದರು.

'ಟೋಯಿಂಗ್ ಮಾಡುವ ಮುನ್ನ ಪೊಲೀಸರು ವಾಹನ ಸಂಖ್ಯೆಯನ್ನು ಕೂಗಬೇಕಿತ್ತು. ಕಾರಿನ ಮಾಲೀಕರು ಯಾರು ಎಂಬುದನ್ನೂ ಕೇಳಬೇಕಿತ್ತು. ಈ ಕೆಲಸವನ್ನು ಮಾಡಿಲ್ಲ. ಕೆಲಸದ ಮೇಲೆ ಏರ್‌ಟೆಲ್ ಕಚೇರಿಗೆ ಬಂದಿದ್ದೇನೆ. ಒಂದು ಗಂಟೆಯವರೆಗೂ ಇಲ್ಲಿ ಕಾಯಬೇಕು. ಅಲ್ಲಿಯವರೆಗೂ ಕಾರು ನಿಲ್ಲಿಸುವುದು ಎಲ್ಲಿ' ಎಂದು ಮಹಿಳೆ ಪ್ರಶ್ನಿಸಿದರು.

'ನೋ ಪಾರ್ಕಿಂಗ್ ಸ್ಥಳದಲ್ಲಿ ಕಾರು ನಿಲ್ಲಿಸಿದ್ದಕ್ಕೆ ವಿಧಿಸಿರುವ ದಂಡವನ್ನು ಪಾವತಿಸಿ. ನಾವು ವಾಹನ ಬಿಟ್ಟು ಹೋಗುತ್ತೇವೆ' ಎಂದು ಪೊಲೀಸರು ತಿಳಿಸಿದರು.

'ಎಷ್ಟು ಕೊಡಬೇಕು ಎಂದು ಮಹಿಳೆ ಕೇಳಿದಾಗ, ₹500 ಅಥವಾ ₹1,000 ಆಗಬಹುದು ಎಂದು ಸಿಬ್ಬಂದಿ ಹೇಳಿದರು. ನಾನ್ಯಾಕೆ ಕೊಡಲಿ, ಏರ್‌ಟೆಲ್ ಕಂಪನಿಯವರನ್ನು ಕೇಳಿ' ಎಂದು ತಗಾದೆ ತೆಗೆದರು.

ಪೊಲೀಸರು ಮತ್ತು ಮಹಿಳೆಯ ಜಟಾಪಟಿಯನ್ನು ನೋಡಲು ಸಾಕಷ್ಟು ಸಂಖ್ಯೆಯಲ್ಲಿ ಜನ ಸೇರಿದ್ದರು.

ಘನತ್ಯಾಜ್ಯ ವಿಲೇವಾರಿ ಘಟಕದಲ್ಲಿ ಅವಘಡ: ಸಾವು

ವಿಜಯಪುರ: ನಗರದ ಹೊರ ವಲಯದ ಇಂಡಿ ರಸ್ತೆಯಲ್ಲಿರುವ ವಿಜಯಪುರ ಮಹಾನಗರ ಪಾಲಿಕೆ ಘನತ್ಯಾಜ್ಯ ವಿಲೇವಾರಿ ಘಟಕದಲ್ಲಿ ಬುಧವಾರ ಮಧ್ಯಾಹ್ನ ತ್ಯಾಜ್ಯ ವಿಲೇವಾರಿ ಯಂತ್ರವೊಂದನ್ನು ದುರಸ್ತಿ ಮಾಡುವಾಗ ಅದಕ್ಕೆ ಸಿಲುಕಿ ಇಬ್ಬರು ಪೌರ ಕಾರ್ಮಿಕರು ಸಾವಿಗೀಡಾಗಿದ್ದಾರೆ.

ಮಹಾನಗರ ಪಾಲಿಕೆ ಕಾಯಂ ಪೌರಕಾರ್ಮಿಕ ರಫೀಕ್ ಬಾಬುಸಾಬ್(41) ಹಾಗೂ ಹೊರ ಗುತ್ತಿಗೆ ಆಧಾರದ ಮೇಲೆ ಚಾಲಕನಾಗಿ ಕಾರ್ಯನಿರ್ವಹಿಸುತ್ತಿದ್ದ ಅಯೂಬ್ ಶೇಖ್ (55) ಸಾವಿಗೀಡಾದವರು ಎಂದು ಗುರುತಿಸಲಾಗಿದೆ.

ತ್ಯಾಜ್ಯ ವಿಲೇವಾರಿ ಘಟಕದ 'ಸ್ಕಿಡ್ ರೋಲರ್ ಮಷಿನ್' ರಿಪೇರಿ ಮಾಡುವಾಗ ಈ ದುರ್ಘಟನೆ ನಡೆದಿದ್ದು, ಇಬ್ಬರೂ ಸ್ಥಳದಲ್ಲೇ ಸಾವಿಗೀಡಾಗಿದ್ದಾರೆ.

ಈ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಮಹಾನಗರ ಪಾಲಿಕೆ ಆಯುಕ್ತ ವಿಜಯ್ ಮೆಕ್ಕಳಕಿ, 'ಕಾಯಂ ಪೌರಕಾರ್ಮಿಕ ರಫೀಕ್ ಬಾಬುಸಾಬ್ ಅವರಿಗೆ ಸರ್ಕಾರದಿಂದ ಲಭಿಸುವ ಎಲ್ಲ ಪರಿಹಾರದ ಜೊತೆಗೆ ಕುಟುಂಬದ ಸದಸ್ಯರೊಬ್ಬರಿಗೆ ಕೆಲಸ ನೀಡಲಾಗುವುದು. ಹೊರ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದ್ದ ಚಾಲಕನ ಕುಟುಂಬಕ್ಕೆ ₹ 2 ಲಕ್ಷ ಪರಿಹಾರ ನೀಡಲಾಗುವುದು' ಎಂದು ತಿಳಿಸಿದರು.


ಬುಲೆಟ್ ಪ್ರಕಾಶ್ ಮಗನ ಮೇಲೆ ತೃತೀಯಲಿಂಗಿಗಳ ದಾಳಿ

ಬೆಂಗಳೂರು: ಹಾಸ್ಯನಟ ಬುಲೆಟ್ ಪ್ರಕಾಶ್ ಮಗ ರಕ್ಷಕ್ ಮೇಲೆ ತೃತೀಯಲಿಂಗಿಗಳು ಮಂಗಳವಾರ ರಾತ್ರಿ ದಾಳಿ ನಡೆಸಿದ್ದಾರೆ. ಇದರಿಂದ ರಕ್ಷಕ್ ಅವರ ಕೈ ಹಾಗೂ ಕಾಲಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಅವರ ಬೈಕ್‌ಗೂ ಹಾನಿಯಾಗಿದೆ.

ಹೆಬ್ಬಾಳ ಮೇಲ್ಸೇತುವೆ ಬಳಿ ಘಟನೆ ನಡೆದಿದೆ.

ಜಾತಿ ಗಣತಿ: ಸಿದ್ಧಹಸ್ತರಾದರೆ ಏನುಪಯೋಗ–ಎಚ್‌ಡಿಕೆ

ಪ್ರಜಾವಾಣಿ ವಾರ್ತೆ


ಕುಮಾರಸ್ವಾಮಿ

ಬೆಂಗಳೂರು: 'ಎಲ್ಲದರಲ್ಲೂ ಸಿದ್ಧಹಸ್ತರಾದರೆ ಉಪಯೋಗವೇನು? ಇನ್ನೊಬ್ಬರ ಎದೆಗಾರಿಕೆ ಪ್ರಶ್ನಿಸುವ ಮಹಾನುಭಾವರು, ತಮ್ಮ ಅವಧಿಯಲ್ಲಿ ಸಾಮಾಜಿಕ, ಆರ್ಥಿಕ ಸಮೀಕ್ಷಾ ವರದಿಯನ್ನು (ಜಾತಿಗಣತಿ) ಏಕೆ ಕುರ್ಚಿ ಕೆಳಗೆ ಹಾಕಿಕೊಂಡು ಕುಳಿತಿದ್ದರು' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಪ್ರಶ್ನಿಸಿದ್ದಾರೆ.

ಕಾಂಗ್ರೆಸ್ ನಾಯಕ ಸಿದ್ದರಾಮಯ್ಯ ಹೆಸರು ಉಲ್ಲೇಖಿಸದೇ ಸರಣಿ ಟ್ವೀಟ್ ಮಾಡಿರುವ ಅವರು, 'ಸತ್ಯ ಹೇಳುವುದಕ್ಕೂ ಗುಂಡಿಗೆ ಬೇಕು. ಚುನಾವಣೆ ಬಂದಾಗ ಯಾವುದೋ ಒಂದು ವಿಷಯದ ಆಯ್ಕೆ ಮಾಡಿಕೊಂಡು ಪ್ರಚಾರ ಗಿಟ್ಟಿಸುವುದು ಸರಿಯಲ್ಲ. ಅಧಿಕಾರ ಇದ್ದಾಗಲೇ ಸಲ್ಲಿಕೆಯಾಗಿದ್ದ ಈ ವರದಿಯನ್ನು ಬಿಡುಗಡೆ ಮಾಡಲು ನಿರ್ಲಕ್ಷ್ಯ ತೋರಿದ್ದು ಯಾಕೆ? ಕುದುರೆ ಇದ್ದಾಗಲೇ ಏರಲಿಲ್ಲ, ಇನ್ನೊಬ್ಬರು ಕುದುರೆ ಮೇಲಿದ್ದಾಗ ಅವರನ್ನು ಕೆಳಕ್ಕೆ ಕೆಡವಲು ಏಕೀ ಕೆಟ್ಟ ಉತ್ಸಾಹ?' ಎಂದು ಕುಟುಕಿದ್ದಾರೆ.

'ರಾಜಕಾರಣದಲ್ಲಿ ಕ್ಷಣಕ್ಕೊಂದು ಬಣ್ಣ ಬದಲಿಸಿಕೊಂಡು ಓಡಾಡುವವರ ಬಗ್ಗೆ ನನಗೆ ಗೊತ್ತಿದೆ. ಇವರು ರಾಜಕೀಯ ಊಸರವಳ್ಳಿಗಳು, ಜನರ ಪಾಲಿನ ಮಗ್ಗುಲ ಮುಳ್ಳುಗಳು! ಮುಳ್ಳನ್ನು ಹೇಗೆ ತೆಗೆಯಬೇಕು ಎಂಬುದು ಜನರಿಗೆ ಗೊತ್ತಿದೆ, ಆ ಕಾಲವೂ ಹತ್ತಿರದಲ್ಲೇ ಇದೆ' ಎಂದು ಹೇಳಿದ್ದಾರೆ.

'ಇವರು ಅಧಿಕಾರದಲ್ಲಿದ್ದಾಗಲೇ ಕಾಂತರಾಜು ಆಯೋಗದ ವರದಿಯು ಬಂದಿತ್ತು. ಆಗಲೇ ಅಂಗೀಕರಿಸಿ ಬಿಡುಗಡೆ ಮಾಡಬಹುದಿತ್ತಲ್ಲ? ಅವಕಾಶ ಇದ್ದಾಗ ಮಾಡದೇ ಈಗ ಆಷಾಢಭೂತಿತನ ಏಕೆ? ಜನರಿಗೆ ಅರ್ಥವಾಗದೆಂಬ ಅತಿಬುದ್ಧಿವಂತಿಕೆಯೇ? ಅತಿ ಬುದ್ಧಿವಂತರೆಲ್ಲ ಆಮೇಲೆ ಏನಾದರು ಎಂಬುದು ಕರ್ನಾಟಕದ ಜನರಿಗೆ ಚೆನ್ನಾಗಿ ಗೊತ್ತಿದೆ' ಎಂದು ಅವರು ಹೇಳಿದ್ದಾರೆ.

'ಸಹಿ ಇಲ್ಲದ ವರದಿ ಸಲ್ಲಿಸಲಾಗಿದೆ' ಎಂದು ಸಚಿವರು, ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರೇ ಹೇಳಿದ್ದಾರೆ. ಸಹಿಯೇ ಇಲ್ಲದ ವರದಿ ಅಧಿಕೃತ ಹೇಗಾಗುತ್ತದೆ? ಐದು ವರ್ಷ ಆಡಳಿತ ನಡೆಸಿದವರಿಗೆ, ಸಂವಿಧಾನದ ಬಗ್ಗೆ ಹಾದಿಬೀದಿಯಲ್ಲಿ ನಿಂತು ಪಾಠ ಮಾಡುವವರಿಗೆ ಈ ಮಟ್ಟಿಗೆ ಜ್ಞಾನ ಇಲ್ಲವೇ? ಸಹಿ ಇಲ್ಲದ ಕಾಗದ ಪತ್ರಕ್ಕೆ ಬೆಲೆ ಇಲ್ಲ. ಅಪ್ಪ ಅಮ್ಮನಿಲ್ಲದ ಕೂಸು ಅನಾಥ. ಹಾಗಾದರೆ, ಸಹಿ ಇಲ್ಲದ ವರದಿ ಸ್ವೀಕಾರ ಮಾಡಿ, ಆಗ ಸುಮ್ಮನಿದ್ದು, ಈಗ ಹಾಹಾಕಾರ ಮಾಡಿದರೇನು ಪ್ರಯೋಜನ? ಊಸರವಳ್ಳಿ ಉಸಾಬರಿ ಎಂದರೆ ಇದೇ ಇರಬೇಕು' ಎಂದು ಅವರು ಟೀಕಿಸಿದ್ದಾರೆ.

ಬಾಲಕಿ ಮೇಲೆ ಮಲತಂದೆಯಿಂದ ಅತ್ಯಾಚಾರ

ಶಿವಮೊಗ್ಗ: ತೀರ್ಥಹಳ್ಳಿ ತಾಲ್ಲೂಕಿನ ಗ್ರಾಮವೊಂದರಲ್ಲಿ ಮಲತಂದೆ ಹಾಗೂ ನೆರೆ ಮನೆಯ ಪುರುಷ 12 ವರ್ಷದ ಬಾಲಕಿ ಮೇಲೆ ಅತ್ಯಾಚಾರ ಎಸಗಿರುವ ಘಟನೆ ನಡೆದಿದೆ.

ಮೊದಲ ಪತ್ನಿ ತ್ಯಜಿಸಿದ್ದ ಆರೋಪಿ ಬಯಲು ಸೀಮೆಗೆ ಕೂಲಿ ಕೆಲಸಕ್ಕೆ ಹೋದಾಗ ವಿಧವೆಯೊಬ್ಬರ ಪರಿಚಯವಾಗಿದೆ. ಒಬ್ಬ ಮಗಳ ತಾಯಿಯಾಗಿದ್ದ ಅವರನ್ನು ಮದುವೆಯಾಗಿ ಸ್ವಗ್ರಾಮದಲ್ಲೇ ನೆಲೆಸಿದ್ದ. ಪತ್ನಿ ಕೆಲಸಕ್ಕೆ ಹೋದಾಗ ಬಾಲಕಿ ಮೇಲೆ ಅತ್ಯಾಚಾರ ಎಸಗಿದ್ದಾನೆ. ಪೋಷಕರಿಬ್ಬರೂ ಕೆಲಸಕ್ಕೆ ಹೋದಾಗ ನೆರೆ ಮನೆಯ ವ್ಯಕ್ತಿ ಸಹ ಅತ್ಯಾಚಾರ ಮಾಡಿದ್ದಾನೆ.

ಶಾಲೆ ಆರಂಭವಾದ ನಂತರ ಮಂಕಾಗಿದ್ದ ಬಾಲಕಿಯನ್ನು ಶಿಕ್ಷಕರು ಪ್ರಶ್ನಿಸಿದಾಗ ಪ್ರಕರಣ ಬೆಳಕಿಗೆ ಬಂದಿದೆ. ಪೋಕ್ಸೊ ಕಾಯ್ದೆ ಅಡಿ ಪ್ರಕರಣ ದಾಖಲಾಗಿದೆ.

ಪರಿಷ್ಕರಿಸಿ ಸಿ.ಡಿ ರೂಪದಲ್ಲಿ ಸರ್ಕಾರಕ್ಕೆ ಸಲ್ಲಿಕೆ; ವೈ.ಕೆ. ಮುದ್ದುಕೃಷ್ಣ

ನಾಡಗೀತೆ: ಸಮಯ, ಧಾಟಿ ನಿಗದಿಗೆ ಆಗ್ರಹ

ಪ್ರಜಾವಾಣಿ ವಾರ್ತೆ


ವೈ.ಕೆ. ಮುದ್ದುಕೃಷ್ಣ

ಮುಖ್ಯಾಂಶಗಳು

- ಧಾಟಿಗೆ ಸಂಬಂಧಿಸಿದಂತೆ 17 ವರ್ಷಗಳಿಂದ ಸರ್ಕಾರಕ್ಕೆ ಹಲವು ಬಾರಿ ಮನವಿ ಸಲ್ಲಿಕೆ
- 2 ನಿಮಿಷ 20 ಸೆಕೆಂಡ್‌ಗಳಲ್ಲಿ ಹಾಡುವಂತೆ ಪರಿಷ್ಕರಣೆ; ಕ್ರಮ ಕೈಗೊಳ್ಳದ ಸರ್ಕಾರ
- ಕ್ರಮ ಕೈಗೊಳ್ಳಲು ಸರ್ಕಾರಕ್ಕೆ ಕರ್ನಾಟಕ ಸುಗಮ ಸಂಗೀತ ಪರಿಷತ್ತಿನ ಒತ್ತಾಯ

ಬೆಂಗಳೂರು: 'ನಾಡಗೀತೆ 'ಜಯ ಭಾರತ ಜನನಿಯ ತನುಜಾತೆ...' ಹಾಡುವ ಅವಧಿಯನ್ನು 2 ನಿಮಿಷ 20 ಸೆಕೆಂಡಿಗೆ ಹಾಡಲು ಅನುಕೂಲವಾಗುವಂತೆ ಪರಿಷ್ಕರಿಸಿ, ಸಿ.ಡಿ ರೂಪದಲ್ಲಿ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಸರ್ಕಾರವು ಈಗಲಾದರೂ ಧಾಟಿಯನ್ನು ನಿಗದಿಪಡಿಸಿ ಆದೇಶ ಹೊರಡಿಸಬೇಕು' ಎಂದು ಕರ್ನಾಟಕ ಸುಗಮ ಸಂಗೀತ ಪರಿಷತ್ತಿನ ಅಧ್ಯಕ್ಷ ವೈ.ಕೆ. ಮುದ್ದುಕೃಷ್ಣ ಆಗ್ರಹಿಸಿದ್ದಾರೆ.

'ನಾಡಗೀತೆಯ ಧಾಟಿಗೆ ಸಂಬಂಧಿಸಿದಂತೆ 17 ವರ್ಷಗಳಿಂದ ಹಲವಾರು ಬಾರಿ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆ. ಚನ್ನವೀರ ಕಣವಿ ಅಧ್ಯಕ್ಷತೆಯ ಸಮಿತಿ 2014ರಲ್ಲಿಯೇ ಸರ್ಕಾರಕ್ಕೆ ಅಂತಿಮ ವರದಿ ಸಲ್ಲಿಸಿತ್ತು. ನಾನು ಕೂಡ ಆ ಸಮಿತಿಯ ಸದಸ್ಯನಾಗಿದ್ದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧಿಕಾರಿಗಳ ಕೋರಿಕೆ ಮೇರೆಗೆ ನಾಡಗೀತೆಯ ಪೂರ್ಣ ಪಠ್ಯಕ್ಕೆ ಲಭ್ಯವಿರುವ ಸಂಯೋಜನೆಯನ್ನು ಪರಿಷ್ಕರಿಸಿ, ಇಡೀ ಗೀತೆಯನ್ನು 2 ನಿಮಿಷ 20 ಸೆಕೆಂಡ್‌ಗಳಲ್ಲಿ ಹಾಡುವಂತೆ ಸಿದ್ಧಪಡಿಸಿಕೊಡಲಾಗಿತ್ತು. ಆದರೆ, ಈ ನಿಟ್ಟಿನಲ್ಲಿ ಸರ್ಕಾರ ಕ್ರಮಕೈಗೊಂಡಿಲ್ಲ' ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

'ಕಲಾವಿದರ ದತ್ತಾಂಶ ಬ್ಯಾಂಕ್ ಬಗ್ಗೆ ಯೋಜನೆ ರೂಪಿಸಲು ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ.ಸುನಿಲ್ ಕುಮಾರ್ ಮುಂದಾಗಿರುವುದು ಸ್ವಾಗತಾರ್ಹ. ಆದರೆ, 90ರ ದಶಕದಲ್ಲಿ ಇಲಾಖೆಯ ನಿರ್ದೇಶಕನಾಗಿದ್ದಾಗ ರಾಜ್ಯದ ಎಲ್ಲ ತಾಲ್ಲೂಕುಗಳಲ್ಲಿನ ಸಾಹಿತಿಗಳ ಹಾಗೂ ವಿವಿಧ ಕಲಾ ಪ್ರಕಾರಗಳ ಕಲಾವಿದರ ಮಾಹಿತಿಗಳನ್ನು ಸಂಗ್ರಹಿಸಿ, ಇಲಾಖೆಯಲ್ಲಿ ದಾಖಲು ಮಾಡಿಸಿದ್ದೆ. ಕನ್ನಡಭವನ ನಿರ್ಮಾಣದ ನಂತರ ಅಲ್ಲಿಗೆ ಬರುವ ಕಲಾಸಕ್ತರ ಅನುಕೂಲಕ್ಕಾಗಿ ದೃಶ್ಯ ವಿಭಾಗ ತೆರೆದು, ಪರದೆ ಮತ್ತು ಪ್ರೊಜೆಕ್ಟರ್ ಮೂಲಕ ಸಂಸ್ಕೃತಿಗೆ ಸಂಬಂಧಿಸಿದ ಪ್ರಮುಖ ಕಾರ್ಯಕ್ರಮಗಳು ಮತ್ತು ಉತ್ಸವಗಳ ಚಿತ್ರಗಳನ್ನು ಹಾಗೂ ಕಿರು ಸಾಕ್ಷ್ಯಚಿತ್ರಗಳನ್ನು ವೀಕ್ಷಿಸಲು ವ್ಯವಸ್ಥೆ ಮಾಡಲಾಗಿತ್ತು. ಆ ವಿಭಾಗವನ್ನು ಮುಚ್ಚಲಾಗಿದೆ' ಎಂದು ಹೇಳಿದ್ದಾರೆ.

ಧ್ವನಿ ವಿಭಾಗ ಸ್ಥಗಿತ: 'ಸಂಗೀತ ಪ್ರಕಾರಗಳ ಒಂದು ಸಾವಿರ ಧ್ವನಿ ಸುರುಳಿಗಳನ್ನು ಸಂಗ್ರಹಿಸಿ, ಸಾರ್ವಜನಿಕರಿಗೆ ಕೇಳಲು ವ್ಯವಸ್ಥೆ ಮಾಡಲಾಗಿತ್ತು. ಈ ವಿಭಾಗವೂ ಈಗ ಮುಚ್ಚಿದೆ. 'ವ್ಯಕ್ತಿ ಶ್ರೀ' ಮತ್ತು 'ಕಲಾಶ್ರೀ' ಶೀರ್ಷಿಕೆಗಳಡಿ ನಾಡಿನ ವಿವಿಧ ಕಲಾಪ್ರಕಾರಗಳ ಅಪರೂಪದ ಕಲಾವಿದರು ಮತ್ತು ಕಲಾಪ್ರಕಾರಗಳಿಗೆ ಸಂಬಂಧಿಸಿದ 5ರಿಂದ 8 ನಿಮಿಷಗಳ ಸಾಕ್ಷ್ಯಚಿತ್ರಗಳನ್ನು ಮಾಹಿತಿ ಕೇಂದ್ರದಲ್ಲಿ ವೀಕ್ಷಣೆಗೆ ಇಡಲಾಗಿತ್ತು. ಎಲ್ಲ ವಿಭಾಗಗಳನ್ನೂ ಮುಚ್ಚಿ, ಕಚೇರಿಯಾಗಿ ಪರಿವರ್ತಿಸಲಾಗಿದೆ' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಿಂದೂ ದೇಗುಲಗಳು ಮಾತ್ರ ಕಾಣುತ್ತವೆಯೇ: ಪ್ರತಾಪಸಿಂಹ

ಪ್ರಜಾವಾಣಿ ವಾರ್ತೆ


ಪ್ರತಾಪಸಿಂಹ

ಮೈಸೂರು: 'ಮೊದಲು ನಗರದ ಡಿ.ದೇವರಾಜ ಅರಸು ರಸ್ತೆಯಲ್ಲಿರುವ ದರ್ಗಾ ತೆರವುಗೊಳಿಸಿ, ನಂತರ ಹಿಂದೂ ದೇವಾಲಯಗಳನ್ನು ಮುಟ್ಟಿ' ಎಂದು ಸಂಸದ ಪ್ರತಾಪಸಿಂಹ ಜಿಲ್ಲಾಡಳಿತಕ್ಕೆ ತಾಕೀತು ಮಾಡಿದರು.

'ಸಾರ್ವಜನಿಕ ಸ್ಥಳಗಳಲ್ಲಿ ಅನಧಿಕೃತವಾಗಿ ಕಟ್ಟಲಾಗಿರುವ ಹಾಗೂ ಸಂಚಾರಕ್ಕೆ ತೊಂದರೆಯಾಗಿರುವ ಧಾರ್ಮಿಕ ಕಟ್ಟಡಗಳ ತೆರವು ಕಾರ್ಯಾಚರಣೆ ದೇವಾಲಯಗಳಿಗೆ ಮಾತ್ರ ಸೀಮಿತಗೊಂಡಿದೆ' ಎಂದು ಬುಧವಾರ ಇಲ್ಲಿ ನಡೆದ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯಲ್ಲಿ ಆಕ್ರೋಶ ವ್ಯಕ್ತಪಡಿಸಿದರು.

'ತೆರವು ಕಾರ್ಯಾಚರಣೆಗೆ ಮುನ್ನ ಸಿಬ್ಬಂದಿಯು ಸ್ಥಳೀಯರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ಕಳ್ಳರಂತೆ ಕೆಡವುತ್ತಿದ್ದಾರೆ. ಹುಲ್ಲಹಳ್ಳಿ ಬಳಿಯ ದೇವಾಲಯವನ್ನು ಉರುಳಿಸಲಾಗಿದೆ. ಆದರೆ ಇರ್ವಿನ್ ರಸ್ತೆ ವಿಸ್ತರಣೆಗಾಗಿ ಮಸೀದಿ ಗೋಡೆಯನ್ನು ತೆರವುಗೊಳಿಸಲು ಮಾತ್ರ ಮೀನಮೇಷ ಎಣಿಸುತ್ತಾರೆ' ಎಂದು ಕಿಡಿಕಾರಿದರು.

'ಕೆಸರೆಯಲ್ಲಿ ಕೆರೆ ಒತ್ತುವರಿ ಮಾಡಿ ಮಸೀದಿ ನಿರ್ಮಾಣಕ್ಕೆ ಸಿದ್ಧತೆ ನಡೆಸ ಲಾಗಿದೆ. ಎನ್.ಆರ್.ಮೊಹಲ್ಲಾ, ಶಕ್ತಿ ನಗರದಲ್ಲಿ ಅನ ಧಿಕೃತವಾಗಿ ಹತ್ತಾರು ಮಸೀದಿ, ದರ್ಗಾ ತಲೆ ಎತ್ತಿವೆ. ಅವು ಜಿಲ್ಲಾಡಳಿತಕ್ಕೆ ಕಾಣುವುದಿಲ್ಲವೇ' ಎಂದು ಪ್ರಶ್ನಿಸಿದರು.

'2013ರಲ್ಲಿ ನ್ಯಾಯಾಲಯಕ್ಕೆ ಸಲ್ಲಿಸಿದ ಪಟ್ಟಿಯಂತೆಯೇ ತೆರವು ಕಾರ್ಯಾಚರಣೆ ಮಾಡಲಾಗುತ್ತಿದೆ' ಎಂದು ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ಪ್ರತಿಕ್ರಿಯಿಸಿದರು.

'ಪಟ್ಟಿಯ ಪ್ರಕಾರ ಎಲ್ಲಾ ಧಾರ್ಮಿಕ ಕಟ್ಟಡಗಳ ತೆರವು ಆಗಲಿ. ಅದಕ್ಕೆ ಧಾರ್ಮಿಕ ಮುಖಂಡರ ಸಭೆ ಕರೆದು ಮನವರಿಕೆ ಮಾಡಿಕೊಡಿ' ಎಂದು ಪ್ರತಾಪಸಿಂಹ ಸೂಚಿಸಿದರು.

'ಈವರೆಗೂ ಸಾಮೂಹಿಕ ನಾಯಕತ್ವದಲ್ಲೇ ಚುನಾವಣೆ'


ನಾರಾಯಣ ಸ್ವಾಮಿ

ಚಿತ್ರದುರ್ಗ: 'ಬಿಜೆಪಿ ಕಾರ್ಯಕರ್ತರ ಪಕ್ಷವೇ ಹೊರತು ವ್ಯಕ್ತಿ ಕೇಂದ್ರಿತ ಪಕ್ಷವಲ್ಲ. ಒಬ್ಬ ವ್ಯಕ್ತಿ ನಾಯಕತ್ವ ಅಥವಾ ಮುಖ್ಯಮಂತ್ರಿ ಹೆಸರಿನಲ್ಲಿ ಚುನಾವಣೆ ಮಾಡಿಲ್ಲ. ಈವರೆಗೂ ಸಾಮೂಹಿಕ ನಾಯಕತ್ವದಲ್ಲಿ ಚುನಾವಣೆ ಎದುರಿಸಿದ್ದೇವೆ' ಎಂದು ಕೇಂದ್ರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ರಾಜ್ಯ ಸಚಿವ ಎ. ನಾರಾಯಣಸ್ವಾಮಿ ತಿಳಿಸಿದರು.

ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರನ್ನು ಪಕ್ಷ ನಿರ್ಲಕ್ಷ್ಯ ಮಾಡುತ್ತಿಲ್ಲ. ಅವರಿಗೆ ಯಾರೂ ವಿರೋಧ ವ್ಯಕ್ತಪಡಿಸಿಲ್ಲ. ಅವರ ಜಪ ಮಾಡಿಕೊಂಡು ರಾಜಕೀಯ ಮಾಡುವುದು ಅನಿವಾರ್ಯವಾಗಿದೆ. ಅಮಿತ್ ಶಾ ಅವರು ಸರಿಯಾಗಿ ಮಾತನಾಡಿದ್ದಾರೆ. ಕಾರ್ಯಕರ್ತರ ಪಡೆಯೊಂದಿಗೆ ರಾಜಕಾರಣ ಮಾಡಿ ಮುಂದಿನ ಚುನಾವಣೆ ಗೆಲ್ಲುತ್ತೇವೆ' ಎಂದರು.

'ಜನಾಶೀರ್ವಾದ ಯಾತ್ರೆಯಲ್ಲಿ ನನ್ನಿಂದ ತಪ್ಪಾಗಿದೆ. ಯಾತ್ರೆಯ ಬಳಿಕ ಕೋವಿಡ್ ಹೆಚ್ಚಾಗಿಲ್ಲ ಎಂಬುದು ನನ್ನ ಪುಣ್ಯ. ಗಣೇಶ ಉತ್ಸವದ ಸಂದರ್ಭದಲ್ಲಿ ಕೋವಿಡ್ ಬಗ್ಗೆ ಇನ್ನಷ್ಟು ಎಚ್ಚರಿಕೆಯಿಂದ ಇರಬೇಕಾದ ಅಗತ್ಯವಿದೆ. ಸರ್ಕಾರದ ನಿಯಮವನ್ನು ಪಾಲಿಸಿ, ಧರ್ಮ ರಕ್ಷಣೆ ಮಾಡಬೇಕು. ಧಾರ್ಮಿಕ ವಿಚಾರ ಮುಂದಿಟ್ಟುಕೊಂಡು ಸರ್ಕಾರದ ವಿರುದ್ಧ ಸಡ್ಡು ಹೊಡೆಯುವುದು ಸರಿಯಲ್ಲ' ಎಂದು ಹೇಳಿದರು.

ಶಾಲೆಗಳಿಗೆ ಅ. 10ರಿಂದ 20ರವರೆಗೆ ದಸರಾ ರಜೆ

ಬೆಂಗಳೂರು: ರಾಜ್ಯದ ಸರ್ಕಾರಿ, ಅನುದಾನಿತ, ಅನುದಾನರಹಿತ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ (2021–22) ಅ. 10ರಿಂದ 20ರವರೆಗೆ ದಸರಾ ರಜೆ ನಿಗದಿಪಡಿಸಿ ಸಾರ್ವಜನಿಕ ಶಿಕ್ಷಣ ಇಲಾಖೆ ಸುತ್ತೋಲೆ ಹೊರಡಿಸಿದೆ.

ಶಾಲಾ ಕರ್ತವ್ಯದ ಮೊದಲ ಅವಧಿಯನ್ನು ಜುಲೈ 1ರಿಂದ ಅ. 9ರವರೆಗೆ, ಎರಡನೇ ಅವಧಿಯನ್ನು ಅ. 21ರಿಂದ 2022ರ ಏ. 30ರವರೆಗೆ ನಿಗದಿಪಡಿಸಲಾಗಿದೆ.

2022ರ ಮೇ 1ರಿಂದ ಮೇ 28ರವರೆಗೆ ಬೇಸಿಗೆ ರಜೆ.

ನಿಧನ ವಾರ್ತೆ

ಸುಶೀಲಾದೇವಿ ಉದಯಕುಮಾರ್



ಬೆಂಗಳೂರು: ಚಿತ್ರನಟ ದಿವಂಗತ ಉದಯಕುಮಾರ್ ಅವರ ಪತ್ನಿ ಸುಶೀಲಾ ದೇವಿ (84) ಅವರು ಬುಧವಾರ ಅನಾರೋಗ್ಯದಿಂದ ನಿಧನರಾದರು.

ಉದಯಕುಮಾರ್ ಅವರು ಸ್ಥಾಪಿಸಿದ್ದ ಉದಯಕಲಾ ನಿಕೇತನ ಸಂಸ್ಥೆಯ ಅಧ್ಯಕ್ಷರಾಗಿ ಸಂಸ್ಥೆಯನ್ನು ಮುನ್ನಡೆಸಿದ ಅವರು ನಟನೆ, ನೃತ್ಯ, ಸಂಗೀತ ತರಬೇತಿ ನೀಡುತ್ತಿದ್ದರು.

1960–70ರ ದಶಕದಲ್ಲಿ ಕನ್ನಡ ಚಿತ್ರರಂಗದಲ್ಲಿ ಮೇರುನಟನಾಗಿ ಸಾಧನೆ ಮಾಡಿದ 'ಕಲಾಕೇಸರಿ' ಉದಯ ಕುಮಾರ್ ನೆನಪಿನಲ್ಲಿ ಸಾಕಷ್ಟು ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿದ್ದರು.

ಅವರಿಗೆ ಪುತ್ರಿಯರಾದ ವರ್ಧಿನಿ ಮೂರ್ತಿ, ರೇಣುಕಾಬಾಲಿ ಉದಯ ಕುಮಾರ್ ಇದ್ದಾರೆ. ಉದಯಕುಮಾರ್ ಅವರ ಮೊದಲ ಪತ್ನಿ ಕಮಲಮ್ಮ 2019ರ ಡಿ. 11ರಂದು ನಿಧನರಾಗಿದ್ದರು.

ಎಸ್‌ಡಿಎ ಸಾಮಾನ್ಯ ಪರೀಕ್ಷೆಯಲ್ಲಿ ಮೆಂಟಲ್ ಎಬಿಲಿಟಿ



ಭಾಗ -2

ಕರ್ನಾಟಕ ಲೋಕ ಸೇವಾ ಆಯೋಗವು ದ್ವಿತೀಯ ದರ್ಜೆ ಸಹಾಯಕರ ಹುದ್ದೆಯ ಸ್ಪರ್ಧಾತ್ಮಕ ಪರೀಕ್ಷೆಯನ್ನು ಇದೇ ಸೆ. 18ರಂದು ನಡೆಸಲಿದೆ. ಎಸ್‌ಡಿಎ ಪರೀಕ್ಷೆಯಲ್ಲಿ ಸಾಮಾನ್ಯ ಕನ್ನಡ ಪತ್ರಿಕೆಯ ಸಿದ್ಧತೆಗೆ ಕೆಲವು ಮಾದರಿ ಪ್ರಶ್ನೆಗಳನ್ನು ನೀಡಲಾಗಿದೆ.

ಕೆಳಗೆ ಕೊಡಲಾಗಿರುವ ಶಬ್ದಗಳನ್ನು ಓದಿ ಸರಿಯಾದ ಅರ್ಥಗ್ರಹಿಸಿ, ಸೂಕ್ತ ಉತ್ತರವನ್ನು ಗುರುತಿಸಿ

1) ಇಂಗಳಗಣ್ ಎಂದರೆ ___________
ಎ) ರಾತ್ರಿ ಮಾತ್ರ ಕಣ್ಣು ಕಾಣುವವ
ಬಿ) ಬೆಂಕಿಕಾರುವ ಕಣ್ಣಿನವ
ಸಿ) ವಿಷ್ಣುವಿನ ಕಣ್ಣು
ಡಿ) ಒಂದು ಬಗೆಯ ಮುಳ್ಳುಗಿಡ

2) ಸ್ಥಾನಪಲ್ಲಟ ಎಂದರೆ ___________
ಎ) ಜಯಿಸು ಬಿ) ಸ್ಥಳಾಂತರ ಮಾಡು
ಸಿ) ವರ್ಗ ಮಾಡು ಡಿ) ಅಗೌರವಿಸು

3) ಒಡ್ಡಂತಿ ಎಂದರೆ ___________
ಎ) ಹುಟ್ಟಿದ ದಿನ ಬಿ) ವಿನ್ಯಾಸ
ಸಿ) ವಜ್ರ ಸಿ) ಹೆಣ್ಣು

4) ಕೈಮ್ಮಸಕ ಎಂದರೆ ___________
ಎ) ಕೈಯಿಂದ ಉಜ್ಜು ಬಿ) ಕೈ ತಾಗು
ಸಿ) ನೋಡು ಡಿ) ಕಪಟ

5) ಗುಂದ ಎಂದರೆ ___________
ಎ) ಬೆಟ್ಟ ಬಿ) ಮರದ ದಿಣ್ಣೆ
ಸಿ) ಚಾಮರ ಡಿ) ಕುಂದ

6) ಗುಟಿಕೆ ಎಂದರೆ ___________
ಎ) ಗುಟುಕು ಬಿ) ಗುಮ್ಮ
ಸಿ) ಗುಳಿಗೆ ಡಿ) ಸಿಹಿ ಪದಾರ್ಥ

7) ಘೋಣಿ ಎಂದರೆ___________
ಎ) ಚೀಲ ಬಿ) ಚಾಮರ
ಸಿ) ಹಂದಿ ಡಿ) ಕೆಮ್ಮರ

8) ದ್ವಿಪ ಎಂದರೆ ___________
ಎ) ಧರೆ ಬಿ) ಆನೆ
ಸಿ) ದೀಪ ಡಿ) ಯಾವುದೂ ಅಲ್ಲ

9) ಧಡಿಯ ಎಂದರೆ ___________
ಎ) ದಾಂಡಿಗ ಬಿ) ದಿವ್ಯ ಮರ
ಸಿ) ಧಮನಿ ಡಿ) ಜ್ಯೋತಿ ಹಚ್ಚುವವ

10) ಪ್ರಹರಿ ಎಂದರೆ ___________
ಎ) ಕಾವಲುಗಾರ ಬಿ) ಬೆಳ್ಳಿ ಹಬ್ಬ
ಸಿ) ಭೂಮಿ ಡಿ) ಯಾವುದೂ ಅಲ್ಲ

ಉತ್ತರ: 1) ಬಿ, 2) ಬಿ, 3) ಎ, 4) ಡಿ, 5) ಎ, 6)ಸಿ, 7) ಸಿ, 8) ಬಿ, 9) ಎ, 10) ಎ.

ಪ್ಯಾರಾ ಓದಿ, ಅರ್ಥಗ್ರಹಿಸಿ ಪ್ರಶ್ನೆಗಳಿಗೆ ಉತ್ತರಿಸಿ

ಯಾವ ಪ್ರಾಣಿಗಳು ನೀರು ಮತ್ತು ಭೂಮಿ ಎರಡರಲ್ಲೂ ವಾಸಿಸಬಲ್ಲವೋ ಅಂಥವುಗಳನ್ನು ಉಭಯವಾಸಿಗಳೆನ್ನುವರು. ಉಭಯವಾಸಿಗಳಲ್ಲಿ ಜೀರ್ಣಾಂಗ ವ್ಯೂಹವು ಚೆನ್ನಾಗಿ ಅಭಿವೃದ್ಧಿ ಹೊಂದಿದ್ದು ಜೀರ್ಣನಾಳಗಳನ್ನು ಪಡೆದಿರುತ್ತವೆ. ಅಂದರೆ ಜಠರ, ಪಿತ್ತಕೋಶ, ಮೇದೋಜೀರಕಾಂಗ, ಕರುಳು ಇತ್ಯಾದಿಗಳನ್ನು ಒಳಗೊಂಡಿರುತ್ತವೆ.

ಉಸಿರಾಟವು ಕಿವಿರುಗಳು, ಶ್ವಾಸಕೋಶಗಳು, ಚರ್ಮ ಮತ್ತು ಬಾಯಿಯ ಅಂಗಗಳ ಮೂಲಕ ನಡೆಯುತ್ತದೆ. ರಕ್ತ ಪರಿಚಲನಾಮಂಡಲದಲ್ಲಿ ಮೂರು ಕೋಣೆಗಳ ಹೃದಯವು ಕಂಡುಬರುತ್ತದೆ. ಸಾಮಾನ್ಯವಾಗಿ ಉಭಯವಾಸಿ ಪ್ರಾಣಿಗಳು ಶೀತರಕ್ತದ ಪ್ರಾಣಿಗಳಾಗಿವೆ. ನರಮಂಡಲವು ಉತ್ತಮವಾಗಿ ರೂಪಗೊಂಡು ಮೆದುಳು, ಸ್ಪೈನಲ್ ನರಹುರಿ ಮತ್ತು ಹತ್ತು ಜೊತೆ ಮೆದುಳಿನ ನರಗಳು, ಸ್ವಯಂ ನಿಯಂತ್ರಿತ ನರಮಂಡಲ ಇವುಗಳನ್ನು ಉಭಯವಾಸಿಗಳು ಹೊಂದಿರುತ್ತವೆ.

ಉಭಯವಾಸಿಗಳು ಏಕ ಲಿಂಗಿಗಳಾಗಿದ್ದು, ಲೈಂಗಿಕ ರೀತಿಯಲ್ಲಿ ಸಂತಾನೋತ್ಪತ್ತಿಯನ್ನು ನಡೆಸುತ್ತವೆ. ಇವುಗಳಲ್ಲಿ ಬಾಹ್ಯಗರ್ಭಧಾರಣೆ ಇದ್ದು, ನಿಂತ ನೀರಿನಲ್ಲಿ ಮೊಟ್ಟೆಗಳನ್ನಿಡುತ್ತವೆ. ಇವುಗಳ ಜೀವನ ಚರಿತ್ರೆಯಲ್ಲಿ ಸಾಮಾನ್ಯವಾಗಿ ರೂಪ ಪರಿವರ್ತನೆ ಕಂಡುಬರುತ್ತದೆ.

ಉಭಯವಾಸಿಗಳಲ್ಲಿ ಲಾರ್ವ ಅವಸ್ಥೆಯಿಂದ ಪ್ರಾರಂಭವಾಗಿ ಪ್ರೌಢಾವಸ್ಥೆಗೆ ತಲುಪುವವರೆಗಿನ ಬದಲಾವಣೆಗಳಿಗೆ ಒಟ್ಟಾಗಿ ರೂಪಪರಿವರ್ತನೆ ಎಂದು ಹೆಸರು.

ಪ್ರಶ್ನೆಗಳು

1) ಯಾವ ಪ್ರಾಣಿಗಳನ್ನು ಉಭಯವಾಸಿಗಳೆಂದು ಕರೆಯುವರು?
ಎ) ಭೂಮಿ ಮತ್ತು ಆಕಾಶವೆರಡರಲ್ಲೂ ವಾಸಿಸುವ ಪ್ರಾಣಿಗಳನ್ನು ಕರೆಯುವರು
ಬಿ) ಆಕಾಶ ಮತ್ತು ಸಮುದ್ರ ಎರಡರಲ್ಲೂ ವಾಸಿಸುವ ಪ್ರಾಣಿಗಳು
ಸಿ) ಭೂಮಿ ಮತ್ತು ನೀರು ಇವೆರಡರಲ್ಲೂ ವಾಸಿಸುವ ಪ್ರಾಣಿಗಳನ್ನು ಕರೆಯುವರು
ಡಿ) ಯಾವುದೂ ಅಲ್ಲ

2) ಉಭಯವಾಸಿಗಳಲ್ಲಿ ಇರುವ ಹೃದಯಕ್ಕೆ ಎಷ್ಟು ಕೋಣೆಗಳಿರುತ್ತವೆ?
ಎ) ಎರಡು ಬಿ) ಮೂರು
ಸಿ) ಐದು ಡಿ) ನಾಲ್ಕು

3) ಸಾಮಾನ್ಯವಾಗಿ ಉಭಯವಾಸಿ ಪ್ರಾಣಿಗಳು ಶೀತ ರಕ್ತದ ಪ್ರಾಣಿಗಳಾಗಿರುತ್ತವೆ. ಈ ಹೇಳಿಕೆ....
ಎ) ಸರಿಯಾಗಿದೆ ಬಿ) ತಪ್ಪಾಗಿದೆ
ಸಿ) ಯಾವುದೆಂದು ನಿರ್ಧರಿಸಲಾಗದು
ಡಿ) ಮೇಲಿನ ಎಲ್ಲವೂ ಸತ್ಯಕ್ಕೆ ಹತ್ತಿರವಾಗಿದೆ

4) ಉಭಯವಾಸಿಗಳಲ್ಲಿ ಎಷ್ಟು ಜೊತೆ ಮೆದುಳಿನ ನರಗಳಿವೆ?
ಎ) ಹತ್ತು ಬಿ) ಇಪ್ಪತ್ತು
ಸಿ) ಮೂವತ್ತು ಡಿ) ಎರಡು

5) ಉಭಯವಾಸಿಗಳು ...... ಲಿಂಗಿಗಳಾಗಿವೆ.
ಎ) ಏಕ ಬಿ) ದ್ವಿ
ಸಿ) ಚತುರ ಡಿ) ಯಾವುದೂ ಇಲ್ಲ

6) ಬಾಹ್ಯ ಗರ್ಭಧಾರಣೆಯನ್ನು ಎಲ್ಲಿ ಕಾಣುವಿರಿ?
ಎ) ಮಾನವರಲ್ಲಿ ಬಿ) ಸಸ್ಯಗಳಲ್ಲಿ
ಸಿ) ಉಭಯವಾಸಿಗಳಲ್ಲಿ ಡಿ) ಯಾವುದರಲ್ಲೂ ಇಲ್ಲ

7) ಉಭಯ ವಾಸಿಗಳಲ್ಲಿ ಲಾರ್ವ ಅವಸ್ಥೆಯಿಂದ ಪ್ರಾರಂಭವಾಗಿ ಪ್ರೌಢಾವಸ್ಥೆಗೆ ತಲುಪುವವರೆಗಿನ ಬದಲಾವಣೆಗಳಿಗೆ ಏನೆಂದು ಹೆಸರು?
ಎ) ಗುಣ ಪರಿವರ್ತನೆ ಬಿ) ರೂಪ ಪರಿವರ್ತನೆ
ಸಿ) ಬಾಹ್ಯ ಪರಿವರ್ತನೆ ಡಿ) ಆಂತರಿಕ ಪರಿವರ್ತನೆ

ಉತ್ತರಗಳು: 1-ಸಿ, 2-ಬಿ, 3-ಎ, 4-ಎ, 5-ಎ, 6-ಸಿ, 7-ಬಿ

ಸಾಮಾನ್ಯವಾಗಿ ಮೇಲೆ ನೀಡಲಾದ ವರ್ಬಲ್ ರೀಸನಿಂಗ್ ರೀತಿಯ ಪ್ರಶ್ನೆಗಳನ್ನು ಕೇಳುತ್ತಾರೆ. ಅಂದರೆ ಒಂದು ಸಣ್ಣ ಪ್ಯಾರಾ ನೀಡಿ ಅದರ ಕೆಳಗೆ ಆ ಪ್ಯಾರಾಕ್ಕೆ ಸಂಬಂಧಿಸಿದ ಪ್ರಶ್ನೆಗಳಿದ್ದು ನಾಲ್ಕು ಉತ್ತರಗಳನ್ನು ಸಹ ನೀಡಿರುತ್ತಾರೆ. ಹಾಗೆ ನೀಡ ಲಾದ ನಾಲ್ಕು ಆಯ್ಕೆಗಳಲ್ಲಿ ಸರಿಯಾದ ಉತ್ತರವನ್ನು ಆ ನಾಲ್ಕು ಉತ್ತರಗಳಿಂದಲೇ ಆರಿಸಬೇಕು.

ಮಾಹಿತಿ: Spardha Bharati UPSC ಯೂಟ್ಯೂಬ್ ಚಾನೆಲ್

ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿ ಪರೀಕ್ಷೆಯ ಮಾದರಿ ಪ್ರಶ್ನೆಗಳು

ಭಾಗ -56

756) ರಾಷ್ಟ್ರೀಯ ಕಂಪನಿ ನ್ಯಾಯಾಧೀಕರಣ ಟ್ರಿಬ್ಯೂನಲ್ ಈ ವಿಮಾನ ಸಂಸ್ಥೆ ಪುರ್ನರಚನೆಗೆ ಅನುಮತಿ ನೀಡಿದೆ?
ಎ) ಸ್ಪೈಸ್ ಜೆಟ್
ಬಿ) ಇಂಡಿಯನ್ ಏರ್‌ಲೈನ್ಸ್
ಸಿ) ಜೆಟ್ ಏರ್‌ವೇಸ್
ಡಿ) ಇಂಡಿಗೊ

757) ಹೊಸ ಜಾತಿಯ ಚಿಮ್ಮುವ ಕಪ್ಪೆ ತಟ್ಟಕಾಡು ಪಕ್ಷಿಧಾಮದ ಸಮೀಪದಲ್ಲಿ ಕಂಡು ಬಂದಿದೆ. ಇದು ಯಾವ ರಾಜ್ಯದಲ್ಲಿದೆ?
ಎ) ಕರ್ನಾಟಕ
ಬಿ) ತಮಿಳುನಾಡು
ಸಿ) ಕೇರಳ
ಡಿ) ತೆಲಂಗಾಣ

758) ಭಾರತ-ಅಮೆರಿಕ ಜಂಟಿ ಸಮರಾಭ್ಯಾಸಕ್ಕೆ ಸಂಬಂಧಿಸಿ ತಪ್ಪಾದ ಹೇಳಿಕೆ ಗುರುತಿಸಿ.
ಎ) ಭಾರತ-ಅಮೆರಿಕ ಹಿಂದೂ ಮಹಾಸಾಗರದಲ್ಲಿ ಜಂಟಿ ಸಮರಾಭ್ಯಾಸ ಆರಂಭಿಸಿವೆ.
ಬಿ) ಇಂಡೊಫೆಸಿಫಿಕ್ ಪ್ರದೇಶದಲ್ಲಿ ಚೀನಾ ಪ್ರಾಬಲ್ಯಕ್ಕೆ ಸೆಡ್ಡು ಹೊಡೆಯಲು ಆರಂಭಿಸಲಾಗಿದೆ.
ಸಿ) ಯು.ಎನ್.ಎನ್. ರೊನಾಲ್ಡ್ ರೆಂಗನ್ ಹಡಗು ಪಾಲ್ಗೊಂಡಿದೆ.
ಡಿ) ಐಎನ್ಎಸ್ ವಿಕ್ರಮಾದಿತ್ಯ ನೌಕೆ ಇದರಲ್ಲಿ ಪಾಲ್ಗೊಂಡಿದೆ.

759) ವಿಶ್ವ ಟೆಸ್ಟ್ ಕ್ರಿಕೆಟ್ ಚಾಂಪಿಯನ್‌ಶಿಪ್ ಜಯಿಸಿದ ತಂಡ ಯಾವುದು?
ಎ) ಭಾರತ ಬಿ) ನ್ಯೂಜಿಲೆಂಡ್
ಸಿ) ಇಂಗ್ಲೆಂಡ್ ಡಿ) ಆಸ್ಟ್ರೇಲಿಯಾ

760) ಜಾರಿ ನಿರ್ದೇಶನಾಲಯ ಜಪ್ತಿ ಮಾಡಿದ ಆಸ್ತಿಗಳನ್ನು ಬ್ಯಾಂಕುಗಳಿಗೆ ನೀಡಿದೆ. ಈ ಕೆಳಕಂಡ ಯಾವ ವ್ಯಕ್ತಿಗಳು ಅದರ ಭಾಗವಾಗಿರುವುದಿಲ್ಲ?
ಎ) ನೀರವ ಮೋದಿ
ಬಿ) ವಿಜಯ ಮಲ್ಯ
ಸಿ) ಮೆಹುಲ ಚೊಕ್ಸಿ
ಡಿ) ಲಲಿತ ಮೋದಿ

761) 'ಸೌರವ್ಯೂಹ ಕೇಂದ್ರ' ವಾದವನ್ನು ಮಂಡಿಸಿದವರು ಯಾರು?
ಎ) ಕೊಪರ್ನಿಕಸ್ ಬಿ) ಟಾಲೆಮಿ
ಸಿ) ಕೆಪ್ಲರ್ ಡಿ) ಹೊಂಬಾಲ್ಟ್

762) ಹೊಂದಿಸಿ ಬರೆಯಿರಿ.

ಗ್ರಹ	ಪರ್ಯಾಯ ಹೆಸರು
ಅ. ಬುಧ	1. ರೋಮನ್ನರ ಯುದ್ಧ ದೇವತೆ
ಆ. ಶುಕ್ರ	2. ರೋಮನ್ನರ ಕೃಷಿ ದೇವತೆ
ಇ. ಮಂಗಳ	3. ರೋಮನ್ನರ ವಾಣಿಜ್ಯ ದೇವತೆ
ಈ. ಶನಿ	4. ರೋಮನ್ನರ ಪ್ರೇಮ ದೇವತೆ

	ಅ	ಆ	ಇ	ಈ
ಎ)	1	2	3	4
ಬಿ)	1	2	4	3
ಸಿ)	3	4	1	2
ಡಿ)	3	4	2	1

763) ಭಾರತದ ಈಶಾನ್ಯ ರಾಜ್ಯಗಳು ಯಾವ ಭೂಕಂಪದ ವಲಯದಲ್ಲಿ ಬರುತ್ತವೆ?
ಎ) 2 ಬಿ) 3
ಸಿ) 4 ಡಿ) 5

764) ಪುರಾತನ ಮಡಿಕೆ ಪರ್ವತಕ್ಕೆ (Old Fold Mountain) ಉದಾಹರಣೆ
ಎ) ಹಿಮಾಲಯ ಬಿ) ಯುರಾಲ್ಸ್
ಸಿ) ರಾಕಿ ಡಿ) ಆಂಡೀಸ್

765) ಈ ಕೆಳಗಿನ ಯಾವ ವಲಯಗಳಲ್ಲಿ ಓಜೋನ್ ಪದರ ಹರಡಿದೆ?
ಎ) ಪರಿವರ್ತನಾ ಮಂಡಲ ಮತ್ತು ಸಮೋಷ್ಣ ಮಂಡಲ
ಬಿ) ಸಮೋಷ್ಣಮಂಡಲ ಮತ್ತು ಮಧ್ಯಂತರ ಮಂಡಲ
ಸಿ) ಮಧ್ಯಂತರ ಮಂಡಲ ಮತ್ತು ಅಯಾನು ಮಂಡಲ
ಡಿ) ಅಯಾನು ಮಂಡಲ ಮತ್ತು ಬಾಹ್ಯ ಮಂಡಲ

766) ಹೊಂದಿಸಿ ಬರೆಯಿರಿ.

ನಗ್ನೀಕರಣದ ಕರ್ತೃ	ಭೂಸ್ವರೂಪ
ಅ. ನದಿ	1. ಯುವಾಲಾ
ಆ. ಹಿಮನದಿ	2. ಡೆಲ್ಟಾ
ಇ. ಗಾಳಿ	3. ಸರ್ಕ್
ಈ. ಅಂತರ್ಜಲ	4. ಬಾರ್ ಚನ್ಸ್

	ಅ	ಆ	ಇ	ಈ
ಎ)	2	3	4	1
ಬಿ)	2	3	1	4
ಸಿ)	3	4	1	2
ಡಿ)	3	4	2	1

767) ಬಾರೋಮೀಟರ್
ಎ) ತೇವಾಂಶ ಅಳೆಯುವ ಮಾಪಕ
ಬಿ) ಸಾಗರ ಪ್ರವಾಹಗಳ ವೇಗವನ್ನು ಅಳೆಯುವ ಮಾಪಕ
ಸಿ) ಗಾಳಿಯ ಒತ್ತಡವನ್ನು ಅಳೆಯುವ ಮಾಪಕ
ಡಿ) ಮಳೆಯ ಪ್ರಮಾಣವನ್ನು ಅಳೆಯುವ ಮಾಪಕ

768) ಈ ಕೆಳಗಿನ ಯಾವ ವಿಧದ ಮೋಡಗಳಿಂದ ಗುಡುಗು ಮಿಂಚಿನಿಂದ ಕೂಡಿದ ಹೆಚ್ಚಿನ ಮಳೆ ಆಗುತ್ತದೆ?
ಎ) ರಾಶಿ ವೃಷ್ಟಿ ಮೋಡಗಳು
ಬಿ) ವೃಷ್ಟಿ ಪದರ ಮೋಡಗಳು
ಸಿ) ಹಿಕರಣ ಮೋಡಗಳು
ಡಿ) ಹಿಮರಾಶಿ ಮೋಡಗಳು

769) ದ್ರಾಕ್ಷಿ, ಸಿಟ್ರಸ್ ಜಾತಿಯ ಸಸ್ಯವರ್ಗ ಕೆಳಗಿನ ಯಾವ ವಾಯುಗುಣದಲ್ಲಿ ಕಂಡುಬರುತ್ತವೆ?
ಎ) ಉಷ್ಣವಲಯದ ಮಾನ್ಸೂನ್ ವಾಯುಗುಣ
ಬಿ) ಮೆಡಿಟರೇನಿಯನ್ ವಾಯುಗುಣ
ಸಿ) ಉಷ್ಣವಲಯದ ಮಳೆಕಾಡು ವಾಯುಗುಣ
ಡಿ) ತಂಡ್ರಾ ವಾಯುಗುಣ

770) ಗಲ್ಫ್‌ಸ್ಟ್ರೀಮ್ ಉಷ್ಣೋದಕ ಪ್ರವಾಹವು ಯಾವ ಸಾಗರದಲ್ಲಿ ಕಂಡುಬರುತ್ತದೆ?
ಎ) ಪೆಸಿಫಿಕ್
ಬಿ) ಅಟ್ಲಾಂಟಿಕ್
ಸಿ) ಹಿಂದೂ ಮಹಾಸಾಗರ
ಡಿ) ಆರ್ಕ್ಟಿಕ್

(ಪ್ರಶ್ನೋತ್ತರ ಸಂಯೋಜನೆ: ಸ್ಲೇಟ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ, ಧಾರವಾಡ)

ಭಾಗ 55 ರ ಉತ್ತರ
741. ಎ, 742. ಬಿ, 743. ಎ, 744. ಡಿ, 745. ಡಿ, 746. ಎ, 747. ಸಿ, 748. ಎ, 749. ಸಿ, 750. ಬಿ, 751. ಡಿ, 752. ಡಿ, 753. ಸಿ, 754. ಬಿ, 755. ಬಿ

ಪ್ರಜಾವಾಣಿ ಉದ್ಯೋಗ ವಾರ್ತೆ

ಇಸಿಐಎಲ್‌ನಲ್ಲಿ ಟ್ರೇಡ್ ಅಪ್ರೆಂಟೀಸ್ ಹುದ್ದೆಗಳು


- ಎಲೆಕ್ಟ್ರಾನಿಕ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ (ಇಸಿಐಎಲ್) 2021ನೇ ಸಾಲಿನ ನೇಮಕಾತಿಗೆ ಅರ್ಜಿ ಆಹ್ವಾನಿಸಿದೆ. ಟ್ರೇಡ್ ಅಪ್ರೆಂಟೀಸ್ ಹುದ್ದೆಗಳಿಗೆ ಸೇರಲು ಬಯಸುವವರು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು.
- **ಹುದ್ದೆ:** ಟ್ರೇಡ್ ಅಪ್ರೆಂಟೀಸ್
- **ಹುದ್ದೆಗಳ ಸಂಖ್ಯೆ:** 243
- **ಸ್ಥಳ:** ಭಾರತದೆಲ್ಲೆಡೆ
- **ವಿದ್ಯಾರ್ಹತೆ:** ಮಾನ್ಯತೆ ಪಡೆದ ವಿದ್ಯಾಸಂಸ್ಥೆಯಿಂದ ಐಟಿಐ ಹಾಗೂ ಎನ್‌ಸಿವಿಟಿ ಪ್ರಮಾಣ ಪತ್ರ ಪಡೆದಿರಬೇಕು. ಹುದ್ದೆಗಳಿಗೆ ಅನುಗುಣವಾಗಿ ಸಂಬಂಧಿಸಿದ ಟ್ರೇಡ್ ಬಗ್ಗೆ ಅನುಭವವಿದ್ದರೆ ಆದ್ಯತೆ.
- **ವಯೋಮಿತಿ:** ಕನಿಷ್ಠ 18 ವರ್ಷ ಹಾಗೂ ಗರಿಷ್ಠ 30 ವರ್ಷ. ಎಸ್‌ಸಿ, ಎಸ್‌ಟಿ ಅಭ್ಯರ್ಥಿಗಳಿಗೆ 3 ವರ್ಷ, ಅಂಗವಿಕಲರಿಗೆ 10 ವರ್ಷ ವಯೋಮಿತಿ ಸಡಿಲಿಕೆ ಇದೆ.
- **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:** ಸೆಪ್ಟೆಂಬರ್ 16, 2021
- **ಹೆಚ್ಚಿನ ಮಾಹಿತಿಗೆ:**www.ecil.co.in

ಭಾರತೀಯ ಕ್ರೀಡಾ ಪ್ರಾಧಿಕಾರದಲ್ಲಿ ಹುದ್ದೆಗಳು

ಭಾರತೀಯ ಕ್ರೀಡಾ ಪ್ರಾಧಿಕಾರ (ಎಸ್‌ಎಐ) ತನ್ನಲ್ಲಿ ಖಾಲಿ ಇರುವ ಸಹಾಯಕ ಕೋಚ್ ಹುದ್ದೆಗಳ ಭರ್ತಿಗೆ ಅರ್ಜಿ ಆಹ್ವಾನಿಸಲಾಗಿದೆ. ಆಸ್ತಕರು ಅರ್ಜಿ ಸಲ್ಲಿಸಬಹುದು.

- **ಸಂಖ್ಯೆ:** 220
- **ವಿದ್ಯಾರ್ಹತೆ:** ಅರ್ಜಿ ಸಲ್ಲಿಸ ಬಯಸುವ ಅಭ್ಯರ್ಥಿಗಳು ಎಸ್‌ಎಐ, ಎನ್‌ಎಸ್ ಅಥವಾ ಎನ್‌ಐಎಸ್ ಸಂಸ್ಥೆ ಸೇರಿದಂತೆ ಇತರ ಭಾರತೀಯ ಅಂಗೀಕೃತ ಕ್ರೀಡಾ ಸಂಸ್ಥೆಗಳಿಂದ ಡಿಪ್ಲೊಮಾ ಅಥವಾ ತತ್ಸಮಾನ ತರಬೇತಿ ಪಡೆದಿರಬೇಕು.
- **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:** ಅಕ್ಟೋಬರ್ 10, 2021
- **ಹೆಚ್ಚಿನ ಮಾಹಿತಿಗೆ:** http://www.sportsauthorityofindia.nic.in/

ಕೃಪೆ: buddy4study.com





ಪೆಟ್ರೋಲ್, ಡೀಸೆಲ್ ಹಾಗೂ ಅಡುಗೆ ಅನಿಲ ಬೆಲೆ ಏರಿಕೆ ವಿರೋಧಿಸಿ ಪ್ರತಿಭಟನೆ

ಕಾಂಗ್ರೆಸ್ ಕಾರ್ಯಕರ್ತೆಯರಿಂದ ರಸ್ತೆಯಲ್ಲೇ ಅಡುಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೆಟ್ರೋಲ್, ಡೀಸೆಲ್ ಹಾಗೂ ಅಡುಗೆ ಅನಿಲ ಬೆಲೆ ಏರಿಕೆ ಖಂಡಿಸಿ ಕೆಪಿಸಿಸಿ ಮಹಿಳಾ ಘಟಕದ ಕಾರ್ಯಕರ್ತೆಯರು ಮೌರ್ಯ ವೃತ್ತದ ಬಳಿ ರಸ್ತೆಯಲ್ಲೇ ಅಡುಗೆ ಮಾಡಿ ಬುಧವಾರ ಪ್ರತಿಭಟನೆ ನಡೆಸಿದರು.

ಕೆಪಿಸಿಸಿ ಕಾರ್ಯಾಧ್ಯಕ್ಷರೂ ಆಗಿರುವ ಶಾಸಕ ರಾಮಲಿಂಗಾರೆಡ್ಡಿ, ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಪುಷ್ಪಾ ಅಮರನಾಥ್ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿದ ಮಹಿಳೆಯರು, ಬಳಿಕ ರಾಜಭವನ ಚಲೋ ನಡೆಸಲು ಮುಂದಾದರು. ಆದರೆ, ಪ್ರತಿಭಟನೆಕಾರರನ್ನು ರೇಸ್ ಕೋರ್ಸ್ ರಸ್ತೆ ಬಳಿ ಕಾಂಗ್ರೆಸ್ ಭವನದ ಮುಂಭಾಗದಲ್ಲಿ ಪೊಲೀಸರು ವಶಕ್ಕೆ ಪಡೆದು, ಬಿಡುಗಡೆ ಮಾಡಿದರು.

ಅದಕ್ಕೂ ಮೊದಲು ಮಾತನಾಡಿದ ಪುಷ್ಪಾ ಅಮರನಾಥ್, 'ಬೆಲೆ ಏರಿಕೆಯಿಂದ ಜನ ಸಾಯುತ್ತಿದ್ದಾರೆ. ಈ ಪರಿಸ್ಥಿತಿಯಲ್ಲಿ ರಾಷ್ಟ್ರಪತಿ ಮಧ್ಯಪ್ರವೇಶಿಸಬೇಕು' ಎಂದು ಆಗ್ರಹಿಸಿದರು. 'ನಮ್ಮ ಹೋರಾಟವನ್ನು ಪಂಚಾಯಿತಿ ಮಟ್ಟದವರೆಗೂ ಕೊಂಡೊಯ್ಯುತ್ತೇವೆ' ಎಂದೂ ಆಕ್ರೋಶ ವ್ಯಕ್ತಪಡಿಸಿದರು.

ರಾಮಲಿಂಗಾ ರೆಡ್ಡಿ, 'ಬಿಜೆಪಿ ಎಂದರೆ ಭ್ರಷ್ಟ ಜನರ ಪಕ್ಷ, ಬುರುಡೆ ಜನರ ಪಕ್ಷ. ಬಿಜೆಪಿ ತೊಲಗುವವರೆಗೂ ದೇಶಕ್ಕೆ ನೆಮ್ಮದಿ ಇಲ್ಲ. ಬಿಜೆಪಿಯವರು ಸಾರ್ವಜನಿಕ ಆಸ್ತಿಯನ್ನು ಅಡಮಾನ ಇಡುತ್ತಾರೆ, ಇಲ್ಲ ಖಾಸಗೀಕರಣ ಮಾಡುತ್ತಾರೆ ಅಥವಾ ಬೇರೆಯವರಿಗೆ ಮಾರುತ್ತಾರೆ' ಎಂದರು.

ಕೆ.ಜೆ. ಜಾರ್ಜ್, 'ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಎಲ್ಲವನ್ನು ಹಾಳು ಮಾಡಿ, ಮುಂದಿನ ಪೀಳಿಗೆಗೆ ದ್ರೋಹ ಬಗೆಯುತ್ತಿದೆ' ಎಂದರು.

ಕೃಷ್ಣ ಬೈರೇಗೌಡ, 'ಬೆಲೆ ಏರಿಕೆ ವಿರುದ್ಧ ಎರಡು ವರ್ಷಗಳಿಂದ ಪ್ರತಿಭಟನೆ ನಡೆಸುತ್ತಲೇ ಇದ್ದೇವೆ. ಆದರೂ, ಬಿಜೆಪಿ ಸರ್ಕಾರ ಜನರ ಮೇಲೆ ಬೆಲೆ ಏರಿಕೆ ಭಾರ ಹಾಕುತ್ತಲೇ ಇದೆ. ರಾಮ ರಾಜ್ಯ ಭಾರತದಲ್ಲಿ ₹ 105 ಇರುವ ಪೆಟ್ರೋಲ್, ರಾವಣ ರಾಜ್ಯ ಶ್ರೀಲಂಕಾದಲ್ಲಿ ₹ 75 ಕ್ಕೆ ಸಿಗುತ್ತಿದೆ. ನಮ್ಮಿಂದ ಖರೀದಿ ಮಾಡುವ ನೇಪಾಳ ಹಾಗೂ ಭೂತಾನ್ ರಾಷ್ಟ್ರಗಳಲ್ಲಿ ₹ 80ಕ್ಕೆ ಮಾರುತ್ತಿದ್ದಾರೆ. ನಮ್ಮಲ್ಲಿ ಬಡವರ ಮೇಲೆ ಗದಾಪ್ರಹಾರ ಮಾಡಿ ರಕ್ತ ಹೀರುತ್ತಿದ್ದಾರೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಶಾಸಕ ರಿಜ್ವಾನ್ ಹರ್ಷದ್, 'ಪ್ರಧಾನಿ ಮೋದಿ ಅಂಬಾನಿಯ ಏಜೆಂಟ್ ಆಗಿದ್ದಾರೆ. ಏಜೆಂಟ್ ಗಿರಿ ತಪ್ಪಿಸದಿದ್ದರೆ ದೇಶಕ್ಕೆ ಉಳಿಗಾಲವಿಲ್ಲ. ದೇಶದಲ್ಲಿ ಇರುವುದು ಪ್ರಧಾನಿಯಲ್ಲ, ಅಂಬಾನಿ, ಅದಾನಿಯವರ ಮ್ಯಾನೇಜರ್' ಎಂದರು.

ವಿಧಾನ ಪರಿಷತ್ ಸದಸ್ಯ ಯು.ಬಿ. ವೆಂಕಟೇಶ್, 'ದುಡ್ಡು ಹೊಡೆಯೋದಷ್ಟೆ ಬಿಜೆಪಿಯವರ ಕೆಲಸ. ರಾಜ್ಯ, ಕೇಂದ್ರದಲ್ಲಿ ಬಿಜೆಪಿ ಸರ್ಕಾರವನ್ನು ಕಿತ್ತೊಗೆಯಬೇಕು' ಎಂದರು.

ವಿಧಾನ ಪರಿಷತ್ ಸದಸ್ಯ ನಾರಾಯಣಸ್ವಾಮಿ, 'ಪೆಟ್ರೋಲ್, ಗ್ಯಾಸ್ ಬೆಲೆ ಏರಿಕೆಯಿಂದ ಜನಸಾಮಾನ್ಯರು ಸಂಕಷ್ಟಕ್ಕೊಳಗಾಗಿದ್ದಾರೆ. ಹೀಗಾಗಿ, ಕೇಂದ್ರ ಸರ್ಕಾರದ ವಿರುದ್ಧ ಹೋರಾಟ ಅನಿವಾರ್ಯ' ಎಂದರು.



ಪರಸ್ಪರ ಅಂತರ ಮಾಯ

ಬೆಂಗಳೂರಿನ ಮಲ್ಲೇಶ್ವರಂ 8ನೇ ಅಡ್ಡರಸ್ತೆಯಲ್ಲಿ ಬುಧವಾರ ಗೌರಿ ಗಣೇಶ ಹಬ್ಬದ ಪ್ರಯುಕ್ತ ಸಾರ್ವಜನಿಕರು ಪರಸ್ಪರ ಅಂತರ ಮರೆತು ಹಬ್ಬದ ಅಗತ್ಯವಸ್ತುಗಳನ್ನು ಖರೀದಿಸುತ್ತಿರುವ ದೃಶ್ಯ
ಪ್ರಜಾವಾಣಿ ಚಿತ್ರ/ ಎಂ.ಎಸ್.ಮಂಜುನಾಥ್

ಅ.1ರೊಳಗೆ 2 'ಎ' ಮೀಸಲಾತಿ ಘೋಷಿಸಿ

ಪ್ರಜಾವಾಣಿ ವಾರ್ತೆ

ಉಡುಪಿ: 'ರಾಜ್ಯ ಸರ್ಕಾರ ಅ.1ರೊಳಗೆ ಪಂಚಮಸಾಲಿ, ಗೌಡ ಲಿಂಗಾಯತ, ಮಲೆಗೌಡ, ದೀಕ್ಷಾ ಲಿಂಗಾಯತರನ್ನು 2 'ಎ' ಮೀಸಲಾತಿ ಪಟ್ಟಿಗೆ ಹಾಗೂ ಎಲ್ಲ ಲಿಂಗಾಯತ ಸಮಾಜಗಳನ್ನು ಹಿಂದುಳಿದ ವರ್ಗಗಳ ಪಟ್ಟಿಗೆ ಸೇರಿಸಬೇಕು. ಇಲ್ಲದಿದ್ದರೆ, ಮೀಸಲಾತಿ ಹೋರಾಟ ತೀವ್ರಗೊಳಿಸಲಾಗುವುದು' ಎಂದು ಕೂಡಲ ಸಂಗಮದ ಲಿಂಗಾಯತ ಪಂಚಮಸಾಲಿ ಪೀಠದ ಬಸವ ಜಯಮೃತ್ಯುಂಜಯ ಸ್ವಾಮೀಜಿ ಎಚ್ಚರಿಕೆ ನೀಡಿದರು.



ಬಸವ ಜಯ ಮೃತ್ಯುಂಜಯ ಸ್ವಾಮೀಜಿ

ಪ್ರತಿಜ್ಞಾ ಪಂಚಾಯತ್ ಬೃಹತ್ ರಾಜ್ಯ ಅಭಿಯಾನ ಅಂಗವಾಗಿ ಬುಧವಾರ ಉಡುಪಿಗೆ ಭೇಟಿ ನೀಡಿದ ಅವರು, ಮಾಧ್ಯಮ ಪ್ರತಿನಿಧಿಗಳ ಜತೆ ಮಾತನಾಡಿದರು.

'ಈ ಹಿಂದಿನ ಹೋರಾಟಕ್ಕೆ ಮಣಿದ ರಾಜ್ಯ ಸರ್ಕಾರವು, ಅಧಿವೇಶನದಲ್ಲಿ ಮೀಸಲಾತಿ ನೀಡುವ ಭರವಸೆ ನೀಡಿದ್ದು, 6 ತಿಂಗಳ ಕಾಲಾವಕಾಶ ಕೋರಿತ್ತು. ಸರ್ಕಾರ ತೆಗೆದುಕೊಂಡ ಕಾಲಾವಕಾಶ ಸೆ.15ಕ್ಕೆ ಮುಕ್ತಾಯವಾಗುತ್ತಿದ್ದು, ಇದುವರೆಗೂ ಬೇಡಿಕೆ ಈಡೇರಿಲ್ಲ. ಈ ಹಿನ್ನೆಲೆಯಲ್ಲಿ ಆ. 26ರಿಂದ ರಾಜ್ಯದಾದ್ಯಂತ ಪ್ರತಿಜ್ಞಾ ಪಂಚಾಯತ್ ಅಭಿಯಾನ ಆರಂಭಿಸಲಾಗಿದೆ' ಎಂದರು.

'ಸರ್ಕಾರ ವಿಳಂಬ ಮಾಡಿದರೆ, ಅ.1ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಜೆ.ಎಚ್. ಪಟೇಲ್ ಜಯಂತಿ ನಡೆಸಿ, ಮತ್ತೆ ಸತ್ಯಾಗ್ರಹ ಆರಂಭಿಸಲಾಗುವುದು' ಎಂದು ಸ್ವಾಮೀಜಿ ಹೇಳಿದರು.

ಸುದ್ದಿ 2 ನಿಮಿಷ

ಗಣೇಶ ಮೂರ್ತಿ ಎತ್ತರದ ನಿರ್ಬಂಧ ಹಿಂಪಡೆಯಲಿ: ಡಿಕೆಶಿ

ಬೆಂಗಳೂರು: 'ಗಣೇಶ ಹಬ್ಬಕ್ಕೆ ಕೇವಲ ಮೂರು ದಿನ ಬಾಕಿ ಇರುವಾಗ ಮನೆಯಲ್ಲಿ 2 ಅಡಿ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ 4 ಅಡಿ ಎತ್ತರದ ಗಣೇಶ ಮೂರ್ತಿ ಇಡಬೇಕೆಂಬ ನಿರ್ಬಂಧ ಹೇರುವ ಮೂಲಕ ಮೂರ್ತಿ ತಯಾರಕರ ಬದುಕಿನ ಜತೆ ಸರ್ಕಾರ ಚೆಲ್ಲಾಟವಾಡಿದೆ. ತಕ್ಷಣ ಈ ಆದೇಶ ಹಿಂಪಡೆಯಬೇಕು ಮತ್ತು ಮೂರ್ತಿ ತಯಾರಕರಿಗೆ ಪರಿಹಾರ ನೀಡಬೇಕು' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆಗ್ರಹಿಸಿದ್ದಾರೆ.

'ಕೋವಿಡ್ ಸಮಯದಲ್ಲಿ ಆದಾಯ ಇಲ್ಲದಿದ್ದ ಮೂರ್ತಿ ತಯಾರಕರು, ತಮ್ಮ ಬಳಿ ಇದ್ದ ಹಣದಿಂದ ಮೂರ್ತಿಗಳನ್ನು ತಯಾರಿಸಿದ್ದಾರೆ. ಸರ್ಕಾರ ಅವರಿಗೆ ಕೋವಿಡ್ ಪರಿಹಾರ ನೀಡಿಲ್ಲ. ಕೊನೆ ಕ್ಷಣದಲ್ಲಿ ಇಂಥ ನಿರ್ಬಂಧ ಹೇರಿದರೆ ಅವರ ಸ್ಥಿತಿ ಏನಾಗಬೇಕು' ಎಂದು ಪ್ರಶ್ನಿಸಿದ್ದಾರೆ.

'ಗಣೇಶೋತ್ಸವಕ್ಕೆ ಕಡಿವಾಣ ಹಾಕುವ ಭರದಲ್ಲಿ ಭಕ್ತ ಹಾಗೂ ಭಗವಂತನ ನಡುವೆ ಸರ್ಕಾರ ಕಂದಕ ನಿರ್ಮಿಸಿರುವುದು ದುರದೃಷ್ಟಕರ ಸಂಗತಿ. ಗಣೇಶ ಪ್ರತಿಮೆಯ ಎತ್ತರವನ್ನು ಸೀಮಿತಗೊಳಿಸಿ, ದೇವರಿಗೂ ನೀನು ಇಷ್ಟೇ ಎತ್ತರ ಇರಬೇಕು ಎಂದು ನಿಯಂತ್ರಣ ಹೇರುತ್ತಿದ್ದಾರೆ' ಎಂದು ಕುಟುಕಿದ್ದಾರೆ.

'ಸಾರ್ವಜನಿಕ ಸ್ಥಳಗಳಲ್ಲಿ ಹೆಚ್ಚು ಜನ ಸೇರಬಾರದು, ಮೆರವಣಿಗೆ ಮಾಡಬಾರದು ಎಂಬುದನ್ನು ಒಪ್ಪುತ್ತೇವೆ. ಆದರೆ, ಗಣೇಶನ ಪ್ರತಿಮೆ ಎತ್ತರ ಇಷ್ಟೇ ಇರಬೇಕೆಂಬ ನಿರ್ಬಂಧದ ಹಿಂದೆ ಯಾವ ತರ್ಕ ಇದೆ. ಹಿಂದೂ ಸಂಸ್ಕೃತಿಯ ವಕ್ತಾರರು ಎಂದು ಹೇಳಿಕೊಳ್ಳುವವರು ಮಾಡುವ ಕೆಲಸ ಇದೇನಾ' ಎಂದು ಪ್ರಶ್ನಿಸಿದ್ದಾರೆ.

'ಅಂತಿಮ ಗಳಿಗೆಯಲ್ಲಿ ಈ ನಿರ್ಧಾರ ತೆಗೆದುಕೊಂಡರೆ, ಈಗಾಗಲೇ ತಯಾರಿಸಿರುವ ಮೂರ್ತಿಗಳನ್ನು ನಿರ್ಧಾರ ತೆಗೆದುಕೊಂಡಿರುವವರ ಮನೆ ಮುಂದೆ ಇಡಬೇಕೇ? ನಿರ್ಧಾರ ಪ್ರಕಟಿಸಿರುವವರೇ ಇವುಗಳನ್ನು ಖರೀದಿಸಲಿ. ಸರ್ಕಾರದ ಈ ತಿಕ್ಕಲುತನದ ನಿರ್ಧಾರ, ಕುಂಬಾರನಿಗೆ ವರುಷ, ದೊಣ್ಣೆಗೆ ನಿಮಿಷ ಎಂಬಂತಿದೆ' ಎಂದೂ ಟೀಕಿಸಿದ್ದಾರೆ.



ಎಲ್ಲಿಯೂ ಹೋಗಬೇಡಿ ಎಂದು ಹೇಳಲಾಗದು: ಆರಗ ಜ್ಞಾನೇಂದ್ರ

ಧಾರವಾಡ: 'ರಾಜ್ಯದಲ್ಲಿ ಯಾರನ್ನು ಎಲ್ಲಿಯೂ ಹೋಗಬೇಡಿ ಎಂದು ಹೇಳಲು ಸಾಧ್ಯವಿಲ್ಲ. ಆದರೆ ಅವರೇ ಎಚ್ಚರಿಕೆ ವಹಿಸಬೇಕು' ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಅವರು ಮೈಸೂರು ಘಟನೆ ಕುರಿತು ಪ್ರತಿಕ್ರಿಯಿಸಿದರು.

ಇಲ್ಲಿನ ಬೇಲೂರು ಕೈಗಾರಿಕಾ ಪ್ರದೇಶದಲ್ಲಿ ಅಗ್ನಿಶಾಮಕ ಠಾಣೆಯನ್ನು ಬುಧವಾರ ಉದ್ಘಾಟಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು.

'ಅಪಾಯ ಸ್ಥಳದ ಕುರಿತು ಮಾಹಿತಿ ನೀಡಿದರೆ ಪೊಲೀಸರು ಗಸ್ತು ಹೆಚ್ಚಿಸುತ್ತಾರೆ. ಪೊಲೀಸ್ ಠಾಣೆಗೆ ಹೋಗುವ ಅಗತ್ಯವೂ ಇಲ್ಲ. ತೊಂದರೆ ಎದುರಾದರೆ 112ಕ್ಕೆ ಕರೆ ಮಾಡಬಹುದು' ಎಂದರು.

ಮುಖ್ಯಮಂತ್ರಿ ಪದೇ ಪದೇ ದೆಹಲಿಗೆ ಹೋಗುತ್ತಿರುವ ವಿಚಾರವಾಗಿ ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, 'ಕೆಲವು ಕಡತಗಳು ಮುಂದಕ್ಕೆ ಹೋಗದೆ ನಿಂತಲ್ಲೇ ನಿಂತಿರುತ್ತವೆ. ಅವುಗಳ ಕೆಲಸಕ್ಕೆ ಹೋಗುತ್ತಾರೆ ಅಷ್ಟೇ. ಇತ್ತೀಚೆಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಹುಬ್ಬಳ್ಳಿ ಭೇಟಿ ಸಂದರ್ಭದಲ್ಲಿ ಒಳ್ಳೆಯ ಹಾಗೂ ಸಭ್ಯ ಮುಖ್ಯಮಂತ್ರಿ ಎಂದು ಬೊಮ್ಮಾಯಿ ಅವರನ್ನು ಹೊಗಳಿದ್ದಾರೆ. ಅವರ ನೇತೃತ್ವದಲ್ಲಿ ರಾಜ್ಯದಲ್ಲಿ ಆಡಳಿತ ಉತ್ತಮವಾಗಿ ಸಾಗಿದೆ' ಎಂದರು.

ಕಲಾಪ ನಿಯಂತ್ರಣಕ್ಕೆ ನೀತಿ ನಿರೂಪಣಾ ಸಮಿತಿ: ಕಾಗೇರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆಯ ಕಲಾಪವನ್ನು ಸುಗಮವಾಗಿ ನಡೆಸುವುದಕ್ಕೆ ಪೂರಕವಾಗಿ ನೀತಿ ನಿರೂಪಣಾ ಸಮಿತಿಯನ್ನು ರಚಿಸಲಾಗುವುದು ಎಂದು ವಿಧಾನಸಭೆ ಅಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ತಿಳಿಸಿದರು.

ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ನೀತಿ ನಿರೂಪಣಾ ಸಮಿತಿ (ಎಥಿಕ್ಸ್ ಕಮಿಟಿ) ರಚನೆಗೆ ಸಂಬಂಧಿಸಿದಂತೆ ಸದನದ ನಿಯಮಾವಳಿ ಸಮಿತಿಯು ಚರ್ಚೆ ನಡೆಸಿದೆ. ಇದೇ 13ರಿಂದ ಆರಂಭವಾಗುವ ಅಧಿವೇಶನದಲ್ಲಿ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮಗಳಿಗೆ ಕೆಲವು ಸೆಕ್ಷನ್‌ಗಳನ್ನು ಸೇರಿಸಿದ ಬಳಿಕ ನೀತಿ ನಿರೂಪಣಾ ಸಮಿತಿಯನ್ನು ರಚಿಸಲಾಗುವುದು' ಎಂದರು.

'ಸೆಪ್ಟೆಂಬರ್ 13ರಿಂದ ಆರಂಭವಾಗುವ ಅಧಿವೇಶನದಲ್ಲಿ ವಿಧಾನಸಭೆಯ ಅಧ್ಯಕ್ಷರು ಸದನದಲ್ಲಿ ವರದಿಯೊಂದನ್ನು ಮಂಡಿಸಲಿದ್ದಾರೆ. ನೀತಿ ನಿರೂಪಣಾ ಸಮಿತಿಯ ಅಧಿಕಾರ ವ್ಯಾಪ್ತಿ, ಕಾರ್ಯವಿಧಾನಗಳ ಕುರಿತು ಈ ವರದಿ ಸ್ಪಷ್ಟಪಡಿಸಲಿದೆ. ಆ ಬಳಿಕ ಸಮಿತಿಯ ಸದಸ್ಯರನ್ನು ನೇಮಕ ಮಾಡಲಾಗುತ್ತದೆ' ಎಂದು ವಿಧಾನಸಭೆ ಸಚಿವಾಲಯದ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

> **ಲೋಕಸಭೆ ಸ್ಪೀಕರ್ ಭಾಷಣ**
>
> ಈ ಅಧಿವೇಶನದ ಕೊನೆಯ ಅರ್ಧ ದಿನ ಜಂಟಿ ಅಧಿವೇಶನ ನಡೆಯಲಿದ್ದು, ಶಾಸನಸಭೆಗಳಲ್ಲಿ ಗದ್ದಲ ನಿಯಂತ್ರಿಸುವ ಕುರಿತು ಚರ್ಚಿಸಲಾಗುವುದು. ಲೋಕಸಭೆಯ ಸ್ಪೀಕರ್ ಓಂ ಬಿರ್ಲಾ ಅವರು ಈ ಸಂದರ್ಭದಲ್ಲಿ ಜಂಟಿ ಸದನವನ್ನುದ್ದೇಶಿಸಿ ಮಾತನಾಡುವರು ಎಂದು ವಿಧಾನಸಭೆ ಅಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ತಿಳಿಸಿದರು.

ಅತ್ಯುತ್ತಮ ಶಾಸಕ ಪ್ರಶಸ್ತಿ: ವಿಧಾನ ಸಭೆಯ ಅಧಿವೇಶನದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವ ಮತ್ತು ರಚನಾತ್ಮಕ ರೀತಿಯಲ್ಲಿ ಚರ್ಚೆಯಲ್ಲಿ ಭಾಗವಹಿಸುವ ಶಾಸಕರೊಬ್ಬರಿಗೆ 'ಅತ್ಯುತ್ತಮ ಶಾಸಕ' ಪ್ರಶಸ್ತಿಯನ್ನು ಈ ಅಧಿವೇಶನದ ಅಂತ್ಯದಲ್ಲಿ ಪ್ರದಾನ ಮಾಡಲಾಗುವುದು ಎಂದು ಕಾಗೇರಿ ತಿಳಿಸಿದರು.

ಮುಖ್ಯಮಂತ್ರಿ, ವಿರೋಧ ಪಕ್ಷದ ನಾಯಕರು ಸೇರಿದಂತೆ ಹಲವು ಸದಸ್ಯರ ಸಮಿತಿಯೊಂದನ್ನು ರಚಿಸಲಾಗಿದೆ. ಈ ಸಮಿತಿಯು ರಾಜ್ಯಪಾಲರು ಸದನವನ್ನುದ್ದೇಶಿಸಿ ಮಾಡಿದ ಎರಡು ಭಾಷಣಗಳ ಮಧ್ಯದ ಅವಧಿಯ ಕಲಾಪವನ್ನು ಆಧರಿಸಿ ಅತ್ಯುತ್ತಮ ಶಾಸಕನನ್ನು ಆಯ್ಕೆ ಮಾಡಲಿದೆ ಎಂದರು.

ಕಲಾಪದ ಅವಧಿಯಲ್ಲಿ ಮುಖ್ಯಮಂತ್ರಿ ಮತ್ತು ಎಲ್ಲ ಸಚಿವರು ಹಾಜರಿರುವುದನ್ನು ಕಡ್ಡಾಯಗೊಳಿಸಲಾಗಿದೆ. ಅಧಿವೇಶನದ ಅವಧಿಯಲ್ಲಿ ಯಾವುದೇ ಇತರ ಕಾರ್ಯಕ್ರಮ ನಿಗದಿಪಡಿಸಿಕೊಳ್ಳಬಾರದು. ಸಚಿವರು ರಜೆ ಅರ್ಜಿಸಲ್ಲಿಸಬಾರದು.ನೆಪಹೇಳಿಕಲಾಪಕ್ಕೆ ಗೈರಾಗುವಂತಿಲ್ಲ ಎಂಬ ಸೂಚನೆ ನೀಡಲಾಗಿದೆ ಎಂದು ತಿಳಿಸಿದರು.

ಸಾರ್ವಜನಿಕರ ವೀಕ್ಷಣೆಗೆ ಅವಕಾಶ: ಕೋವಿಡ್ ಕಾರಣದಿಂದ ವಿಧಾನಸಭೆಯ ಕಲಾಪ ವೀಕ್ಷಣೆಗೆ ಸಾರ್ವಜನಿಕರು ಬರುವುದನ್ನು ನಿರ್ಬಂಧಿಸಲಾಗಿತ್ತು. ಈ ಬಾರಿ ಸಾರ್ವಜನಿಕರ ವೀಕ್ಷಣೆಗೆ ಅನುಮತಿ ನೀಡಲಾಗಿದೆ. ಆದರೆ ಶಾಲಾ ಮಕ್ಕಳಿಗೆ ಅವಕಾಶ ಇರುವುದಿಲ್ಲ ಎಂದು ಕಾಗೇರಿ ಹೇಳಿದರು.

ಇನ್‌ಸ್ಪೈರ್ ಸ್ಪರ್ಧೆ: ರಾಜ್ಯದ ಐವರಿಗೆ ಪ್ರಶಸ್ತಿ

ಬೆಂಗಳೂರು: ವಿದ್ಯಾರ್ಥಿಗಳಲ್ಲಿ ಆವಿಷ್ಕಾರ, ಸೃಜನಶೀಲತೆ ಹಾಗೂ ಸಂಶೋಧನಾ ಪ್ರವೃತ್ತಿ ಬೆಳೆಸಲು ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯಿಂದ ಆಯೋಜಿಸಲಾಗುವ ರಾಷ್ಟ್ರಮಟ್ಟದ ಇನ್‌ಸ್ಪೈರ್ ಸ್ಪರ್ಧೆಯಲ್ಲಿ ರಾಜ್ಯದ ಐವರು ವಿದ್ಯಾರ್ಥಿಗಳು ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಪ್ರಶಸ್ತಿಗೆ ಆಯ್ಕೆಯಾದ ದೇಶದ ವಿವಿಧ ರಾಜ್ಯಗಳ 60 ವಿದ್ಯಾರ್ಥಿಗಳ ಪೈಕಿ ಬೀದರ್ ಜಿಲ್ಲೆಯ ಭಾಲ್ಕಿ ತಾಲ್ಲೂಕಿನ ಭಾತಂಬ್ರ ಸರ್ಕಾರಿ ಪ್ರೌಢ ಶಾಲೆಯ 10ನೇ ತರಗತಿ ವಿದ್ಯಾರ್ಥಿ ಓವೈಸ್ ಅಹ್ಮದ್ ಎರಡನೇ ಸ್ಥಾನ ಪಡೆದಿದ್ದಾನೆ ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ತಿಳಿಸಿದ್ದಾರೆ. ಓವೈಸ್ ಅಹ್ಮದ್ ರೂಪಿಸಿದ್ದ 'ಸೇಫ್ಟಿ ಹಾರಿಝೋಂಟಲ್ ಸ್ಟ್ರೆಚರ್' ಪ್ರಾಜೆಕ್ಟ್ ಪ್ರಶಸ್ತಿ ಪಡೆದಿದೆ.

ಉಳಿದ ಪ್ರಶಸ್ತಿ ವಿಜೇತರು: ಹರಪನಹಳ್ಳಿ ತಾಲ್ಲೂಕು ಹಲುವಾಗಲು ಗ್ರಾಮದ ಜಿಎಂಎಚ್‌ಪಿಎಸ್ ಶಾಲೆಯ 6ನೇ ತರಗತಿ ವಿದ್ಯಾರ್ಥಿ ಕೆ. ಸಮರ್ಥ ರೂಪಿಸಿ 'ಗುಜರಿ ಕಬ್ಬಿಣದಿಂದ ಇಟ್ಟಿಗೆ ಎತ್ತುವ ಸಾಧನ' ಪ್ರಾಜೆಕ್ಟ್, ರಾಮನಗರ ಜಿಲ್ಲೆ ಕನಕಪುರ ತಾಲ್ಲೂಕು ಕಲ್ಲನಕುಪ್ಪೆಯ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ ದೇವೇಗೌಡ ರೂಪಿಸಿದ 'ಸುಧಾರಿತ ದನ ದೊಡ್ಡಿ' ಪ್ರಾಜೆಕ್ಟ್, ವಿಜಯಪುರ ಜಿಲ್ಲೆಯ ನಾದ (ಕೆಡಿ) ಸರ್ಕಾರಿ ಪ್ರೌಢ ಶಾಲೆ 10ನೇ ತರಗತಿ ವಿದ್ಯಾರ್ಥಿ ದೇವೀಂದ್ರ ಬಿ. ಬಿರಾದಾರ್ ಸಿದ್ಧಪಡಿಸಿದ್ದ 'ಬೆಳೆ ಕೊಯ್ಲು' ಸಾಧನ, ಬೆಂಗಳೂರಿನ ಜಾಲಹಳ್ಳಿಯ ಕೇಂದ್ರಿಯ ವಿದ್ಯಾಲಯದ 10ನೇ ತರಗತಿ ವಿದ್ಯಾರ್ಥಿ ಆಯುಷ್ ತಯಾರಿಸಿದ್ದ 'ರೋಡ್ ಗಲ್ಲೀಸ್' ಪ್ರಾಜೆಕ್ಟ್ ಪ್ರಶಸ್ತಿಗೆ ಪಾತ್ರವಾಗಿದೆ.

'ಆಕ್ಷೇಪಣೆ ಸಲ್ಲಿಸದಿದ್ದರೆ ನ್ಯಾಯಾಲಯಕ್ಕೆ ಹಾಜರಾಗಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ವಕ್ಫ್ ಆಸ್ತಿಗಳ ದುರುಪಯೋಗ ಮತ್ತು ಅತಿಕ್ರಮಣ ಕುರಿತು ತನಿಖೆ ನಡೆಸುವಂತೆ ಕೋರಿ ಸಲ್ಲಿಸಲಾಗಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಗೆ ಪ್ರತಿಕ್ರಿಯೆ ಸಲ್ಲಿಸದಿದ್ದರೆ ನ.12 ರಂದು ನ್ಯಾಯಾಲಯಕ್ಕೆ ಹಾಜರಾಗಬೇಕು ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗೆ ಹೈಕೋರ್ಟ್ ಸೂಚಿಸಿದೆ.



ಮಾಜಿ ಸಚಿವ ಎಸ್.ಕೆ. ಕಾಂತಾ ಅವರು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸಿದ ಹಂಗಾಮಿ ಮುಖ್ಯ ನ್ಯಾಯಮೂರ್ತಿ ಸತೀಶ್ ಚಂದ್ರ ಶರ್ಮಾ ನೇತೃತ್ವದ ವಿಭಾಗೀಯ ಪೀಠ, 'ಪ್ರತಿಕ್ರಿಯೆ ಸಲ್ಲಿಸಲು ಸಾಕಷ್ಟು ಸಮಯ ನೀಡಿದ್ದರೂ ಪಾಲಿಸಿಲ್ಲ' ಎಂದು ಅಸಮಾಧಾನ ವ್ಯಕ್ತಪಡಿಸಿತು.

'ಆಕ್ಷೇಪಣೆ ಸಲ್ಲಿಸಲು ಕೊನೆಯ ಅವಕಾಶ ನೀಡಿದ್ದರೂ ರಾಜ್ಯ ಸರ್ಕಾರ ಸಲ್ಲಿಸಿಲ್ಲ. ಆದ್ದರಿಂದ ಮುಂದಿನ ವಿಚಾರಣೆ ವೇಳೆ ಪ್ರಧಾನ ಕಾರ್ಯದರ್ಶಿಯೇ ಖುದ್ದು ಹಾಜರಾಗಬೇಕು ಎಂದು ತಿಳಿಸಲಾಗಿದೆ. ಈ ರೀತಿಯ ಆದೇಶದ ಹೊರತಾಗಿ ಬೇರೆ ಆಯ್ಕೆ ಕಾಣಿಸುತ್ತಿಲ್ಲ' ಎಂದು ಪೀಠ ಹೇಳಿದೆ.

ರಾಜ್ಯ ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷರಾಗಿದ್ದ ಅನ್ವರ್ ಮಾಣಿಪ್ಪಾಡಿ ಅವರು ಆಸ್ತಿ ಅತಿಕ್ರಮದ ಬಗ್ಗೆ 2012ರ ಮಾರ್ಚ್ 26ರಂದೇ ವರದಿ ಸಲ್ಲಿಸಿದ್ದಾರೆ. ಆ ವರದಿ ಆಧರಿಸಿ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಅರ್ಜಿದಾರರು ಆರೋಪಿಸಿದ್ದಾರೆ.

'ಉಪಲೋಕಾಯುಕ್ತರು ಕೂಡ ತನಿಖೆ ನಡೆಸಿ ಸರ್ಕಾರಕ್ಕೆ ವರದಿ ಸಲ್ಲಿಸಿದ್ದಾರೆ. ವಕ್ಫ್ ಆಸ್ತಿಗಳನ್ನು ಸಾಕಷ್ಟು ರಾಜಕಾರಣಿಗಳೇ ಕಬಳಿಸಿದ್ದಾರೆ ಎಂದು ವರದಿ ಉಲ್ಲೇಖಿಸಿದೆ' ಎಂದು ಅರ್ಜಿದಾರರು ತಿಳಿಸಿದ್ದಾರೆ.

ಕರಾವಳಿಯಲ್ಲಿ ಉತ್ತಮ ಮಳೆ

ಪ್ರಜಾವಾಣಿ ವಾರ್ತೆ

ಮಂಗಳೂರು: ಕರಾವಳಿ ಜಿಲ್ಲೆಗಳಲ್ಲಿ ಬುಧವಾರವೂ ಉತ್ತಮ ಮಳೆಯಾಗಿದೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಸಾಧಾರಣ ಮಳೆ ಸುರಿದಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಉಬರಡ್ಕ ಮಿತ್ತೂರಿನಲ್ಲಿ 12.5 ಸೆಂ.ಮೀ, ಸುಳ್ಯ ತಾಲ್ಲೂಕಿನಲ್ಲಿ 9.2 ಸೆಂ.ಮೀ , ಕಡಬ ತಾಲ್ಲೂಕಿನಲ್ಲಿ 6.4 ಸೆಂ.ಮೀ ಹಾಗೂ ಪುತ್ತೂರು ತಾಲ್ಲೂಕಿನಲ್ಲಿ 6.3 ಸೆಂ.ಮೀ ಮಳೆಯಾಗಿದೆ. ಜಿಲ್ಲೆಯಲ್ಲಿ ನಾಲ್ಕು ಮನೆಗಳಿಗೆ ಭಾಗಶಃ ಹಾನಿಯಾಗಿದೆ.

ಉಡುಪಿ ಜಿಲ್ಲೆಯ ನಡಾದಲ್ಲಿ 18.3 ಸೆಂ.ಮೀ, ಆಲೂರಿನಲ್ಲಿ 15.2 ಸೆಂ.ಮೀ ಮಳೆಯಾಗಿದೆ. ಕುಂದಾಪುರದ ಸಿದ್ದಾಪುರ, ಸೇನಾಪುರ ಹಾಗೂ ಉಡುಪಿ ತಾಲ್ಲೂಕಿನ ಪೆರ್ಣಂಕಿಲ ಗ್ರಾಮದಲ್ಲಿ ಗಾಳಿಮಳೆಗೆ ಮನೆಗೆ ಹಾನಿಯಾಗಿದೆ. ಚಿಕ್ಕಮಗಳೂರು ಜಿಲ್ಲೆಯ ಊರುಬಗೆಯಲ್ಲಿ 13.1 ಸೆಂ.ಮೀ ಮಳೆಯಾಗಿದೆ.

ಹುಬ್ಬಳ್ಳಿ ವರದಿ: ಧಾರವಾಡ ಜಿಲ್ಲೆಯ ವಿವಿಧೆಡೆ ಬುಧವಾರ ಉತ್ತಮ ಮಳೆ ಸುರಿಯಿತು. ಗಾಳಿ, ಮಳೆಯಿಂದಾಗಿ ಉತ್ತರ ಕನ್ನಡದ ಸಿದ್ದಾಪುರ ತಾಲ್ಲೂಕಿನಲ್ಲಿ ಕೆಲ ರೈತರ ಅಡಿಕೆ ತೋಟಕ್ಕೆ ಹಾನಿಯಾಗಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	116	11,225	10,809
ಹಾರಂಗಿ	2,859	2,858.37	4,166	4,766
ಕಬಿನಿ	2,284	2,280.33	5,140	700
ಹೇಮಾವತಿ	2,922	2,915.04	4,739	5,082
ಲಿಂಗನಮಕ್ಕಿ	1,819	1,813.50	15,037	-
ಸೂಪಾ (ಮೀ)	564	555.28	6,990	48
ಮಾಣಿ	594.36	586.64	2,307	-
ತುಂಗಭದ್ರಾ	1,633	1,632.86	10,340	10,042
ಮಲಪ್ರಭಾ	2,079.50	2,078.70	1,394	1,394
ಘಟಪ್ರಭಾ	2,175	2,175	1,727	1,727
ಭದ್ರಾ	186	185.40	4,052	3,751
ಆಲಮಟ್ಟಿ (ಮೀ)	519.60	519.60	8,176	8,176
ನಾರಾಯಣಪುರ (ಮೀ)	492.25	491.86	7,775	4,005

* ನೆಲಮಟ್ಟದಿಂದ

ವಿಜಯಪುರ ಜಿಲ್ಲೆ ತಾಳಿಕೋಟೆ ಪಟ್ಟಣದ ಬಳಿ ಹರಿಯುತ್ತಿರುವ ಡೋಣಿ ನದಿ ಪ್ರವಾಹ ಮುಂದುವರಿದಿದ್ದು, ಹಡಗಿನಾಳ ಗ್ರಾಮಕ್ಕೆ ಹೋಗುವ ಮಾರ್ಗದ ನೆಲಮಟ್ಟದ ಸೇತುವೆ ಬುಧವಾರವೂ ಜಲಾವೃತವಾಗಿತ್ತು. ಇದರಿಂದ ಈ ಭಾಗದ ಹಲವೆಡೆ ವಾಹನ ಸಂಚಾರ ಬಂದ್ ಆಗಿದೆ.

ನವೆಂಬರ್ 1ಕ್ಕೆ 'ನಶೆಯೆಂದರೆ' ಎಂಬ ವಿಡಿಯೊ ಹಾಡು, ಪುಸ್ತಕ ಬಿಡುಗಡೆ: ಪ್ರಶಾಂತ್ ಸಂಬರಗಿ

ಡ್ರಗ್ಸ್ 'ಶುಗರ್ ಡ್ಯಾಡಿ', 'ಮಾಸ್ಟರ್ ಮೈಂಡ್' ಶೀಘ್ರ ಬಹಿರಂಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಡ್ರಗ್ಸ್ ಪ್ರಕರಣದ ಮಾಸ್ಟರ್ ಮೈಂಡ್ ಶೀಘ್ರ ಹೊರಬರುತ್ತಾರೆ. ಪ್ರಕರಣ ಸರಿಯಾಗಿ ತನಿಖೆ ನಡೆದರೆ ನಿರೂಪಕಿ ಅನುಶ್ರೀ ಅವರು ಜೈಲು ಪಾಲಾಗಲಿದ್ದಾರೆ' ಎಂದು ಸಾಮಾಜಿಕ ಕಾರ್ಯಕರ್ತ ಪ್ರಶಾಂತ್ ಸಂಬರಗಿ ಹೇಳಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಡ್ರಗ್ ಪ್ರಕರಣ ಸಂಬಂಧಿಸಿ ಪ್ರಕರಣಗಳನ್ನು ಮತ್ತೆ ತೆರೆದು ತನಿಖೆಗೆ ಒಳಪಡಿಸಬೇಕು. ಈ ಪ್ರಕರಣದ ಹಿಂದಿರುವ ಮಾಸ್ಟರ್ ಮೈಂಡ್ ಸಿನಿಮಾ ನಿರ್ಮಾಪಕ, ವಿತರಕ, ರಾಜಕಾರಣಿಯೂ ಆಗಿದ್ದಾರೆ' ಎಂದರು.

'ಡ್ರಗ್ಸ್ ಪ್ರಕರಣದಲ್ಲಿ ಮಂಗಳೂರಿನಲ್ಲಿ ಅಖಿಲ್ ನೌಶೀಲ್, ಕಿಶೋರ್ ಅಮನ್ ಶೆಟ್ಟಿ, ಮಹಮದ್ ಶಕೀಲ್, ಫ್ರಾಂಕ್ ಸಂಡೇ ಇಬಚು, ಶಮೀನ್ ಫರ್ನಾಂಡೀಸ್, ಶಾಮ್ ನವಾಜ್, ಇಷ್ಟು ಜನರ ಹೆಸರು ಪೊಲೀಸರ ಆರೋಪಪಟ್ಟಿಯಲ್ಲಿದೆ. ಆದರೆ, ತರುಣ್ ಹೆಸರಿಲ್ಲ. ಈತನ ಬಗ್ಗೆಯೂ ತನಿಖೆ ಆಗಬೇಕು' ಎಂದರು.

'ನಟರೂ ಡ್ರಗ್ಸ್ ತೆಗೆದುಕೊಂಡಿದ್ದಾರೆ. ಅವರು, ಪಾರ್ಟಿಯಲ್ಲಿ ಮೋಜಿಗಾಗಿ ಮಾಡಿದ್ದಾರೆ. ಆದರೆ, ಮಾರಾಟ ಮಾಡಿಲ್ಲ. ತೆಗೆದುಕೊಂಡಿರುವುದೂ ತಪ್ಪೇ. ಆದರೆ, ನಟಿಯರು ಅದನ್ನು ಮಾರಾಟ ಮಾಡಿ ದುಡ್ಡಿನಾಸೆಗೆ ಬಿದ್ದು ಸಿಕ್ಕಿಹಾಕಿಕೊಂಡಿದ್ದಾರೆ' ಎಂದು ಸಂಬರಗಿ ಹೇಳಿದರು.



ಪ್ರಶಾಂತ್ ಸಂಬರಗಿ

ನವೆಂಬರ್ 1ರಂದು 'ನಶೆಯೆಂದರೆ' ಎಂಬ ವಿಡಿಯೊ ಹಾಡು ಮತ್ತು 'ಶುಗರ್ ಡ್ಯಾಡಿ' ಪುಸ್ತಕ ಬಿಡುಗಡೆ ನಡೆಯಲಿದೆ. ಆ ಕಾರ್ಯಕ್ರಮದಲ್ಲಿ ಡ್ರಗ್ಸ್ ಜಾಲಕ್ಕೆ ಒಳಗಾಗಿ ತೊಂದರೆಗೊಳಗಾದವರು, ಆ ಜಾಲದಿಂದ ಮುಕ್ತರಾದವರೂ ಇರಲಿದ್ದಾರೆ' ಎಂದು ಹೇಳಿದರು

'ರಾಜ್ಯದಲ್ಲಿ ಡ್ರಗ್ಸ್ ಸಂಬಂಧಿಸಿ ಸಿಸಿಬಿ ಪೊಲೀಸರು 3,300 ಪ್ರಕರಣಗಳನ್ನು ದಾಖಲಿಸಿದ್ದಾರೆ. 2020 ಮತ್ತು 2021ರಲ್ಲಿ ಇದರಲ್ಲಿ ಏರಿಕೆ ಆಗಿದೆ. ಮಕ್ಕಳು, ಯುವಕರಿಂದ ಅಪರಾಧ ನಡೆದಿವೆ. ಅಂಥವರ ವಿರುದ್ಧ ಪೋಷಕರೇ ಖುದ್ದಾಗಿ ದೂರು ನೀಡಿರುವುದು ನಡೆದಿದೆ' ಎಂದು ಹೇಳಿದರು.

'ಡ್ರಗ್ಸ್ ಸಂಬಂಧಿಸಿ ಯಾವ ಘಟನೆಗಳು ಸಾಕ್ಷಿಗಳಿಲ್ಲದೇ ಬಚಾವಾಗಿವೆ ಎಂಬುದನ್ನು ಬರೆದಿದ್ದೇನೆ. ಫಾರ್ಮ್‌ಹೌಸ್ ಕಥೆಯಿಂದ ಹಿಡಿದು, ಅಪ್ಪನನ್ನು ಅಪಹರಿಸಿದ ಪ್ರಕರಣದವರೆಗೂ 'ಶುಗರ್ ಡ್ಯಾಡಿ'ಯಲ್ಲಿ ಬರೆದಿದ್ದೇನೆ.

'ಶುಗರ್ ಡ್ಯಾಡಿ' ಯಾರು ಎಂಬುದನ್ನೂ ಪುಸ್ತಕದಲ್ಲಿ ಬರೆದಿದ್ದೇನೆ ಎಂದರು. ಶುಗರ್‌ಡ್ಯಾಡಿಯಲ್ಲಿ ಇದುವರೆಗೆ ಕಾಣದ ಅನೇಕ ಉಪಕಥೆಗಳು, ನಟರ ಕಥೆಗಳೂ ಇವೆ' ಎಂದರು.

ಶುಗರ್ ಡ್ಯಾಡಿ ವ್ಯಾಖ್ಯಾನ: 'ಚಿಕ್ಕ ವಯಸ್ಸಿನ ಯುವತಿ ತನ್ನ ತಂದೆಯ ವಯಸ್ಸಿನ ವ್ಯಕ್ತಿಯನ್ನು ಬಾಯ್‌ಫ್ರೆಂಡ್ ಆಗಿ ಇಟ್ಟುಕೊಂಡಿರುವುದೇ ಶುಗರ್ ಡ್ಯಾಡಿ ಎಂದು ಸಂಬರಗಿ ಹೇಳಿದರು.

'ಶುಗರ್ ಡ್ಯಾಡಿ'ಯು ಅನುಶ್ರೀ ಹೆಸರನ್ನು ಕೈಬಿಡಲು ಪ್ರಭಾವ ಬೀರಿರಬಹುದಾ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಸಂಬರಗಿ, 'ಮೇಲ್ನೋಟಕ್ಕೆ ಇದು ಸ್ಪಷ್ಟವಾಗಿದೆ. ಕಳೆದವರ್ಷ ಸೆ. 20ರಂದು ಹಿಂದಿನ ಮುಖ್ಯಮಂತ್ರಿಯ ಕರೆ ಬಂದದ್ದನ್ನು ಹೇಳಿದ್ದೆ. ಆದರೆ, ಆ ಕರೆಯಲ್ಲಿ ಈ ಪ್ರಕರಣವನ್ನು ಬೆಂಗಳೂರಿಗಷ್ಟೇ ಫೋಕಸ್ ಮಾಡಿ, ಮಂಗಳೂರಿನತ್ತ ಕೇಂದ್ರೀಕರಿಸುವುದು ಬೇಡ ಎಂಬ ಧಾಟಿಯಲ್ಲಿ ಹೇಳಿದ್ದಾರೆ. ಆ ದೂರವಾಣಿ ಕರೆಯ 28 ಸೆಕೆಂಡ್‌ಗಳ ಆಡಿಯೋವನ್ನೂ ಶೀಘ್ರ ಬಿಡುಗಡೆ ಮಾಡುತ್ತೇನೆ' ಎಂದು ಹೇಳಿದರು.

'ಡ್ರಗ್ಸ್ ಪ್ರಕರಣದಲ್ಲಿ ಮಂಗಳೂರಿನಲ್ಲಿ ಅಖಿಲ್ ನೌಶೀಲ್, ಕಿಶೋರ್ ಅಮನ್ ಶೆಟ್ಟಿ, ಮಹಮದ್ ಶಖೀಲ್, ಫ್ರಾಂಕ್ ಸಂಡೇ ಇಬಚು, ಶಮೀನ್ ಫರ್ನಾಂಡೀಸ್, ಶಾಮ್ ನವಾಜ್ ಹೆಸರುಗಳು ಪೊಲೀಸರ ಆರೋಪಪಟ್ಟಿಯಲ್ಲಿವೆ. ತರುಣ್ ಹೆಸರನ್ನು ಕೈಬಿಟ್ಟರೆ ಅನುಶ್ರೀ ಅವರನ್ನು ಬಚಾವ್ ಮಾಡಬಹುದು ಎಂಬುದು ಇಲ್ಲಿನ ಲೆಕ್ಕಾಚಾರ. ಇಲ್ಲಿ ನಿವೃತ್ತ ಐಪಿಎಸ್ ಅಧಿಕಾರಿಯೊಬ್ಬರ ಮಧ್ಯಸ್ಥಿಕೆ ಕೆಲಸ ಮಾಡಿದೆ ಎಂದು ಆರೋಪಿಸಿದರು.

ಎಲ್ಲರನ್ನೇಕೆ ಪರೀಕ್ಷಿಸಿಲ್ಲ: ಇಂದ್ರಜಿತ್ ಪ್ರಶ್ನೆ

ಬೆಂಗಳೂರು: 'ಡ್ರಗ್ಸ್ ಕೇಸಿನ ಆರೋಪಪಟ್ಟಿಯಲ್ಲಿ ಹೆಸರಿರುವ ಎಲ್ಲರ ಪರೀಕ್ಷೆ ಏಕೆ ಮಾಡಿಸಿಲ್ಲ' ಎಂದು ಪತ್ರಕರ್ತ ಇಂದ್ರಜಿತ್ ಲಂಕೇಶ್ ಪ್ರಶ್ನಿಸಿದ್ದಾರೆ.



ಇಂದ್ರಜಿತ್ ಲಂಕೇಶ್

ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಈ ಪ್ರಕರಣಕ್ಕೆ ರಾಜಕೀಯ, ಚಿತ್ರರಂಗ, ಸಾಮಾಜಿಕ ಸೇರಿದಂತೆ ಹಲವಾರು ಆಯಾಮಗಳಿವೆ. ಆದ್ದರಿಂದಲೇ ಇದು ನಮ್ಮ ರಾಜ್ಯದ ಇತಿಹಾಸದಲ್ಲೇ ಇದು ಅತ್ಯಂತ ದೊಡ್ಡ ಹಗರಣ. ಸಿಸಿಬಿಗೆ ಹೇಳಿಕೆ ನೀಡಿದವರು ಕೂಡ ಮತ್ತೆ ಡ್ರಗ್ಸ್ ಪಾರ್ಟಿಗಳಲ್ಲಿ ಭಾಗಿಯಾಗುತ್ತಿದ್ದಾರೆ. ಕಾನೂನಾತ್ಮಕವಾಗಿ ಡ್ರಗ್ಸ್ ಪೆಡ್ಲರ್ಗೆ ಶಿಕ್ಷೆ ಜಾಸ್ತಿ ಇದೆ. ಆದರೆ ಡ್ರಗ್ಸ್ ಸೇವನೆ ಮಾಡಿದವರಿಗೆ ಕಡಿಮೆ ಪ್ರಮಾಣದ ಶಿಕ್ಷೆ ಇದೆ. ಡ್ರಗ್ಸ್ ಸೇವನೆ ಮಾಡಿದವರನ್ನು ಪುನರ್ವಸತಿಗೆ ಒಳಪಡಿಸಬೇಕು' ಎಂದು ಒತ್ತಾಯಿಸಿದರು.

'ನಿರೂಪಕಿ ಅನುಶ್ರೀ ಅವರ ಹೆಸರನ್ನು ಚಾರ್ಜ್‌ಶೀಟ್‌ನಲ್ಲಿ ಉಲ್ಲೇಖಿಸಲಾಗಿದ್ದರೂ ಅವರನ್ನೇಕೆ ಪರೀಕ್ಷೆಗೆ ಒಳಪಡಿಸಿಲ್ಲ. ಪ್ರಕರಣದ ಆರೋಪಿ ಕಿಶೋರ್ ಶೆಟ್ಟಿ ಕೂಡಾ ಅನುಶ್ರೀ ಹೆಸರನ್ನು ಉಲ್ಲೇಖಿಸಿದ್ದರೂ ಏಕೆ ವಿಚಾರಣೆ ಮುಂದುವರಿಯಲಿಲ್ಲ? ಸಿಸಿಬಿ ಪೊಲೀಸರಿಗೆ ನನ್ನ ಬಳಿ ಇದ್ದ ಎಲ್ಲ ಮಾಹಿತಿ ನೀಡಿದ್ದೆ. ಮೂತ್ರ, ರಕ್ತದ ಮಾದರಿ ಪರೀಕ್ಷೆ ಸಾಕಾಗುವುದಿಲ್ಲ, ಕೂದಲ ಮಾದರಿಯನ್ನೂ ಪರೀಕ್ಷಿಸಬೇಕು ಎಂದು ಹೇಳಿದ್ದೆ. ಆದರೆ ಕೆಲವರಿಗೆ ಬೆಣ್ಣೆ, ಕೆಲವರಿಗೆ ಸುಣ್ಣ ಎಂಬಂತೆ ಪರೀಕ್ಷೆ ಮಾಡಿದ್ದಾರೆ. ಸಿಸಿಬಿಯವರಿಗೆ ರಾಜಕೀಯ ಒತ್ತಡವಿತ್ತೇ?' ಎಂದು ಅವರು ಪ್ರಶ್ನಿಸಿದರು.

ಪ್ರಕರಣದ ವಿಚಾರಣೆ ವಿಳಂಬ ಆಗಿರುವುದಕ್ಕೆ ಇಂದ್ರಜಿತ್ ಬೇಸರ ವ್ಯಕ್ತಪಡಿಸಿದ್ದಾರೆ. 'ಕಿಶೋರ್ ಶೆಟ್ಟಿ ಹೇಳಿಕೆ ಕೊಟ್ಟ ತಕ್ಷಣ ತನಿಖೆ ಮಾಡಬೇಕಾಗಿತ್ತು. ಆದರೆ ಮಾಡಿಲ್ಲ. ಆದ್ದರಿಂದಲೇ ನ್ಯಾಯಾಲಯದಲ್ಲಿ ಪ್ರಕರಣಗಳು ಬಿದ್ದು ಹೋಗುತ್ತಿವೆ. ಗೌರಿ ಹತ್ಯೆ ಆಗಿ 4 ವರ್ಷಗಳು ಕಳೆದಿವೆ. ಆದರೆ ಇನ್ನೂ ನ್ಯಾಯಾಲಯದಲ್ಲಿ ವಿಚಾರಣೆ ನಡೆದಿಲ್ಲ.. ಇದನ್ನೆಲ್ಲ ನೋಡಿದಾಗ ವ್ಯವಸ್ಥೆ ಬಗ್ಗೆ ಬೇಸರವಾಗುತ್ತದೆ' ಎಂದಿದ್ದಾರೆ.

ವಿಶ್ವ ಸಂಸ್ಥೆಯ ಭದ್ರತಾ ಮಂಡಳಿಯು ನಿಷೇಧ ಹೇರಿದ 14 ಉಗ್ರರಿಗೆ ಸಚಿವ ಸ್ಥಾನ

ಅಫ್ಗಾನಿಸ್ತಾನಕ್ಕೆ ‘ಉಗ್ರರ ಸರ್ಕಾರ’

ಕಾಬೂಲ್/ಪೆಶಾವರ (ಎಎಫ್‌ಪಿ/ಪಿಟಿಐ/ರಾಯಿಟರ್ಸ್): ತಾಲಿಬಾನ್ ಘೋಷಿಸಿರುವ ನೂತನ ಹಂಗಾಮಿ ಸರ್ಕಾರದ ಸಚಿವ ಸಂಪುಟದಲ್ಲಿ, ವಿಶ್ವ ಸಂಸ್ಥೆಯ ಭದ್ರತಾ ಮಂಡಳಿಯ ನಿಷೇಧಿತ ಪಟ್ಟಿಯಲ್ಲಿರುವ 14 ಉಗ್ರರು ಇದ್ದಾರೆ. ಉಗ್ರರನ್ನು ಒಳಗೊಂಡಿರುವ ಸರ್ಕಾರವನ್ನು ರಚಿಸಿರುವ ತಾಲಿಬಾನ್‌ನ ಈ ಕ್ರಮವನ್ನು ಹಲವು ದೇಶಗಳು ಖಂಡಿಸಿವೆ.

ಅಫ್ಗಾನಿಸ್ತಾನದ ತಾಲಿಬಾನ್ ನಿಯೋಜಿತ ಪ್ರಧಾನಿ ಮುಲ್ಲಾ ಮಹಮ್ಮದ್ ಹಸನ್ ಅಖುಂದ್, ಇಬ್ಬರು ಉಪ ಪ್ರಧಾನಿಗಳಾದ ಮುಲ್ಲಾ ಅಬ್ದುಲ್ ಘನಿ ಬರದರ್ ಮತ್ತು ಮೌಲ್ವಿ ಅಬ್ದುಲ್ ಸಲಾಂ ಹನಫಿ ಭದ್ರತಾ ಮಂಡಳಿಯ ಕಪ್ಪು ಪಟ್ಟಿಯಲ್ಲಿದ್ದಾರೆ.

ಸಿರಾಜುದ್ದೀನ್ ಹಖ್ಖಾನಿ, ಖಲೀಲ್ ಹಖ್ಖಾನಿ ಭದ್ರತಾ ಮಂಡಳಿಯ ಉಗ್ರರ ಕಪ್ಪು ಪಟ್ಟಿಯಲ್ಲಿದ್ದಾರೆ. ಸಿರಾಜುದ್ದೀನ್ ಹಖ್ಖಾನಿಯನ್ನು ಹಿಡಿದುಕೊಟ್ಟವರಿಗೆ ಭದ್ರತಾ ಮಂಡಳಿಯು 1 ಕೋಟಿ ಅಮೆರಿಕನ್ ಡಾಲರ್ (ಸುಮಾರು ₹73 ಕೋಟಿ) ಬಹುಮಾನ ಘೋಷಿಸಿದೆ. ಸಿರಾಜುದ್ದೀನ್ ಹಖ್ಖಾನಿಗೆ ಹಂಗಾಮಿ ಸರ್ಕಾರದಲ್ಲಿ ಗೃಹ ಖಾತೆಯ ಹೊಣೆ ನೀಡಲಾಗಿದೆ. ಆತನ ಚಿಕ್ಕಪ್ಪ ಖಲೀಲ್ ಹಖ್ಖಾನಿಗೆ ನಿರಾಶ್ರಿತರ ವ್ಯವಹಾರಗಳ ಖಾತೆ ನೀಡಲಾಗಿದೆ.

ರಕ್ಷಣಾ ಸಚಿವ ಮುಲ್ಲಾ ಯಾಕೂಬ್, ವಿದೇಶಾಂಗ ಸಚಿವ ಮುಲ್ಲಾ ಅಮೀರ್ ಖಾನ್ ಮುತ್ತಾಕಿ ಮತ್ತು ಉಪ ವಿದೇಶಾಂಗ ಸಚಿವ ಶೇರ್ ಒಹಮ್ಮದ್ ಅಬ್ಬಾಸ್ ಸ್ಟಾನಿಕ್ಜೈ ಮೂವರನ್ನೂ ಭದ್ರತಾ ಮಂಡಳಿಯ 1988ರ ದಿಗ್ಬಂಧನ ಪಟ್ಟಿಯಲ್ಲಿ ಹೆಸರಿಸಲಾಗಿದೆ.

1998ರಲ್ಲಿ ಅಫ್ಗಾನಿಸ್ತಾನದ ಸಾಂಸ್ಕೃತಿಕ ಅಲ್ಪಸಂಖ್ಯಾತ ಬುಡಕಟ್ಟುಗಳಾದ ಶಿಯಾ ಹಜಾರಾ, ತಾಜಿಕ್ ಮತ್ತು ಉಜ್ಬೆಕ್ ಸಮುದಾಯಗಳ ಹತ್ಯಾಕಾಂಡ ನಡೆಸಿದ ಆರೋಪದಲ್ಲಿ ಬಂಧಿಸಲಾಗಿದ್ದ ತಾಲಿಬಾನ್‌ನ ಐವರು ನಾಯಕರೂ ಈಗ 33 ಸಚಿವರ ಸಂಪುಟದಲ್ಲಿ ಸ್ಥಾನ ಪಡೆದಿದ್ದಾರೆ. ಈ ಹತ್ಯಾಕಾಂಡ ನಡೆಸಿದವರನ್ನು ಅಮೆರಿಕವು ಬಂಧಿಸಿ ಗ್ವಾಂಟಾನಾಮೋ ಬೇ ಕಾರಾಗೃಹದಲ್ಲಿ ಇರಿಸಿತ್ತು. ಈ ಐವರನ್ನು ‘ತಾಲಿಬಾನ್ ಫೈವ್’ ಎಂದೇ ಗುರುತಿಸಲಾಗುತ್ತದೆ. ಐವರಲ್ಲಿ ನಾಲ್ವರು ಈಗ ಹಂಗಾಮಿ ಸಚಿವರ ಸ್ಥಾನ ಪಡೆದಿದ್ದಾರೆ.

ಮುಲ್ಲಾ ಮೊಹಮ್ಮದ್ ಫಾಜಿಲ್ ಉಪ ರಕ್ಷಣಾ ಸಚಿವ, ಖಾಯಿರುಲ್ಲಾ ಖಾಯಿರ್‌ಖ್ವಾ ಮಾಹಿತಿ ಮತ್ತು ಸಂಸ್ಕೃತಿ ಸಚಿವ, ಮುಲ್ಲಾ ನೂರುಲ್ಲಾ ನೂರಿ ಗಡಿ ಮತ್ತು ಬುಡಕಟ್ಟು ಸಚಿವ ಮತ್ತು ಮುಲ್ಲಾ ಅಬ್ದುಲ್ ಹಕ್ ವಾಸಿಕ್ ಗುಪ್ತಚರ ಇಲಾಖೆ ನಿರ್ದೇಶಕನ ಹುದ್ದೆ ಪಡೆದಿದ್ದಾರೆ. ತಾಲಿಬಾನ್ ಫೈವ್‌ನ ಕೊನೆಯ ಸದಸ್ಯ ಮೊಹಮ್ಮದ್ ನಬಿ ಒಮಾರಿಗೆ ಖೋಸ್ಟ್ ಪ್ರಾಂತ್ಯದ ಗವರ್ನರ್ ಹುದ್ದೆ ನೀಡಲಾಗಿದೆ. ಈ ಐವರನ್ನೂ ಬರಾಕ್ ಒಬಾಮ ಅವರ ಸರ್ಕಾರ ಬಿಡುಗಡೆ ಮಾಡಿತ್ತು.



ಕಾಬೂಲ್ ಬೀದಿಯೊಂದರಲ್ಲಿ ಅಫ್ಗಾನಿಸ್ತಾನದ ಅಧಿಕೃತ ಬಾವುಟ ಮತ್ತು ತಾಲಿಬಾನ್ ಬಾವುಟವನ್ನು ಮಾರಾಟ ಮಾಡುತ್ತಿದ್ದ ವ್ಯಾಪಾರಿ–ಎಎಫ್‌ಪಿ ಚಿತ್ರ

> **ಸರ್ಕಾರಗಳಿಗೆ ಮಾನ್ಯತೆ ನೀಡುವ ಕೆಲಸವನ್ನು ವಿಶ್ವಸಂಸ್ಥೆ ಮಾಡುವುದಿಲ್ಲ. ಅದೇನಿದ್ದರೂ ವಿಶ್ವ ಸಂಸ್ಥೆಯ ಸದಸ್ಯ ರಾಷ್ಟ್ರಗಳ ವಿವೇಚನೆಗೆ ಮತ್ತು ಜವಾಬ್ದಾರಿಗೆ ಬಿಟ್ಟ ವಿಚಾರ**
> **ಫರಾನ್ ಹಕ್,** ವಿಶ್ವಸಂಸ್ಥೆ ಪ್ರಧಾನ ಕಾರ್ಯದರ್ಶಿಯ ವಕ್ತಾರ

> **ಸುಸ್ಥಿರತೆ ಮತ್ತು ಶಾಂತಿ ಅಫ್ಗಾನಿಸ್ತಾನದ ತಕ್ಷಣದ ಅಗತ್ಯವಾಗಿದೆ. ಆದರೆ ವಿದೇಶಿ ಹಸ್ತಕ್ಷೇಪ ಮತ್ತು ಜನರ ಮೇಲೆ ಶಸ್ತ್ರ ಪ್ರಯೋಗ ಕಳವಳಕಾರಿ ಬೆಳವಣಿಗೆ**
> **ಅಲಿ ಶಮ್ಖಾನಿ,** ಇರಾನ್ ರಾಷ್ಟ್ರೀಯ ಭದ್ರತಾ ಸಲಹೆಗಾರ

> **ತಾಲಿಬಾನ್ ಸರ್ಕಾರದಲ್ಲಿ ಸಚಿವರಾಗಿರುವವರು ಉಗ್ರರ ಪಟ್ಟಿಯಲ್ಲಿ ಇರುವುದನ್ನು ನಾವು ಗಂಭೀರವಾಗಿ ಪರಿಗಣಿಸಿದ್ದೇವೆ. ಇದು ಕಳವಳಕಾರಿ ಬೆಳವಣಿಗೆ**
> **ಅಮೆರಿಕದ ವಿದೇಶಾಂಗ ಸಚಿವಾಲಯ**

ಪಾಕಿಸ್ತಾನದ ಪ್ರಭಾವ

ತಾಲಿಬಾನ್‌ನ ಸರ್ಕಾರದಲ್ಲಿ ಪಾಕಿಸ್ತಾನದ ಪ್ರಭಾವವಿದೆ ಎಂದು ಅಫ್ಗನ್ನರು ಆರೋಪಿಸಿದ್ದಾರೆ. ಪಾಕಿಸ್ತಾನದ ಗುಪ್ತಚರ ಸಂಸ್ಥೆ ಐಎಸ್‌ಐ ಜತೆಗೆ ಸಖ್ಯ ಹೊಂದಿರುವ ಹಖ್ಖಾನಿ ಉಗ್ರ ಸಂಘಟನೆಯ ಪ್ರಮುಖ ನಾಯಕರಿಗೆ ತಾಲಿಬಾನ್‌ನ ಹಂಗಾಮಿ ಸರ್ಕಾರದಲ್ಲಿ ಪ್ರಭಾವಿ ಖಾತೆಗಳನ್ನು ನೀಡಲಾಗಿದೆ.

ಸಿರಾಜುದ್ದೀನ್ ಹಖ್ಖಾನಿಗೆ ಗೃಹ ಖಾತೆ ಮತ್ತು ಆತನ ಚಿಕ್ಕಪ್ಪ ಖಲೀಲ್ ಹಖ್ಖಾನಿಗೆ ನಿರಾಶ್ರಿತರ ವ್ಯವಹಾರಗಳ ಖಾತೆ ನೀಡಲಾಗಿದೆ. ಈ ಇಬ್ಬರೂ ಪಾಕಿಸ್ತಾನದ ವಾಯವ್ಯ ಭಾಗದಲ್ಲಿರುವ ನೌಷೇರಾದಲ್ಲಿರುವ ದಾರುಲ್ ಉಲೂಮಾ ಹಖ್ಖಾನಿಯಾ ಮದರಸಾದಲ್ಲಿ ವ್ಯಾಸಂಗ ಮಾಡಿದ್ದಾರೆ. ಇದನ್ನು ತಾಲಿಬಾನ್ ವಿಶ್ವವಿದ್ಯಾಲಯ ಮತ್ತು ಜಿಹಾದ್ ವಿಶ್ವವಿದ್ಯಾಲಯ ಎಂದೂ ಕರೆಯಲಾಗುತ್ತದೆ.

ತಾಲಿಬಾನ್ ಹಂಗಾಮಿ ಸರ್ಕಾರದಲ್ಲಿ ಜಲಸಂಪನ್ಮೂಲ ಮತ್ತು ಇಂಧನ ಸಚಿವರಾಗಿರುವ ಮುಲ್ಲಾ ಅಬ್ದುಲ್ ಲತೀಫ್ ಮನ್ಸೂರ್, ದೂರಸಂಪರ್ಕ ಖಾತೆ ಪಡೆದಿರುವ ನಜೀಬ್ ಉಲ್ಲಾ ಹಖ್ಖಾನಿ ಮತ್ತು ಶಿಕ್ಷಣ ಸಚಿವ ಮೌಲಾನಾ ಅಬ್ದುಲ್ ಬಾಖಿ ಹಖ್ಖಾನಿ ದಾರೂಲ್ ಉಲೂಮಾ ಹಖ್ಖಾನಿಯಾ ಮದರಸಾದಲ್ಲಿ ಶಿಕ್ಷಣ ಪಡೆದವರು.

ಈ ಮದರಸಾಗೆ ಪಾಕಿಸ್ತಾನ ಪ್ರಧಾನಿ ಇಮ್ರಾನ್ ಖಾನ್ ನೇತೃತ್ವದ ಸರ್ಕಾರ ₹ 30 ಕೋಟಿ ರೂ ಅನುದಾನ ನೀಡಿತ್ತು.

ಎಲ್ಲರನ್ನೂ ಒಳಗೊಳ್ಳದ ಸರ್ಕಾರ

ಎಲ್ಲರನ್ನೂ ಒಳಗೊಳ್ಳುವ ಸರ್ಕಾರವನ್ನು ರಚಿಸುತ್ತೇವೆ ಎಂದು ತಾಲಿಬಾನ್ ಹೇಳಿತ್ತು. ಆದರೆ ತನ್ನ ಮಾತಿಗೆ ವಿರುದ್ಧವಾಗಿ ನಡೆದುಕೊಂಡಿದೆ ಎಂದು ಅಫ್ಗನ್ನರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ತಾಲಿಬಾನ್ ವಿರೋಧಿ ಶಿಯಾ ಹಜಾರಾ ಸಮುದಾಯದ ಜನರ ಹತ್ಯಾಕಾಂಡವನ್ನು ತಾಲಿಬಾನ್ ನಡೆಸಿತ್ತು. ಈಗ ನೂತನ ಸರ್ಕಾರದಲ್ಲಿ ಈ ಸಮುದಾಯದ ಪ್ರಾತಿನಿಧ್ಯವೇ ಇಲ್ಲ. ನೂತನ ಹಂಗಾಮಿ ಸರ್ಕಾರದಲ್ಲಿ ಒಬ್ಬ ಮಹಿಳಾ ಸಚಿವರೂ ಇಲ್ಲ. ಎಲ್ಲರನ್ನೂ ಒಳಗೊಳ್ಳುವ ಸರ್ಕಾರ ರಚಿಸುತ್ತೇನೆ ಎಂದಿದ್ದ ಸರ್ಕಾರವು ಈ ಮೂಲಕ ತನ್ನ ಮಾತನ್ನು ಮುರಿದಿದೆ.

ಅಫ್ಗನ್ ವಿದ್ಯಮಾನ: ಭಾರತ–ರಷ್ಯಾ ಚರ್ಚೆ



ದೆಹಲಿಗೆ ಬುಧವಾರ ಬಂದ ರಷ್ಯಾದ ಭದ್ರತಾ ಮಂಡಳಿ ಕಾರ್ಯದರ್ಶಿ ನಿಕೋಲಯ್ ಪತ್ರುಶೆವ್ ಅವರನ್ನು ಭಾರತದ ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ಡೊಭಾಲ್ ಅವರು ಸ್ವಾಗತಿಸಿದರು– ಪಿಟಿಐ ಚಿತ್ರ

ನವದೆಹಲಿ (ರಾಯಿಟರ್ಸ್): ಅಫ್ಗಾನಿಸ್ತಾನದಿಂದ ಕಾರ್ಯಾಚರಣೆ ನಡೆಸುತ್ತಿರುವ ವಿದೇಶಿ ಭಯೋತ್ಪಾದಕ ಪಡೆಗಳು ಮಧ್ಯ ಏಷ್ಯಾ ಮತ್ತು ಭಾರತಕ್ಕೆ ಗಂಭೀರ ಬೆದರಿಕೆ ಒಡ್ಡಲಿವೆ ಎಂದು ಭಾರತ ಮತ್ತು ರಷ್ಯಾ ಆತಂಕ ವ್ಯಕ್ತಪಡಿಸಿವೆ. ಜೊತೆಗೆ, ಭಯೋತ್ಪಾದಕ ವಿರೋಧಿ ಸಹಕಾರವನ್ನು ಇನ್ನಷ್ಟು ಬಲಪಡಿಸುವುದಾಗಿ ನಿರ್ಣಯ ತೆಗೆದುಕೊಂಡಿವೆ.

ಭಾರತದ ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ಡೊಭಾಲ್ ಮತ್ತು ರಷ್ಯಾದ ಭದ್ರತಾ ಮಂಡಳಿ ಕಾರ್ಯದರ್ಶಿ ನಿಕೋಲಯ್ ಪತ್ರುಶೆವ್ ಬುಧವಾರ ದೆಹಲಿಯಲ್ಲಿ ನಡೆಸಿದ ಸಭೆಯಲ್ಲಿ ಈ ನಿರ್ಣಯ ತೆಗೆದುಕೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಫ್ಗಾನಿಸ್ತಾನದ ಬೆಳವಣಿಗೆಗಳ ಕುರಿತು ಭಾರತ ಮತ್ತು ರಷ್ಯಾ ತೀವ್ರ ಆತಂಕ ವ್ಯಕ್ತಪಡಿಸಿವೆ. ಮೂಲಭೂತ ಹಕ್ಕುಗಳು ಮತ್ತು ಮಹಿಳೆಯರ ಹಕ್ಕುಗಳಿಗೆ ಗೌರವ ನೀಡುವುದಾಗಿ ಹಾಗೂ ಭಯೋತ್ಪಾದಕ ಪಡೆಗಳು ಅಫ್ಗನ್ ನೆಲವನ್ನು ತಮ್ಮ ಅನುಕೂಲಕ್ಕಾಗಿ ಬಳಸಿಕೊಳ್ಳಲು ಅವಕಾಶ ನೀಡುವುದಿಲ್ಲ ಎಂದು ತಾಲಿಬಾನ್ ಭರವಸೆ ನೀಡಿತ್ತು. ಅಫ್ಗನ್ನರಿಗೆ ತಾಲಿಬಾನ್ ನೀಡಿರುವ ಭರವಸೆಗಳನ್ನು ಈಡೇರಿಸುವಂತೆ ಮಾಡಬೇಕು ಎಂದು ಉಭಯ ದೇಶಗಳು ಒತ್ತಾಯಿಸಿವೆ.

ಪಾಕಿಸ್ತಾನದಿಂದ ಕಾರ್ಯಾಚರಣೆ ಮಾಡುವ ಉಗ್ರ ಸಂಘಟನೆಗಳು ಭಾರತದ ಮೇಲೆ ದಾಳಿ ನಡೆಸಲು ಅಫ್ಗನ್ ನೆಲವನ್ನು ಬಳಸಿಕೊಳ್ಳಬಹುದು ಎಂದು ಭಾರತ ಹೇಳಿದೆ. ಇಂಥ ಘಟನೆಗಳು ನಡೆದರೆ ತಾಲಿಬಾನ್ ಜೊತೆಗೆ ನಿಕಟ ಸಂಪರ್ಕ ಹೊಂದಿರುವ ಕಾರಣಕ್ಕೆ ಪಾಕಿಸ್ತಾನವನ್ನು ಇದಕ್ಕೆ ಜವಾಬ್ದಾರ ಆಗಿಸಬೇಕು ಎಂದು ಭಾರತ ಹೇಳಿದೆ. ಈ ಚರ್ಚೆಯ ಜೊತೆಗೆ, ಭಯೋತ್ಪಾದನೆ ನಿಗ್ರಹ, ಅಕ್ರಮ ವಲಸಿಗರ ನಿಗ್ರಹ, ಮಾದಕದ್ರವ್ಯ ಕಳ್ಳಸಾಗಾಣೆ ನಿಗ್ರಹದಂಥ ಕ್ಷೇತ್ರಗಳಲ್ಲಿ ದ್ವಿಪಕ್ಷೀಯ ಸಹಕಾರವನ್ನು ಬಲಪಡಿಸುವ ಕುರಿತು ಪತ್ರುಶೆವ್ ಮತ್ತು ಡೊಭಾಲ್ ಚರ್ಚೆ ನಡೆಸಿದರು ಎಂದು ರಷ್ಯಾದ ಭದ್ರತಾ ಮಂಡಳಿ ಪ್ರಕಟಿಸಿದೆ.

ಸಂಕ್ಷಿಪ್ತ ಸುದ್ದಿ

ಸಿಎಎ ರದ್ದತಿಗೆ ತಮಿಳುನಾಡು ನಿರ್ಣಯ

ಚೆನ್ನೈ (ಪಿಟಿಐ): ಏಕತೆ ಮತ್ತು ಕೋಮು ಸೌಹಾರ್ದತೆಯನ್ನು ರಕ್ಷಿಸಲು ಹಾಗೂ ಸಂವಿಧಾನದಲ್ಲಿ ನೀಡಲಾಗಿರುವ ಜಾತ್ಯತೀತ ತತ್ವಗಳನ್ನು ಎತ್ತಿಹಿಡಿಯಲು ಪೌರತ್ವ (ತಿದ್ದುಪಡಿ) ಕಾಯ್ದೆ–2019 ರದ್ದುಗೊಳಿಸುವಂತೆ ಒತ್ತಾಯಿಸುವ ನಿರ್ಣಯವನ್ನು ತಮಿಳುನಾಡು ವಿಧಾನಸಭೆಯು ಬುಧವಾರ ಅಂಗೀಕರಿಸಿದೆ.

ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರು ಸಿಎಎ ವಿರುದ್ಧ ನಿರ್ಣಯವನ್ನು ಮಂಡಿಸಿದರು.

ಡ್ರಗ್ಸ್: ನಟ ರಾಣಾ ದಗ್ಗುಬಾಟಿ ಇ.ಡಿ ವಿಚಾರಣೆ

ಹೈದರಾಬಾದ್ (ಪಿಟಿಐ): ಮಾದಕ ವಸ್ತುಗಳ ಜಾಲದ ಪ್ರಕರಣದಲ್ಲಿನ ಹಣ ಅಕ್ರಮ ವರ್ಗಾವಣೆಗೆ ಸಂಬಂಧಿಸಿದಂತೆ ತೆಲುಗು ನಟ ರಾಣಾ ದಗ್ಗುಬಾಟಿ ಅವರು ಬುಧವಾರ ಜಾರಿ ನಿರ್ದೇಶನಾಲಯದ (ಇ.ಡಿ) ಎದುರು ವಿಚಾರಣೆಗೆ ಹಾಜರಾದರು.

ನಿರ್ದೇಶಕರು ಸೇರಿದಂತೆ ತೆಲುಗು ಚಿತ್ರರಂಗದ 10 ಮಂದಿಗೆ ಇ.ಡಿ ಸಮನ್ಸ್ ಜಾರಿ ಮಾಡಿದೆ. ಆಗಸ್ಟ್ 31ರಂದು ನಿರ್ದೇಶಕ ಪುರಿ ಜಗನ್ನಾಥ್, ನಟಿಯರಾದ ಚಾರ್ಮಿ ಕೌರ್, ರಕುಲ್ ಪ್ರೀತ್ ಸಿಂಗ್, ನಟ ನಂದು ಅವರು ಇ.ಡಿ ಮುಂದೆ ವಿಚಾರಣೆಗೆ ಹಾಜರಾಗಿದ್ದರು.

ರಾಯಗಡದಲ್ಲಿ ಭಾರಿ ಮಳೆ: ಎನ್‌ಡಿಆರ್‌ಎಫ್ ತಂಡ ನಿಯೋಜನೆ

ಅಲಿಬಾಗ್ (ಪಿಟಿಐ): ಮಹಾರಾಷ್ಟ್ರದ ಕರಾವಳಿ ಪ್ರದೇಶದಲ್ಲಿ ಕಳೆದ 24 ಗಂಟೆಗಳಿಂದ ಭಾರಿ ಮಳೆಯಾಗುತ್ತಿದ್ದು, ರಾಯಗಡ ಜಿಲ್ಲೆಯಲ್ಲಿ ರೆಡ್ ಅಲರ್ಟ್ ಘೋಷಿಸಲಾಗಿದೆ. ತುರ್ತು ನೆರವಿಗೆ ಎನ್‌ಡಿಆರ್‌ಎಫ್ ತಂಡಗಳನ್ನು ನಿಯೋಜಿಸಲಾಗಿದೆ ಎಂದು ಅಧಿಕಾರಿಯೊಬ್ಬರು ಬುಧವಾರ ತಿಳಿಸಿದ್ದಾರೆ.

ಜಿಲ್ಲೆಯ ಬಹುತೇಕ ಭಾಗಗಳಲ್ಲಿ ಭಾರಿ ಮಳೆಯಾಗಿದೆ. ಸರಾಸರಿ ವಾರ್ಷಿಕ ಮಳೆಯ ಶೇ 98.89 ರಷ್ಟು ಮಳೆ ಈಗಾಗಲೇ ಸುರಿದಿದೆ. ಮುರುದ್‌ನಲ್ಲಿ ಕಳೆದ 24 ಗಂಟೆಗಳಲ್ಲಿ 124 ಮಿ.ಮೀ, ಶ್ರೀವರ್ಧನದಲ್ಲಿ 122 ಮಿ.ಮೀ ಹಾಗೂ ಪನ್ವೇಲ್‌ನಲ್ಲಿ 72.60 ಮಿ.ಮೀ ಮಳೆಯಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಉತ್ತರಾಖಂಡ ರಾಜ್ಯಪಾಲೆ ರಾಜೀನಾಮೆ

ಡೆಹ್ರಾಡೂನ್ (ಪಿಟಿಐ): ಉತ್ತರಾಖಂಡ ರಾಜ್ಯಪಾಲೆ ಬೇಬಿ ರಾಣಿ ಮೌರ್ಯ ಅವರು ಬುಧವಾರ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

‘ಬೇಬಿ ರಾಣಿ ಮೌರ್ಯ ಅವರು ತಮ್ಮ ರಾಜೀನಾಮೆ ಪತ್ರವನ್ನು ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರಿಗೆ ಸಲ್ಲಿಸಿದ್ದಾರೆ. ವೈಯಕ್ತಿಕ ಕಾರಣಗಳಿಂದಾಗಿ ಅವರು ಈ ನಿರ್ಧಾರ ಕೈಗೊಂಡಿದ್ದಾರೆ’ ಎಂದು ರಾಜಭವನದ ಅಧಿಕಾರಿಯೊಬ್ಬರು ಹೇಳಿದರು.

ಅಧಿಕಾರ ಅವಧಿ ಪೂರ್ಣಗೊಳ್ಳುವ ಎರಡು ವರ್ಷ ಮೊದಲೇ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

2018, ಆಗಸ್ಟ್ 6ರಂದು ಬೇಬಿ ರಾಣಿ ಅವರು ಉತ್ತರಾಖಂಡ ರಾಜ್ಯಪಾಲೆಯಾಗಿ ಅಧಿಕಾರ ಸ್ವೀಕರಿಸಿದ್ದರು.

ಅಸ್ಸಾಂನಲ್ಲಿ ದೋಣಿ ದುರಂತ ಒಬ್ಬರು ಸಾವು, 33 ಮಂದಿ ನಾಪತ್ತೆ

ಜೊರ್ಹಾಟ್/ಗುವಾಹಟಿ (ಪಿಟಿಐ): ಬ್ರಹ್ಮಪುತ್ರ ನದಿಯಲ್ಲಿ ಪ್ರಯಾಣಿಕ ದೋಣಿಯೊಂದು ಬುಧವಾರ ಮುಳುಗಿದ್ದು, ಒಬ್ಬರು ಮೃತಪಟ್ಟಿದ್ದು, 33 ಮಂದಿ ನಾಪತ್ತೆಯಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಸ್ಸಾಂ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ (ಎಎಸ್‌ಡಿಎಂಎ) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಜ್ಞಾನೇಂದ್ರ ತ್ರಿಪಾಠಿ ಅವರು, ‘ನೀರಿನಲ್ಲಿ ಮುಳುಗಿದ್ದ ಮಹಿಳೆಯನ್ನು ರಕ್ಷಿಸಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೆ ಅವರು ಮೃತಪಟ್ಟಿದ್ದಾರೆ. ಎನ್‌ಡಿಆರ್‌ಎಫ್ ಹಾಗೂ ಎಸ್‌ಡಿಆರ್‌ಎಫ್ ಸಿಬ್ಬಂದಿ ರಕ್ಷಣಾ ಕಾರ್ಯಾಚರಣೆ ನಡೆಸಿದ್ದಾರೆ. ಸೇನೆಯ ಸಹಾಯ ಸಹ ಪಡೆಯಲಾಗಿದೆ’ ಎಂದು ತಿಳಿಸಿದ್ದಾರೆ.

41 ಜನರನ್ನು ರಕ್ಷಿಸಲಾಗಿದ್ದು, ಇನ್ನುಳಿದವರಿಗಾಗಿ ಶೋಧ ನಡೆದಿದೆ. ಮೃತದೇಹಗಳ ಹುಡುಕಾಟ ನಡೆದಿದೆ ಎಂದು ಜೊರ್ಹಾಟ್ ಜಿಲ್ಲಾಧಿಕಾರಿ ಅಶೋಕ ಬರ್ಮನ್ ತಿಳಿಸಿದ್ದಾರೆ.

120ಕ್ಕೂ ಹೆಚ್ಚು ಪ್ರಯಾಣಿಕರಿದ್ದ ದೋಣಿಯು ನಿಮತಿ ಘಾಟ್‌ನಿಂದ ಮಾಜುಲಿ ದ್ವೀಪದತ್ತ ತೆರಳುತ್ತಿತ್ತು. ಸರ್ಕಾರದ ಒಡೆತನದ ಸ್ಟೀಮ್ ದೋಣಿಯು ಮಾಜುಲಿಯಿಂದ ವಾಪಸ್ಸಾಗುತ್ತಿತ್ತು. ಇವೆರಡೂ ಪರಸ್ಪರ ಡಿಕ್ಕಿಯಾಗಿದ್ದರಿಂದ, ಪ್ರಯಾಣಿಕರ ದೋಣಿ ಮುಳುಗಿದೆ.

ದೋಣಿಯಲ್ಲಿ ವಾಹನಗಳನ್ನೂ ಸಾಗಿಸಲಾಗುತ್ತಿತ್ತು ಎನ್ನಲಾಗಿದೆ.

ಘಟನೆ ಬಗ್ಗೆ ಆಘಾತ ವ್ಯಕ್ತಪಡಿಸಿರುವ ಮುಖ್ಯಮಂತ್ರಿ ಹಿಮಂತ್ ಬಿಸ್ವ ಶರ್ಮಾ, ರಕ್ಷಣಾ ಕಾರ್ಯದ ಬಗ್ಗೆ ನಿಗಾ ವಹಿಸುವಂತೆ ಮಾಜುಲಿ ಹಾಗೂ ಜೋರ್ಹಾಟ್ ಜಿಲ್ಲಾ ಆಡಳಿತಕ್ಕೆ ಸೂಚಿಸಿದ್ದಾರೆ.

ಮೂವರು ಅಮಾನತು: ಕರ್ತವ್ಯ ನಿರ್ಲಕ್ಷ್ಯದ ಆರೋಪದ ಮೇಲೆ ಒಳನಾಡು ಜಲ ಸಾರಿಗೆ ಇಲಾಖೆಯ ಮೂವರು ಅಧಿಕಾರಿಗಳನ್ನು ಅಮಾನತುಗೊಳಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.



ದೋಣಿ ದುರಂತದ ಸ್ಥಳದಲ್ಲಿ ರಕ್ಷಣಾ ಕಾರ್ಯಾಚರಣೆ ಭರದಿಂದ ಸಾಗಿದೆ –ಪಿಟಿಐ ಚಿತ್ರ

ಅಫ್ಗನ್‌ಗೆ ಚೀನಾ ನೆರವು ಘೋಷಣೆ

ಬೀಜಿಂಗ್ (ಪಿಟಿಐ): ಅಫ್ಗಾನಿಸ್ತಾನಕ್ಕೆ 3.1 ಕೋಟಿ ಡಾಲರ್ (ಸುಮಾರು ₹220 ಕೋಟಿ) ನೆರವು ನೀಡುವುದಾಗಿ ಚೀನಾ ಘೋಷಿಸಿದೆ. ಅಫ್ಗಾನಿಸ್ತಾನದ ಹಂಗಾಮಿ ಸರ್ಕಾರಕ್ಕೆ ಈ ಮೂಲಕ ಪರೋಕ್ಷ ಮಾನ್ಯತೆ ನೀಡಿದಂತಾಗಿದೆ. ಆ ದೇಶದಲ್ಲಿ ಸುವ್ಯವಸ್ಥೆ ಮರುಸ್ಥಾಪನೆ ಮತ್ತು ಅರಾಜಕತೆ ಕೊನೆಗೊಳಿಸಲು ಇದು ಅನಿವಾರ್ಯ ಎಂದು ಚೀನಾ ಹೇಳಿದೆ.

ಅಫ್ಗಾನಿಸ್ತಾನದ ನೆರೆಯ ದೇಶಗಳ ವಿದೇಶಾಂಗ ಸಚಿವರ ಸಭೆಯಲ್ಲಿ ಚೀನಾದ ವಿದೇಶಾಂಗ ಸಚಿವ ವಾಂಗ್ ಯಿ ಭಾಗವಹಿಸಿ, ನೆರವು ಪ್ರಕಟಿಸಿದರು. 3.1 ಕೋಟಿ ಡಾಲರ್ ಮೊತ್ತದ ಧಾನ್ಯಗಳು, ಔಷಧ, ಲಸಿಕೆ ಇತ್ಯಾದಿ ಒದಗಿಸಲಾಗುವುದು ಎಂದು ಅವರು ತಿಳಿಸಿದ್ದಾರೆ.

ಪಾಕಿಸ್ತಾನವು ಈ ಸಭೆಯನ್ನು ಸಂಘಟಿಸಿತ್ತು. ಇರಾನ್, ತಾಜಿಕಿಸ್ತಾನ, ತುರ್ಕಮೆನಿಸ್ತಾನ ಮತ್ತು ಉಜ್ಬೇಕಿಸ್ತಾನದ ವಿದೇಶಾಂಗ ಸಚಿವರು ಸಭೆಯಲ್ಲಿ ಇದ್ದರು. ರಷ್ಯಾವು ಈ ಸಭೆಯಲ್ಲಿ ಭಾಗವಹಿಸಿಲ್ಲ ಎಂಬುದು ಕುತೂಹಲಕ್ಕೆ ಕಾರಣವಾಗಿದೆ.

ತಾಲಿಬಾನ್: ರಾಯಭಾರಿಗಳ ತಿರಸ್ಕಾರ

ಪ್ರಜಾವಾಣಿ ವಾರ್ತೆ

ನವದೆಹಲಿ: ನವದೆಹಲಿಯಿಂದ ನ್ಯೂಯಾರ್ಕ್‌ವರೆಗೆ ವಿವಿಧ ದೇಶಗಳ ರಾಜಧಾನಿಗಳಲ್ಲಿ ಇರುವ ಅಫ್ಗಾನಿಸ್ತಾನದ ರಾಯಭಾರ ಕಚೇರಿಯ ರಾಜತಾಂತ್ರಿಕರು ತಾಲಿಬಾನ್ ನೇತೃತ್ವದ ಸರ್ಕಾರವನ್ನು ಸ್ವೀಕರಿಸಲು ನಿರಾಕರಿಸಿದ್ದಾರೆ.

ನವದೆಹಲಿಯ ಚಾಣಕ್ಯಪುರಿಯಲ್ಲಿರುವ ಅಫ್ಗಾನಿಸ್ತಾನ ರಾಯಭಾರ ಕಚೇರಿಯಲ್ಲಿ ಇಸ್ಲಾಮಿಕ್ ರಿಪಬ್ಲಿಕ್ ಆಫ್ ಅಫ್ಗಾನಿಸ್ತಾನದ ತ್ರಿವರ್ಣ (ಕೆಂಪು–ಹಸಿರು–ಕಪ್ಪು) ಧ್ವಜವೇ ಬುಧವಾರವೂ ಹಾರಾಡುತ್ತಿತ್ತು.

ನ್ಯೂಯಾರ್ಕ್‌ನಲ್ಲಿರುವ ವಿಶ್ವಸಂಸ್ಥೆ ಕಚೇರಿಯ ರಾಯಭಾರಿ, ವಾಷಿಂಗ್ಟನ್ ಮತ್ತು ಇತರ ದೇಶಗಳ ರಾಯಭಾರಿಗಳು ಕೂಡ ತಾಲಿಬಾನ್ ಸರ್ಕಾರವನ್ನು ಒಪ್ಪಿಕೊಂಡಿಲ್ಲ. ‘ತಾಲಿಬಾನ್ ನೇತೃತ್ವದ ಸರ್ಕಾರವನ್ನು ತಿರಸ್ಕರಿಸಿ’ ಎಂದು ವಿಶ್ವಸಂಸ್ಥೆಯಲ್ಲಿರುವ ಅಫ್ಗಾನಿಸ್ತಾನದ ರಾಯಭಾರಿ ಗುಲಾಂ ಇಸಕ್‌ಝೈ ಹೇಳಿದ್ದಾರೆ.

‘ಮನೆಗೆ ತೆರಳಿ ಲಸಿಕೆ ಹಾಕಿಸಲು ಸೂಚಿಸಲ್ಲ’

ನವದೆಹಲಿ (ಪಿಟಿಐ): ದೇಶದಲ್ಲಿ ‘ಕೋವಿಡ್–19ರ ಲಸಿಕೆ ನೀಡಿಕೆಯ ಸ್ಥಿತಿ–ಗತಿ ಗಮನಿಸಿದರೆ, ಮನೆ ಮನೆಗೆ ತೆರಳಿ ಕೋವಿಡ್ ಲಸಿಕೆ ನೀಡುವುದು ಕಾರ್ಯಸಾಧುವಲ್ಲ ಎಂದಿರುವ ಸುಪ್ರೀಂಕೋರ್ಟ್, ಈಗ ಚಾಲ್ತಿಯಲ್ಲಿರುವ ಲಸಿಕೆ ನೀತಿಯನ್ನು ರದ್ದುಗೊಳಿಸುವಂತೆ ನಿರ್ದೇಶನ ನೀಡಲೂ ಸಾಧ್ಯವಿಲ್ಲ ಎಂದು ಬುಧವಾರ ಹೇಳಿದೆ.

ಅಂಗವಿಕಲರು ಮತ್ತು ಸಮಾಜದಲ್ಲಿರುವ ದುರ್ಬಲ ವರ್ಗದವರ ಮನೆಗೆ ತೆರಳಿ ಕೋವಿಡ್ ಲಸಿಕೆ ನೀಡಲು ನಿರ್ದೇಶನ ನೀಡುವಂತೆ ಕೋರಿ ಯುವ ವಕೀಲರ ಸಂಘ ಸಲ್ಲಿಸಿದ್ದ ಮನವಿಯನ್ನು ತಿರಸ್ಕರಿಸಿದ ಸುಪ್ರೀಂ ಕೋರ್ಟ್, ‘ಪ್ರಸ್ತುತ ದೇಶದಾದ್ಯಂತ ಲಸಿಕೆ ನೀಡಿಕೆ ಪ್ರಗತಿಯಲ್ಲಿದ್ದು, ಶೇ 60ಕ್ಕಿಂತ ಹೆಚ್ಚು ಮಂದಿಗೆ ಲಸಿಕೆಯ ಮೊದಲ ಡೋಸ್ ನೀಡಲಾಗಿದೆ‘ ಎಂದು ಹೇಳಿದೆ.

ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್, ವಿಕ್ರಮ್ ನಾಥ್ ಮತ್ತು ಹಿಮಾ ಕೊಹ್ಲಿ ಅವರ ಪೀಠ, ‘ದೇಶದಲ್ಲಿ ಒಂದು ಪ್ರದೇಶಕ್ಕಿಂತ ಇನ್ನೊಂದು ಪ್ರದೇಶದ ಪರಿಸ್ಥಿತಿ ಭಿನ್ನವಾಗಿದೆ. ಲಡಾಖ್, ಉತ್ತರ ಪ್ರದೇಶದಲ್ಲಿರುವ ಪರಿಸ್ಥಿತಿ, ಕೇರಳಕ್ಕಿಂತ ಭಿನ್ನವಾಗಿದೆ. ಹಳ್ಳಿಗಳಿಗಿಂತ ನಗರ ಪ್ರದೇಶಗಳ ಪರಿಸ್ಥಿತಿ ಬೇರೆಯೇ ಇದೆ. ಇಂಥ ವಿಶಾಲ ರಾಷ್ಟ್ರದಲ್ಲಿರುವ ಪ್ರತಿ ರಾಜ್ಯದಲ್ಲೂ ವಿವಿಧ ರೀತಿಯ ಸಮಸ್ಯೆಗಳಿವೆ. ಇಂಥ ವೈವಿಧ್ಯಮಯ ಸನ್ನಿವೇಶಗಳಿರುವ ದೇಶಕ್ಕೆ ಒಂದೇ ಆದೇಶ ನೀಡಲು ಸಾಧ್ಯವಿಲ್ಲ‘ ಎಂದು ನ್ಯಾಯಪೀಠ ಹೇಳಿದೆ.

‘ಇದೊಂದು ಆಡಳಿತಾತ್ಮಕ ವಿಷಯವಾಗಿರುವುದರಿಂದ, ಈಗಿರುವ ಲಸಿಕೆ ನೀತಿಯನ್ನು ರದ್ದುಗೊಳಿಸಲು ಸಾಧ್ಯವಿಲ್ಲ‘ ಎಂದು ಹೇಳಿದ ಪೀಠ, ಅರ್ಜಿದಾರರಿಗೆ, ತಮ್ಮ ಸಲಹೆಗಳೊಂದಿಗೆ ಆರೋಗ್ಯ ಸಚಿವಾಲಯವನ್ನು ಸಂಪರ್ಕಿಸುವಂತೆ ತಿಳಿಸಿದೆ.

ಅಂಗವಿಕಲರು, ಗಂಭೀರ ಕಾಯಿಲೆಗಳಿಂದ ಬಳಲುತ್ತಿರುವ ದುರ್ಬಲ ವರ್ಗದವರು ಹಾಗೂ ಕೋವಿನ್ ಪೋರ್ಟಲ್‌ನಲ್ಲಿ ಹೆಸರು ನೋಂದಾಯಿಸಲಾಗದೇ ತೊಂದರೆ ಎದುರಿಸುತ್ತಿರುವವರ ಮನೆಗೆ ತೆರಳಿ ಕೋವಿಡ್ ಲಸಿಕೆ ನೀಡಲು ನಿರ್ದೇಶನ ನೀಡುವಂತೆ ಕೋರಿ ಯುವ ವಕೀಲರ ಸಂಘವೊಂದು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿತ್ತು.

ಕೋವಿಡ್ ಸಾವಿಗೆ ವೈದ್ಯಕೀಯ ನಿರ್ಲಕ್ಷ್ಯ ಕಾರಣವಲ್ಲ

ನವದೆಹಲಿ (ಪಿಟಿಐ): ‘ಕೋವಿಡ್ ಎರಡನೇ ಅಲೆ ಸಂದರ್ಭದಲ್ಲಿ ಸಂಭವಿಸಿದ ಸಾವುಗಳೆಲ್ಲ ವೈದ್ಯಕೀಯ ನಿರ್ಲಕ್ಷ್ಯದಿಂದಲೇ ಆಗಿವೆ ಎಂದು ನ್ಯಾಯಾಲಯಗಳು ಅಂದಾಜಿಸಲು ಸಾಧ್ಯವಿಲ್ಲ’ ಎಂದು ಸುಪ್ರೀಂ ಕೋರ್ಟ್ ಬುಧವಾರ ಹೇಳಿದೆ.

ವೈದ್ಯಕೀಯ ನಿರ್ಲಕ್ಷ್ಯದಿಂದ ಕೋವಿಡ್ ಸೋಂಕಿತರು ಸಾವನ್ನಪ್ಪಿದ್ದು, ಇದಕ್ಕೆ ಪರಿಹಾರ ನೀಡಬೇಕೆಂದು ಕೋರಿ ದೀಪಕ್ ರಾಜ್ ಸಿಂಗ್ ಎಂಬುವವರು ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಾಲಯ ಇದೇ ವೇಳೆ ತಿರಸ್ಕರಿಸಿದೆ. ಈ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್, ವಿಕ್ರಮ್ ನಾಥ್ ಮತ್ತು ಹಿಮಾ ಕೊಯ್ಲಿ ಅವರನ್ನೊಳಗೊಂಡ ಪೀಠ, ‘ಕೋವಿಡ್‌ನಿಂದ ಸಂಭವಿಸಿರುವ ಪ್ರತಿ ಸಾವಿಗೆ ವೈದ್ಯರ ನಿರ್ಲಕ್ಷ್ಯ ಕಾರಣ ಎಂದು ಹೇಳುವುದು ಅತಿರೇಕ ಅನಿಸುತ್ತದೆ. ಕೋವಿಡ್ ಎರಡನೇ ಅಲೆ ದೇಶದಾದ್ಯಂತ ತೀವ್ರ ಪರಿಣಾಮ ಬೀರಿದೆ. ಹಾಗೆಂದ ಮಾತ್ರಕ್ಕೆ, ನಿಮ್ಮ ಅರ್ಜಿಯಲ್ಲಿ ಮಾಡಿರುವ ಆರೋಪದಂತೆ ಈ ಸಮಯದಲ್ಲಿ ಕೋವಿಡ್‌ನಿಂದ ಸಂಭವಿಸಿದ ಸಾವುಗಳಿಗೆಲ್ಲ ವೈದ್ಯಕೀಯ ನಿರ್ಲಕ್ಷ್ಯ ಕಾರಣ ಎಂದು ಅಂದಾಜಿಸಲು ಸಾಧ್ಯವಿಲ್ಲ‘ ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಇದೇ ವೇಳೆ ನ್ಯಾಯಪೀಠ, ಜೂ. 30ರ ತೀರ್ಪೊಂದನ್ನು ಉಲ್ಲೇಖಿಸಿದೆ. ಅದರಲ್ಲಿ, ‘ವ್ಯಕ್ತಿಯೊಬ್ಬ ಕೋವಿಡ್‌ನಿಂದ ಸಾವನ್ನಪ್ಪಿದ ಆರು ವಾರದೊಳಗೆ, ಮೃತ ವ್ಯಕ್ತಿಯ ಕುಟುಂಬದ ಸದಸ್ಯರಿಗೆ ಪರಿಹಾರ (ಎಕ್ಸ್‌ಗ್ರೇಷಿಯಾ) ನೀಡುವಂತೆ ಸೂಕ್ತ ಮಾರ್ಗಸೂಚಿಗಳನ್ನು ರೂಪಿಸುವಂತೆ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರಕ್ಕೆ ಸೂಚಿಸಿತ್ತು.

‘ಈ ತೀರ್ಪಿನಲ್ಲಿ ನ್ಯಾಯಾಲಯವು ಮಾನವೀಯತೆಯ ದೃಷ್ಟಿಯಿಂದ ಮೃತ ವ್ಯಕ್ತಿಯ ಕುಟುಂಬಕ್ಕೆ ಪರಿಹಾರ ನೀಡಲು ತಿಳಿಸಿದೆಯೇ ಹೊರತು, ವೈದ್ಯಕೀಯ ನಿರ್ಲಕ್ಷ್ಯಕ್ಕಾಗಿ ಅಲ್ಲ‘ ಎಂದು ನ್ಯಾಯಪೀಠ ಹೇಳಿದೆ.

‘ಪ್ರತ್ಯೇಕ ಮಾರ್ಗ ಸೃಷ್ಟಿ ಅಸಾಧ್ಯ’



ನವದೆಹಲಿ (ಪಿಟಿಐ): ‘ನ್ಯಾಯಾಲಯವು ಪತ್ರಿಕಾ ಸ್ವಾತಂತ್ರ್ಯವನ್ನು ಹತ್ತಿಕ್ಕಲು ಬಯಸುವುದಿಲ್ಲ. ಆದರೆ, ಪತ್ರಕರ್ತರ ವಿರುದ್ಧ ದಾಖಲಾಗಿರುವ ಎಫ್‌ಐಆರ್‌ಗಳನ್ನು ರದ್ದುಗೊಳಿಸಲು ಪ್ರತ್ಯೇಕ ಮಾರ್ಗವನ್ನು ಸೃಷ್ಟಿಸಲು ಸಾಧ್ಯವಿಲ್ಲ’ ಎಂದು ಸುಪ್ರೀಂ ಕೋರ್ಟ್ ಬುಧವಾರ ಹೇಳಿದೆ.

ಕಳೆದ ಮೇ ತಿಂಗಳಲ್ಲಿ ಮಸೀದಿ ಧ್ವಂಸಗೊಳಿಸಿದ ಸುದ್ದಿ ಪ್ರಕಟಿಸಿದಕ್ಕೆ ಸಂಬಂಧಿಸಿದಂತೆ ‘ದಿ ವೈರ್’ ಸುದ್ದಿ ಸಂಸ್ಥೆಯ ಮೂವರು ಪತ್ರಕರ್ತರ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿತ್ತು. ತಮ್ಮ ವಿರುದ್ಧದ ಎಫ್‌ಐಆರ್‌ಗಳನ್ನು ರದ್ದುಗೊಳಿಸುವಂತೆ ಅವರು ಸುಪ್ರೀಂಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದಾರೆ.

ಈ ಬಗ್ಗೆ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಲ್.ನಾಗೇಶ್ವರ ರಾವ್ ನೇತೃತ್ವದ ಪೀಠವು, ‘ಅರ್ಜಿ ಸಂಬಂಧ ಅಲಹಾಬಾದ್ ಹೈಕೋರ್ಟ್ ಮೊರೆ ಹೋಗುವಂತೆ ಹೇಳಿದೆ. ‘ನೀವು ಎಫ್‌ಐಆರ್ ರದ್ಧತಿಗೆ ಸಂಬಂಧಿಸಿದಂತೆ ಅಲಹಾಬಾದ್ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿ. ನಾವು ನಿಮಗೆ ಮಧ್ಯಂತರ ರಕ್ಷಣೆ ನೀಡುತ್ತೇವೆ’ ಎಂದು ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ ಮತ್ತು ಬಿ.ವಿ ನಾಗರತ್ನಾ ಅವರನ್ನೊಳಗೊಂಡ ಪೀಠವು ಹೇಳಿದೆ.

‘ದಿ ವೈರ್’ ಡಿಜಿಟಲ್ ನ್ಯೂಸ್ ಪೋರ್ಟಲ್ ಅನ್ನು ಪ್ರಕಟಿಸುವ ಫೌಂಡೇಷನ್ ಫಾರ್ ಇಂಡಿಪೆಂಡೆಂಟ್ ಜರ್ನಲಿಸಂ ಮತ್ತು ಅದರ ಮೂವರು ಪತ್ರಕರ್ತರಾದ ಸೆರಾಜ್ ಅಲಿ, ಮುಕುಲ್ ಸಿಂಗ್ ಚೌಹಾಣ್ ಮತ್ತು ಇಸ್ಮತ್ ಅರಾ ಅವರು ಸಲ್ಲಿಸಿದ ಅರ್ಜಿಯ ವಿಚಾರಣೆಯನ್ನು ಸುಪ್ರೀಂಕೋರ್ಟ್ ಬುಧವಾರ ನಡೆಸಿತು.

ಉತ್ತರ ಪ್ರದೇಶದ ರಾಂಪುರ, ಗಾಜಿಯಾಬಾದ್ ಮತ್ತು ಬಾರಬಂಕಿಯಲ್ಲಿ ತಮ್ಮ ವಿರುದ್ಧ ದಾಖಲಿಸಲಾಗಿರುವ ಮೂರು ಎಫ್‌ಐಆರ್‌ಗಳನ್ನು ರದ್ದುಗೊಳಿಸುವಂತೆ ಮತ್ತು ಮೂವರು ಪತ್ರಕರ್ತರ ವಿರುದ್ಧ ಯಾವುದೇ ಕ್ರಮಕೈಗೊಳ್ಳದಂತೆ ಉತ್ತರ ಪ್ರದೇಶ ಪೊಲೀಸರಿಗೆ ನಿರ್ದೇಶನ ನೀಡುವಂತೆ ಅರ್ಜಿಯಲ್ಲಿ ಮನವಿ ಮಾಡಲಾಗಿತ್ತು.

ಜೋಷಿ, ಶೋಭಾಗೆ ಚುನಾವಣಾ ಜವಾಬ್ದಾರಿ



ಶೋಭಾ ಕರಂದ್ಲಾಜೆ



ಪ್ರಲ್ಹಾದ ಜೋಶಿ

ಬೆಂಗಳೂರು: ಉತ್ತರಾಖಂಡ ವಿಧಾನಸಭೆಗೆ ಮುಂದಿನ ವರ್ಷ ನಡೆಯುವ ಚುನಾವಣೆಗೆ ಕೇಂದ್ರ ಸಂಸದೀಯ ಸಚಿವ ಪ್ರಲ್ಹಾದ ಜೋಷಿ ಅವರನ್ನು ಉಸ್ತುವಾರಿ ಮತ್ತು ಉತ್ತರಪ್ರದೇಶ ವಿಧಾನಸಭೆ ಚುನಾವಣೆಗೆ ಕೇಂದ್ರ ಕೃಷಿ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಅವರನ್ನು ಸಹ ಉಸ್ತುವಾರಿಯನ್ನಾಗಿ ನೇಮಿಸಲಾಗಿದೆ.

ಈ ಎರಡೂ ರಾಜ್ಯಗಳಲ್ಲಿ ಬಿಜೆಪಿ ಅಧಿಕಾರ ನಡೆಸುತ್ತಿದ್ದು, ಇಲ್ಲಿ ಅಧಿಕಾರವನ್ನು ಉಳಿಸಿಕೊಳ್ಳುವ ಸವಾಲು ಎದುರಾಗಿದೆ. ಪಕ್ಷದಲ್ಲಿ ಎರಡು ಮತ್ತು ಮೂರನೇ ಹಂತದ ನಾಯಕರನ್ನು ಚುನಾವಣಾ ರಾಜಕಾರಣದಲ್ಲಿ ಪಳಗಿಸಲು ಹೆಚ್ಚು ಹೆಚ್ಚು ನಾಯಕರನ್ನು ಚುನಾವಣೆಗಳಲ್ಲಿ ಬಳಸಿಕೊಳ್ಳಲು ಮುಂದಾಗಿದೆ.

ಉತ್ತರಾಖಂಡ ಬ್ರಾಹ್ಮಣ ಮತದಾರರು ನಿರ್ಣಾಯಕವಾಗಿರುವ ರಾಜ್ಯವಾಗಿದ್ದು, ಅಲ್ಲಿಗೆ ಪ್ರಲ್ಹಾದ ಜೋಷಿ ಅವರನ್ನು ನಿಯೋಜಿಸಲಾಗಿದೆ. ಬ್ರಾಹ್ಮಣ ಮತಗಳು ಚದುರಿ ಹೋಗದಂತೆ ಕಾಯ್ದುಕೊಳ್ಳುವುದರ ಜತೆಗೆ ಗೆಲುವು ಸಾಧಿಸಲು ಅಗತ್ಯ ಕಾರ್ಯತಂತ್ರ ರೂಪಿಸುವ ಉದ್ದೇಶದಿಂದ ಜೋಷಿಯವರಿಗೆ ಜವಾಬ್ದಾರಿ ವಹಿಸಲಾಗಿದೆ ಎಂದು ಬಿಜೆಪಿ ಮೂಲಗಳು ಹೇಳಿವೆ.

ಇತ್ತೀಚೆಗಷ್ಟೇ ಕೇಂದ್ರದಲ್ಲಿ ಸಚಿವ ಸ್ಥಾನ ಪಡೆದ ಶೋಭಾ ಅವರಿಗೆ ಅತ್ಯಂತ ದೊಡ್ಡ ರಾಜ್ಯ ಉತ್ತರಪ್ರದೇಶದ ಚುನಾವಣಾ ಸಹ ಉಸ್ತುವಾರಿಯನ್ನಾಗಿ ನಿಯೋಜಿಸಲಾಗಿದೆ. ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್ ಉಸ್ತುವಾರಿಯಾಗಿದ್ದಾರೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಜನರನ್ನು ನೀತಿಮಾರ್ಗದಲ್ಲಿ ಬೆಳೆಸಿ ತಂದಿರುವುದು ಭಗವಂತನ ಬಗೆಗಿನ ಭಯ ಮತ್ತು ಪ್ರೀತಿ.

-ಡಿ.ವಿ.ಗುಂಡಪ್ಪ

ಸ್ವಚ್ಛತಾ ಕಾರ್ಮಿಕರ ಹಿತರಕ್ಷಣೆಗೆ ಸಿಗಲಿ ತ್ವರಿತ ಸ್ಪಂದನ

ರಾಜ್ಯದ ನಗರಗಳು ತಕ್ಕಮಟ್ಟಿಗಾದರೂ ಸ್ವಚ್ಛವಾಗಿವೆ ಎಂದಾದರೆ ಅದಕ್ಕೆ ಕಾರಣ ಸ್ವಚ್ಛತಾ ಕಾರ್ಮಿಕರು. ಬಿಸಿಲು, ಮಳೆ, ಚಳಿ ಲೆಕ್ಕಿಸದೆ, ಕೋವಿಡ್‌ನಂತಹ ಸಾಂಕ್ರಾಮಿಕ ಕಾಯಿಲೆ ಕಾಣಿಸಿಕೊಂಡರೂ ಕಂಗೆಡದೆ ಅವರು ತಮ್ಮ ಕೆಲಸ ಮಾಡುತ್ತಿರುವುದರಿಂದಲೇ ನಗರದ ನಿವಾಸಿಗಳು ನೆಮ್ಮದಿಯಿಂದ ಇರಲು ಸಾಧ್ಯವಾಗಿದೆ. ಹಬ್ಬ ಹರಿದಿನಗಳಂದೂ ರಜೆ ಪಡೆಯದೆ ನಗರದ ಸ್ವಚ್ಛತೆಗಾಗಿ ದುಡಿಯುವ ಅವರ ಬದುಕಿನ ಚಿತ್ರಣ ಹೇಗಿದೆ, ಗೌರವಯುತವಾಗಿ ಬದುಕುವ ವಾತಾವರಣ ಇದೆಯೇ ಎಂದು ನೋಡಿದರೆ ನಿರಾಸೆಯಾಗುತ್ತದೆ. ಅದರಲ್ಲೂ ಬಿಬಿಎಂಪಿ ವ್ಯಾಪ್ತಿಯಲ್ಲಿ ಮನೆ ಮನೆಯಿಂದ ಕಸ ಸಂಗ್ರಹಿಸುವ ಸ್ವಚ್ಛತಾ ಕಾರ್ಮಿಕರ ಪರಿಸ್ಥಿತಿಯಂತೂ ಚಿಂತಾಜನಕವಾಗಿದೆ. ಕಸ ಗುಡಿಸುವ ಕಾರ್ಯದಲ್ಲಿ ತೊಡಗಿರುವ 16 ಸಾವಿರ ಪೌರಕಾರ್ಮಿಕರಿಗೆ 2018ರಿಂದ ಬಿಬಿಎಂಪಿಯಿಂದಲೇ ನೇರವಾಗಿ ಪ್ರತೀ ತಿಂಗಳು ಸಂಬಳ ಪಾವತಿಯಾಗುತ್ತಿದೆ. ಆದರೆ, ಮನೆ ಮನೆಯಿಂದ ಕಸ ಸಂಗ್ರಹಿಸುವ ಆಟೊ ಟಿಪ್ಪರ್‌ಗಳ ಚಾಲಕರು ಹಾಗೂ ಸಹಾಯಕರು ಈಗಲೂ ಗುತ್ತಿಗೆ ಪದ್ಧತಿಯಲ್ಲೇ ಮುಂದುವರಿದಿದ್ದಾರೆ. ತಮ್ಮನ್ನೂ 'ವೇತನ ನೇರ ಪಾವತಿ ವ್ಯವಸ್ಥೆ'ಗೆ ತಂದು ಸೇವೆಯನ್ನು ಕಾಯಂಗೊಳಿಸಬೇಕು ಎಂಬ ಅವರ ಬೇಡಿಕೆ ಇನ್ನೂ ಈಡೇರಿಲ್ಲ. ಅವರಿಗೆ ತಿಂಗಳ ಸಂಬಳವೂ ನಿಗದಿತ ಸಮಯಕ್ಕೆ ಸರಿಯಾಗಿ ಕೈಸೇರುತ್ತಿಲ್ಲ. ಬೆಳಿಗ್ಗೆ 6ರಿಂದ ಮಧ್ಯಾಹ್ನ 2 ಗಂಟೆವರೆಗೆ ಕೆಲಸ ಮಾಡುವ ಅವರಿಗೆ ಸಿಗುವುದು ತಿಂಗಳಿಗೆ ₹ 12,500 ಮಾತ್ರ. ಬಿಬಿಎಂಪಿಯ ಕೆಲವು ವಲಯಗಳ ಸ್ವಚ್ಛತಾ ಕಾರ್ಮಿಕರು ಐದು ತಿಂಗಳುಗಳಿಂದ ಸಂಬಳದ ಮುಖವನ್ನೇ ನೋಡಿಲ್ಲ. ಬೆಲೆ ಏರಿಕೆಯಿಂದಾಗಿ ಪ್ರತಿಯೊಂದು ಸಾಮಗ್ರಿಯೂ ತುಟ್ಟಿಯಾಗುತ್ತಿರುವ ಈ ಸಂದರ್ಭದಲ್ಲಿ ಅವರು ಬದುಕು ಸಾಗಿಸುವುದೇ ದುಸ್ತರವಾಗಿದೆ. ಮಕ್ಕಳಿಗೆ ಉತ್ತಮ ವಿದ್ಯಾಭ್ಯಾಸ ಕೊಡಿಸಲೂ ಸಾಧ್ಯವಾಗುತ್ತಿಲ್ಲ ಎಂಬ ಕೊರಗು ಅನೇಕರದು. ವೆಚ್ಚ ಭರಿಸಲಾಗದೇ ಮಕ್ಕಳ ಶಿಕ್ಷಣವನ್ನು ಅರ್ಧದಲ್ಲೇ ಮೊಟಕುಗೊಳಿಸಿ ಕೆಲಸಕ್ಕೆ ಹಚ್ಚಿರುವ ನಿದರ್ಶನಗಳೂ ಇವೆ.



ನಗರದ ಸ್ವಚ್ಛತೆಗಾಗಿ ದುಡಿಯುವ ಪೌರಕಾರ್ಮಿಕರು ಗೌರವಯುತ ಬದುಕು ಕಟ್ಟಿಕೊಳ್ಳಲು ನೆರವಾಗುವುದು ಸರ್ಕಾರದ ಆದ್ಯ ಕರ್ತವ್ಯ

ಕೋವಿಡ್ ಮೊದಲನೇ ಅಲೆ ಹಾಗೂ ಎರಡನೇ ಅಲೆ ತೀವ್ರವಾಗಿದ್ದ ಸಂದರ್ಭದಲ್ಲೂ ನಿತ್ಯ ಎಲ್ಲ ಮನೆಗಳ ಕಸ ಸಂಗ್ರಹಿಸಿದ್ದ ಸ್ವಚ್ಛತಾ ಕಾರ್ಮಿಕರ ಸುರಕ್ಷತೆಯನ್ನು ಕಡೆಗಣಿಸಲಾಗಿತ್ತು. ತಮ್ಮ ಜೀವವನ್ನೇ ಅಪಾಯಕ್ಕೆ ಒಡ್ಡಿಕೊಂಡು ಕೆಲಸ ಮಾಡುವ ಅವರಿಗೆ ನಿಯಮಿತವಾಗಿ ಆರೋಗ್ಯ ತಪಾಸಣೆಯ ವ್ಯವಸ್ಥೆಯೂ ಇಲ್ಲ. ಈ ಬಗ್ಗೆ ಟೀಕೆ ವ್ಯಕ್ತವಾದಾಗ ವರ್ಷದಲ್ಲಿ ಒಂದೋ ಎರಡೋ ಸಲ ಆರೋಗ್ಯ ತಪಾಸಣೆ ನಡೆಸಿ ಬಿಬಿಎಂಪಿ ಕೈತೊಳೆದುಕೊಳ್ಳುತ್ತಿದೆ. ಒಂದೆರಡು ಬಾರಿ ಮಾಸ್ಕ್, ಸ್ಯಾನಿಟೈಸರ್, ಮುಖಕವಚಗಳನ್ನು ವಿತರಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಆ ಬಳಿಕ ಅವರ ಸುರಕ್ಷತೆಯನ್ನು ಪಾಲಿಕೆ ಮರೆತೇಬಿಟ್ಟಿದೆ. ಈಗಲೂ, ಬರಿಗೈಯಲ್ಲಿ ಕಸವನ್ನು ಸಂಗ್ರಹಿಸುವ ಅವರ ಪಾಡು ಕರುಣಾಜನಕ. ಆರೋಗ್ಯ ಕ್ಷೇತ್ರದವರ ಬಗ್ಗೆ ವಹಿಸಿದ ಕಾಳಜಿಯನ್ನು ಸರ್ಕಾರವು ಪೌರಕಾರ್ಮಿಕರ ಬಗ್ಗೆ ತೋರಿಸಿಲ್ಲ ಎಂಬ ಆರೋಪದಲ್ಲಿ ಹುರುಳಿಲ್ಲದೇ ಇಲ್ಲ. ಕೋವಿಡ್‌ನಿಂದ ಮೃತಪಟ್ಟ ಪೌರಕಾರ್ಮಿಕರ ಕುಟುಂಬಕ್ಕೆ ತಕ್ಷಣವೇ ಪರಿಹಾರ ನೀಡುವ ವಾಗ್ದಾನವನ್ನು ಸರ್ಕಾರ ಮಾಡಿತ್ತು. ಆದರೆ, ವರ್ಷ ಕಳೆದ ಬಳಿಕವೂ ಸಂತ್ರಸ್ತ ಕುಟುಂಬಗಳಿಗೆ ₹ 30 ಲಕ್ಷ ಪರಿಹಾರಧನ ಪಾವತಿ ಆಗದಿರುವುದು ಸರ್ಕಾರದ ಉದಾಸೀನ ಧೋರಣೆಗೆ ಸಾಕ್ಷಿ. 'ಆರೋಗ್ಯ ಕಾರ್ಯಕರ್ತರಂತೆ ಪೌರಕಾರ್ಮಿಕರನ್ನೂ ಆಗಾಗ ಕೋವಿಡ್ ಪರೀಕ್ಷೆಗೆ ಒಳಪಡಿಸಬೇಕು. ಕೋವಿಡ್ ಕರ್ತವ್ಯ ನಿರ್ವಹಿಸುವ ಇತರ ಸರ್ಕಾರಿ ನೌಕರರಿಗೆ ನೀಡುವಂತೆ ಪೌರಕಾರ್ಮಿಕರಿಗೂ ತಿಂಗಳಿಗೆ ₹ 10 ಸಾವಿರ ಅಪಾಯ ಭತ್ಯೆ ನೀಡಬೇಕು' ಎಂಬ ಬೇಡಿಕೆಗಳನ್ನು ಅವರು ಸರ್ಕಾರದ ಮುಂದಿಟ್ಟಿದ್ದಾರೆ. ಈ ಕುರಿತು ಪರಿಶೀಲಿಸಿ, ನ್ಯಾಯೋಚಿತವೆನಿಸಿದ ಬೇಡಿಕೆಗಳನ್ನು ಸರ್ಕಾರ ಈಡೇರಿಸಬೇಕು. ಪೌರಕಾರ್ಮಿಕರಿಗೆ, ಅದರಲ್ಲೂ ವಿಶೇಷವಾಗಿ ಮಹಿಳೆಯರಿಗೆ ಕೆಲಸದ ವೇಳೆ ತುಸು ವಿರಾಮ ಪಡೆಯಲು ವಿಶ್ರಾಂತಿ ಗೃಹಗಳನ್ನು ನಿರ್ಮಿಸಬೇಕು. ಶೌಚಾಲಯಗಳ ವ್ಯವಸ್ಥೆ ಕಲ್ಪಿಸಬೇಕು. ಕುಡಿಯಲು ಬಿಸಿನೀರು ಒದಗಿಸಬೇಕು ಎಂಬ ಬೇಡಿಕೆಗಳೂ ಇವೆ. ಬೆಂಗಳೂರಿನಲ್ಲಿ ಎರಡು ವಾರ್ಡ್‌ಗಳಲ್ಲಿ ಬಿಬಿಎಂಪಿ ಇಂತಹ ಸೌಕರ್ಯಗಳನ್ನು ಕಲ್ಪಿಸಿತ್ತು. ಈ ಸೌಕರ್ಯಗಳನ್ನು ಎಲ್ಲ ವಾರ್ಡ್‌ಗಳಿಗೆ ವಿಸ್ತರಿಸುವ ಭರವಸೆ ಇನ್ನೂ ಈಡೇರಿಲ್ಲ.

ರಾಜ್ಯದಲ್ಲಿ ಸುಮಾರು 42 ಸಾವಿರ ಪೌರಕಾರ್ಮಿಕರು ವಿವಿಧ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಅವರಲ್ಲಿ 22 ಸಾವಿರ ಮಂದಿಗೆ ಸ್ವಂತ ಸೂರು ಇಲ್ಲ. ಬಹುತೇಕರು ಈಗಲೂ ಕೊಳೆಗೇರಿಗಳಲ್ಲಿ ನೆಲೆಸಿದ್ದಾರೆ. 'ಪೌರಕಾರ್ಮಿಕರ ಗೃಹಭಾಗ್ಯ ಯೋಜನೆ' ಅಡಿ ವಸತಿ ಹಂಚಿಕೆ ಮಾಡುವ ಬಿಬಿಎಂಪಿಯ ಕಾರ್ಯಕ್ರಮವೂ ಪೂರ್ಣಪ್ರಮಾಣದಲ್ಲಿ ಅನುಷ್ಠಾನವಾಗಿಲ್ಲ. ಎರಡು ಕಂತುಗಳಲ್ಲಿ 272 ಫಲಾನುಭವಿಗಳಿಗೆ ವಸತಿ ಹಂಚಲಾಗಿತ್ತು. ಬಳಿಕ ಈ ಕಾರ್ಯಕ್ರಮವೂ ಮೂಲೆಗುಂಪಾಗಿದೆ. ಪೌರಕಾರ್ಮಿಕರ ಬದುಕು ಮತ್ತು ಕೆಲಸದ ಸ್ಥಿತಿಗತಿ ಸುಧಾರಣೆಗೆ ಸಂಬಂಧಿಸಿದಂತೆ ಐಪಿಡಿ ಸಾಲಪ್ಪ ನೇತೃತ್ವದ ಸಮಿತಿಯು ಸರ್ಕಾರಕ್ಕೆ ವರದಿ ನೀಡಿತ್ತು. ಅದರ ಶಿಫಾರಸಿನಂತೆ ಪ್ರತೀ 500 ಮಂದಿಗೆ ಒಬ್ಬ ಪೌರಕಾರ್ಮಿಕ ನಿಯೋಜನೆ ಆಗಬೇಕಿದೆ. ಆದರೆ, ಈಗ ಪ್ರತೀ 700 ಮಂದಿಗೆ ಒಬ್ಬರು ನಿಯೋಜನೆ ಆಗಿದ್ದಾರೆ. ಇದು, ಪೌರಕಾರ್ಮಿಕರ ಕೆಲಸದ ಹೊರೆಯನ್ನು ಹೆಚ್ಚಿಸಿದೆ. ಪೌರಕಾರ್ಮಿಕರು ಪ್ರತಿಬಾರಿ ಪ್ರತಿಭಟನೆ ನಡೆಸಿದಾಗಲೂ ಸರ್ಕಾರ ಅವರ ಬೇಡಿಕೆಗಳನ್ನು ಈಡೇರಿಸುವ ಭರವಸೆ ನೀಡುತ್ತದೆಯಾದರೂ ಆ ಬಳಿಕ ಬೇಡಿಕೆಗಳ ಅನುಷ್ಠಾನಕ್ಕೆ ಇಚ್ಛಾಶಕ್ತಿ ತೋರಿಸುತ್ತಿಲ್ಲ. ಸ್ವಚ್ಛತಾ ಕಾರ್ಯದ ಮಹತ್ವವನ್ನು ಅರಿತು ಸರ್ಕಾರವು ಪೌರಕಾರ್ಮಿಕರ ಹಿತ ಕಾಯಬೇಕು. ಗೌರವಯುತ ಬದುಕು ಕಟ್ಟಿಕೊಳ್ಳಲು ಅವರಿಗೆ ನೆರವಾಗಬೇಕು.

ದಿನದ ಟ್ವೀಟ್




ಕಷ್ಟಕ್ಕೆ ಒದಗದವರು

ಭಾರತದಲ್ಲಿ ಸಚಿವರು ಅಂತರರಾಷ್ಟ್ರೀಯ ಸಾಕ್ಷರತಾ ದಿನವನ್ನು (ಸೆ. 8) ಆಚರಿಸಿದ್ದಾರೆ. ಕೋವಿಡ್ ಸಮಯದಲ್ಲಿ ಯಾವೊಬ್ಬ ಪೋಷಕರಿಗೂ ನೆರವಾಗಲು ಅವರಿಗೆ ಸಾಧ್ಯವಾಗಲಿಲ್ಲ. ಇಚ್ಛಾನುಸಾರ ಶುಲ್ಕ ಏರಿಸಿದ್ದರಿಂದ ಅನೇಕ ವಿದ್ಯಾರ್ಥಿಗಳು ಶಾಲೆಯಿಂದ ಹೊರಗುಳಿಯಬೇಕಾಯಿತು. ಆದರೆ ಯಾವುದೇ ರಾಜ್ಯ ಅಥವಾ ಕೇಂದ್ರದ ಸಚಿವರಿಗೆ ಈ ಬಗ್ಗೆ ಕ್ರಮ ಕೈಗೊಳ್ಳಲು ಸಾಧ್ಯವಾಗಲಿಲ್ಲ.

ಅನುಭಾ ಶ್ರೀವಾಸ್ತವ ಸಹಾಯ್, ವಕೀಲೆ

ಕಿಡಿನುಡಿ



ಜೆಡಿಎಸ್ ಮುಳುಗುವ ಹಡಗು ಎಂದು ರಾಜ್ಯ ಬಿಜೆಪಿ ಉಸ್ತುವಾರಿ ಅರುಣ್ ಸಿಂಗ್ ಹೇಳಿರುವಾಗ, ನಮ್ಮ ಜತೆ ಹೊಂದಾಣಿಕೆ ಮಾಡಿಕೊಂಡರೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕುರ್ಚಿಗೆ ಧಕ್ಕೆ ಬರಲಿದೆ. ಕಲಬುರ್ಗಿ ಮಹಾನಗರ ಪಾಲಿಕೆಯಲ್ಲಿ ಯಾವ ಪಕ್ಷಕ್ಕೆ ಬೆಂಬಲ ನೀಡಬೇಕು ಎಂಬುದನ್ನು ಎಚ್.ಡಿ.ದೇವೇಗೌಡ, ಎಚ್.ಡಿ.ಕುಮಾರಸ್ವಾಮಿ ಅವರು ಕಾರ್ಯಕರ್ತರ ಜತೆ ಚರ್ಚಿಸಿ ತೀರ್ಮಾನಿಸುತ್ತಾರೆ. ಅರುಣ್ ಸಿಂಗ್ ಹೇಳಿದ್ದನ್ನು ಸಿ.ಎಂ. ಪಾಲಿಸಲಿ.

ಎಚ್.ಡಿ.ರೇವಣ್ಣ, ಶಾಸಕ, ಜೆಡಿಎಸ್ ಮುಖಂಡ

25 ವರ್ಷಗಳ ಹಿಂದೆ

ಸೋಮವಾರ, 9-9-1996

• ವಿಶ್ವಸುಂದರಿ ಸ್ಪರ್ಧೆ ನಡೆಸುವುದರಲ್ಲಿ ತಪ್ಪೇನಿದೆ?– ಪಟೇಲ್

ಬೆಂಗಳೂರು, ಸೆ. 8– ನಗರದಲ್ಲಿ ನವೆಂಬರ್‌ನಲ್ಲಿ ನಡೆಯಲಿರುವ ವಿಶ್ವಸುಂದರಿ ಸ್ಪರ್ಧೆಗೆ ವಿರೋಧಿಸುತ್ತಿರುವವರನ್ನು ತೀವ್ರವಾಗಿ ಖಂಡಿಸಿದ ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರು ಸರ್ಕಾರ ಈ ವಿರೋಧವನ್ನು ಯಾವುದೇ ಕಾರಣಕ್ಕೂ ಸಹಿಸುವುದಿಲ್ಲ ಎಂದರು.

ಕರ್ನಾಟಕ ಸಹಕಾರಿ ಚಲನಚಿತ್ರ ಮತ್ತು ಲಲಿತಕಲಾ ಮಹಾಮಂಡಳಿ ಏರ್ಪಡಿಸಿದ್ದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದ ಅವರು, 'ವಿಶ್ವಸುಂದರಿ ಸ್ಪರ್ಧೆ ಹಿಂದೂ ಸಂಸ್ಕೃತಿಗೆ ಅವಮಾನ ಎಂದು ಕೆಲವರು ವಿರೋಧಿಸುತ್ತಿದ್ದಾರೆ. ಮಹಾಭಾರತದ ದ್ರೌಪದಿಯ ಸೀರೆಯನ್ನು ಸೆಳೆದಾಗ ಭಾರತದ ಸಂಸ್ಕೃತಿ ಎಲ್ಲಿ ಹೋಗಿತ್ತು. ರಾಮಾಯಣದಲ್ಲಿ ರಾವಣ ಸೀತೆಯನ್ನು ಅಪಹರಿಸಿದಾಗ ಈ ಸಂಸ್ಕೃತಿ ಎಲ್ಲಿ ಅಡಗಿತ್ತು' ಎಂದು ಪ್ರಶ್ನೆಗಳ ಸುರಿಮಳೆಗರೆದರು.

'ಸ್ಪರ್ಧೆಗಾಗಿ ಸರ್ಕಾರ ಯಾವುದೇ ವೆಚ್ಚವನ್ನೂ ಮಾಡುತ್ತಿಲ್ಲ' ಎಂದು ಅವರು ತಿಳಿಸಿದರು.

50 ವರ್ಷಗಳ ಹಿಂದೆ

ಗುರುವಾರ, 9-9-1971

• ಅಭಾವದ 66 ತಾಲ್ಲೂಕುಗಳಲ್ಲಿ 15ರಿಂದ ಉಚಿತ ಹಾಲು, ಆಹಾರ

ಬೆಂಗಳೂರು, ಸೆ. 8– ಅಭಾವ ಉಂಟಾಗಿರುವ ರಾಜ್ಯದ 66 ತಾಲ್ಲೂಕುಗಳಲ್ಲಿ ದುರ್ಬಲರಿಗೆ ಸೆಪ್ಟೆಂಬರ್ 15ರಿಂದ ಹಾಲು ಮುಂತಾದ ಆಹಾರ ಒದಗಿಸುವ ಕಾರ್ಯಕ್ರಮ ಆರಂಭವಾಗಲಿದೆ.

ಈ ತಾಲ್ಲೂಕುಗಳಲ್ಲಿ ಈ ಕಾರ್ಯವನ್ನು ಕೈಗೊಳ್ಳಲು ಕೇರ್ ಸಂಸ್ಥೆ ಒಪ್ಪಿದ್ದು ಸರ್ಕಾರ 9 ಲಕ್ಷ ರೂಪಾಯಿ ಮಂಜೂರು ಮಾಡಿದೆ.

ಇತ್ತೀಚೆಗೆ ಪ್ರವಾಸ ಮಾಡಿದ ಕಾಲದಲ್ಲಿ ನಿಶ್ಶಕ್ತ ವರ್ಗದ ಜನರಿಗೆ ತುರ್ತು ಆಹಾರ ಒದಗಿಸುವುದು ಅಗತ್ಯವೆಂದು ಅನೇಕರು ತಿಳಿಸಿದ ಕಾರಣ, ನಗರಕ್ಕೆ ಹಿಂದಿರುಗಿದ ನಂತರ ರಾಜ್ಯಪಾಲ ಶ್ರೀ ಧರ್ಮವೀರ ಅವರು ಕೇರ್ ಸಂಸ್ಥೆಯೊಡನೆ ಚರ್ಚಿಸಿ ಈ ನಿರ್ಧಾರವನ್ನು ಕೈಗೊಂಡರು.

ರಾಯಚೂರು, ಗುಲ್ಬರ್ಗ, ಬಿದರೆ, ಚಿತ್ರದುರ್ಗ, ತುಮಕೂರು, ಬೆಂಗಳೂರು, ಬಳ್ಳಾರಿ, ಕೋಲಾರ, ಮಂಡ್ಯ, ಮೈಸೂರು, ಹಾಸನ, ಚಿಕ್ಕಮಗಳೂರು, ಬೆಳಗಾವಿ, ಬಿಜಾಪುರ ಹಾಗೂ ಧಾರವಾಡ ಜಿಲ್ಲೆಗಳ 66 ತಾಲ್ಲೂಕುಗಳಲ್ಲಿ ಈ ಕಾರ್ಯಕ್ರಮ ಆರಂಭವಾಗುವುದು.

ವಿಶ್ವಗುರುವೊ ಅಥವಾ ನಗೆಪಾಟಲಿಗೆ ಗುರಿಯೊ ಎರಡರಲ್ಲೊಂದಂತೂ ಖಚಿತ

ಭಾರತದ ಫಾಸ್ಟ್ ಬ್ರೀಡರ್ ಬಿಸಿತುಪ್ಪ



ವಿಜ್ಞಾನ ವಿಶೇಷ

ನಾಗೇಶ ಹೆಗಡೆ

'ಬರುವ ಸೆಪ್ಟೆಂಬರ್ ತಿಂಗಳಲ್ಲಿ ನಾವು 'ಭಾವಿನಿ' ಫಾಸ್ಟ್ ಬ್ರೀಡರ್ ಸ್ಥಾವರವನ್ನು ಲೋಕಾರ್ಪಣೆ ಮಾಡಲಿದ್ದೇವೆ'- ಹೀಗೆಂದು ಕಲ್ಪಾಕ್ಕಂನಲ್ಲಿರುವ ಇಂದಿರಾ ಗಾಂಧಿ ಅಟಾಮಿಕ್ ಸಂಶೋಧನ ಕೇಂದ್ರದ ನಿರ್ದೇಶಕ ಪದ್ಮಶ್ರೀ ಡಾ. ಬಲದೇವ್ ರಾಜ್ ಹಿಂದೊಮ್ಮೆ ಹೇಳಿದ್ದರು. ಭಾರತದ ನ್ಯೂಕ್ಲಿಯರ್ ತಂತ್ರಜ್ಞಾನದ ಮಹೋನ್ನತ ಸಾಧನೆಯನ್ನು ಜಗತ್ತಿಗೇ ಪ್ರದರ್ಶಿಸುವ ಉತ್ಸಾಹ ಅವರ ಮಾತಿನಲ್ಲಿತ್ತು.

ಅಂದಹಾಗೆ, ಅವರ ಆ ಮಾತು ಈಚಿನದಲ್ಲ; ಹತ್ತು ವರ್ಷಗಳ ಹಿಂದಿನ (2011ರ) ಸೆಪ್ಟೆಂಬರ್ ಬಗ್ಗೆ ಹೇಳಿದ್ದಾಗಿತ್ತು. 'ಭಾರತೀಯ ನಾಭಿಕೀಯ ವಿದ್ಯುತ್ ನಿಗಮ' (ಭಾವಿನಿ) ಹೆಸರಿನ ಈ ಮಾಯಾ ಸ್ಥಾವರದ ಲೋಕಾರ್ಪಣೆಯ ಮುಹೂರ್ತ ಮುಂದಕ್ಕೆ ಮುಂದಕ್ಕೆ ಹೋಗುತ್ತಲೇ ಇದೆ. ಇತ್ತೀಚಿನ ಅಂದಾಜಿನ ಪ್ರಕಾರ 2022ರ ಡಿಸೆಂಬರ್‌ನಲ್ಲಿ ಇದು ಕಾರ್ಯಾರಂಭ ಮಾಡಬಹುದು. ಮಾಡಿದ್ದೇ ಆದರೆ, ಅಲ್ಲಿಗೆ ಅದಕ್ಕೆ ಹಣ ಸುರಿಯಲು ತೊಡಗಿ ಸುಮಾರು 50 ವರ್ಷಗಳಾಗಿರುತ್ತವೆ. ಅಥವಾ ಇನ್ನೂ ಜಾಸ್ತಿಯೇ ಅನ್ನಿ. ಡಾ. ಹೋಮಿ ಭಾಭಾರಿಂದ ಹಿಡಿದು, ವಿಕ್ರಮ್ ಸಾರಾಭಾಯಿ, ಹೋಮಿ ಸೇಥ್ನಾ, ರಾಜಾರಾಮಣ್ಣ, ಅನಿಲ್ ಕಾಕೋಡ್ಕರ್ ಸೇರಿದಂತೆ ಎಲ್ಲ ಪದ್ಮಪ್ರಶಸ್ತಿ ವಿಜೇತ ಪರಮಾಣು ವಿಜ್ಞಾನಿಗಳ ಥಳಕಿನ ಮಾಯಾಮೃಗ ಅದು. ಕೈಗೆಟಕುತ್ತಿಲ್ಲ ಆದರೆ ಕೈಬಿಡಲು ಇಷ್ಟವಿಲ್ಲ. ಇನ್ನು ಅದಕ್ಕೆ ಸುರಿದ ಹಣವೋ- ಆಗ ಮೂರೂವರೆ ಸಾವಿರ ಕೋಟಿ ಇತ್ತು; ಈಗ ಆರರ ಮುಂದೆ ಹತ್ತು ಸೊನ್ನೆ. ವಿದ್ಯುತ್ ಉತ್ಪಾದನೆ ಮಾತ್ರ ಬರೀ ಸೊನ್ನೆ.

ಅದನ್ನು ಈಗ ಇಲ್ಲಿ ಪ್ರಸ್ತಾಪಿಸಲು ಒಂದು ಕಾರಣ ಇದೆ: ಇದೀಗ ಜಗತ್ತಿನ ಇಬ್ಬರು ಮಹಾ ಕೋಟ್ಯಧೀಶರು ಒಟ್ಟಾಗಿ (ಬಿಲ್ ಗೇಟ್ಸ್ ಮತ್ತು ವಾರೆನ್ ಬಫೆಟ್) ಇದೇ ತಂತ್ರಸಾಹಸಕ್ಕೆ ಕೈ ಹಾಕಿದ್ದಾರೆ. ಅಮೆರಿಕದ ವಯೊಮಿಂಗ್ ಎಂಬಲ್ಲಿ ನೇಟ್ರಿಯಂ ಹೆಸರಿನ ಚಿಕ್ಕದೊಂದು ಫಾಸ್ಟ್ ಬ್ರೀಡರ್ ಪರಮಾಣು ಸ್ಥಾವರವನ್ನು ಆರಂಭಿಸುವುದಾಗಿ ಘೋಷಿಸಿದ್ದಾರೆ. ಬರುತ್ತಿರುವ ಬಿಸಿ ಪ್ರಳಯವನ್ನು ತಪ್ಪಿಸಬೇಕೆಂದರೆ ಕಲ್ಲಿದ್ದಲು, ಪೆಟ್ರೋಲಿಯಂನಂಥ ಹೊಗೆಯುಗುಳುವ ಫಾಸಿಲ್ ಇಂಧನಗಳ ಬಳಕೆಯನ್ನು ಕೈಬಿಡಬೇಕಾಗುತ್ತದೆ. ಸೂರ್ಯನಿಂದ ಅಥವಾ ಗಾಳಿಯಿಂದ ವಿದ್ಯುತ್ ತಯಾರಿಸಬಹುದಾದರೂ ಕತ್ತಲಾದಾಗಲೇ ವಿದ್ಯುತ್ತಿಗೆ ಬೇಡಿಕೆ ಹೆಚ್ಚುತ್ತಿರುತ್ತದೆ. ಅದಕ್ಕೇ ಈ ಫಾಸ್ಟ್ ಬ್ರೀಡರ್ ತಂತ್ರಜ್ಞಾನಕ್ಕೆ ಹೊಸ ಹೊಳಪು ಕೊಟ್ಟು ಜಗತ್ತಿಗೆ ಹೊಸ ದಾರಿಯನ್ನು ತೋರಿಸುವ ಛಲ ಅವರದಾಗಿದೆ. ವಿದ್ಯುತ್ ಉತ್ಪಾದನ ರಂಗಕ್ಕೆ ಹೊಸದಾಗಿ ಕಾಲಿಡುವ ಈ ಜೋಡಿ ನಮಗಿಂತ ಮೊದಲು ಯಶಸ್ವಿ ಆಗಿಬಿಟ್ಟರೆ ಅದು ನಮ್ಮ ವಿಜ್ಞಾನಿಗಳ ಪ್ರತಿಷ್ಠೆಯ ಪ್ರಶ್ನೆಯೂ ಆಗಬಹುದು.

ಫಾಸ್ಟ್ ಬ್ರೀಡರ್ ತಂತ್ರಜ್ಞಾನ ಎಂದರೆ ನಮ್ಮ ಮಾಮೂಲಿನ ಕೈಗಾ, ಕೂಡಂಕುಲಂ ಹಾಗೆ ಸಾದಾ ಸೀದಾ ಪರಮಾಣು ಸ್ಥಾವರ ಅಲ್ಲ. ಇದು ಎರಡನೇ ಪೀಳಿಗೆಯ ತಂತ್ರಜ್ಞಾನ. ಇದರ ವಿಶೇಷ ಏನೆಂದರೆ ಅಷ್ಟೊಂದು ವಿಕಿರಣವನ್ನು ಸೂಸುವುದಿಲ್ಲ. ಮೇಲಾಗಿ, ತಾನು ಉರಿಸಿದ್ದಕ್ಕಿಂತ ಹೆಚ್ಚಿನ ಇಂಧನವನ್ನು ಇದು ಉತ್ಪಾದಿಸುತ್ತದೆ. ಒಂದರ್ಥದಲ್ಲಿ ತನ್ನ ಬೂದಿಯಿಂದಲೇ ಮತ್ತೊಮ್ಮೆ ಶಕ್ತಿಶಾಲಿಯಾಗಿ ಎದ್ದು ಬರುವ ಫೀನಿಕ್ಸ್ ಪಕ್ಷಿಯ ಹಾಗೆ. ಐವತ್ತು ವರ್ಷಗಳ ಹಿಂದೆ ಫ್ರಾನ್ಸ್‌ನಲ್ಲಿ ಸ್ಥಾಪಿತವಾದ ಇಂಥದ್ದೊಂದು ರಿಯಾಕ್ಟರಿಗೆ 'ಫೀನಿಕ್ಸ್' ಎಂತಲೇ ಹೆಸರಿತ್ತು. ಅದು ತಾನು ಉರಿಸಿದ್ದಕ್ಕಿಂತ 16% ಹೆಚ್ಚು ಪ್ಲುಟೋನಿಯಂ ಇಂಧನವನ್ನು ಉತ್ಪಾದಿಸಿ ಬೀಗುತ್ತಿತ್ತು. ಅದನ್ನು ಸಾಧಿಸಿದ ಫ್ರೆಂಚರ ಆಗಿನ ಉತ್ಸಾಹ ಎಷ್ಟಿತ್ತೆಂದರೆ ಅಲ್ಲೇ ಅದಕ್ಕಿಂತ ಉತ್ತಮವಾದ 'ಸೂಪರ್ ಫೀನಿಕ್ಸ್' ಹೆಸರಿನ ಹೊಸದೊಂದು ಸ್ಥಾವರವೂ ನಿರ್ಮಾಣವಾಯಿತು. ಭಾರೀ ವೆಚ್ಚ, ಭಾರೀ ಪ್ರತಿಭಟನೆಗಳ ನಡುವೆಯೂ ಅದು ವಿದ್ಯುತ್ ಉತ್ಪಾದಿಸಲು ತೊಡಗಿತು. ಅದರ ಥಳಕನ್ನು, ಆರಂಭಿಕ ಯಶಸ್ಸನ್ನು ಕಂಡು ಅದಕ್ಕಿಂತ ದೊಡ್ಡ ಆಸ್ಟ್ರಿಡ್ ಹೆಸರಿನ ಸ್ಥಾವರವೊಂದು (Astrid, ಅಂದರೆ ಅಪ್ಸರೆ) ಫ್ರಾನ್ಸ್‌ನಲ್ಲೇ ತಲೆ ಎತ್ತಿತು. ಅದಕ್ಕಿಂತ ಇನ್ನೂ ದೊಡ್ಡದನ್ನು ಪಕ್ಕದ ಜರ್ಮನಿಯ ಕಲ್ಕಾರ್ ಎಂಬಲ್ಲಿ ನಿರ್ಮಿಸಲಾಯಿತು. ಕೊನೆಗೆ ಏನಾಯಿತು ಅನ್ನೋ ತಮಾಷೆ ನೋಡಿ: ಈ ನಾಲ್ಕೂ ಫೀನಿಕ್ಸ್‌ಗಳು ನೆಲ ಕಚ್ಚಿದವು. ಸೂಪರ್ ಫೀನಿಕ್ಸ್‌ನ ನಿರ್ವಹಣೆ ಅಸಾಧ್ಯವೆಂದು ನಾಲ್ಕೇ ವರ್ಷಗಳಲ್ಲಿ ಮುಚ್ಚಲಾಯಿತು. ಅದಕ್ಕೂ 6ರ ಮುಂದೆ ಹತ್ತು ಸೊನ್ನೆಯಷ್ಟು ಫ್ರಾಂಕ್ ಖರ್ಚಾಗಿತ್ತು. ಅತ್ತ ಆಸ್ಟ್ರಿಡ್ ಅಪ್ಸರೆ ವಿದ್ಯುತ್ ಉತ್ಪಾದನೆಗೆ ಸಿದ್ಧವಾಗಿದ್ದರೂ ಅದನ್ನು ಸಮಾಧಿ ಮಾಡಲಾಯಿತು. ಅದಕ್ಕೆಂದು ಜಗತ್ತಿನಲ್ಲೇ ಅತಿ ಎತ್ತರದ ಕೂಲಿಂಗ್ ಟವರ್ ಕಟ್ಟಿಸಿದ್ದನ್ನೂ ಸಿಡಿಮದ್ದು ಸ್ಫೋಟಿಸಿ ಬೀಳಿಸಲಾಯಿತು. ಜರ್ಮನಿಯ ಕಲ್ಕಾರ್ ಸ್ಥಾವರ ಕೂಡ ಪೂರ್ತಿ ಸಜ್ಜಾಗಿ ನಿಂತಿದ್ದರೂ ಅದನ್ನು ಮುಚ್ಚಬೇಕೆಂದು ಸತ್ಯಾಗ್ರಹ ಹೂಡಿದವರಲ್ಲಿ ಅದರ ಮುಖ್ಯ ಎಂಜಿನಿಯರ್ ಕೂಡ ಇದ್ದರು! ಈಗ ಅದರ ಭಾರೀ ಗಾತ್ರದ ಕೂಲಿಂಗ್ ಟವರ್ ಮೇಲೆ ಜೋಕಾಲಿ ಕಟ್ಟಿ ಅದನ್ನು ಡಿಸ್ನಿ ಮಾದರಿಯ ಮೋಜಿನಾಟದ ಕೇಂದ್ರವನ್ನಾಗಿ ಪರಿವರ್ತಿಸಲಾಗಿದೆ.

ಫಾಸ್ಟ್ ಬ್ರೀಡರ್ ತಂತ್ರಜ್ಞಾನವನ್ನು ಅಮೆರಿಕವೂ ಕೈಬಿಟ್ಟಿದೆ. ಜಪಾನೀಯರು ಮೊಂಜು ಎಂಬಲ್ಲಿ ಸತತ 30 ವರ್ಷ ಏಗಾಡಿ ಅದಕ್ಕೆ ವಿದಾಯ ಹೇಳಿದ್ದಾರೆ. ಸದ್ಯಕ್ಕೆ ರಷ್ಯಾದಲ್ಲಿ ಮಾತ್ರ ಒಂದು ರಿಯಾಕ್ಟರ್ ಜೋಡಿ ಕೆಲಸ ಮಾಡುತ್ತಿದೆ. ಚೀನಾ ತಾನೂ ಒಂದು ಕೈ ನೋಡಲು ಹೊರಟಿದೆ.

ಈ ಬಗೆಯ ನ್ಯೂಕ್ಲಿಯರ್ ತಂತ್ರಜ್ಞಾನದ ದೊಡ್ಡ ಸವಾಲು ಏನೆಂದರೆ, ಅದರ ಗರ್ಭದಲ್ಲಿನ ಪ್ಲುಟೋನಿಯಂ ಇಂಧನವನ್ನು ದ್ರವರೂಪದ ಸೋಡಿಯಂ (ನೇಟ್ರಿಯಂ) ಲೋಹದಲ್ಲಿ ಮುಳುಗಿಸಿ ಉರಿಸಬೇಕು. ನೀರಲ್ಲಿ ಅಥವಾ ಭಾರಜಲದಲ್ಲಿ ಮುಳುಗಿಸಿಟ್ಟರೆ ಅದು ಕಿಡಿ ಹೊಮ್ಮಿಸುವುದಿಲ್ಲ. ಸೋಡಿಯಂ ದ್ರವ ತೀರ ಕುದಿಬಿಂದುವಿಗೆ ಬರುತ್ತಿದ್ದಂತೆ ಆ ಶಾಖವನ್ನು ನೀರಿನ ತೊಟ್ಟಿಗೆ ಸಾಗಿಸಿ ಆ ಹಬೆಯಲ್ಲಿ ಚಕ್ರ ತಿರುಗಿಸಿ ವಿದ್ಯುತ್ ಹೊಮ್ಮಬೇಕು. ಸೋಡಿಯಮ್ಮಿಗೂ ನೀರಿಗೂ ಬದ್ಧ ವೈರ. ಹೈಸ್ಕೂಲ್ ಲ್ಯಾಬಿನಲ್ಲಿ ಸೀಮೆಣ್ಣೆಯಲ್ಲಿ ಮುಳುಗಿಸಿಟ್ಟ ಸೋಡಿಯಂ ಚಕ್ಕೆಯನ್ನು ಚಿಮ್ಮಟದಲ್ಲಿ ಎತ್ತಿ ನೀರಿಗೆ ಅದ್ದಿದಾಗ ಚಟಪಟ ಕಿಡಿ ಹಾರುವುದನ್ನು ನಾವೆಲ್ಲ ನೋಡಿರುತ್ತೇವೆ. ಪರಮಾಣು ಕುಲುಮೆಯಲ್ಲಿ ಸ್ಫೋಟಕಾರಿ ಪ್ಲುಟೋನಿಯಂ ಸುತ್ತ ನೂರಿನ್ನೂರು ಟನ್ ಸೋಡಿಯಂ ದ್ರವವನ್ನು ತುಂಬಿ, ಅದರೊಳಕ್ಕೇ ನೀರಿನ ಕೊಳವೆಗಳನ್ನು ಹಾಯಿಸಿ ರಿಮೋಟ್ ಹಿಡಿದು ಏನೆಲ್ಲ ಸರ್ಕಸ್ ಮಾಡಬೇಕು. ಅಂತೂ ನುಂಗಲಾರದ, ಉಗುಳಬಾರದ ಆಸ್ತಿಯೊಂದಿಗೆ ನಮ್ಮ ವಿಜ್ಞಾನಿಗಳು ಏಗುತ್ತಿದ್ದಾರೆ.

ಹೋಮಿ ಭಾಭಾರ ಕನಸು ತುಂಬ ದೊಡ್ಡದಿತ್ತು. ಈ ತಂತ್ರಜ್ಞಾನ ನಮಗೆ ಸಿದ್ಧಿಸಿದರೆ, ಮುಂದಿನ 3ನೇ ಹಂತದಲ್ಲಿ ಯುರೇನಿಯಂ ಬದಲು ಥೋರಿಯಂ ಎಂಬ ಸಾಧು ಸ್ವಭಾವದ ಧಾತುವನ್ನೇ ಕುಲುಮೆಯಲ್ಲಿ ಉರಿಸಬಹುದು. ನಮ್ಮ ದೇಶದ ಐದು ರಾಜ್ಯಗಳ ಕಡಲತೀರದಲ್ಲಿ ಥೋರಿಯಂ ಮರಳಿನ ಖಜಾನೆಯೇ ಇದೆ. ಯಶಸ್ವಿಯಾದರೆ ನಾವು ನ್ಯೂಕ್ಲಿಯರ್ ವಿಷಯದಲ್ಲಿ ವಿಶ್ವಗುರು ಅಷ್ಟೇ ಅಲ್ಲ, ವಿಶ್ವದೊರೆ ಆಗುತ್ತೇವೆ. (ಮಡಗಾಸ್ಕರ್ ಹಿಂದೆ ಫ್ರೆಂಚರ ಅಧೀನದಲ್ಲಿದ್ದಾಗ, ಅಲ್ಲಿನ ಮರಳಿನಲ್ಲಿ ಥೋರಿಯಂ ಇದೆಯೆಂದೇ ಫ್ರೆಂಚರು ಈ ತಂತ್ರಜ್ಞಾನದ ಹಿಂದೆ ಬಿದ್ದಿದ್ದರು. ಈಗ ಮಡಗಾಸ್ಕರೂ ಫ್ರೆಂಚರ ಕೈಯಲ್ಲಿಲ್ಲ; ಫಾಸ್ಟ್ ಬ್ರೀಡರ್ ಅಪ್ಸರೆಯರೂ ನೆಲಕಚ್ಚಿದ್ದಾರೆ.) ಭಾಭಾ ನೇತೃತ್ವದಲ್ಲಿ 65 ವರ್ಷಗಳ ಹಿಂದೆ ಟ್ರಾಂಬೆಯಲ್ಲಿ ಆರಂಭಗೊಂಡ ಮೊದಲ ರಿಯಾಕ್ಟರಿಗೆ 'ಅಪ್ಸರಾ' ಎಂದು ಹೆಸರಿಡಲಾಗಿತ್ತು.

ಅದೆಂಥ ಅಪ್ಸರೆಯೊ, ಬಿಲ್ ಗೇಟ್ಸ್ ಕೂಡ ಅದಕ್ಕೆ ಮರುಳಾದಂತಿದೆ. ತಂತ್ರಜ್ಞಾನದ ಮಾಟವೇ ಅಂಥದ್ದು; ಈಗಿನ ಯುಗವೂ ಅಂಥದ್ದೇ ಅನ್ನಿ. ಶಕ್ತ ರಾಷ್ಟ್ರಗಳು ಕೈಲಾಗದೆ ಬಿಟ್ಟಿದ್ದಕ್ಕೆ ಶಕ್ತ ಉದ್ಯಮಿಗಳು ಕೈಚಾಚುತ್ತಾರೆ. ಆದರೂ ಯಾಕೊ, ನಮ್ಮ ಈ ಭಾವಿನಿಯನ್ನು ಆಸ್ತಿ ನಗದೀಕರಣದ ಪಟ್ಟಿಗೆ ಸೇರಿಸಿಲ್ಲವಲ್ಲ?



ಚುರುಮುರಿ



ಗೌರಿ ದುಃಖ!

• ಮಣ್ಣೆರಾಜು

ಹೊಸ ಸೀರೆಯ ರವಿಕೆಯನ್ನು ಟೈಲರ್ ಚೆನ್ನಾಗಿ ಹೊಲಿದಿಲ್ಲ ಅಂತ ಸುಮಿ ಅಪ್‌ಸೆಟ್ ಆಗಿದ್ದಳು. ಹೀಗಾಗಿ ಈ ಹಬ್ಬ ಇವಳಿಗೆ ಸಡಗರ ತಂದಿಲ್ಲ.

'ಡಾಕ್ಟರ್‌ಗಳು ಆಪರೇಷನ್ ಮಾಡಿ ಸ್ಟಿಚ್ ಹಾಕುವಷ್ಟು ಸುಲಭವಲ್ಲ ಬ್ಲೌಸ್ ಸ್ಟಿಚ್ ಮಾಡಿ ಟೈಲರ್‌ಗಳು ಹೆಂಗಸರಿಂದ ಭೇಷ್ ಅನ್ನಿಸಿಕೊಳ್ಳುವುದು' ಶಂಕ್ರಿ ಸಮಾಧಾನ ಹೇಳಿದ.

ಸುಮಿಗೆ ಸಮಾಧಾನ ಆಗಲಿಲ್ಲ. 'ಹಾಗಲ್ಲಾರೀ, ತೋಳು ಲೂಸು, ಕಂಕುಳು ಟೈಟು, ನೆಕ್ ನೆಟ್ಟಗಿಲ್ಲ, ಬ್ಯಾಕ್ ಡೀಪ್ ಕಮ್ಮಿ ಮಾಡಿ ಹೊಲಿದಿದ್ದಾನೆ ಟೈಲರ್' ಎಂದಳು.

'ಮೂಗಿಗಿಂತ ಮೂಗುತಿ ಭಾರ ಎನ್ನುವಂತೆ ಸೀರೆ ರೇಟಿಗಿಂತ ಡಬ್ಬಲ್ ದುಡ್ಡು ಕೊಟ್ಟು ಓವರ್ ಡಿಸೈನ್ ಬ್ಲೌಸ್ ಹೊಲಿಸಬೇಕಾ? ಸೆರಗಿನಲ್ಲಿ ಮುಚ್ಚಿಕೊಳ್ಳುವ ರವಿಕೆಗೆ ಕಲೆ, ಕಸೂತಿ ಅಲಂಕಾರದ ಅಗತ್ಯವಿದೆಯೇ?'

'ಗಂಡಸರಿಗೇನು ಗೊತ್ತು ಗೌರಿ ದುಃಖ? ಉಟ್ಟುಕೊಳ್ಳುವ ಸೀರೆಗಿಂತ ತೊಟ್ಟುಕೊಳ್ಳುವ ಬ್ಲೌಸಿನ ಡಿಸೈನ್ ಮುಖ್ಯ. ನೀವು ಗಂಡಸರು ಹೊಲಿಸುವ ಶರ್ಟ್, ಪ್ಯಾಂಟಿನಲ್ಲಿ ಒಂದು ತೋಳು ದೊಡ್ಡದು, ಇನ್ನೊಂದು ಚಿಕ್ಕದಾಗಿದ್ರೂ ತೆಪ್ಪಗೆ ಹಾಕಿಕೊಳ್ತೀರಿ, ನಾವು ಹಾಗಲ್ಲಾರೀ...'

'ಹೆಂಗಸರಿಗೆ ಸಮಾಧಾನವಾಗುವಂತಹ ರವಿಕೆ ಹೊಲಿಯುವ ಟೈಲರ್ ಹುಟ್ಟಿಲ್ಲಬಿಡು...'

'ನನಗೂ ಹಾಗೇ ಅನ್ನಿಸುತ್ತೇರೀ... ನನ್ನ ಹೊಸ ಸೀರೆ ನೋಡುವ ನೆಪದಲ್ಲಿ ಬಂದ ಪಕ್ಕದ ಮನೆಯವಳು ಸೀರೆ ಚೆನ್ನಾಗಿದೆ, ಅದಕ್ಕೆ ತಕ್ಕಂತೆ ಬ್ಲೌಸಿನ ಸ್ಟಿಚ್ಚಿಂಗ್ ಸರಿಯಿಲ್ಲ ಎಂದುಬಿಟ್ಟಳು. ಇದಕ್ಕಿಂತ ಅವಮಾನ ಬೇಕೇನ್ರೀ?' ಸುಮಿಗೆ ಸಂಕಟ.

'ಅವಳು ಹಾಗೇಬಿಡು, ಯಾವುದನ್ನೂ ಸಹಿಸುವುದಿಲ್ಲ, ನೀನು ಒಳ್ಳೆ ಸೀರೆ ತಗೊಂಡಿದ್ದಕ್ಕೆ ಅಸೂಯೆಪಟ್ಟಿದ್ದಾಳೆ'.

'ಅದೇನೇ ಆಗ್ಲಿರೀ, ಬ್ಲೌಸ್‌ನ ಸ್ಟಿಚ್ಚಿಂಗ್ ನನಗಂತೂ ಸಮಾಧಾನ ಆಗಿಲ್ಲ. ಹಬ್ಬಕ್ಕೆ ನಾನು ಆ ಬ್ಲೌಸ್ ತೊಟ್ಟು ಹೊಸ ಸೀರೆ ಉಟ್ಟುಕೊಳ್ಳುವುದಿಲ್ಲ, ಹೊಸ ನೈಟಿ ಧರಿಸಿ ಹಬ್ಬ ಮಾಡಿ ಮುಗಿಸ್ತೀನಿ...'

ಸುಮಿ ಕಠಿಣ ನಿರ್ಧಾರ ಪ್ರಕಟಿಸಿದಳು.

ಸಂಗತ

ಕಳೆದುಹೋಗಿದೆ ಮೌನವೆಂಬ ಮಾಣಿಕ್ಯ

ಮಾತಿನ ಅಬ್ಬರದಲ್ಲಿ ಮೌನದ ಮಹತ್ವ ಅರಿಯುವುದಾದರೂ ಹೇಗೆ?

• ಡಾ. ಜ್ಯೋತಿ

ಮನುಷ್ಯನ 'ನಾನು' ಎನ್ನುವ ಸ್ವಕೇಂದ್ರಿತ ಅಹಂಕಾರವು ಬಹುಶಃ ಹೆಚ್ಚೆಚ್ಚು ಮಾತನಾಡಲು ಪ್ರೇರೇಪಿಸುತ್ತದೆ. ಇದರ ಹಿಂದೆ, ತಾನು ಮಾತಿನ ಮೂಲಕ ಹಂಚಿಕೊಳ್ಳುವ ಆಲೋಚನಾ ಕ್ರಮವನ್ನು ಜಗತ್ತು ಆಲಿಸಬೇಕು ಮಾತ್ರವಲ್ಲ ಒಪ್ಪಬೇಕು ಎನ್ನುವ ಆಗ್ರಹವೂ ಇದೆ. ಹಾಗಾಗಿಯೇ, ಬಹಳಷ್ಟು ಮಂದಿ ಮಾತಿನ ಸ್ಪರ್ಧೆಯಲ್ಲಿಯೇ ಕಾಲಕಳೆಯುತ್ತಾರೆ.

ಮನುಷ್ಯ ತನಗೆ ಮಾತ್ರ ಮಾತನಾಡಲು ಬರುತ್ತದೆ, ಉಳಿದ ಜೀವರಾಶಿಗಳಿಗೆ ಬರುವುದಿಲ್ಲವೆನ್ನುವ ಗ್ರಹಿಕೆಯಿಂದ, ಅವುಗಳನ್ನು ಹಾಗೂ ಸದಾ ಮೌನದ ಧ್ಯಾನ ಸ್ಥಿತಿಯಲ್ಲಿರುವ ಪ್ರಕೃತಿಯನ್ನು ತನ್ನ ಸಂಪೂರ್ಣ ನಿಯಂತ್ರಣಕ್ಕೆ ತೆಗೆದುಕೊಂಡು, ತನ್ನಿಷ್ಟದಂತೆ ಬಳಸಿಕೊಳ್ಳುತ್ತಿದ್ದಾನೆ. ಒಂದು ರೀತಿಯಲ್ಲಿ, ಇದು ಮನುಷ್ಯನ ಮಾತಿನ ಪ್ರಪಂಚ ಮತ್ತು ಪ್ರಕೃತಿಯ ಮೌನದ ನಡುವಿನ ಸೆಣಸಾಟ. ಸಾಮಾನ್ಯವಾಗಿ ನಾವು ಗಮನಿಸಿದಂತೆ, ಮಾತಿನ ಗದ್ದಲವೆಲ್ಲಾ ಮುಗಿದ ಮೇಲೆ, ಅಂತಿಮವಾಗಿ ಮೌನವೇ ಗೆಲ್ಲುವುದು.

ಇನ್ನು, ಮಾತು ಮನುಷ್ಯ ಮನುಷ್ಯರ ನಡುವೆ ಪ್ರೀತಿ ಹಂಚಿದಷ್ಟೇ ದ್ವೇಷವನ್ನೂ ಬಿತ್ತರಿಸುವುದಿದೆ. ಹಿಂದೆ, ಋಷಿಮುನಿಗಳು ಮೌನವನ್ನು ಅರಸಿಕೊಂಡು ಕಾಡಿನಲ್ಲಿ ತಪಸ್ಸು ಮಾಡುತ್ತಾ ಮನುಷ್ಯ ಜೀವನದ ಒಳಾರ್ಥಗಳನ್ನು ಹುಡುಕಾಡಿರುವುದನ್ನು ಓದಿದ್ದೇವೆ. ತದ್ವಿರುದ್ಧವಾಗಿ, ವರ್ತಮಾನದ ಮಾತಿನ ಪ್ರಪಂಚಕ್ಕೆ ಸಿಕ್ಕ ದೊಡ್ಡ ಉಡುಗೊರೆಯೆಂದರೆ, ಮೊಬೈಲ್ ಫೋನಿನ ಆವಿಷ್ಕಾರ. ಇದಾದ ನಂತರ ಮನುಷ್ಯ ಮಾತನಾಡುವುದನ್ನು, ಅಸಂಬದ್ಧ ಹರಟೆಯನ್ನು ನಿಲ್ಲಿಸಿಯೇ ಇಲ್ಲವೆನ್ನಬಹುದು.

ಈ ಸಂದರ್ಭದಲ್ಲಿ ನೆನಪಾಗುವ ಗಾದೆ 'ಮಾತು ಬೆಳ್ಳಿ, ಮೌನ ಬಂಗಾರ'. ಮೌನ ಯಾಕೆ ಬಂಗಾರ ಎನ್ನುವ ಪ್ರಶ್ನೆಗೆ ಉತ್ತರ ಹುಡುಕಾಡಿದರೆ, ಮೌನದಲ್ಲಿಯೇ ಮನುಷ್ಯನ ಒಳ ಅರಿವಿನ ದಾರಿ ಅಡಗಿದೆ ಎನ್ನುವ ಸತ್ಯದರ್ಶನವಾಗುತ್ತದೆ. ರಮಣ ಮಹರ್ಷಿ ಹೇಳುವಂತೆ, ಸೊಬಗಿನ ಮಾತಿಗಿಂತ, ಆಲೋಚನಾಮುಕ್ತ ಮೌನ ಸ್ಥಿತಿ ಅತ್ಯುನ್ನತ ಸಾಧನೆ. ಮೌನವೆಂಬ ಭಾಷೆಯು ನಮ್ಮ ಮನಸ್ಸಿನೊಳಗೆ ತೊರೆಯಂತೆ ನಿರಂತರವಾಗಿ ಹರಿಯುತ್ತಲೇ ಇರುತ್ತದೆ. ನಾವು ಮಾತನಾಡುವುದರ ಮೂಲಕ ಅದರ ಹರಿವಿಗೆ ಅಣೆಕಟ್ಟು ನಿರ್ಮಿಸುತ್ತಿರುತ್ತೇವೆ. ಹಾಗಾಗಿ, ಹೆಚ್ಚಿನ ಸಂದರ್ಭದಲ್ಲಿ ಮಾತು ಅಪ್ರಸ್ತುತ.

ಮಾತಿನ ಮುಂದುವರಿದ ಭಾಗವಾದ ಆಲೋಚನಾ ಲಹರಿಯನ್ನು ನಾವು ನಿಲ್ಲಿಸಿದಾಗ ಮಾತ್ರ, ಸಾರ್ವತ್ರಿಕ ಭಾಷೆ ಮೌನದ ಮೂಲಕ ಸರಿಯಾಗಿ ಬದುಕುವುದು ಹಾಗೂ ಪ್ರಪಂಚವನ್ನು ಅರ್ಥೈಸಿಕೊಳ್ಳುವುದು ಸುಲಭವಾಗುತ್ತದೆ. ಹೀಗೆ, ಆಡಂಬರದ ಮಾತಿನ ಪ್ರಪಂಚದ ಹಂಗುಗಳಿಂದ ಬೇರ್ಪಡಿಸಿಕೊಂಡ ಮನುಷ್ಯ, ಯಾವಾಗಲೂ ಏಕಾಂತದಲ್ಲಿ ತನ್ನನ್ನು ಅರಿತುಕೊಳ್ಳುತ್ತಾ ನಿಜವಾದ ಆನಂದ ಅನುಭವಿಸುತ್ತಾನೆ.

ಇದೇ ತಾತ್ಪರ್ಯವನ್ನು ಪ್ರತಿಬಿಂಬಿಸುವ ಕವನ, ಡಿವಿಜಿಯವರ 'ವನಸುಮದೊಲೆನ್ನ...' ಇದು, ಮೌನವಾಗಿದ್ದುಕೊಂಡೇ ಸಾಧಿಸುವುದರ ಮಹತ್ವವನ್ನು ತಿಳಿಸುತ್ತದೆ. ಇದು ಮಾತುರಹಿತ ಮೌನವಲ್ಲ. ಬದಲಾಗಿ, ಸ್ಥಿತಪ್ರಜ್ಞ ಮನಸ್ಸಿನ ಮೌನ. ಬಹಳಷ್ಟು ಸಾಧನೆ ಮಾಡಿಯೂ 'ನಾನು' ಎನ್ನುವ ಅಹಂಕಾರ ಮೂಡದ ಮೌನ. ಇದು, ಜೀವನದ ಪರಿಪೂರ್ಣತೆ ಸಾಧಿಸುವ ಹಾದಿಯಲ್ಲಿ ನಿರಂತರವಾಗಿ ನಡೆದಾಗ, ಜೊತೆಯಾಗುವ ವಿನಮ್ರತೆಯ ಮೌನ.

ಆದರೆ, ವರ್ತಮಾನದ ಜಗತ್ತು, ಮಾತಿನ ವೈಭೋಗದ ಮೇಲೆ ನಿಂತಿದೆ. ಇಲ್ಲಿ ಮಾತಿನ ಮಲ್ಲರಿಗಷ್ಟೇ ವಿಶೇಷ ಸ್ಥಾನಮಾನ. ಸ್ವಯಂ ಮೌಲ್ಯಮಾಪನ ಮಾಡಿ, ನಮ್ಮ ಸಾಧನೆಯನ್ನು ಘಂಟಾಘೋಷವಾಗಿ ಹೇಳಿಕೊಂಡರಷ್ಟೇ ಜಗತ್ತಿನ ಎಲ್ಲಾ ಬಿರುದಾವಳಿಗಳು ಸಿಗುತ್ತವೆ. ಹಾಗಾಗಿಯೇ, ಸದಾ ವೇದಿಕೆಯಲ್ಲಿರಲು ಇಚ್ಛಿಸುವ ಬಹುತೇಕ ಮಂದಿ, ಮಾತನ್ನೇ ಬಂಡವಾಳವಾಗಿಸಿಕೊಂಡು ಪ್ರಾಪಂಚಿಕ ಯಶಸ್ಸು ಗಳಿಸುವುದನ್ನು ನಾವು ಕಾಣಬಹುದು.



ಈ ಮಾತಿನ ಅಬ್ಬರದ ನಡುವೆಯೂ, ಬದುಕನ್ನು ಅರ್ಥವತ್ತಾಗಿ ಬಾಳಬೇಕೆನ್ನುವವರಿಗೆ ಮಾತಿನ ಅಗತ್ಯ ಅಷ್ಟು ಕಂಡುಬರುವುದಿಲ್ಲ. ಹಾಗಿದ್ದಲ್ಲಿ, ಮಾತಿನ ಆರ್ಭಟದ ನಡುವೆ ಮೌನದ ಮಹತ್ವವನ್ನು ಅರಿಯುವುದಾದರೂ ಹೇಗೆ?

ಡಿವಿಜಿಯವರು, 'ಕಾಡಿನಲ್ಲಿ ಸದ್ದುಗದ್ದಲವಿಲ್ಲದೆ ಅರಳುವ ಹೂವೊಂದು, ತನ್ನ ಸುತ್ತಲಿನ ಜಗತ್ತಿಗೆ ಮೌನವಾಗಿ ಸುವಾಸನೆಯನ್ನು ಪಸರಿಸುವ ಹಾಗೆ, ನನ್ನ ಜೀವನ ಕೂಡ ಮಾತಿನ ಅಬ್ಬರವಿಲ್ಲದೆ, ಮೌನದಲ್ಲಿ ನಿರಂತರವಾಗಿ ವಿಕಸಿಸುವುದಕ್ಕೆ, ನನ್ನ ಮನವನ್ನು ಅಣಿಗೊಳಿಸು' ಎಂದು ಗುರುಸ್ವರೂಪನಾದ ಭಗವಂತನಲ್ಲಿ ಮೊರೆಯಿಡುತ್ತಾರೆ. ಇಲ್ಲಿ, ಸಹಜವಾಗಿ ಮಾತಿನ ಹೊಗಳಿಕೆ ಕೇಳಬಯಸುವ ಮನಸ್ಸನ್ನು, ಮೌನಕ್ಕೆ ಅಣಿಗೊಳಿಸುವುದು ಬಹಳ ಸಾಹಸದ ಕೆಲಸವೇ ಸರಿ. ಹಾಗೆಯೇ, 'ನಾನು ಗಳಿಸಿದ ಜ್ಞಾನದಿಂದ ಜಗತ್ತಿಗೆ ಸಂತೋಷವನ್ನು ಕೊಡುತ್ತಿದ್ದೇನೆ ಎನ್ನುವ ಅಹಂಕಾರವನ್ನು ಕಿತ್ತೊಗೆದು, ಜಗದ ಹೊಗಳಿಕೆಗೆ ಹಿಗ್ಗಿ ಅದರಲ್ಲಿಯೇ ಕಳೆದು ಹೋಗದಂತಹ ವಿನಮ್ರತೆಯನ್ನು ದಯಪಾಲಿಸು' ಎನ್ನುತ್ತಾರೆ.

ಈ ತೋರಿಕೆಯ ಪ್ರಪಂಚದಲ್ಲಿ, ಮಾತಿನ ಬಂಡವಾಳದ ಮೇಲೆ ಜಗತ್ತಿನ ಬಹುತೇಕ ವ್ಯವಹಾರಗಳು ನಡೆಯುತ್ತವೆ. ಆದರೆ, ಮೌನವೆನ್ನುವುದು ನಿಜವಾದ ಸಾಧಕನ ಶ್ರೇಷ್ಠ ಗುಣ. ಯಾಕೆಂದರೆ, ತನ್ನ ಸಾಧನೆಯನ್ನು ಮಾತಿನ ಡಂಗುರ ಹೊಡೆಸದೆ, ಜಗತ್ತಿನ ಯಾವುದೇ ಫಲಾಪೇಕ್ಷೆಯಿಲ್ಲದೆ, ಮೌನವಾಗಿ ಸಾಧಿಸುವುದರಲ್ಲಿಯೇ ಜೀವನದ ಅರ್ಥ ಹಾಗೂ ಆನಂದ ಕಂಡುಕೊಳ್ಳುವುದನ್ನು ಸಿದ್ಧಿಸಿಕೊಳ್ಳುವುದು, ಅಷ್ಟು ಸುಲಭವಲ್ಲ.

ಲೇಖಕಿ: ಸಹಾಯಕ ಪ್ರಾಧ್ಯಾಪಕಿ, ತುಮಕೂರು ವಿ.ವಿ.

ವಾಚಕರ ವಾಣಿ

ತಾಳೆ ಬೇಸಾಯ: ಪರಿಸರ, ಆಹಾರ ಭದ್ರತೆಗೆ ಮಾರಕ

'ತಣಿಯದ ತಾಳೆ ಎಣ್ಣೆಯ ದಾಹ' ಎಂಬ ವಿ.ಗಾಯತ್ರಿ ಅವರ ಲೇಖನ (ಪ್ರ.ವಾ., ಸೆ. 6) ಮಾಹಿತಿಪೂರ್ಣವಾಗಿದೆ. ಭಾರತದಲ್ಲಿ ದೊಡ್ಡ ರೀತಿಯಲ್ಲಿ ಸ್ಥಳೀಯ ಜೀವವೈವಿಧ್ಯ ನಾಶವಾಗಿದೆ. ದೇಶದ ಕಾಡು, ಕೃಷಿ, ಕಳೆ, ಬೆಳೆ, ಜಾನುವಾರು ಎಲ್ಲದರಲ್ಲಿಯೂ ಶೇ 40-50ರಷ್ಟು ಪರಕೀಯ ಪ್ರಭೇದಗಳಿವೆ. ಈ ಎಣ್ಣೆತಾಳೆಯೂ ಅಂತಹ ಒಂದು ಪರಕೀಯ ಪ್ರಭೇದದ ಸಸ್ಯ. ಸ್ಥಳೀಯ ಆವಾಸ ಪ್ರದೇಶಗಳನ್ನು ವೇಗವಾಗಿ ನಶಿಸುವಂತೆ ಮಾಡುವಲ್ಲಿ ಇಂತಹ ಬೆಳೆಗಳ ಪಾತ್ರ ಅಪಾರ. ಹೀಗಿರುವಾಗ, ದೇಶದಲ್ಲಿ ಈಗ ನಾವು ಒಮ್ಮೆಗೇ ಆರೂವರೆ ಲಕ್ಷ ಹೆಕ್ಟೇರ್ ಭೂಮಿಯನ್ನು ಎಣ್ಣೆತಾಳೆ ಬೇಸಾಯದಡಿ ತಂದರೆ ನಮ್ಮ ಸೂಕ್ಷ್ಮ ಪರಿಸರ ವ್ಯವಸ್ಥೆಯ ಮೇಲೆ ಎಂತಹ ಪರಿಣಾಮ ಉಂಟಾಗಬಹುದು! ಅಧಿಕವಾದ ನೀರು, ಗೊಬ್ಬರ, ಕೀಟನಾಶಕ ಬಳಕೆಯ ಜೊತೆಗೆ ವಿನಿಯೋಗವಾಗದೆ ಉಳಿಯುವ ಅಪಾರ ತ್ಯಾಜ್ಯ ರಾಶಿಗಳು ಸ್ಥಳೀಯ ಕೃಷಿ ಪರಿಸರ ವ್ಯವಸ್ಥೆಗಳನ್ನು ಶಾಶ್ವತವಾಗಿ ಮಾರ್ಪಡಿಸಿಬಿಡುತ್ತವೆ.

ಕೇಂದ್ರ ಸರ್ಕಾರವು ₹ 11 ಸಾವಿರ ಕೋಟಿ ಪ್ರೋತ್ಸಾಹಧನವನ್ನು ಎಣ್ಣೆತಾಳೆಯ ಬದಲು ಎಣ್ಣೆಕಾಳುಗಳ ಉತ್ತೇಜನಕ್ಕೆ ಕೊಡಲಿ. ಎಣ್ಣೆಕಾಳಿನ ಬೆಳೆಗಳು ಅಪಾರ ಪರಿಸರ ಸೇವೆ ಒದಗಿಸುತ್ತವೆ. ಶೇಂಗಾ, ಸಾಸಿವೆ, ಎಳ್ಳು, ಉಚ್ಚೆಳ್ಳು, ಸೂರ್ಯಕಾಂತಿ, ಕುಸುಬೆ ಇವೆಲ್ಲಾ ಮಳೆಯಾಶ್ರಿತದಲ್ಲಿ ಬೆಳೆಯುವ ಅಲ್ಪಕಾಲಿಕ ಬೆಳೆಗಳು. ವಿವಿಧ ಏಕದಳ, ದ್ವಿದಳ ಧಾನ್ಯಗಳೊಂದಿಗೆ ಸಹಬೆಳೆಗಳಾಗಿ ಬೆಳೆಯುವ ಇವು ತಮ್ಮ ಆಕರ್ಷಕ ಹಳದಿ ಹೂವುಗಳಿಂದ ಪರಾಗಸ್ಪರ್ಶಿಗಳನ್ನು ಆಕರ್ಷಿಸಿ ಇತರ ಬೆಳೆಗಳಲ್ಲೂ ಶೇ 25ರಷ್ಟು ಇಳುವರಿ ಹೆಚ್ಚಿಸುತ್ತವೆ. ಜಾನುವಾರುಗಳಿಗೆ ಮೇವಿನ ಭದ್ರತೆಯನ್ನೂ ಒದಗಿಸುತ್ತವೆ.

ಆರೋಗ್ಯದ ವಿಷಯಕ್ಕೆ ಬಂದರೆ, ಒಂದೇ ಥರದ ಎಣ್ಣೆಯನ್ನು ಮತ್ತು ಅದನ್ನು ಬಳಸಿ ಮಾಡಿದ ಸಿದ್ಧ ಆಹಾರಗಳನ್ನು ಸೇವಿಸುವುದು ಮೆದುಳಿನ ಮೇಲೆ ಪರಿಣಾಮ ಬೀರುತ್ತದೆ. ಮಕ್ಕಳು ಸಿದ್ಧ ಆಹಾರವನ್ನು ಅತಿಯಾಗಿ ಇಷ್ಟಪಡುತ್ತಾರೆ ಮತ್ತು ಇದು ಅವರ ಮಾನಸಿಕ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿರುವುದನ್ನು ಗಮನಿಸಬಹುದು. ಭತ್ತದ ಗದ್ದೆಗಳನ್ನು, ಗಿರಿಜನರ ಬೇಸಾಯ ಭೂಮಿಯನ್ನು ತಾಳೆ ಬೇಸಾಯಕ್ಕೆ ಬಳಸುವುದು ಜನರ ಆಹಾರ ಭದ್ರತೆ ಮತ್ತು ಕೃಷಿ ಪರಿಸರ ವ್ಯವಸ್ಥೆಗೆ ತೀವ್ರ ಆಘಾತಕಾರಿ ಎನ್ನುವುದನ್ನು ವಿಜ್ಞಾನಿಗಳು ಮರೆಯದಿರಲಿ.

ಅ.ನಾ.ಯಲ್ಲಪ್ಪ ರೆಡ್ಡಿ, ಬೆಂಗಳೂರು

ನೆನಪಾಗುತ್ತಿದೆ ಕುಮಾರವ್ಯಾಸನ ಮಾತು...

ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಎನ್.ರವಿಕುಮಾರ್ ಅವರು, 'ಬೆಲೆ ಏರಿಕೆಯಾಗಿದೆ ಎಂದು ಜನರು ಊಟ ಮಾಡುವುದು, ಪೂಜೆ ಮಾಡುವುದನ್ನು ಬಿಟ್ಟಿದ್ದಾರೆಯೇ?' ಎಂದು ಹೇಳಿ (ಪ್ರ.ವಾ., ಸೆ. 7) ಅಗತ್ಯ ವಸ್ತುಗಳ ಬೆಲೆಯೇರಿಕೆಯನ್ನು ಸಮರ್ಥಿಸಿಕೊಂಡಿದ್ದಾರೆ.

ಇದು, ಸಾಮಾನ್ಯ ಜನರ ಬಗೆಗೆ ಜನಪ್ರತಿನಿಧಿಗಳು ಸಂವೇದನಾಶೂನ್ಯರಾಗುತ್ತಿರುವುದರ ಸೂಚಕ. ಹಸಿವು ಎಂದರೇನೆಂದು ಇವರು ಅರಿಯದೆ ಇರುವುದಷ್ಟೇ ಅಲ್ಲ ಬಡವರ ಹಸಿವಿನ ಸಮಸ್ಯೆಯ ಬಗೆಗಿನ ಅಣಕದ ಮನಃಸ್ಥಿತಿಯನ್ನು ತೋರಿಸುತ್ತದೆ!

ಕನ್ನಡದ ಮಹಾಕವಿ ಕುಮಾರವ್ಯಾಸ ಹೇಳಿದ, 'ಅರಸು ರಾಕ್ಷಸ, ಮಂತ್ರಿಯೆಂಬುವ| ಮೊರೆವ ಹುಲಿ ಪರಿವಾರ ಹದ್ದಿನ| ನೆರವಿ ಬಡವರ ಬಿನ್ನಪವನಿನ್ನಾರು ಕೇಳುವರು| ಉರಿಉರಿವುತಿದೆ ದೇಶ...' ಎಂಬ ಮಾತು ಥಟ್ಟನೆ ನೆನಪಾಗಿ ವಿಷಾದದ ಭಾವ ಆವರಿಸಿಕೊಳ್ಳುತ್ತದೆ.

ಪು.ಸೂ.ಲಕ್ಷ್ಮೀನಾರಾಯಣ ರಾವ್, ಬೆಂಗಳೂರು

ವಸತಿ ಶಾಲೆಗೂ ಬೇಕು ವಿಲೀನ ಪ್ರಕ್ರಿಯೆ

ವಸತಿ ಶಾಲೆಗಳಿಗೆ ನಿರೀಕ್ಷಿತ ಪ್ರಮಾಣದಲ್ಲಿ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಿಲ್ಲವೆಂಬ ಕಾರಣಕ್ಕೆ, ಅರ್ಜಿ ಸಲ್ಲಿಕೆ ದಿನಾಂಕವನ್ನು ಇತ್ತೀಚೆಗೆ ಮುಂದೂಡಲಾಗಿದೆ. ಉಚಿತ ಶಿಕ್ಷಣ ಮತ್ತು ವಸತಿ ಸೌಕರ್ಯ ನೀಡಿದರೂ ವಿದ್ಯಾರ್ಥಿಗಳೇಕೆ ಇತ್ತ ಮುಖ ಮಾಡುತ್ತಿಲ್ಲ ಎಂದು ಆಲೋಚಿಸಿದಾಗ ಹಲವು ಸಾಧಕ- ಬಾಧಕಗಳು ಕಣ್ಣ ಮುಂದೆ ಬಂದವು. ಪ್ರಸ್ತುತ ರಾಜ್ಯದಲ್ಲಿ ಮೊರಾರ್ಜಿ ದೇಸಾಯಿ ವಸತಿ ಶಾಲೆ, ಡಾ. ಬಿ.ಆರ್.ಅಂಬೇಡ್ಕರ್ ವಸತಿ ಶಾಲೆ, ನವೋದಯ ವಸತಿ ಶಾಲೆ, ಏಕಲವ್ಯ ವಸತಿ ಶಾಲೆ, ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ, ಕಸ್ತೂರಬಾ ಗಾಂಧಿ ಬಾಲಿಕಾ ವಿದ್ಯಾಲಯ ಮುಂತಾದ ಉಚಿತ ವಸತಿ ಶಾಲೆಗಳಿವೆ.

ಸಮಾಜ ಕಲ್ಯಾಣ ಇಲಾಖೆಯ ಅನುದಾನದಲ್ಲಿ ಇವು ನಡೆಯುತ್ತವೆ. ಸರ್ಕಾರದ ಯೋಜನೆಗಳು ಕೆಲವೊಮ್ಮೆ ಪರಸ್ಪರ ಮುಳುವಾಗುತ್ತವೆ. ಈ ವಿಚಾರದಲ್ಲಿ ಹೇಳುವುದಾದರೆ, ಮೊದಲನೆಯದಾಗಿ ಈ ಶಾಲೆಗಳು ಶುರುವಾಗುವುದೇ ಆರನೇ ತರಗತಿಯಿಂದ. ಸಾಮಾನ್ಯವಾಗಿ ಇವುಗಳ ಪ್ರವೇಶ ಪರೀಕ್ಷೆಗೆ ಅರ್ಜಿ ಸಲ್ಲಿಸುವವರು ಸರ್ಕಾರಿ ಶಾಲೆ ವಿದ್ಯಾರ್ಥಿಗಳೇ ಆಗಿರುತ್ತಾರೆ. ಇವರು ವಸತಿ ಶಾಲೆಗಳಿಗೆ ಹೊರಟುಹೋದರೆ ತಮ್ಮಲ್ಲಿ ಮಕ್ಕಳ ಸಂಖ್ಯೆ ಕಡಿಮೆಯಾಗುತ್ತದೆ, ಇದರಿಂದ ಮೇಲಧಿಕಾರಿಗಳ ಕೆಂಗಣ್ಣಿಗೆ ಗುರಿಯಾಗಬೇಕಾಗುತ್ತದೆ, ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗಿ ಶಾಲೆ ಮುಚ್ಚುವಂತಾದರೆ ಇಲಾಖೆ ವರ್ಗಾವಣೆ ಮಾಡುವ ಕಡೆ ಹೋಗಬೇಕಾಗುತ್ತದೆ ಎನ್ನುವ ಆತಂಕ ಸರ್ಕಾರಿ ಶಾಲೆಗಳ ಶಿಕ್ಷಕರದ್ದು. ಇದು, ಕೆಲವೊಮ್ಮೆ ಅವರು ವಿದ್ಯಾರ್ಥಿಗಳಿಗೆ ಅರ್ಜಿ ಸಲ್ಲಿಕೆಯ ವಿಷಯ ತಿಳಿಸದೇ ಇರಲು ಕೂಡ ಕಾರಣವಾಗಿರುತ್ತದೆ.

ಇನ್ನು, ಮೊದಲೆಲ್ಲಾ ವಸತಿ ಶಾಲೆಯ ಮಕ್ಕಳಲ್ಲಿ ಕಾಣಿಸಿಕೊಳ್ಳುತ್ತಿದ್ದ ಕಜ್ಜಿ ಸಮಸ್ಯೆ ಈಗಲೂ ಉಳಿದಿದೆ. ಮಕ್ಕಳಿಗೆ ಸರ್ಕಾರದಿಂದ ಸಿಗಬೇಕಾದ ಸೂಕ್ತ ಸವಲತ್ತು ಆಡಳಿತ ವರ್ಗದ ಬೇಜವಾಬ್ದಾರಿಯಿಂದ ಸಿಗುವುದಿಲ್ಲ. ಶಿಕ್ಷಕರ ಕೊರತೆ ಕೂಡ ಪ್ರಮುಖ ಸಮಸ್ಯೆಗಳಲ್ಲೊಂದು. ಹಲವು ಹೆಸರಿನಲ್ಲಿರುವ ವಸತಿ ಶಾಲೆಗಳಿಗೆ ಹರಿದು ಹಂಚಿ ಹೋಗುವ ಸಂಪನ್ಮೂಲವನ್ನು ಕೇಂದ್ರೀಕರಿಸಿ, ಸುಸಜ್ಜಿತ ಕಟ್ಟಡ ಇರುವ ಒಂದೆರಡು ವಸತಿ ಶಾಲೆಗಳ ಜೊತೆ ಇನ್ನುಳಿದ ಶಾಲೆಗಳನ್ನು ವಿಲೀನಗೊಳಿಸಿದರೆ, ವಿಷಯಕ್ಕನುಗುಣವಾಗಿ ಮತ್ತು ವಿದ್ಯಾರ್ಥಿಗನುಗುಣವಾಗಿ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯನ್ನು ನೇಮಿಸಬಹುದು. ಇದರಿಂದ ಸರ್ಕಾರದ ವೆಚ್ಚ ಕೂಡ ಕಡಿಮೆಯಾಗುತ್ತದೆ. ವಸತಿ ಶಾಲೆ ಪ್ರವೇಶಕ್ಕೆ ಯಾವಾಗ ಅರ್ಜಿ ಕರೆಯುತ್ತಾರೆ ಎಂದು ವಿದ್ಯಾರ್ಥಿಗಳು ಕಾಯುವಂತಾಗಬೇಕೆ ವಿನಾ ಯಾವಾಗ ಮಕ್ಕಳು ವಸತಿ ಶಾಲೆಗೆ ಅರ್ಜಿ ಸಲ್ಲಿಸುತ್ತಾರೆ ಎಂದು ಶಿಕ್ಷಕರು ಕಾಯುವಂತೆ ಆಗಬಾರದು.

ಸೋಮಶೇಖರ ಯು.ಟಿ., ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಎನ್‌ಡಿಎ: ಸೇನೆಯಲ್ಲಿ ಅವಕಾಶಗಳ ಹೆಬ್ಬಾಗಿಲು

ಸೇನಾ ಪಡೆಗಳಲ್ಲಿ ಲಿಂಗ ಸಮಾನತೆಯ ದಿಸೆಯಲ್ಲಿ ಬಹುದೊಡ್ಡ ನಿರ್ಧಾರವೊಂದನ್ನು ತೆಗೆದುಕೊಳ್ಳಲಾಗಿದೆ. ಸೇನೆಯಲ್ಲಿ ಕಾಯಂ ಹುದ್ದೆಗಳಿಗೆ ಏರುವುದಕ್ಕಾಗಿ ಮಹಿಳೆಯರಿಗೆ ರಾಷ್ಟ್ರೀಯ ರಕ್ಷಣಾ ಅಕಾಡೆಮಿಯಲ್ಲಿ (ಎನ್‌ಡಿಎ) ಪ್ರವೇಶ ಅವಕಾಶ ಕಲ್ಪಿಸಲು ಕೇಂದ್ರ ಸರ್ಕಾರ ತೀರ್ಮಾನಿಸಿದೆ. ಎನ್‌ಡಿಎಯಲ್ಲಿ ಮಹಿಳೆಯರಿಗೆ ಪ್ರವೇಶ ನೀಡಬೇಕು ಎಂದು ಸುಪ್ರೀಂ ಕೋರ್ಟ್ ಆಗಸ್ಟ್ 18ರಂದೇ ಹೇಳಿತ್ತು. ಅದಕ್ಕೆ ಈಗ ಕೇಂದ್ರ ಸರ್ಕಾರ ಒಪ್ಪಿಗೆ ಸೂಚಿಸಿದೆ.

ಈ ನಿರ್ಧಾರವು ಭಾರತದ ರಕ್ಷಣಾ ಪಡೆಗಳ ಸ್ವರೂಪವನ್ನೇ ಬದಲಾಯಿಸುವ ಸಾಮರ್ಥ್ಯವನ್ನು ಹೊಂದಿದೆ.

ಮಹಿಳೆಯರು ಅಲ್ಪಾವಧಿ ಕರ್ತವ್ಯಕ್ಕೆ ಮಾತ್ರ ನೇಮಕಗೊಳ್ಳಲು ಮೊದಲು ಅವಕಾಶ ಇತ್ತು. ಅಲ್ಪಾವಧಿಗೆ ನೇಮಕಗೊಂಡ ಮಹಿಳಾ ಅಧಿಕಾರಿಗಳನ್ನು ಕಾಯಂ ನೇಮಕಾತಿಗೆ ಪರಿಗಣಿಸಬೇಕು ಎಂದು 2020ರ ಮಾರ್ಚ್ 17ರಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿತ್ತು. ಪುರುಷ ಅಧಿಕಾರಿಗಳಿಗೆ ಇರುವಂತಹ ಅವಕಾಶಗಳು ಮಹಿಳಾ ಅಧಿಕಾರಿಗಳಿಗೂ ಲಭ್ಯ ಇರಬೇಕು ಎಂದು ಸೂಚಿಸಿತ್ತು.

ಶಾಲಾ ಶಿಕ್ಷಣ ಪೂರ್ಣಗೊಂಡ ತಕ್ಷಣವೇ ಎನ್‌ಡಿಎಗೆ ಸೇರುವುದಕ್ಕೆ ಅವಕಾಶ ಇದೆ. ಪದವೀಧರರಿಗೂ ಕಾಯಂ ಕರ್ತವ್ಯದ ನೇಮಕಾತಿಯ ಅವಕಾಶ ಇದೆ. ಅದಕ್ಕೆ ಸಂಯೋಜಿತ ರಕ್ಷಣಾ ಸೇವೆಗಳ ಪರೀಕ್ಷೆ ಬರೆಯಬೇಕು.

ಮಹಿಳಾ ಅಧಿಕಾರಿಗಳ ಮೊದಲ ತಂಡವು ನೌಕಾಪಡೆಗೆ 1992ರಲ್ಲಿ ನಿಯೋಜನೆಗೊಂಡಿತ್ತು. ಅದಾಗಿ, ಮಹಿಳೆಯರು ನೇರವಾಗಿ ಕಾಯಂ ಕರ್ತವ್ಯಕ್ಕೆ ನೇಮಕಗೊಳ್ಳುವ ಅವಕಾಶ ಲಭ್ಯವಾಗಲು 30 ವರ್ಷ ಬೇಕಾಯಿತು. ಎನ್‌ಡಿಎ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ದೈಹಿಕ ಪರೀಕ್ಷೆ ಮತ್ತು ಹೊರಾಂಗಣ ತರಬೇತಿ ಪರೀಕ್ಷೆಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದರೆ ಅಂಥವರನ್ನು ಪುರುಷ ಅಭ್ಯರ್ಥಿಗಳಿಗೆ ಸಮಾನವಾಗಿ ಪರಿಗಣಿಸಬೇಕು ಎಂಬುದು ಎನ್‌ಡಿಎಯಲ್ಲಿ ಮಹಿಳೆಯರಿಗೆ ಪ್ರವೇಶ ಕೊಡಬೇಕು ಎಂಬುದರ ಪ್ರಧಾನ ಪ್ರತಿಪಾದನೆ ಆಗಿತ್ತು.

ಎನ್‌ಡಿಎಗೆ ಮಹಿಳೆಯರ ಸೇರ್ಪಡೆ ಹೇಗೆ ಎಂಬುದರ ವಿವರಗಳನ್ನು ಇನ್ನಷ್ಟೇ ಅಂತಿಮಗೊಳಿಸಬೇಕಿದೆ. ಆದರೆ, ಮಹಿಳೆಯರು ಎನ್‌ಡಿಎ ಸೇರುವುದರೊಂದಿಗೆ 'ಆರ್ಮ್ಸ್' ಎಂದು ಕರೆಯಲಾಗುವ ಸೇನೆಯ ಯುದ್ಧ ಘಟಕದ ಭಾಗವಾಗುವ ಅವಕಾಶ ತೆರೆದುಕೊಳ್ಳಲಿದೆ. ಇದು ರಕ್ಷಣಾ ಪಡೆಗಳಲ್ಲಿ ಮಹಿಳೆಯರಿಗೆ ಹೊಸ ಜಗತ್ತನ್ನೇ ತೆರೆದುಕೊಡಲಿದೆ.



ಪರೀಕ್ಷೆ ಮತ್ತು ಆಯ್ಕೆ ವಿಧಾನ

ರಾಷ್ಟ್ರೀಯ ರಕ್ಷಣಾ ಅಕಾಡೆಮಿಯು (ಎನ್‌ಡಿಎ) ಪ್ರತಿ ವರ್ಷ ಒಟ್ಟು 600 ಅಭ್ಯರ್ಥಿಗಳಿಗೆ ತರಬೇತಿ ನೀಡುತ್ತದೆ. ಎನ್‌ಡಿಎಗೆ ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕವೇ ಆಯ್ಕೆಯಾಗಬೇಕಾಗುತ್ತದೆ. ಇದು ಸೇನಾ ನೇಮಕಾತಿಗಳಲ್ಲೇ ಅತ್ಯಂತ ಕಠಿಣವಾದ ಪರೀಕ್ಷೆ ಎನ್ನಲಾಗಿದೆ. ಕೇಂದ್ರೀಯ ಲೋಕಸೇವಾ ಆಯೋಗವು (ಯುಪಿಎಸ್‌ಸಿ) ವರ್ಷದಲ್ಲಿ ಎರಡು ಬಾರಿ ಪರೀಕ್ಷೆ ನಡೆಸುತ್ತದೆ. ಲಿಖಿತ ಪರೀಕ್ಷೆ, ದೈಹಿಕ ಸಾಮರ್ಥ್ಯ ಪರೀಕ್ಷೆ, ಮಾನಸಿಕ ಸ್ವಾಸ್ಥ್ಯ ಪರೀಕ್ಷೆ ಸೇರಿ ಹಲವು ಸುತ್ತಿನ ಪರೀಕ್ಷೆಗಳ ನಂತರ ಎನ್‌ಡಿಎಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ.

ಪ್ರತಿ ಸುತ್ತಿನಲ್ಲಿ 300 ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ. ಆದರೆ ಲಭ್ಯವಿರುವ 300 ಸೀಟುಗಳಿಗೆ ಅರ್ಜಿ ಸಲ್ಲಿಸುವವರ ಸಂಖ್ಯೆ 2.5 ಲಕ್ಷದಿಂದ 3 ಲಕ್ಷವನ್ನು ದಾಟುತ್ತದೆ. ಇದರಲ್ಲಿ 6,000 ಅಭ್ಯರ್ಥಿಗಳನ್ನು ಮಾತ್ರವೇ ಅಂತಿಮ ಸಂದರ್ಶನಕ್ಕೆ ಆಯ್ಕೆ ಮಾಡಲಾಗುತ್ತದೆ. ಅವರಿಂದ 300 ಜನರನ್ನು ಆಯ್ಕೆ ಮಾಡಲಾಗುತ್ತದೆ.

ಅಭ್ಯರ್ಥಿಗಳ ಸಾಮರ್ಥ್ಯಕ್ಕೆ ಅನುಗುಣವಾಗಿ ಅವರಿಗೆ ಭೂಸೇನೆ, ವಾಯುಪಡೆ ಮತ್ತು ನೌಕಾಪಡೆಗೆ ಸಂಬಂಧಿಸಿದ ತರಬೇತಿ ನೀಡಲಾಗುತ್ತದೆ.

ಎನ್‌ಡಿಎಗೆ ನೇಮಕವಾಗುವುದರ ಲಾಭಗಳು

ರಾಷ್ಟ್ರೀಯ ರಕ್ಷಣಾ ಅಕಾಡೆಮಿಯ (ಎನ್‌ಡಿಎ) ಮೂಲಕ ಸೇನಾ ಸೇವೆಗಳಿಗೆ ನೇಮಕವಾಗುವುದರಲ್ಲಿ ಹಲವು ಲಾಭಗಳಿವೆ. ಇದು ದೇಶದ ಅತ್ಯುನ್ನತ ರಕ್ಷಣಾ ತರಬೇತಿ ಸಂಸ್ಥೆಯಾಗಿದೆ. ಇಲ್ಲಿ ತರಬೇತಿ ಪಡೆದವರು ಸೇನೆಯ ಮೂರೂ ಪಡೆಗಳಿಗೆ ನೇರವಾಗಿ ಆಯ್ಕೆಯಾಗಬಹುದು. ಹೀಗಾಗಿ ಎನ್‌ಡಿಎಗೆ ನೇಮಕವಾದರೆ, ಸೇನಾಪಡೆಗಳಿಗೆ ನೇಮಕವಾದಂತೆಯೇ ಎಂದು ಪರಿಗಣಿಸಲಾಗುತ್ತದೆ

- ಎನ್‌ಡಿಎಯ ತರಬೇತಿ ಮೂಲಕ ಆಯ್ಕೆಯಾದ ಅಭ್ಯರ್ಥಿಗಳಿಗೆ ಸೇನೆಯ ಮೂರೂ ಪಡೆಗಳಲ್ಲಿ ನೇಮಕಾತಿ ವೇಳೆಯಲ್ಲಿಯೇ ಉನ್ನತ ಹುದ್ದೆಗಳನ್ನು ನೀಡಲಾಗುತ್ತದೆ. ಹೀಗಾಗಿ ಎನ್‌ಡಿಎ ಮೂಲಕ ಆಯ್ಕೆಯಾದವರು ತಮ್ಮ ಸೇವಾವಧಿಯಲ್ಲಿ ತ್ವರಿತವಾಗಿ ಬಡ್ತಿ ಪಡೆಯುತ್ತಾರೆ. ಎನ್‌ಡಿಎ ಅಭ್ಯರ್ಥಿಗಳಿಗೆ ಮಾತ್ರವೇ ಸೇನೆಯ ಮೂರೂ ಪಡೆಗಳಲ್ಲಿ ಅತ್ಯುನ್ನತ ಹುದ್ದೆಗೆ ಏರುವ ಅವಕಾಶ ದೊರೆಯುತ್ತದೆ
- ಎನ್‌ಡಿಎ ಮೂಲಕ ನೇಮಕವಾದ ಅಭ್ಯರ್ಥಿಗಳಿಗೆ ಆರಂಭದಲ್ಲಿಯೇ ಹೆಚ್ಚಿನ ವೇತನ ನಿಗದಿ ಮಾಡಲಾಗುತ್ತದೆ. ಹೆಚ್ಚು ಬಾರಿ ವೇತನ ಏರಿಕೆಯ ಲಾಭ ಪಡೆಯಲು ಸಾಧ್ಯವಾಗುತ್ತದೆ. ಬೇರೆ ವಿಧಾನದ ಮೂಲಕ ಆಯ್ಕೆಯಾದ ಅಭ್ಯರ್ಥಿಗಳಿಗಿಂತ ಎನ್‌ಡಿಎ ಅಭ್ಯರ್ಥಿಗಳಿಗೆ ಒಂದೂವರೆಯಿಂದ ಎರಡು ಪಟ್ಟು ಹೆಚ್ಚು ವೇತನ ದೊರೆಯುತ್ತದೆ
- ಎನ್‌ಡಿಎ ಮೂಲಕ ಬರುವ ಅಭ್ಯರ್ಥಿಗಳ ನೇಮಕಾತಿಯು ಕಾಯಂ ಆಗಿರುತ್ತದೆ. ಬೇರೆ ವಿಧಾನದಲ್ಲಿ ಆಯ್ಕೆಯಾದ ಅಭ್ಯರ್ಥಿಗಳಿಗಿಂತ ಈ ಅಭ್ಯರ್ಥಿಗಳ ಸೇವಾವಧಿ ಹೆಚ್ಚು. ಹೀಗಾಗಿ ವೇತನ, ಭತ್ಯೆಗಳು ಮತ್ತು ಪಿಂಚಣಿಯಲ್ಲಿ ಎನ್‌ಡಿಎ ಅಭ್ಯರ್ಥಿಗಳಿಗೆ ಹೆಚ್ಚು ಲಾಭವಾಗುತ್ತದೆ. ಉದ್ಯೋಗ ಭದ್ರತೆಯೂ ಇರುತ್ತದೆ
- ಎನ್‌ಡಿಎ ಮೂಲಕ ಆಯ್ಕೆಯಾದ ಅಭ್ಯರ್ಥಿಗಳಿಗೆ ಹೆಚ್ಚಿನ ಸವಾಲಿನ ಹುದ್ದೆಗಳು ಮತ್ತು ಕಾರ್ಯಾಚರಣೆಯ ಅವಕಾಶ ದೊರೆಯುತ್ತದೆ. ವಿಶೇಷ ಹುದ್ದೆಗಳು, ವಿಶೇಷ ಕಾರ್ಯಾಚರಣೆಗಳಲ್ಲಿ ಸೇನೆಯ ತುಕಡಿಯನ್ನು ಮುನ್ನಡೆಸುವ ಅವಕಾಶ ಎನ್‌ಡಿಎ ಮೂಲಕ ನೇಮಕವಾದ ಅಭ್ಯರ್ಥಿಗಳಿಗೆ ಮಾತ್ರವೇ ದೊರೆಯುತ್ತದೆ
- ಎನ್‌ಡಿಎ ಮೂಲಕ ನೇಮಕವಾದ ಅಭ್ಯರ್ಥಿಗಳಿಗೆ ಸೇವಾವಧಿಯ ಉದ್ದಕ್ಕೂ ಹಲವು ಬಾರಿ ತರಬೇತಿ ನೀಡಲಾಗುತ್ತದೆ. ದೇಶದ ಬಹುತೇಕ ಎಲ್ಲಾ ಉನ್ನತ ತರಬೇತಿ ಕೇಂದ್ರಗಳಲ್ಲಿ ಅವರಿಗೆ ಒಂದಿಲ್ಲೊಂದು ಬಾರಿ ತರಬೇತಿಯ ಅವಕಾಶ ದೊರೆಯುತ್ತದೆ. ರಕ್ಷಣಾ ಸಹಕಾರದ ಭಾಗವಾಗಿ ಬೇರೆ ದೇಶಗಳ ರಕ್ಷಣಾ ಅಕಾಡೆಮಿಗಳಲ್ಲಿ ತರಬೇತಿ ಪಡೆಯುವ ಅವಕಾಶವು ಎನ್‌ಡಿಎ ಮೂಲಕ ನೇಮಕವಾದ ಅಭ್ಯರ್ಥಿಗಳಿಗೆ ಮಾತ್ರವೇ ದೊರೆಯುತ್ತದೆ

ರಾಷ್ಟ್ರೀಯ ರಕ್ಷಣಾ ಅಕಾಡೆಮಿ

ರಾಷ್ಟ್ರೀಯ ರಕ್ಷಣಾ ಅಕಾಡೆಮಿ (ಎನ್‌ಡಿಎ), ಮಹಾರಾಷ್ಟ್ರದ ಪುಣೆಯ ಹೊರವಲಯದ ಖಾಡಕವಾಸ್ಲಾದಲ್ಲಿ ಇದೆ.

ಭಾರತೀಯ ಭೂಸೇನೆ, ವಾಯುಪಡೆ ಹಾಗೂ ನೌಕಾ ಪಡೆಯ ಕೆಡೆಟ್‌ಗಳಿಗೆ ಜಂಟಿ ತರಬೇತಿ ನೀಡುವ ಸಂಸ್ಥೆ ಇದಾಗಿದೆ. ಇಲ್ಲಿಂದ ತರಬೇತಿ ಪಡೆದ ಬಳಿಕವೇ, ಆಯಾ ಪಡೆಯ ಕೆಡೆಟ್‌ಗಳು ತಮ್ಮ ತಮ್ಮ ಕ್ಷೇತ್ರಕ್ಕೆ ನೇಮಕಾತಿಪೂರ್ವ ತರಬೇತಿಗಾಗಿ ತೆರಳುತ್ತಾರೆ.

ಯಾರು ಎನ್‌ಡಿಎ ತರಬೇತಿಗೆ ಸೇರಬಹುದು?

- ಅವಿವಾಹಿತ ಪುರುಷ ಅಭ್ಯರ್ಥಿ (ಸುಪ್ರೀಂ ಕೋರ್ಟ್ ಆದೇಶದ ಮೇರೆಗೆ, ಸೆ.5ರಂದು ನಡೆದ ಎನ್‌ಡಿಎ ಪ್ರವೇಶ ಪರೀಕ್ಷೆಗೆ ಮಹಿಳೆಯರಿಗೂ ಹಾಜರಾಗಲು ಅನುಮತಿ ನೀಡಲಾಗಿತ್ತು)
- 16.5 ವರ್ಷದಿಂದ 19.5 ವರ್ಷದ ಒಳಗಿನವರು
- 10 + 2 ಶಿಕ್ಷಣ ಪೂರ್ತಿಗೊಳಿಸಿರಬೇಕು
- ಪ್ರತಿವರ್ಷ ಯುಪಿಎಸ್‌ಸಿ ನಡೆಸುವ ಲಿಖಿತ ಪರೀಕ್ಷೆ, ಸಂದರ್ಶನ ಹಾಗೂ ವೈದ್ಯಕೀಯ ಪರೀಕ್ಷೆ ಮೂಲಕ ಎನ್‌ಡಿಎ ತರಬೇತಿಗೆ ಆಯ್ಕೆ ಮಾಡಲಾಗುತ್ತದೆ
- ಆಯ್ಕೆಯಾದ ಅಭ್ಯರ್ಥಿಗಳು, ದೈಹಿಕ ತರಬೇತಿ ಹಾಗೂ ಹೊರಾಂಗಣ ಚಟುವಟಿಕೆಗಳ ಜೊತೆಗೆ, ಆರು ಸೆಮಿಸ್ಟರ್‌ಗಳನ್ನು ಒಳಗೊಂಡ ಪದವಿ ಶಿಕ್ಷಣವನ್ನೂ ಪಡೆಯಬೇಕು
- ಪದವಿ ಪಡೆದ ಬಳಿಕ, ಅವರನ್ನು ಒಂದು ವರ್ಷದ ಅವಧಿಯವರೆಗೆ ಆಯಾ ತರಬೇತಿ ಅಕಾಡೆಮಿಗಳಿಗೆ ಕಳುಹಿಸಲಾಗುತ್ತದೆ. ಇದು ನೇಮಕಾತಿಪೂರ್ವದ ಅವಧಿ. ಭೂಸೇನೆಯ ಕೆಡೆಟ್‌ಗಳನ್ನು ಡೆಹರಾಡೂನ್‌ನಲ್ಲಿರುವ ಭಾರತೀಯ ಸೇನಾ ಅಕಾಡೆಮಿಗೆ (ಐಎಂಎ), ವಾಯುಸೇನೆಯ ಕೆಡೆಟ್‌ಗಳನ್ನು ಹೈದರಾಬಾದ್‌ನಲ್ಲಿರುವ ವಾಯುಸೇನಾ ಅಕಾಡೆಮಿಗೆ (ಎಎಫ್‌ಎ) ಹಾಗೂ ನೌಕಾ ಕೆಡೆಟ್‌ಗಳನ್ನು ಕೇರಳದ ಈಜಿಮಾಲಾದಲ್ಲಿರುವ ಭಾರತೀಯ ನೌಕಾ ಅಕಾಡೆಮಿಗೆ (ಐಎನ್‌ಎ) ಕಳುಹಿಸಿಕೊಡಲಾಗುತ್ತದೆ.

ಈಗ ಸೇನೆಯಲ್ಲಿರುವ ಯಾವ ಮಹಿಳಾ ಸಿಬ್ಬಂದಿಯೂ ರಾಷ್ಟ್ರೀಯ ರಕ್ಷಣಾ ಅಕಾಡೆಮಿಯಿಂದ (ಎನ್‌ಡಿಎ) ಬಂದವರಲ್ಲ. ಅವರಿಗೆ ಇದುವರೆಗೆ ಎನ್‌ಡಿಎ ಪ್ರವೇಶ ಪರೀಕ್ಷೆ ಬರೆಯುವುದಕ್ಕೇ ಅವಕಾಶ ಇರಲಿಲ್ಲ.

ದೇಶದ ಸಶಸ್ತ್ರ ಪಡೆಯ ಮೂರೂ ವಿಭಾಗಗಳಲ್ಲಿ (ಭೂಸೇನೆ, ವಾಯು ಪಡೆ ಹಾಗೂ ನೌಕಾಪಡೆ) 1992ರಿಂದ ಮಹಿಳೆಯರು ಪ್ರವೇಶ ಪಡೆದಿದ್ದಾರೆ. ಆದರೆ, ಅವರೆಲ್ಲ ಅಲ್ಪಾವಧಿ ನೇಮಕಾತಿ ಮೂಲಕ ನೇಮಕಗೊಂಡ ಅಧಿಕಾರಿಗಳು.

ಮಹಿಳೆಯರು ಅಲ್ಪಾವಧಿ ನೇಮಕಾತಿ ಮೂಲಕ ಮಾತ್ರ ಸೇನೆಗೆ ಸೇರಬಹುದಾಗಿತ್ತು. ಅವರು ಕಡ್ಡಾಯವಾಗಿ ಪದವೀಧರರಾಗಿ ಇರಬೇಕಿತ್ತು. ಪ್ರವೇಶ ಪರೀಕ್ಷೆ, ಸಂದರ್ಶನ ಹಾಗೂ ವೈದ್ಯಕೀಯ ಪರೀಕ್ಷೆ ಇರುತ್ತದೆ. ಆಯ್ಕೆಯಾದ ಅಭ್ಯರ್ಥಿಗಳು ತರಬೇತಿ ನಂತರ, 10 ತಿಂಗಳಿನಿಂದ ಒಂದು ವರ್ಷದವರೆಗೆ ಚೆನ್ನೈನಲ್ಲಿನ ಅಧಿಕಾರಿಗಳ ತರಬೇತಿ ಅಕಾಡೆಮಿಯ ತರಬೇತಿಗೆ ಅವರು ಅರ್ಹತೆ ಪಡೆಯುತ್ತಾರೆ.

ಎನ್‌ಡಿಎ ಮುಖಾಂತರ ಸೇನೆಗೆ ಬಂದ ಪುರುಷರಿಗೆ ಕಾಯಂ ನೇಮಕಾತಿ ಅವಕಾಶ ದೊರೆಯುತ್ತದೆ. ಅವರು, ಹುದ್ದೆಗನುಗುಣವಾಗಿ ನಿವೃತ್ತಿ ವಯಸ್ಸಿನವರೆಗೂ ಕರ್ತವ್ಯದಲ್ಲಿರುತ್ತಾರೆ. ಅಲ್ಪಾವಧಿ ನೇಮಕಾತಿ ಮೂಲಕ ಮಾತ್ರವೇ ಸೇನೆಗೆ ಸೇರುವ ಅವಕಾಶ ಇರುವ ಮಹಿಳೆಯರಿಗೆ ಪೂರ್ಣಾವಧಿಯ ಸೇವಾ ಸ್ಥಾನಮಾನ ಮೊದಲು ಇರಲಿಲ್ಲ. ಅವರು 14 ವರ್ಷಗಳ ಕಾಲ ಮಾತ್ರ ಕರ್ತವ್ಯ ನಿರ್ವಹಿಸಬಹುದಾಗಿದ್ದು, ಆನಂತರ ನಿವೃತ್ತಿಯಾಗುತ್ತಿದ್ದರು. ಸೇನೆಯಲ್ಲಿ 20 ವರ್ಷಗಳವರೆಗೆ ಕರ್ತವ್ಯದಲ್ಲಿ ಇರದ ಕಾರಣಕ್ಕಾಗಿ ಅವರಿಗೆ ಪಿಂಚಣಿ ಸೌಲಭ್ಯವೂ ಸಿಗುತ್ತಿರಲಿಲ್ಲ.

ಆದರೆ, ಎನ್‌ಡಿಎ ಸೇರಲು ಮಹಿಳೆಯರಿಗೆ ಅವಕಾಶ ಲಭ್ಯವಾದ ಕಾರಣ ಈಗಿನ ಸ್ಥಿತಿಯು ಬದಲಾಗಲಿದೆ.



ಚುನಾವಣೆಗೆ ಮುನ್ನ ಅಯೋಧ್ಯೆಯತ್ತ ಗಮನ

ದೀಪೋತ್ಸವಕ್ಕೆ ಮೋದಿ ಭೇಟಿ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ದೀಪಾವಳಿಗೆ ಮುನ್ನ ಭಾರಿ ದೀಪೋತ್ಸವಕ್ಕೆ ಸಿದ್ಧತೆ
- ದೀಪೋತ್ಸವದಲ್ಲಿ 7.5 ಲಕ್ಷ ದೀಪ ಉರಿಸಿ ದಾಖಲೆಗೆ ಯೋಜನೆ
- ಅಯೋಧ್ಯೆಯ ವಿವಿಧ ಕಾಮಗಾರಿಗಳನ್ನು ಬೇಗ ಪೂರ್ಣಗೊಳಿಸಲು ಸೂಚನೆ

ಲಖನೌ: ಉತ್ತರ ಪ್ರದೇಶದ ಪುರಾಣ ಪ್ರಸಿದ್ಧ ಅಯೋಧ್ಯೆ ಪಟ್ಟಣವು ಮತ್ತೆ ರಾಜಕೀಯ ಗಮನ ಕೇಂದ್ರವಾಗಿ ಬದಲಾಗುತ್ತಿದೆ. ಅಯೋಧ್ಯೆಯಲ್ಲಿ ಕೈಗೆತ್ತಿಕೊಳ್ಳಲಾಗಿದ್ದ ವಿವಿಧ ಯೋಜನೆಗಳನ್ನು ಪೂರ್ಣಗೊಳಿಸಲು ಉತ್ತರ ಪ್ರದೇಶ ಸರ್ಕಾರವು ಭಾರಿ ಉತ್ಸಾಹ ತೋರುತ್ತಿದೆ. ಈ ಬಾರಿಯ ದೀಪಾವಳಿಗೆ ಮೊದಲು ಬೃಹತ್ 'ದೀಪೋತ್ಸವ' ನಡೆಸಲು ಯೋಜಿಸಲಾಗಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಈ ಸಂದರ್ಭದಲ್ಲಿ ಅಯೋಧ್ಯೆಗೆ ಭೇಟಿ ನೀಡುವ ಸಾಧ್ಯತೆ ಇದೆ. ಉತ್ತರ ಪ್ರದೇಶ ವಿಧಾನಸಭೆಗೆ 2022ರ ಮಾರ್ಚ್ ಒಳಗೆ ಚುನಾವಣೆ ನಡೆಯಬೇಕಿದೆ.

ದೀಪೋತ್ಸವಕ್ಕಾಗಿ 7.50 ಲಕ್ಷ ದೀಪಗಳನ್ನು ಉರಿಸಲು ಅಯೋಧ್ಯೆ ಜಿಲ್ಲಾಡಳಿತ ಯೋಜನೆ ಹಾಕಿಕೊಂಡಿದೆ. ಈ ಮೂಲಕ ದಾಖಲೆಯೊಂದರ ಸೃಷ್ಟಿಯ ಉದ್ದೇಶವೂ ಇದೆ. ಎರಡು ದಿನಗಳ ದೀಪಾವಳಿ ಉತ್ಸವಕ್ಕೆ ದೀಪೋತ್ಸವದ ಮೂಲಕ ಚಾಲನೆ ನೀಡುವ ಯೋಚನೆಯೂ ಜಿಲ್ಲಾಡಳಿತಕ್ಕೆ ಇದೆ ಎನ್ನಲಾಗಿದೆ. ದೀಪೋತ್ಸವ ಕಾರ್ಯಕ್ರಮದ ವಿನ್ಯಾಸಕ್ಕಾಗಿ ಬಾಲಿವುಡ್‌ನ ಪ್ರಸಿದ್ಧ ಕಲಾ ನಿರ್ದೇಶಕರೊಬ್ಬರನ್ನು ಸಂಪರ್ಕಿಸಲಾಗಿದೆ ಎಂದು ಮೂಲಗಳು ಹೇಳಿವೆ. ಪ್ರಧಾನಿ ಮೋದಿ ಅವರು ದೀಪೋತ್ಸವದಲ್ಲಿ ಭಾಗಿಯಾಗುವ ಬಗ್ಗೆ ಗೊತ್ತಿಲ್ಲ ಎಂದು ಜಿಲ್ಲಾಡಳಿತವು ಹೇಳಿದೆ. ಆದರೆ, ಪ್ರಧಾನಿ ಕಾರ್ಯಕ್ರಮಕ್ಕೆ ಬರಲಿದ್ದಾರೆ ಎಂದು ರಾಜ್ಯ ಬಿಜೆಪಿ ಘಟಕದ ಮೂಲಗಳು ತಿಳಿಸಿವೆ.

ಕೇಂದ್ರದ ಸಚಿವರು, ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರಲ್ಲದೆ, ಪ್ರಧಾನಿ ಮೋದಿ ಅವರನ್ನೂ ಕಾರ್ಯಕ್ರಮಕ್ಕೆ ಆಹ್ವಾನಿಸಲಾಗುವುದು ಎಂದು ಬಿಜೆಪಿಯ ಮುಖಂಡರೊಬ್ಬರು ಹೇಳಿದ್ದಾರೆ.

ರಾಮಾಯಣದ ಕತೆಯನ್ನು ನಾಟಕ ರೂಪದಲ್ಲಿ ಹೇಳುವ ರಾಮಲೀಲಾ ಕಾರ್ಯಕ್ರಮವನ್ನು ನಡೆಸಲು ಜಿಲ್ಲಾಡಳಿತ ಉದ್ದೇಶಿಸಿದೆ. ಬಿಜೆಪಿ ಸಂಸದ ಮತ್ತು ಭೋಜ್‌ಪುರಿ ಸಿನಿಮಾ ನಟ ರವಿಕಿಶನ್ ಅವರು ಪರಶುರಾಮನ ಪಾತ್ರ ನಿರ್ವಹಿಸಲಿದ್ದಾರೆ ಎಂದು ಹೇಳಲಾಗಿದೆ.

'ಅಯೋಧ್ಯೆಯು ಶ್ರೀರಾಮನ ಊರು. ಲಕ್ಷಾಂತರ ಹಿಂದೂ ತೀರ್ಥಯಾತ್ರಿಕರು ಇಲ್ಲಿಗೆ ಬರುತ್ತಾರೆ. ಹಾಗಾಗಿ, ಅಯೋಧ್ಯೆಯ ಮುಖಚಹರೆಯನ್ನೇ ಬದಲಿಸಲು ಬಯಸಿದ್ದೇವೆ. ಈ ಹಿಂದಿನ ಸರ್ಕಾರಗಳು ಈ ಕೆಲಸಗಳನ್ನು ನಿರ್ಲಕ್ಷಿಸಿದ್ದವು' ಎಂದು ಅಯೋಧ್ಯೆಯ ಬಿಜೆಪಿ ಸಂಸದ ಲಲ್ಲು ಸಿಂಗ್ ಹೇಳಿದ್ದಾರೆ.

ಬಿಎಸ್‌ಪಿ ತನ್ನ ಪ್ರಬುದ್ಧ ಸಮ್ಮೇಳನ (ಬ್ರಾಹ್ಮಣ ಸಮಾವೇಶ) ಸರಣಿಯನ್ನು ಅಯೋಧ್ಯೆಯಿಂದಲೇ ಆರಂಭಿಸಿತ್ತು.

ಕಾಮಗಾರಿ ತ್ವರಿತಕ್ಕೆ ಸೂಚನೆ

ಅಯೋಧ್ಯೆಯಲ್ಲಿ ಗುರುತಿಸಲಾಗಿರುವ ವಿವಿಧ ಧಾರ್ಮಿಕ ಕೇಂದ್ರಗಳ ನವೀಕರಣ ಕೆಲಸವನ್ನು ತ್ವರಿತವಾಗಿ ಪೂರ್ಣಗೊಳಿಸಲು ಜಿಲ್ಲಾಡಳಿತಕ್ಕೆ ರಾಜ್ಯ ಸರ್ಕಾರವು ಸೂಚಿಸಿದೆ. ಅಯೋಧ್ಯೆ ರೈಲು ನಿಲ್ದಾಣದ ಕಾಮಗಾರಿಯನ್ನೂ ಬೇಗ ಮುಗಿಸಲು ತಿಳಿಸಲಾಗಿದೆ. ಅಯೋಧ್ಯೆಯಲ್ಲಿ ನಿರ್ಮಿಸಲು ಉದ್ದೇಶಿಸಲಾಗಿರುವ ಶ್ರೀರಾಮ ವಿಮಾನ ನಿಲ್ದಾಣದ ಕಾಮಗಾರಿ ಮುಂದಿನ ತಿಂಗಳು ಆರಂಭವಾಗಲಿದೆ ಎಂದು ಮೂಲಗಳು ತಿಳಿಸಿವೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಮಹಾರಾಷ್ಟ್ರ ಸಚಿವ ಆದಿತ್ಯ ಠಾಕ್ರೆ ಅವರು ಮುಸ್ಲಿಮರ ಓಲೈಕೆ ಆರಂಭಿಸಿದ್ದಾರೆ. ಕೇಸರಿಯಿಂದ ಹಸಿರಿಗೆ, ಮರಾಠಿಯಿಂದ ಉರ್ದುಗೆ ಮತ್ತು ಶಿವಸೇನಾದಿಂದ...? ಎಂದು ಬಿಜೆಪಿ ವಕ್ತಾರೆ ಚಾರು ಪ್ರಜ್ಞಾ ಅವರು ಟ್ವೀಟ್ ಮಾಡಿದ್ದಾರೆ. ಹಲೋ ವರ್ಲಿ ಎಂದು ಉರ್ದುವಿನಲ್ಲಿ ಬರೆದಿರುವ ಪೋಸ್ಟರ್‌ನಲ್ಲಿ ಆದಿತ್ಯ ಅವರ ಚಿತ್ರವೂ ಇರುವ ಹೋರ್ಡಿಂಗ್‌ನ ಚಿತ್ರವನ್ನು ಅವರು ತಮ್ಮ ಟ್ವೀಟ್‌ನಲ್ಲಿ ಹಂಚಿಕೊಂಡಿದ್ದಾರೆ. ಈ ಟ್ವೀಟ್ ಅನ್ನು ಬಿಜೆಪಿಯ ಕಾರ್ಯಕರ್ತರು ಸಾವಿರಾರು ಬಾರಿ ಹಂಚಿಕೊಂಡಿದ್ದಾರೆ. ಆದಿತ್ಯ ಠಾಕ್ರೆ ಮುಸ್ಲಿಮರೇ ಎಂದು ಪ್ರಶ್ನಿಸಿದ್ದಾರೆ. ಕಾಂಗ್ರೆಸ್ ಸಖ್ಯದ ನಂತರ ಆದಿತ್ಯ ಬದಲಾಗಿದ್ದಾರೆ ಎಂದು ಲೇವಡಿ ಮಾಡಿದ್ದಾರೆ.



ಸತ್ಯವನ್ನು ತಿರುಚಿ ಆದಿತ್ಯ ಠಾಕ್ರೆ ಅವರನ್ನು ಲೇವಡಿ ಮಾಡಲಾಗುತ್ತಿದೆ ಎಂದು ಆಲ್ಟ್‌ನ್ಯೂಸ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ. 2019ರಲ್ಲಿ ಚುನಾವಣೆ ಸಂದರ್ಭದಲ್ಲಿ ಪ್ರಚಾರಕ್ಕಾಗಿ ನಮಸ್ತೆ ವರ್ಲಿ ಎಂಬ ಅರ್ಥದ ಹಲವು ಹೋರ್ಡಿಂಗ್‌ಗಳನ್ನು ಹಾಕಿದ್ದರು. ಈ ಪೋಸ್ಟರ್ ಹಾಕಿದಾಗ ಶಿವಸೇನಾ ಬಿಜೆಪಿಯ ಜತೆಗೇ ಇತ್ತು. ಉರ್ದು, ಕನ್ನಡ, ತೆಲುಗು, ಮರಾಠಿ ಭಾಷೆಗಳಲ್ಲಿ ಈ ಹೋರ್ಡಿಂಗ್ ಹಾಕಲಾಗಿದೆ. ಎಲ್ಲಾ ಭಾಷೆಯ ಹೋರ್ಡಿಂಗ್‌ನ ಬಣ್ಣ ಹಸಿರೇ ಆಗಿದೆ. ಆದರೆ ಉರ್ದು ಭಾಷೆಯಲ್ಲಿ ಹಾಕಲಾಗಿರುವ ಚಿತ್ರವನ್ನು ಮಾತ್ರ ಆಯ್ಕೆ ಮಾಡಿಕೊಂಡು ಈ ಟ್ವೀಟ್ ಮಾಡಲಾಗಿದೆ. ಆದಿತ್ಯ ಠಾಕ್ರೆ ಅವರು ಮುಸ್ಲಿಮರನ್ನು ಓಲೈಸುತ್ತಿದ್ದಾರೆ ಎಂದು ತೋರಿಸಲು ಯತ್ನಿಸಲಾಗಿದೆ ಎಂದು ಆಲ್ಟ್‌ನ್ಯೂಸ್ ತನ್ನ ಫ್ಯಾಕ್ಟ್‌ಚೆಕ್‌ನಲ್ಲಿ ವಿವರಿಸಿದೆ.

ಬೆರಗಿನ ಬೆಳಕು




ಗುರುರಾಜ ಕರಜಗಿ

ಮಗನನ್ನು ಕರೆತರುವ ತೀರ್ಮಾನ

ಮೊಮ್ಮಗಳು ಕೃಷ್ಣಾಜಿನ ಹೇಳಿದಳು, 'ಅಜ್ಜಾ, ಅಲ್ಲಿ ಬದುಕು ಇಲ್ಲಿನ ಹಾಗೆ ಚೆನ್ನಾಗಿಲ್ಲ, ಘೋರ ಕಾನನದಲ್ಲಿ ಅಲೆಯುವ ಅಮ್ಮನ ಕೂದಲು ಕ್ಷೀಣವಾಗಿವೆ. ಆಕೆ ಸೀರೆಯನ್ನು ಬಿಗಿಯಾಗಿ ಕಚ್ಚೆ ಕಟ್ಟಿ, ಮೇಲೆ ಜಿಂಕೆಯ ಚರ್ಮವನ್ನು ಸುತ್ತಿಕೊಂಡು ಅಲೆಯುತ್ತಾಳೆ. ಆಶ್ರಮದಲ್ಲಿ ಎಲ್ಲರೂ ನೆಲದ ಮೇಲೆಯೇ ಮಲಗುತ್ತಿದ್ದೆವು. ಈ ಅರಮನೆಯ ವೈಭವವನ್ನು ಕಂಡಾಗ ಕಾಡಿನ ಕಷ್ಟ ಹೆಚ್ಚೆನಿಸುತ್ತದೆ. ಅಜ್ಜಾ, ಲೋಕದಲ್ಲಿ ತಂದೆ ತಾಯಿಯರಿಗೆ ಮಕ್ಕಳು ಹೆಚ್ಚು ಪ್ರಿಯರಾಗಿರುತ್ತಾರೆಂದು ಕೇಳಿದ್ದೇನೆ. ಆದರೆ ತಾತನಾದ ನಿನಗೆ ಮಾತ್ರ ಮಗನ ಬಗ್ಗೆ ಯಾಕೆ ಪ್ರೀತಿಯಿಲ್ಲ?'. ರಾಜನ ಕಣ್ಣಲ್ಲಿ ನೀರು ಹೊಳೆಯಿತು. 'ಹೌದು ಮಕ್ಕಳೇ ನಾನು ಬಹು ದೊಡ್ಡ ದುಷ್ಕೃತ್ಯವನ್ನು ಮಾಡಿದ್ದೇನೆ. ನಾನು ಕೆಲವು ಸಿವಿ ಪ್ರಮುಖರ ಮಾತು ಕೇಳಿ ನಿರ್ದೋಷಿಯಾದ ಮಗನನ್ನೇ ದೇಶದಿಂದ ಹೊರಗೆ ಹಾಕಿಬಿಟ್ಟೆ. ನಾನು ಮಾಡಿದ್ದು ಭ್ರೂಣಹತ್ಯೆಯಂಥ ಮಹಾಪಾಪದ ಕೆಲಸ. ಈಗ ನನ್ನ ಬಳಿ ಯಾವ ಧನ, ಧಾನ್ಯ, ಸಂಪತ್ತು ಇದೆಯೋ, ಅದೆಲ್ಲ ವೆಸ್ಸಂತರನದೇ. ಅವನೇ ಮರಳಿ ಬಂದು ಸಿವಿರಾಷ್ಟ್ರವನ್ನು ಆಳಲಿ' ಎಂದು ಕಣ್ಣೊರೆಸಿಕೊಂಡ.

ಜಾಲಿಕುಮಾರ, 'ಮಹಾರಾಜಾ, ತಂದೆ-ತಾಯಿಯರು ನಾನು ಹೇಳಿದರೆ ಬರುವವರಲ್ಲ. ಅದಕ್ಕೆ ನೀನೇ ದಯಮಾಡಿ ಅಲ್ಲಿಗೆ ಹೋಗಿ ಅವರನ್ನು ಒಲಿಸಿ ಕರೆ ತನ್ನಿರಿ' ಎಂದ. ತಕ್ಷಣವೇ ರಾಜ ಆಜ್ಞೆ ಮಾಡಿದ, 'ಸೇನಾಪತಿಗಳೇ, ಆನೆ, ಕುದುರೆ, ರಥ, ಕಾಲಾಳು ಸೇನೆಯನ್ನು ಸಿದ್ಧಗೊಳಿಸಿ. ನಿಗಮದವರು, ಬ್ರಾಹ್ಮಣರು, ಪುರೋಹಿತರು ನನ್ನನ್ನು ಹಿಂಬಾಲಿಸಲಿ. ನಾನಾ ರೀತಿಯಲ್ಲಿ ಅಲಂಕೃತರಾದ ಅರವತ್ತು ಸಾವಿರ ಯೋಧರು ಶೀಘ್ರದಲ್ಲಿ ಸಿದ್ಧರಾಗಿ ಬರಲಿ. ನೀಲವಸ್ತ್ರಧಾರಿಗಳು, ಪೀತ ವಸ್ತ್ರಧಾರಿಗಳು, ಬಿಳೀ ವಸ್ತ್ರಧಾರಿಗಳು, ಕೆಂಪುಪೇಟಗಳನ್ನು ಧರಿಸಿದವರು, ಬಗೆಬಗೆಯ ಅಲಂಕಾರಗಳೊಡನೆ ತೀವ್ರವಾಗಿ ಬರಲಿ. ದಶದಿಕ್ಕುಗಳು ಬೆಳಗಲಿ. ನಂತರ ಹದಿನಾಲ್ಕು ಸಾವಿರ ಆನೆಗಳು ಬರಲಿ. ಅವುಗಳ ಗವುಸಿನಲ್ಲಿ ಚಿನ್ನವಿರಲಿ. ಅದು ಬಂಗಾರದ ಅಲಂಕಾರದಿಂದ ಬಿಗಿದಿರಲಿ. ಅವುಗಳ ಮೇಲೆ ತೋಮರ, ಅಂಕುಶಗಳನ್ನು ಹಿಡಿದ ಗ್ರಾಮಣಿ ಕುಳಿತಿರಲಿ. ಶ್ರೇಷ್ಠ ಜಾತಿಯ, ಅಜಾನೀಯ, ಶೀಘ್ರಗಾಮಿಗಳಾದ ಹದಿನಾಲ್ಕು ಸಾವಿರ ಕುದುರೆಗಳು ಸಿದ್ಧವಾಗಲಿ. ಅವುಗಳ ಮೇಲೆ ಬಲಶಾಲಿಗಳಾದ ಖಡ್ಗ ಮತ್ತು ಧನುರ್ಧಾರಿಗಳು ಕುಳಿತಿರಲಿ. ನಂತರ ಚೆನ್ನಾಗಿ ಸಜ್ಜಾದ, ಗಟ್ಟಿ ಗಾಲಿಗಳುಳ್ಳ, ಬಂಗಾರದ ಅಲಂಕಾರಗಳನ್ನು ಹೊಂದಿದ ಹದಿನಾಲ್ಕು ಸಾವಿರ ರಥಗಳಿರಲಿ. ಅವುಗಳ ಮೇಲೆ ನಮ್ಮ ರಾಷ್ಟ್ರದ ಧ್ವಜ ಹಾರಾಡುತ್ತಿರಲಿ. ಚರ್ಮದ ಕವಚಗಳನ್ನು ಧರಿಸಿದ, ಧೃಡವಾದ ಪ್ರಹಾರ ಮಾಡುವ ಶಕ್ತಿಯುಳ್ಳ ಧನುರ್ಧಾರಿಗಳು ರಥದಲ್ಲಿ ಕುಳಿತು, ಸಿದ್ಧವಾಗಿ ಬೇಗನೇ ಬಂದು ಸೇರಲಿ'. ಅದೇ ಉತ್ಸಾಹದಲ್ಲಿ ರಾಜ ಅಮಾತ್ಯರಿಗೆ ಹೇಳಿದ, 'ನನ್ನ ಮಗ ಇಲ್ಲಿಗೆ ಬರಲು ಅನುಕೂಲವಾಗುವಂತೆ ಜೆತುತ್ತರ ನಗರದಿಂದ ವಕಪರ್ವತದವರೆಗೆ ನೆಲವನ್ನು ಸಮತಟ್ಟು ಮಾಡಿಸಿ ಅಷ್ಟಪಥಗಳ ರಸ್ತೆಯನ್ನು ಮಾಡಿಸಿ'. ಮಗನನ್ನು ಕರೆತರುವುದರಲ್ಲಿ ರಾಜನ ಉತ್ಸಾಹ ಮಿತಿ ಮೀರಿತ್ತು. ❖

ಗುಂಡಣ್ಣ



ದಿನ ಭವಿಷ್ಯ

ಗುರುವಾರ ಸೆಪ್ಟೆಂಬರ್ 9, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ವರ್ಷ ಋತು ಭಾದ್ರಪದ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಪೂರ್ವಫಲ್ಗುಣಿ ತೃತೀಯಾ ಗಂ. 49-47 (ರಾ. 2-10) ಗುರುವಾರ ನಿತ್ಯ ನಕ್ಷತ್ರ ಹಸ್ತ ಗಂ. 27-9 (ಸಾ. 5-07) ಶುಕ್ಲ ನಾಮ ಯೋಗ ಗ. 44-59 ತೈತಲ ಕರಣ ಗಂ. 21-55 ವಿಷ ಗಂ. 46-14 ಅಮೃತ ಗಂ. 12-10 : ರಾಹುಕಾಲ ಮ ಗಂ. 1-30 ರಿಂದ 3-00 ಗುಳಿಕ ಕಾಲ ಬೆ ಗಂ 9-00 ರಿಂದ 10-30 ಯಮಗಂಡ ಕಾಲ ಬೆ ಗಂ 6-00 ರಿಂದ 7-30 : ಸೂರ್ಯೋದಯ: 6-12 ಸೂರ್ಯಾಸ್ತ: 6-24 ಅದೃಷ್ಟ ಸಂಖ್ಯೆ 7 8.

ಮೇಷ: ನಿರುದ್ಯೋಗಿಗಳಿಗೆ ಉದ್ಯೋಗಾವಕಾಶಗಳು ತೆರೆದುಕೊಳ್ಳುವ ಸಾಧ್ಯತೆ. ನ್ಯಾಯಾಲಯದಲ್ಲಿನ ಕಟ್ಲೆಗಳಿಗೆ ಚಾಲನೆ ದೊರಕಲಿದೆ. ಸಾಹಿತಿ, ಬುದ್ಧಿಜೀವಿಗಳಿಗೆ ಗೌರವ ಪ್ರಾಪ್ತಿ.

ವೃಷಭ: ದೇವತಾನುಗ್ರಹದಿಂದ ಶುಭ ಕಾರ್ಯಗಳು ನಿಮ್ಮ ಮನದಿಚ್ಛೆಯಂತೆ ನೆರವೇರುವುದರಿಂದ ನೆಮ್ಮದಿಯನ್ನು ಹೊಂದಲಿದ್ದೀರಿ. ಧೈರ್ಯ ಆತ್ಮವಿಶ್ವಾಸ ಮತ್ತು ಪ್ರಯತ್ನ ಬಲದಿಂದಾಗಿ ಕಾರ್ಯಾನುಕೂಲವಾಗಲಿದೆ.

ಮಿಥುನ: ಸಂಶೋಧನಾಶೀಲರಿಗೆ ಉನ್ನತ ಅಧ್ಯಯನಕ್ಕೆ ಉತ್ತೇಜನ ದೊರೆತು ವಿದೇಶ ಪ್ರಯಾಣ ಮಾಡುವ ಸಾಧ್ಯತೆ. ಸಾರಾಸಾರ ವಿವೇಚನೆಯಿಂದ ವೈವಾಹಿಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಿರಿ.

ಕರ್ಕಾಟಕ: ಆರ್ಥಿಕ ಅಡಚಣೆಗಳು ಹಂತ ಹಂತವಾಗಿ ನಿವಾರಣೆಯಾಗಲಿವೆ. ಅತಿಥಿಗಳ ಆಗಮನದಿಂದ ಮನೆಯಲ್ಲಿ ಸಂತಸದ ವಾತಾವರಣ. ಶಾರೀರಿಕ ಆಯಾಸ ತೋರಿಬಂದರೂ ದಿನದ ಅಂತ್ಯದಲ್ಲಿ ಕೆಲಸಗಳಲ್ಲಿ ಪ್ರಗತಿ.

ಸಿಂಹ: ಗೃಹ ನಿರ್ಮಾಣ ಕಾರ್ಯಗಳನ್ನು ಕೈಗೊಳ್ಳಲು ಉತ್ತಮವಾದ ಕಾಲ. ವಿದೇಶಿ ವ್ಯವಹಾರದಲ್ಲಿ ಹೆಚ್ಚಿನ ಲಾಭ. ಭೂ ಖರೀದಿ ವ್ಯವಹಾರವನ್ನು ಮಾಡಲು ಸಕಾಲವಾಗಿದೆ.

ಕನ್ಯಾ: ಸರ್ಕಾರಿ ಕೆಲಸದಲ್ಲಿರುವವರಿಗೆ ಬಿಡುವಿಲ್ಲದ ಕೆಲಸ ಕಾರ್ಯಗಳಿಂದಾಗಿ ಮನೆಯವರೊಂದಿಗೆ ಮನಸ್ತಾಪ ಉಂಟಾದೀತು. ಮನೆಯವರ ಪ್ರವಾಸ ಪ್ರಯಾಣಕ್ಕಾಗಿ ವಿಶೇಷ ವೆಚ್ಚ ಭರಿಸಬೇಕಾದೀತು.

ತುಲಾ: ಉದ್ಯೋಗಾಕಾಂಕ್ಷಿಗಳಿಗೆ ಅನಿರೀಕ್ಷಿತವಾಗಿ ಉದ್ಯೋಗಾವಕಾಶ ದೊರಕಲಿದೆ. ವಿದೇಶಿ ವ್ಯವಹಾರಸ್ಥರೊಂದಿಗಿನ ಸಂಪರ್ಕದಿಂದಾಗಿ ವ್ಯವಹಾರಕ್ಕೊಂದು ತಿರುವು. ಅತಿಯಾದ ಆಯಾಸ ತಲೆದೋರಬಹುದು.

ವೃಶ್ಚಿಕ: ಉನ್ನತಾಧಿಕಾರಿಗಳ ಅನುಗ್ರಹದಿಂದಾಗಿ ನೌಕರಿಯಲ್ಲಿ ಅನುಕೂಲತೆ. ಸಾಮಾಜಿಕ ಸೇವೆಯಲ್ಲಿ ದಿನವಿಡೀ ತೊಡಗಿಕೊಂಡು ಸಂತೋಷವನ್ನು ಅನುಭವಿಸಲಿದ್ದೀರಿ. ಮಕ್ಕಳಿಂದ ಆರ್ಥಿಕ ಸಹಕಾರ.

ಧನು: ಧನ ಸಂಗ್ರಹವಾಗಿ ಹಮ್ಮಿಕೊಂಡಿರುವ ಯೋಜನೆಗಳನ್ನು ಪೂರೈಸಲು ಅನುಕೂಲತೆ ಕೂಡಿಬರಲಿದೆ. ಕೃಷಿ ಕೈಗಾರಿಕಾ ಕ್ಷೇತ್ರದಲ್ಲಿ ಲಾಭಾಂಶ ಹೆಚ್ಚಳ. ರಾಜಕೀಯದಲ್ಲಿ ಸೂಕ್ತ ಸ್ಥಾನ ದೊರಕುವ ಸಾಧ್ಯತೆ ಕಂಡುಬರುತ್ತಿದೆ.

ಮಕರ: ನಿಮ್ಮ ಒಳ್ಳೆಯತನದ ದುರುಪಯೋಗವಾಗದಂತೆ ಎಚ್ಚರಿಕೆ ವಹಿಸುವುದು ಒಳ್ಳೆಯದು. ಅವಶ್ಯಕತೆಗಿಂತ ಹೆಚ್ಚಾಗಿ ಹಣಕಾಸಿನ ನೆರವು ದೊರೆಯಲಿದೆ. ಶೀಘ್ರದಲ್ಲೇ ಸಂತೋಷಕರ ಸುದ್ದಿಯೊಂದನ್ನು ಆಲಿಸಲಿದ್ದೀರಿ.

ಕುಂಭ: ಸರ್ಕಾರಿ ಅಧಿಕಾರಿಗಳಿಗೆ ಸ್ಥಾನ ಬದಲಾವಣೆಯ ಸಾಧ್ಯತೆ ಗಾಢವಾಗಿ ಕಂಡುಬರುತ್ತಿದೆ. ನೌಕರ ವರ್ಗಕ್ಕೆ ವಿರಾಮ ದೊರೆತು ಮನೆಯವರೊಂದಿಗೆ ಪ್ರಯಾಣದ ಸಾಧ್ಯತೆ. ಆರೋಗ್ಯದ ಬಗ್ಗೆ ಗಮನಹರಿಸಿ.

ಮೀನ: ಉದ್ಯೋಗ ಕ್ಷೇತ್ರದಲ್ಲಿ ಮೇಲಾಧಿಕಾರಿಗಳ ಪ್ರಶಂಸೆಗೆ ಪಾತ್ರರಾಗಲಿದ್ದೀರಿ. ವಿಶ್ವಾಸದಿಂದ ಉದ್ಯೋಗ ವ್ಯಾಪಾರಗಳಲ್ಲಿ ತೊಡಗಿಕೊಳ್ಳುವುದರಿಂದ ಹೆಚ್ಚಿನ ಲಾಭ ಗಳಿಸಲಿದ್ದೀರಿ. ಮಾನಸಿಕ ನೆಮ್ಮದಿ ನಿಮ್ಮದಾಲಿದೆ.

ನಿಮ್ಮ ಜನ್ಮದಿನ 9-ಸೆಪ್ಟೆಂಬರ್ ಇಂದು ಅತ್ಯಂತ ಶುಭದಾಯಕವಾಗಿದ್ದು, ಉನ್ನತ ವಿಚಾರ ಚಿಂತನೆಗಳಿಂದಾಗಿ ಸಾಮಾಜಿಕ ಗೌರವಗಳು ಪ್ರಾಪ್ತವಾಗುವವು. ಕಬ್ಬಿಣ, ಉಕ್ಕು ಮುಂತಾದ ವ್ಯಾಪಾರಗಳಲ್ಲಿ ತೊಡಗಿದವರಿಗೆ ವ್ಯಾಪಾರ ವೃದ್ಧಿಯಾಗಿ ಆರ್ಥಿಕ ಸಂಕಷ್ಟಗಳು ನಿವಾರಣೆಯಾಗಲಿವೆ. ಮಿತ ಭಾಷಿಯಾದ ನೀವು ಉತ್ತಮ ಸಾಂಸಾರಿಕ ಜೀವನವನ್ನು ನಡೆಸಲಿದ್ದೀರಿ.

ಪದಬಂಧ 4714


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಭಸ್ಮವಿಟ್ಟು ಮಹಾಪುರುಷನಿಗೆ ಮಾಡುವ ಆದರ (5)
3.ಅಡಗಿಕೊಳ್ಳಲು ಸೂಕ್ತವಾದ ಕಾಡು (3)
5.ಗುಂಪು ಗುಂಪಾಗಿ ವರ್ಗೀಕರಿಸುವುದು (5)
7.ಮೂಲಿಕೆಗಳನ್ನು ಬಟ್ಟಿಯಿಳಿಸಿ ತೆಗೆದ ರಸ (3)
8.ಪ್ರಣಯಿಗಳ ಸುಳ್ಳು ಕೋಪ (5)
11.ಗುಂಗುರು ಕೂದಲು (3)
12.ಹೆಸರಿಡುವ ಶಾಸ್ತ್ರ (5)
14.ಶಿವನ ಧನುಸ್ಸು (3)
15.ಲೋಹದ ಹಕ್ಕಿಯಲ್ಲಿನ ಪಯಣ (5)

ಮೇಲಿಂದ ಕೆಳಕ್ಕೆ

1.ಕವಿಕಲ್ಪನೆ ನಡುವೆ ಅಕ್ಕನಗಂಡ ನುಸುಳಿದ್ದಾನಲ್ಲಾ! (4)
2.ಈತ ತಿರುಪೆ ಬೇಡುವವನು (3)
4.ದಾಯಾದಿಯನ್ನು ಬೀಳ್ಕೊಡುವುದು! (3)
6.ರಾಕ್ಷಸಿ ಇಲ್ಲಿದ್ದಾಳೆ (3)
7.ಇನ್ನೂ ಕರು ಹಾಕದ ಎಮ್ಮೆ (3)
8.ಹುಳುವಿನಲ್ಲಿ ಸತ್ವ ಕಾಣುತ್ತಿದೆಯೇ? (3)
9.ಯಮನಿದ್ದಾಗಿನ ಸೂತ್ರ! (3)
10.ಬುದ್ಧಿವಂತಿಕೆ ಇಲ್ಲಿದೆ (4)
11.ಅಂದಹೀನ ವ್ಯಕ್ತಿ (3)
13.ಯುದ್ಧ ಅಥವಾ ಕಾಳಗ (3)



4713ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ
2.ಸ್ಥಾವರ 4.ಮದನ
5.ಅಂತರ್ಗತ 6.ಬಲವಂತ
7.ತೆನೆ 9.ನವ 13.ಸಮೀಕ್ಷಕ
14.ಬಲರಾಮ
15.ರಸದ 16.ಕರಣ

ಮೇಲಿಂದ ಕೆಳಕ್ಕೆ
1.ಹೇಮಕಂಕಣ 2.ಸ್ಥಾನಬದ್ಧತೆ
3.ಗರ್ಗರ 5.ಅಂತರ್ಧಾನ
8.ನೆಲಸಮ 10.ವಶೀಕರಣ
11.ನರೆಕೂದಲು 12.ಓಲಗ

ಸುಡೊಕು 5100

	4		2			6		1
				8		2	7	
			1		4			8
		4				1		
2	8		6	9	1		4	3
		7					6	5
	5			1				7
	1	6	8		2	5	3	
4	2			5			1	6

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5099 ಸುಡೊಕು

3	5	1	7	4	2	9	8	6
6	9	2	1	5	8	3	7	4
4	7	8	3	6	9	2	1	5
1	6	4	8	9	5	7	2	3
9	2	5	4	3	7	8	6	1
8	3	7	6	2	1	4	5	9
2	1	3	9	7	6	5	4	8
5	4	6	2	8	3	1	9	7
7	8	9	5	1	4	6	3	2

ಮೆಕ್ಸಿಕೊದಲ್ಲಿ 7 ರಷ್ಟು ತೀವ್ರತೆಯ ಭೂಕಂಪ

ಅಕಾಪುಲ್ಕೊ (ಮೆಕ್ಸಿಕೊ) (ಎಎಫ್‌ಪಿ): ಮೆಕ್ಸಿಕೊದ ಗೆರೆರೊ ರಾಜ್ಯದ ಅಕಾಪುಲ್ಕೊ ಸಮೀಪದಲ್ಲಿರುವ ಪೆಸಿಫಿಕ್ ರೆಸಾರ್ಟ್ ನಗರದಲ್ಲಿ ಮಂಗಳವಾರ ಭಾರಿ ತೀವ್ರತೆಯ ಭೂಕಂಪ ಸಂಭವಿಸಿದ್ದು, ಒಬ್ಬರು ಮೃತಪಟ್ಟಿದ್ದಾರೆ.

ರಿಕ್ಟರ್ ಮಾಪಕದಲ್ಲಿ ಭೂಕಂಪದ ತೀವ್ರತೆ 7ರಷ್ಟು ದಾಖಲಾಗಿದೆ.

ಸಿರಿಗೌರಿ ಎಂಬ ಮನೆಮಗಳು

● ಮಂಜುನಾಥ ಕೊಳ್ಳೇಗಾಲ

ಗೌರೀಹಬ್ಬ ನಮ್ಮ ಹಬ್ಬಗಳಲ್ಲೆಲ್ಲಾ ಬಹಳ ವಿಶಿಷ್ಟವಾದುದು. ಸಾಮಾನ್ಯವಾಗಿ ಹಬ್ಬವೆಂದರೆ ದೇವಪೂಜೆ, ಅದಕ್ಕೆ ತಕ್ಕ ಭಯ-ಭಕ್ತಿ ಇತ್ಯಾದಿಗಳು ಸಲ್ಲುತ್ತವೆ. ಗೌರೀಹಬ್ಬವೂ ಇದಕ್ಕೆ ಹೊರತಲ್ಲವಾದರೂ ಗೌರಿಯ ಕರೆಯುವ ಸಡಗರ, ಶಾಸ್ತ್ರಗಳಾಚೆಗೂ ಹಬ್ಬಿದೆ. ಇಲ್ಲಿ ಗೌರಿ ಕೇವಲ ಶ್ರದ್ಧಾಭಕ್ತಿಗಳ ಕೇಂದ್ರವಾದ ದೇವಿಯಲ್ಲ - ದೂರದ ಕೈಲಾಸದಿಂದ ತವರಿಗೆ ಬರುತ್ತಿರುವ ಮಗಳೇ ಅವಳು. ಅವಳನ್ನು ಸ್ವಾಗತಿಸಲು ಎಲ್ಲಿಲ್ಲದ ಸಡಗರ - ವಾರದಿಂದಲೇ ತಯಾರಿ. ಮನೆ ಗುಡಿಸುವುದೇನು, ಸಾರಣೆ-ಕಾರಣೆ ಮಾಡುವುದೇನು, ಹಸೆಯಿಕ್ಕುವುದೇನು! ಮನೆಮಗಳನ್ನು ಎದುರುಗೊಳ್ಳುವ ಸಡಗರ ಎಲ್ಲ ಕೆಲಸಗಳಲ್ಲೂ ಒಡೆದು ಕಾಣುತ್ತಿರುತ್ತದೆ.

ಗೌರಿ ಬರುವ ದಿನವಂತೂ ಬೆಳಕೊಡೆಯುವ ಮುನ್ನವೇ ಮನೆಯಲ್ಲಿ ಸಂಭ್ರಮ. ಬೇಗಲೇ ಮಿಂದು, ಮನೆಯ ಮುಂದೆ ಚೆಂದದ ರಂಗೋಲಿಯಿಟ್ಟು, ಬಾಗಿಲನ್ನು ತೋರಣದಿಂದ ಅಲಂಕರಿಸಿ, ಒಳಗೆ ಮಂಟಪ ಸಿದ್ಧಪಡಿಸಿ, ಅಕ್ಕಿ ತುಂಬಿದ ತಟ್ಟೆಯಲ್ಲಿ ಗೌರಿಯನ್ನಿಟ್ಟು ಅಲಂಕರಿಸಿ, ಒಳಗೆ ಅಡುಗೆಗೆ ಶುರು. ಈ ತೋರಣ ಕಟ್ಟುವ ಕೆಲಸ, ಮಂಟಪಕ್ಕೆ ಬಾಳೆಕಂದು ಕಟ್ಟುವ ಕೆಲಸ ಮೊದಲಾದ 'ಒಡ್ಡು'ಕೆಲಸಗಳು ಮನೆಯ ಗಂಡುಮಕ್ಕಳ ಪಾಲು. 'ಗಂಡಸಿಗ್ಯಾಕೆ ಗೌರೀ ದುಃಖ' ಎನ್ನುವ ವೇದವಾಕ್ಯದಿಂದ (ಗಾದೆಮಾತು ವೇದವಾಕ್ಯ ತಾನೆ?) ಅಷ್ಟುಮಟ್ಟಿಗೆ ಅವರಿಗೆ ವಿನಾಯಿತಿ. ಮರುದಿನ ಗಣೇಶನ ಹಬ್ಬವನ್ನು ಗಂಡುಮಕ್ಕಳು ಇಷ್ಟು ಸಡಗರದಿಂದ ಮಾಡುತ್ತಾರೋ ಇಲ್ಲವೋ, ಆದರೆ ಮನೆಯ ಹೆಂಗಳೆಯರ ಈ ದಿನದ ಸಡಗರ ಮಾತ್ರ ಅವರಲ್ಲೂ ಹುರುಪುದುಂಬುವುದಂತೂ ದಿಟ.

ಪಾರ್ವತಿ ಪರ್ವತರಾಜನ ಪುತ್ರಿಯಂತೆ. ಇರಬಹುದು, ಆದರೆ ನಮ್ಮ ಗೌರಿಯಂತೂ ಭಕ್ತರೆಲ್ಲರ ಮನೆಮಗಳೇ ಸರಿ. ಅವಳು ಮನೆ-ಮನೆಗಳಲ್ಲೂ ಹುಟ್ಟಿದ್ದಾಳೆ, ಮನಮನಗ-ಳಲ್ಲೂ ಬೆಳೆದಿದ್ದಾಳೆ. 'ಹುಟ್ಯಾಳು ಗೌರಮ್ಮ ಭೂಲೋಕದಲ್ಲಿ' ಎಂದು ತೊಡಗುವ ಜಾನಪದ ಹಾಡೊಂದು ಗೌರಿಗೆ ಗಂಡು ಹುಡುಕುವ ಪರಿಯನ್ನು ವರ್ಣಿಸುತ್ತದೆ.

ಹನ್ನೆರಡು ತುಂಬಿದ ಗೌರಮ್ಮನನ್ನು ಯಾರಿಗೆ ಕೊಡಲೆಂಬ ಪ್ರಶ್ನೆ ತಂದೆಯದು. ಒಬ್ಬೊಬ್ಬ ಗಂಡಿಗೂ ಒಂದೊಂದು ನೆಪ ಹೇಳಿ ಒಲ್ಲೆನೆನ್ನುವ ಗೌರಿ ಕೊನೆಗೆ 'ಶಿವಗಂಗೆ ಮೊದಲಲ್ಲಿ ಸನ್ಯಾಸಿ ಮಠವು, ಸನ್ಯಾಸಿ ಮಠದಲ್ಲಿ ಜಂಗಮನಿರುತಾನೆ, ಜಂಗಮನಿಗೆ ಕೊಟ್ಟೀಗ ಲಗ್ನಾ ಮಾಡಯ್ಯಾ' ಎನ್ನುತ್ತಾಳೆ. ಅವನಿಗೆ ಉಣ್ಣೋಕೆ ತಣಿಗಿಲ್ಲ, ಹತ್ತೋಕೆ ಕುದುರಿಲ್ಲ, ಮಲಗೋಕೆ ಮಂಚವಿಲ್ಲ ಎಂದು ತಂದೆ ಬುದ್ಧಿ ಹೇಳಿದರೆ ಅವನನ್ನೇ ಕುರಿತು ಹಠಕ್ಕೆ ಬೀಳುತ್ತಾಳೆ ಗೌರಿ. ಅವಳು ಹಿಡಿದ ತಪಸ್ಸು ಶಿವನಿಗೆ ಮುಟ್ಟಿ 'ಗುರು ಧರ್ಮ ಕೋರಣ್ಯಾ ಭಿಕ್ಷಾ ನೀಡೆಂ'ದು ಶಿವ ಜಂಗಮರೂಪಿನಲ್ಲಿ ಮೈದೋರಿ 'ನಡಿಯಾಲೆ ಗೌರಿ ಮಠಕೆ ಹೋಗೋಣ' ಎಂದು ಕರೆಯೊಯ್ಯುತ್ತಾನೆ. ಇದರಿಂದ ಸಂತಸಗೊಂಡ ತಾಯ್ತಂದೆಯರು 'ಆಕಾಶವೇಣಷ್ಟು ಚಪ್ಪರ ಹಾಕಿ, ಭೂಮಿ ತಾಯಷ್ಟು ಹಸೆ ಜಗುಲಿ ಬರೆದು, ದೇವದೇವೊಕ್ಕಾಲ ಅಲ್ಲಿಗೆ ಕರೆಸಿ' ಗೌರಿಯನ್ನು ಧಾರೆಯೆರೆದು ಕೊಡುತ್ತಾರೆ. ಹೀಗೆ ಮನೆಮಗಳು ಗೌರಿ ಶಿವನ ಮಡದಿಯಾಗುತ್ತಾಳೆ.

ಮನೆಮಗಳು ಗೌರಮ್ಮ ತವರಿನಲ್ಲಿ ಹಲವರಿಗೆ ಅಕ್ಕ, ಕೆಲವರಿಗೆ ತಂಗಿ, ಕೆಲವರಿಗೆ ತಾಯಿ. ಮನೆ-ಮಂದಿಯೆಲ್ಲರೂ ಆಕೆಯನ್ನು ಬೀಳ್ಕೊಡುವ ಪರಿಯೇ ಚಂದ

ಹೋಗ ಗೌರಮ್ಮ ನಿನಗ ನಾ ಒಂದ್ಹೋಳಿಗಿ
ಮಾಡಿದೇನs |
ಮಾದೇವನ್ಹೆಂಡತಿ ಮಡದಿ ಗೌರಮ್ಮಗೊಂದಾ-
ರತಿ ಬೆಳಗಿದೇನ ||
ಅಕ್ಕ ಗೌರಮ್ಮ ನಿನಗs ನಾ ಒಂದು ಅಕ್ರತಿ
ಮಾಡಿದೇನ |
ಅಡಕಿಯ ಹಣ್ಣ ಉಡಿತುಂಬಿ ಮಂಗಳಾರುತಿ
ಬೆಳಗಿದನ ||
ತಂಗಿ ಗೌರಮ್ಮ ನಿನಗs ನಾ ಒಂದು ಚೆಂದವ
ಮಾಡಿದೆನ |
ನಿಂಬಿಯ ಹಣ್ಣು ಉಡಿತುಂಬಿ ಮಂಗಳಾರುತಿ
ಬೆಳಗಿದೇನ ||
ತಾಯಿ ಗೌರಮ್ಮ ನಿನಗs ನಾ ಒಂದು ಛಾಯವ
ಮಾಡಿದೇನs |
ಬಾಳಿಯ ಹಣ್ಣು ಉಡಿತುಂಬಿ ಮಂಗಳಾರುತಿ
ಬೆಳಗಿದೆನ ||
ಆರುತಿ ಬೆಳಗಿದೇನs ನಾ ಒಂದಾರುತಿ
ಬೆಳಗಿದೆನ |
ಮಾದೇನ್ಹೆಂಡತಿ ಮಡದಿ ಗೌರಮ್ಮಗೊಂದಾ-
ರುತಿ ಬೆಳಗಿದೆನ ||
ಮನೆಮಗಳು ಸಿರಿಗೌರಿ ನಮ್ಮೆಲ್ಲರ ಮನಗಳಲ್ಲಿ ನಲಿಯುತ್ತಿರಲಿ.

(ಜಾನಪದಗೀತೆಗಳ ಆಕರ: ಜಾನಪದ ಕಥನ ಗೀತೆಗಳು - ಸಂ. ಕರಾಕೃ; 'ಹಬ್ಬದ ಹಾಡುಗಳು' (ಸಂಪುಟ 2) - ಸಂ. ಡಿ. ಬಿ. ನಾಯಕ್)

ಗೌರೀಹಬ್ಬ

ಗೌರೀ–ಗಣೇಶ ಹಬ್ಬ ನಮ್ಮ ನಾಡಿನ ಪ್ರಮುಖ ಹಬ್ಬ. ಶಿವನ ಮಡದಿಯೇ ಗೌರಿ; ಅವಳು ಗಣೇಶನ ತಾಯಿಯೂ ಹೌದು. ಅಮ್ಮ ಮತ್ತು ಮಗ ಭೂಲೋಕಕ್ಕೆ ಜೊತೆಯಾಗಿ ಬರುವುದು ವಿಶಿಷ್ಟವಾಗಿದೆ. ಕುಟುಂಬದ ಒಳಿತಿಗಾಗಿ ಗೌರೀವ್ರತವನ್ನು ಆಚರಿಸಲಾಗುತ್ತದೆ. ಇದನ್ನು ಸ್ವರ್ಣಗೌರೀವ್ರತ ಎಂದೂ ಕರೆಯುತ್ತಾರೆ. ಪಾರ್ವತಿ, ಉಮಾ, ಭವಾನಿ, ದುರ್ಗಾ, ಅಂಬಿಕಾ, ಅಪರ್ಣಾ, ಅನ್ನಪೂರ್ಣಾ, ಗಿರಿಜಾ, ಶಾಂಕರೀ – ಹೀಗೆ ಗೌರಿಗೆ ಹಲವು ಹೆಸರುಗಳು.



ಹಂಚಿಕೆಯಾದ ಡೋಸ್‌ಗಳಲ್ಲಿ ಅರ್ಧದಷ್ಟೂ ಖರೀದಿಸದ ಆಸ್ಪತ್ರೆಗಳು

ಕೋವಿಡ್ ಲಸಿಕೆ: ಸ್ಥಗಿತಗೊಳ್ಳುತ್ತಿವೆ ಖಾಸಗಿ ಕೇಂದ್ರ

● ವರುಣ ಹೆಗಡೆ

ನಗರ ಕೋವಿಡ್ ಲಸಿಕೆಯ ಅಂಕಿ–ಅಂಶ

312 ಲಸಿಕೆ ನೀಡುತ್ತಿರುವ ಖಾಸಗಿ ಕೇಂದ್ರಗಳು

571 ಲಸಿಕೆ ನೀಡುತ್ತಿರುವ ಸರ್ಕಾರಿ ಕೇಂದ್ರಗಳು



1.17 ಕೋಟಿ ಈವರೆಗೆ ನೀಡಲಾದ ಲಸಿಕೆಯ ಡೋಸ್‌ಗಳು

83.87 ಲಕ್ಷ ಮೊದಲ ಡೋಸ್ ಪಡೆದವರು

34.05 ಲಕ್ಷ ಎರಡೂ ಡೋಸ್ ಪೂರ್ಣಗೊಳಿಸಿದವರು

ಬೆಂಗಳೂರು: ಕೋವಿಡ್ ಲಸಿಕೆಯು ಸರ್ಕಾರಿ ಕೇಂದ್ರಗಳಲ್ಲಿ ಉಚಿತವಾಗಿ ದೊರೆಯುತ್ತಿರುವುದರಿಂದ ಬೆಂಗಳೂರು ಸೇರಿದಂತೆ ರಾಜ್ಯದ ವಿವಿಧೆಡೆಯ ಖಾಸಗಿ ಆಸ್ಪತ್ರೆಗಳು ಲಸಿಕೆ ಖರೀದಿಗೆ ಹಿಂದೇಟು ಹಾಕಲಾರಂಭಿಸಿವೆ. ಈಗಾಗಲೇ ಬೆಂಗಳೂರಿನ ಶೇ 50ಕ್ಕೂ ಅಧಿಕ ಕೇಂದ್ರಗಳು ಲಸಿಕೆ ವಿತರಣೆ ಸ್ಥಗಿತಗೊಳಿಸಿವೆ.

ಕೋವಿಡ್‌ನ ಸಂಭಾವ್ಯ ಮೂರನೇ ಅಲೆಯ ಮುನ್ನೆಚ್ಚರಿಕೆ ಕ್ರಮವಾಗಿ ಲಸಿಕಾ ಅಭಿಯಾನಕ್ಕೆ ವೇಗ ನೀಡಲಾಗಿದೆ. ನಗರದಲ್ಲಿ ಎರಡು ವಾರಗಳಿಂದ ದಿನವೊಂದಕ್ಕೆ ಲಕ್ಷಕ್ಕೂ ಅಧಿಕ ಡೋಸ್‌ಗಳನ್ನು ವಿತರಿಸಲಾಗುತ್ತಿದೆ. ಸದ್ಯ 500ಕ್ಕೂ ಅಧಿಕ ಸರ್ಕಾರಿ ಹಾಗೂ 300ಕ್ಕೂ ಅಧಿಕ ಖಾಸಗಿ ಕೇಂದ್ರಗಳಲ್ಲಿ 18 ವರ್ಷ ಮೇಲ್ಪಟ್ಟವರಿಗೆ ಲಸಿಕೆ ಒದಗಿಸಲಾಗುತ್ತಿದೆ.

ಪ್ರಜಾವಾಣಿ ವಿಶೇಷ

ಕಳೆದ ಜ.16ರಿಂದ ಲಸಿಕಾ ಅಭಿಯಾನ ಪ್ರಾರಂಭಿಸಿದ ಸರ್ಕಾರ, ಆರಂಭಿಕ ದಿನಗಳಲ್ಲಿ ಖಾಸಗಿ ಆಸ್ಪತ್ರೆಗಳಿಗೆ ಲಸಿಕೆ ಹಂಚಿಕೆ ಮಾಡಿತ್ತು. ₹ 100 ಸೇವಾ ಶುಲ್ಕ ಪಡೆಯುವಂತೆ ಹೇಳಿತ್ತು. ನಂತರ ಸರ್ಕಾರಿ ಕೇಂದ್ರಗಳಲ್ಲಿ ಜನದಟ್ಟಣೆ ಕಾಣಿಸಿಕೊ-ಳ್ಳುತ್ತಿದ್ದಂತೆ ಕಂಪನಿಗಳಿಂದ ನೇರವಾಗಿ ಖರೀದಿಸಿ, ವಿತರಿಸಲು ಖಾಸಗಿ ಆಸ್ಪತ್ರೆಗಳಿಗೆ ಸೂಚಿಸಿತ್ತು.

ಕೋವಿಡ್ ಎರಡನೇ ಅಲೆ ಕಾಣಿಸಿಕೊಂಡ ಬಳಿಕ ಲಸಿಕೆಗೆ ದಿಢೀರ್ ಬೇಡಿಕೆ ಹೆಚ್ಚಿದ್ದರಿಂದ ಖಾಸಗಿ ಆಸ್ಪತ್ರೆಗಳು ವಿವಿಧ ಕಾರ್ಪೊರೇಟ್ ಕಂಪನಿಗಳು ಹಾಗೂ ಅಪಾರ್ಟ್‌ಮೆಂಟ್ ಸಮುಚ್ಚಯಗಳ ಜೊತೆಗೆ ಒಪ್ಪಂದ ಮಾಡಿಕೊಂಡು ಲಸಿಕೆ ವಿತರಿಸಿದ್ದವು. ಸರ್ಕಾರವು 18 ವರ್ಷ ಮೇಲ್ಪಟ್ಟ ಎಲ್ಲರಿಗೂ ಉಚಿತವಾಗಿ ಲಸಿಕೆ ಘೋಷಿಸಿದ ಬಳಿಕ ಖಾಸಗಿ ಆಸ್ಪತ್ರೆಗಳಿಗೆ ತೆರಳುವವರ ಸಂಖ್ಯೆ ಇಳಿಮುಖವಾಗಿದೆ.

ಪ್ರಾರಂಭಿಕ ದಿನಗಳಲ್ಲಿ ಖಾಸಗಿ ಆಸ್ಪತ್ರೆಗಳು 600ಕ್ಕೂ ಅಧಿಕ ಕೇಂದ್ರಗಳಲ್ಲಿ ಲಸಿಕೆ ವಿತರಿಸಿದ್ದವು. ಬಳಿಕ ಲಸಿಕೆ ಪೂರೈಕೆಯಲ್ಲಿ ವ್ಯತ್ಯಯವಾಗಿದ್ದರಿಂದ ಸಣ್ಣ ಆಸ್ಪತ್ರೆಗಳು ಹಿಂದೆ ಸರಿದಿದ್ದವು. ಎರಡು ತಿಂಗಳಿನಿಂದ ಲಸಿಕೆ ಪಡೆಯಲು ಕೇಂದ್ರಗಳಿಗೆ ಬರುವವರ ಸಂಖ್ಯೆ ಕಡಿಮೆಯಾಗಿರುವುದರಿಂದ ಮಧ್ಯಮ ಗಾತ್ರದ ಆಸ್ಪತ್ರೆಗಳೂ ಲಸಿಕೆ ವಿತರಣಾ ಅಭಿಯಾನದಿಂದ ಹಿಂದೆ ಸರಿಯಲಾರಂಭಿಸಿವೆ.

ದೊಡ್ಡ ಆಸ್ಪತ್ರೆಗಳು ಆದ್ಯತೆ: 'ಮಣಿಪಾಲ್, ನಾರಾಯಣ ಹೆಲ್ತ್ ಸೇರಿದಂತೆ ಕೆಲ ಪ್ರಮುಖ ಆಸ್ಪತ್ರೆಗಳು ಮಾತ್ರ ನಿಯಮಿತವಾಗಿ ಲಸಿಕೆ ಖರೀದಿಸಿ, ವಿತರಿಸುತ್ತಿವೆ. ಹಣ ಪಾವತಿಸಬೇಕಾಗಿರುವುದರಿಂದ ಲಸಿಕೆ ಪಡೆಯಲು ಬರುವವರ ಸಂಖ್ಯೆ ಕೂಡ ಇಳಿಮುಖವಾಗಿದೆ. ಹಾಗಾಗಿ, ಈ ಹಿಂದೆ ಖರೀದಿಸಿದ ಡೋಸ್‌ಗಳು ಹಲವು ಆಸ್ಪತ್ರೆಗಳಲ್ಲಿ ಹಾಗೆಯೇ ಉಳಿದಿವೆ. ಸಣ್ಣ ಹಾಗೂ ಮಧ್ಯಮ ಗಾತ್ರದ ಆಸ್ಪತ್ರೆಗಳು ಲಸಿಕೆ ಖರೀದಿಗೆ ನಿರಾಸಕ್ತಿ ತೋರುತ್ತಿವೆ. ಕೆಲವೆಡೆ ಲಸಿಕೆ ವಿತರಣೆ ಸ್ಥಗಿತವಾಗುತ್ತಿದೆ' ಎಂದು ಖಾಸಗಿ ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಮ್ಸ್ ಅಸೋಸಿಯೇಷನ್ (ಫನಾ) ಅಧ್ಯಕ್ಷ ಡಾ. ಪ್ರಸನ್ನ ಎಚ್.ಎಂ. ತಿಳಿಸಿದರು.


'ಸರ್ಕಾರವೇ ಖಾಸಗಿ ಆಸ್ಪತ್ರೆಗಳಿಗೆ ಲಸಿಕೆ ಹಂಚಿಕೆ ಮಾಡಿ, ಸೇವಾ ಶುಲ್ಕ ಮಾತ್ರ ಪಡೆಯಲು ಅವಕಾಶ ನೀಡಿದ್ದರೆ ಲಸಿಕಾ ಅಭಿಯಾನಕ್ಕೆ ಇನ್ನಷ್ಟು ವೇಗ ದೊರೆಯುತ್ತಿತ್ತು. ಸರ್ಕಾರಿ ಕೇಂದ್ರಗಳ ಮುಂದೆ ಜನದಟ್ಟಣೆಯೂ ತಪ್ಪುತ್ತಿತ್ತು. ಆದರೆ, ಸರ್ಕಾರ ಈ ಬಗ್ಗೆ ಕ್ರಮಕೈಗೊಂಡಿಲ್ಲ. ಈಗ ನಮ್ಮ ಬಳಿ ಲಸಿಕೆಯಿದ್ದರೂ ಹೆಚ್ಚಿನ ಹಣ ಪಾವತಿಸಬೇಕೆಂದು ಜನರು ಬರುತ್ತಿಲ್ಲ' ಎಂದು ಫನಾದ ಕಾರ್ಯದರ್ಶಿ ಡಾ. ರಾಜಶೇಖರ್ ವೈ.ಎಲ್. ವಿವರಿಸಿದರು.

ಹಂಚಿಕೆಯಲ್ಲಿ ಶೇ 40ರಷ್ಟು ಖರೀದಿ

ಕೇಂದ್ರ ಸರ್ಕಾರವು ಜುಲೈ ತಿಂಗಳಲ್ಲಿ ರಾಜ್ಯಕ್ಕೆ ಹಂಚಿಕೆ ಮಾಡಿದ್ದ 60 ಲಕ್ಷ ಡೋಸ್‌ಗಳಲ್ಲಿ ಖಾಸಗಿ ಆಸ್ಪತ್ರೆಗಳಿಗೆ ಶೇ 25ರಷ್ಟು ನಿಗದಿಪಡಿಸಲಾಗಿತ್ತು. ಖರೀದಿಸಬೇಕಾದ 15 ಲಕ್ಷ ಡೋಸ್‌ಗಳಲ್ಲಿ 7.20 ಲಕ್ಷ ಡೋಸ್‌ಗಳನ್ನು ಮಾತ್ರ ಖರೀದಿಸಿದ್ದವು. ಆಗಸ್ಟ್ ತಿಂಗಳಲ್ಲಿ ಹಂಚಿಕೆಯಾದ ಡೋಸ್‌ಗಳಲ್ಲಿ ಖಾಸಗಿ ಆಸ್ಪತ್ರೆಗಳು ಶೇ 40ರಷ್ಟು ಡೋಸ್‌ಗಳನ್ನು ಮಾತ್ರ ಖರೀದಿಸಿವೆ.

ಕೋವಿಡ್: ಸಕ್ರಿಯ ಪ್ರಕರಣ ಇಳಿಮುಖ

ಪ್ರಜಾವಾಣಿ ವಾರ್ತೆ



ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಸಕ್ರಿಯ ಪ್ರಕರಣಗಳ ಸಂಖ್ಯೆ ಇಳಿಕೆ ಕಂಡಿದ್ದು, ಸದ್ಯ 17,058 ಮಂದಿ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.

ಹೊಸದಾಗಿ 1,102 ಮಂದಿ ಕೋವಿಡ್ ಪೀಡಿತರಾಗಿರುವುದು ಬುಧವಾರ ದೃಢಪಟ್ಟಿದೆ. ಈವರೆಗೆ ವರದಿಯಾದ ಕೋವಿಡ್ ಪ್ರಕರಣಗಳ ಒಟ್ಟು ಸಂಖ್ಯೆ 29.58 ಲಕ್ಷ ದಾಟಿದೆ. ಒಂದು ದಿನದ ಅವಧಿಯಲ್ಲಿ 1.69 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣವು ಶೇ 0.64 ರಷ್ಟು ವರದಿಯಾಗಿದೆ. 10 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ, 13 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಬಾಗಲಕೋಟೆ, ಬೀದರ್, ಗದಗ ಹಾಗೂ ಯಾದಗಿರಿಯಲ್ಲಿ ಹೊಸ ಪ್ರಕರಣ ವರದಿಯಾಗಿಲ್ಲ.

ಕೇರಳಕ್ಕೆ ಹೊಂದಿಕೊಂಡಿರುವ ಗಡಿ ಜಿಲ್ಲೆಗಳಾದ ದಕ್ಷಿಣ ಕನ್ನಡದಲ್ಲಿ 200, ಮೈಸೂರಿನಲ್ಲಿ 64 ಹಾಗೂ ಕೊಡಗಿನಲ್ಲಿ 33 ಪ್ರಕರಣಗಳು ಪತ್ತೆಯಾಗಿವೆ. ಬೆಂಗಳೂರಿನಲ್ಲಿ 338 ಮಂದಿ ಹಾಗೂ ಉಡುಪಿಯಲ್ಲಿ 133 ಮಂದಿ ಸೋಂಕಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 100ರ ಗಡಿಯೊಳಗೆ ಇವೆ.

ಕೋವಿಡ್ ಪೀಡಿತರಲ್ಲಿ 17 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. 6 ಜಿಲ್ಲೆಗಳಲ್ಲಿ ಹೊಸದಾಗಿ ಮರಣ ಪ್ರಕರಣಗಳು ವರದಿಯಾಗಿವೆ. ಬೆಂಗಳೂರಿನಲ್ಲಿ 5, ಉತ್ತರ ಕನ್ನಡದಲ್ಲಿ 4, ದಕ್ಷಿಣ ಕನ್ನಡದಲ್ಲಿ 3, ಮೈಸೂರಿನಲ್ಲಿ 2, ತುಮಕೂರು, ಶಿವಮೊಗ್ಗ ಹಾಗೂ ಬೆಂಗಳೂರು ಗ್ರಾಮಾಂತರದಲ್ಲಿ ತಲಾ ಒಬ್ಬರು ಮೃತಪಟ್ಟಿದ್ದಾರೆ. ಮರಣ ಪ್ರಮಾಣ ದರವು ಶೇ 1.54 ರಷ್ಟು ವರದಿಯಾಗಿದೆ. ಕೋವಿಡ್‌ನಿಂದ ಮೃತಪಟ್ಟವರ ಒಟ್ಟು ಸಂಖ್ಯೆ 37,458ಕ್ಕೆ ತಲುಪಿದೆ.

ಸೋಂಕಿತರಲ್ಲಿ 1,458 ಮಂದಿ ಚೇತರಿಸಿಕೊಂಡಿದ್ದಾರೆ. ಗುಣಮುಖರಾದವರ ಒಟ್ಟು ಸಂಖ್ಯೆ 29.03 ಲಕ್ಷ ದಾಟಿದೆ.

ಜೆ.ಪಿ. ನಡ್ಡಾ ಜತೆ ಬೊಮ್ಮಾಯಿ ಚರ್ಚೆ

ಬೆಂಗಳೂರು: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬುಧವಾರ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರನ್ನು ಭೇಟಿ ಮಾಡಿ ರಾಜ್ಯ ರಾಜಕೀಯ ವಿದ್ಯಮಾನಗಳ ಬಗ್ಗೆ ಚರ್ಚಿಸಿದರು.


ಸುಮಾರು 20 ನಿಮಿಷಗಳ ಮಾತುಕತೆಯ ಸಂದರ್ಭದಲ್ಲಿ ಇತ್ತೀಚೆಗೆ ನಡೆದ ಮಹಾನಗರಪಾಲಿಕೆ ಚುನಾವಣೆಗಳ ಫಲಿತಾಂಶದ ಬಗ್ಗೆ ಮಾಹಿತಿ ನೀಡಿದರು.

ಸಂಪುಟ ವಿಸ್ತರಣೆಯ ಬಗ್ಗೆ ಯಾವುದೇ ಮಾತುಕತೆ ನಡೆಯಲಿಲ್ಲ. ನಾಲ್ಕು ಸಚಿವ ಸ್ಥಾನಗಳು ಖಾಲಿ ಉಳಿದಿವೆ. ಬೊಮ್ಮಾಯಿ ಜತೆ ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಅವರೂ ಇದ್ದರು. ಕೇಂದ್ರ ಸಚಿವ ಪ್ರಲ್ಹಾದ ಜೋಶಿಯವರ ಮಗಳ ಮದುವೆಯ ಆರತಕ್ಷತೆಯಲ್ಲಿ ಭಾಗವಹಿಸಲು ಬಂದಿದ್ದ ಬೊಮ್ಮಾಯಿ ಅವರು ಕೇಂದ್ರದ ಹಲವು ಸಚಿವರನ್ನೂ ಭೇಟಿ ಮಾಡಿದರು.

ಆದ್ಯತೆ ಮೇಲೆ ಕೈಗೆತ್ತಿಕೊಳ್ಳಲು ಗಡ್ಕರಿಗೆ ಮನವಿ

ಶಿರಾಡಿ ಘಾಟ್‌ನಲ್ಲಿ ಚತುಷ್ಪಥ ರಸ್ತೆ

ಪ್ರಜಾವಾಣಿ ವಾರ್ತೆ



ಬಸವರಾಜ ಬೊಮ್ಮಾಯಿ

ಬೆಂಗಳೂರು: ಶಿರಾಡಿ ಘಾಟ್‌ನಲ್ಲಿ ಚತುಷ್ಪಥ ರಸ್ತೆ ನಿರ್ಮಾಣವನ್ನು ಆದಷ್ಟು ಬೇಗ ಕೈಗೆತ್ತಿಕೊಳ್ಳುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಕೇಂದ್ರ ಹೆದ್ದಾರಿ ಮತ್ತು ಭೂಸಾರಿಗೆ ಸಚಿವ ನಿತಿನ್ ಗಡ್ಕರಿ ಅವರಿಗೆ ಮನವಿ ಮಾಡಿದ್ದಾರೆ.

ನವದೆಹಲಿಯಲ್ಲಿ ಬುಧವಾರ ಗಡ್ಕರಿ ಅವರನ್ನು ಭೇಟಿ ಮಾಡಿದ ಬಳಿಕ ಅವರು ಸುದ್ದಿಗಾರರಿಗೆ ಈ ವಿಷಯ ತಿಳಿಸಿದರು.

ಚತುಷ್ಪಥ ನಿರ್ಮಾಣ ಪೂರ್ಣಗೊಳಿಸುವುದು ಆದ್ಯತೆಯಾಗಿದೆ. ಸುರಂಗ ಮಾರ್ಗ ನಿರ್ಮಿಸುವ ವಿಚಾರದಲ್ಲಿ ಸಮಾಲೋಚಕರ ಜತೆ ಮಾತುಕತೆ ನಡೆದಿದೆ.

ಅಲ್ಲದೆ, ರಾಜ್ಯ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಯಾಗಿ ಉನ್ನತೀಕರಿಸಲು ತಾತ್ವಿಕ ಅನುಮೋದನೆ ನೀಡಿರುವ ನಾಲ್ಕು ಹೆದ್ದಾರಿಗಳ ಕುರಿತು ಸಮಗ್ರ ಯೋಜನಾ ವರದಿ ಸಿದ್ಧಪಡಿಸಿ ಕೇಂದ್ರಕ್ಕೆ ಸಲ್ಲಿಸಲಾಗಿದೆ. ಅವುಗಳನ್ನು ರಾಷ್ಟ್ರೀಯ ಹೆದ್ದಾರಿಯಾಗಿ ಘೋಷಿಸುವಂತೆ ಅವರು ಮನವಿ ಮಾಡಿದರು.

ವಿಜಯಪುರ–ಸಂಕೇಶ್ವರ ರಾಷ್ಟ್ರೀಯ ಹೆದ್ದಾರಿಯಲ್ಲಿ ಕಿ.ಮೀ 0 ರಿಂದ 80 ಕಿ.ಮೀವರೆಗೆ ಅಭಿವೃದ್ಧಿಪಡಿಸುವ ಕಾಮಗಾರಿ ನಡೆಯುತ್ತಿದ್ದು, 80 ನೇ ಕಿ.ಮೀ ನಿಂದ 168.90 ಕಿ.ಮೀ.ವರೆಗೆ ಅಭಿವೃದ್ಧಿ ಕಾರ್ಯವನ್ನು ಮುಂದುವರಿಸಲು ಗಡ್ಕರಿಯವರು ಒಪ್ಪಿಗೆ ನೀಡಿದ್ದಾರೆ. ಇವೆಲ್ಲವನ್ನೂ ಭಾರತ್‌ಮಾಲಾ ಯೋಜನೆಯಡಿ ಕೈಗೆತ್ತಿಕೊಳ್ಳಲಾಗುತ್ತಿದೆ ಎಂದರು.

ರಾಜ್ಯದಲ್ಲಿ ಅತಿವೃಷ್ಟಿಯಿಂದಾಗಿ ಪ್ರವಾಹ ಹಾಗೂ ಭೂಕುಸಿತ ಸಂಭವಿಸಿ ರಾಷ್ಟ್ರೀಯ ಹೆದ್ದಾರಿಗಳು ಭಾರಿ ಪ್ರಮಾಣದಲ್ಲಿ ಹಾನಿಗೊಳಗಾಗಿವೆ. ಅವುಗಳ ದುರಸ್ತಿಗೆ ₹ 184.85 ಕೋಟಿ ಶೀಘ್ರವೇ ಬಿಡುಗಡೆ ಮಾಡುವಂತೆಯೂ ಅವರು ಮನವಿ ಮಾಡಿದರು.

ರಾಜ್ಯದಲ್ಲಿ 400 ಎಕರೆಯಲ್ಲಿ ಎಲೆಕ್ಟ್ರಾನಿಕ್ ಪಾರ್ಕ್ ನಿರ್ಮಿಸಲು ಉದ್ದೇಶಿಸಲಾಗಿದೆ. ಆಪ್ಟಿಕಲ್ ಫೈಬರ್ ಗ್ರಾಮೀಣ ಪ್ರದೇಶಕ್ಕೂ ವಿಸ್ತರಿಸಲು ಕೇಂದ್ರ ಸಚಿವ ರಾಜೀವ್ ಚಂದ್ರಶೇಖರ್ ಅವರಿಗೆ ಮನವಿ ಮಾಡಲಾಗಿದೆ ಎಂದರು.

ಈ ಸಂದರ್ಭದಲ್ಲಿ ಲೋಕೋಪಯೋಗಿ ಸಚಿವ ಸಿ.ಸಿ. ಪಾಟೀಲ, ಕಂದಾಯ ಸಚಿವ ಆರ್. ಅಶೋಕ ಇದ್ದರು.

ಸಂಕ್ಷಿಪ್ತ ಸುದ್ದಿ

'ಶ್ರೀಲಂಕಾದಲ್ಲಿ ವಿದೇಶಿ ವಿನಿಮಯ ಬಿಕ್ಕಟ್ಟು'

ಕೊಲಂಬೊ: 'ಶೀಲಂಕಾ ಹೆಚ್ಚಾಗಿ ಅವಲಂಬಿತವಾಗಿರುವ ಚಹಾ ರಫ್ತು ಮತ್ತು ಪ್ರವಾಸೋದ್ಯಮ ಕೋವಿಡ್‌ನಿಂದಾಗಿ ತೊಂದರೆಗೊಳಗಾಗಿದೆ. ಹಾಗಾಗಿ, ದೇಶವು ವಿದೇಶಿ ವಿನಿಮಯದಲ್ಲಿ ತೀವ್ರ ಬಿಕ್ಕಟ್ಟು ಎದುರಿಸುತ್ತಿದೆ' ಎಂದು ಶ್ರೀಲಂಕಾದ ಹಣಕಾಸು ಸಚಿವ ಬೆಸಿಲ್ ರಾಜಪಕ್ಸೆ ಹೇಳಿದ್ದಾರೆ.

ಪ್ರವಾಹ: 16 ಮಂದಿ ಸಾವು

ಮೆಕ್ಸಿಕೊ (ಎಎಫ್‌ಪಿ): ಕೇಂದ್ರ ಮೆಕ್ಸಿಕೊದ ತುಲಾ ಎಂಬಲ್ಲಿ ಮಂಗಳವಾರ ಭಾರಿ ಮಳೆ ಸುರಿದು ಪ್ರವಾಹದ ನೀರು ಆಸ್ಪತ್ರೆಗೆ ನುಗ್ಗಿದ್ದು, ಆಮ್ಲಜನಕ ಕೊರತೆ ಎದುರಾಗಿ 16 ರೋಗಿಗಳು ಸಾವನ್ನಪ್ಪಿದ್ದಾರೆ.

80 ಹುತಿ ಉಗ್ರರು; 18 ಸೈನಿಕರು ಹತ

ದುಬೈ (ಎಎಫ್‌ಪಿ): ಯೆಮನ್‌ನ ಭದ್ರಕೋಟೆ ಮಾರಿಬ್ ನಗರಕ್ಕಾಗಿ ನಡೆದ ಹೋರಾಟದಲ್ಲಿ ಸುಮಾರು 80 ಬಂಡುಕೋರರು ಮತ್ತು ಸರ್ಕಾರದ 18 ಮಂದಿ ಸೈನಿಕರು ಹತರಾಗಿದ್ದಾರೆ ಎಂದು ಸೇನಾ ಮೂಲಗಳು ಬುಧವಾರ ಎಎಫ್‌ಪಿಗೆ ತಿಳಿಸಿವೆ.

'60 ಮಂದಿ ಹುತಿ ಬಂಡುಕೋರರು ಹತರಾಗಿದ್ದಾರೆ. ಅವರಲ್ಲಿ ಹೆಚ್ಚಿನವರು ಕಳೆದ 24 ಗಂಟೆಗಳಲ್ಲಿ ನಡೆಸಿದ ವಾಯುದಾಳಿಯಲ್ಲಿ ಹತರಾಗಿದ್ದಾರೆ. ಘರ್ಷಣೆಯಲ್ಲಿ ಸರ್ಕಾರಿ ಪರವಾದ 18 ಸೈನಿಕರು ಹತರಾಗಿದ್ದು, ಡಜನ್‌ಗಟ್ಟಲೆ ಸೈನಿಕರು ಗಾಯಗೊಂಡಿದ್ದಾರೆ' ಎಂದು ಮಿಲಿಟರಿ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಸೌದಿ ನೇತೃತ್ವದ ಮಿಲಿಟರಿ ಒಕ್ಕೂಟದ ಬೆಂಬಲವಿರುವ ಯೆಮೆನ್ ಸರ್ಕಾರ ಮತ್ತು ಇರಾನ್ ಮಿತ್ರಪಡೆ ಹುತಿ ಬಂಡುಕೋರರ ನಡುವೆ ಯುದ್ಧ ಮರೀಬ್ ಪ್ರಾಂತ್ಯದಲ್ಲಿ ತೀವ್ರಗೊಂಡಿದೆ.

ಈಕ್ವಿಟಿ ಮ್ಯೂಚುವಲ್ ಫಂಡ್: ₹ 8,666 ಕೋಟಿ ಒಳಹರಿವು

ನವದೆಹಲಿ (ಪಿಟಿಐ): ಈಕ್ವಿಟಿ ಮ್ಯೂಚುವಲ್ ಫಂಡ್ ಯೋಜನೆಗಳು ಆಗಸ್ಟ್‌ನಲ್ಲಿ ₹ 8,666 ಕೋಟಿ ಬಂಡವಾಳ ಆಕರ್ಷಿಸಿವೆ. ಸತತ ಆರನೇ ತಿಂಗಳಿನಲ್ಲಿಯೂ ಬಂಡವಾಳ ಒಳಹರಿವು ಆದಂತಾಗಿದೆ.

ಒಟ್ಟಾರೆ ಹೂಡಿಕೆಯಲ್ಲಿ ಫ್ಲೆಕ್ಸಿ ಕ್ಯಾಪ್‌ಗಳಲ್ಲಿ ಆಗಿರುವ ಪ್ರಮಾಣವು ಹೆಚ್ಚಿಗೆ ಇದೆ. ಜುಲೈನಲ್ಲಿ ಈ ಯೋಜನೆಗಳಲ್ಲಿ ₹ 22,583 ಕೋಟಿ ಹೂಡಿಕೆ ಆಗಿತ್ತು ಎಂದು ಭಾರತೀಯ ಮ್ಯೂಚುವಲ್ ಫಂಡ್ ಕಂಪನಿಗಳ ಒಕ್ಕೂಟ ಮಾಹಿತಿ ನೀಡಿದೆ.

ಈಕ್ವಿಟಿ ಮ್ಯೂಚುವಲ್ ಫಂಡ್ ಯೋಜನೆಗಳಲ್ಲಿ ಮಾರ್ಚ್‌ನಲ್ಲಿ ₹ 9,115 ಕೋಟಿ, ಏಪ್ರಿಲ್‌ನಲ್ಲಿ ₹ 3,437 ಕೋಟಿ, ಮೇನಲ್ಲಿ ₹ 10,083




ಕೋಟಿ ಹಾಗೂ ಜೂನ್‌ನಲ್ಲಿ ₹ 5,988 ಕೋಟಿ ಹೂಡಿಕೆ ಆಗಿತ್ತು. 2020ರ ಜುಲೈನಿಂದ 2021ರ ಫೆಬ್ರುವರಿವರೆಗಿನ ಅವಧಿಗಳಲ್ಲಿ ಬಂಡವಾಳ ಹೊರಹರಿವು ಕಂಡುಬಂದಿತ್ತು.

ಹೂಡಿಕೆದಾರರು ಹೈಬ್ರಿಡ್ ಫಂಡ್‌ಗಳಲ್ಲಿ ಆಗಸ್ಟ್‌ನಲ್ಲಿ ₹ 18,706 ಕೋಟಿ ಹೂಡಿಕೆ ಮಾಡಿದ್ದಾರೆ. ಚಿನ್ನದ ವಿನಿಮಯ ವಹಿವಾಟು ನಿಧಿಗಳಲ್ಲಿ (ಇಟಿಎಫ್) ₹ 24 ಕೋಟಿ ಹೂಡಿಕೆ ಆಗಿದೆ.

ಮ್ಯೂಚುವಲ್ ಫಂಡ್ ಉದ್ಯಮದ ನಿರ್ವಹಣಾ ಸಂಪತ್ತು ಮೌಲ್ಯವು ಆಗಸ್ಟ್ ಅಂತ್ಯಕ್ಕೆ ₹ 36.6 ಲಕ್ಷ ಕೋಟಿ ಆಗಿದೆ. ಜುಲೈ ತಿಂಗಳ ಅಂತ್ಯದಲ್ಲಿ ₹ 35.32 ಲಕ್ಷ ಕೋಟಿ ಇತ್ತು. ಮ್ಯೂಚುವಲ್ ಫಂಡ್‌ಗಳಲ್ಲಿ ಒಟ್ಟಾರೆ ಒಳಹರಿವು ಸಕಾರಾತ್ಮಕವಾಗಿದ್ದು, ಷೇರುಪೇಟೆ ಸೂಚ್ಯಂಕಗಳು ಸಾರ್ವಕಾಲಿಕ ದಾಖಲೆ ಮಟ್ಟವನ್ನು ತಲುಪಿರುವುದು ಮ್ಯೂಚುವಲ್ ಫಂಡ್‌ಗಳ ನಿರ್ವಹಣಾ ಸಂಪತ್ತು ಮೌಲ್ಯವನ್ನು ₹ 36 ಲಕ್ಷ ಕೋಟಿಯನ್ನು ದಾಟುವಂತೆ ಮಾಡಿದೆ ಎಂದು ಒಕ್ಕೂಟದ ಮುಖ್ಯ ಕಾರ್ಯನಿರ್ವಾಹಕ ಎನ್.ಎಸ್. ವೆಂಕಟೇಶ್ ಹೇಳಿದ್ದಾರೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,362
ಇಂದಿನ ಅಂತ್ಯ	17,353
▼	9
ದಿನದ ಕನಿಷ್ಠ	17,254

ವಿನಿಮಯ ದರ

$ ಡಾಲರ್	73.60
£ ಪೌಂಡ್	101.24
€ ಯುರೊ	--
¥ ಯೆನ್ (100ಕ್ಕೆ)	67

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹445
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹447

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1575 (1580)
ಸೋಯಾ (ರಿಫೈನ್ಡ್)	₹1385(1390)
ಸೂರ್ಯಕಾಂತಿ(ರಿಫೈನ್ಡ್)	₹1440(1440)
ಪಾಮೋಲಿನ್	₹1243 (1255)

ಕೇಂದ್ರ ಸಚಿವ ಸಂಪುಟ ಒಪ್ಪಿಗೆ • 7.5 ಲಕ್ಷ ಉದ್ಯೋಗಾವಕಾಶ ಸೃಷ್ಟಿ ನಿರೀಕ್ಷೆ

ಜವಳಿ ಕ್ಷೇತ್ರಕ್ಕೆ ₹ 10,683 ಕೋಟಿ

ನವದೆಹಲಿ (ಪಿಟಿಐ): ಜವಳಿ ಕ್ಷೇತ್ರಕ್ಕೆ ಉತ್ಪಾದನೆ ಆಧಾರಿತ ಉತ್ತೇಜನ ಯೋಜನೆಯಡಿ (ಪಿಎಲ್‌ಐ) ₹10,683 ಕೋಟಿ ನೀಡಲು ಕೇಂದ್ರ ಸಚಿವ ಸಂಪುಟವು ಬುಧವಾರ ಒಪ್ಪಿಗೆ ನೀಡಿದೆ. ಜವಳಿ ವಲಯದ ತಯಾರಿಕೆ ಮತ್ತು ರಫ್ತು ಹೆಚ್ಚಳವು ಈ ಯೋಜನೆಯ ಉದ್ದೇಶವಾಗಿದೆ. ಮುಂದಿನ ಐದು ವರ್ಷ ಉತ್ತೇಜನ ಯೋಜನೆಯು ಜಾರಿಯಲ್ಲಿ ಇರುತ್ತದೆ.

13 ಉದ್ಯಮಗಳ ಪುನಶ್ಚೇತನಕ್ಕಾಗಿ, 2021-22ನೇ ಸಾಲಿನ ಬಜೆಟ್‌ನಲ್ಲಿ ಒಟ್ಟು ₹ 1.97 ಲಕ್ಷ ಕೋಟಿ ಮೊತ್ತದ ಪಿಎಲ್‌ಐ ಯೋಜನೆಯನ್ನು ಘೋಷಿಸಲಾಗಿತ್ತು. ಅದರ ಭಾಗವಾಗಿಯೇ ಜವಳಿ ಕ್ಷೇತ್ರಕ್ಕೆ ₹10,683 ಕೋಟಿ ಪ್ರೋತ್ಸಾಹಧನ ನೀಡಲು ನಿರ್ಧರಿಸಲಾಗಿದೆ.

ಕೈಮಗ್ಗದ ಬಟ್ಟೆ ಹಾಗೂ ಉಡುಪುಗಳ ತಯಾರಿಕೆ ಹೆಚ್ಚಳದ ಜೊತೆಗೆ ಅವುಗಳ ಗುಣಮಟ್ಟ ಮತ್ತು ಮೌಲ್ಯ ವೃದ್ಧಿಗೆ ಯೋಜನೆಯು ನೆರವು ನೀಡಲಿದೆ. ಜವಳಿ ಕ್ಷೇತ್ರದಲ್ಲಿನ ಹೂಡಿಕೆ, ವ್ಯಾಪಾರಕ್ಕೆ ನೆರವಾಗುವ ಮೂಲಕ ಉದ್ಯೋಗಾವಕಾಶಗಳ ಸೃಷ್ಟಿಗೂ ದಾರಿಯಾಗಲಿದೆ ಎಂದು ಕೇಂದ್ರ ಸಚಿವ ಪೀಯೂಷ್ ಗೋಯಲ್ ತಿಳಿಸಿದರು.

ಹೂಡಿಕೆಗೆ ಆಸಕ್ತಿ ತೋರುವ ಜಿಲ್ಲೆಗಳು, ಮೂರು ಮತ್ತು ನಾಲ್ಕನೇ ಹಂತದ ಪಟ್ಟಣಗಳು ಹಾಗೂ ಗ್ರಾಮೀಣ ಪ್ರದೇಶಗಳಿಗೂ ಯೋಜನೆ ಅಡಿಯಲ್ಲಿ ಆದ್ಯತೆ ನೀಡಲಾಗುವುದು. ಇದರಿಂದ ಹಿಂದುಳಿದ ಪ್ರದೇಶಗಳ ಕಡೆಗೂ ಉದ್ಯಮವನ್ನು ಒಯ್ಯಲು ಸಾಧ್ಯವಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ಈ ಯೋಜನೆಯ ಮೂಲಕ, ಐದು ವರ್ಷಗಳಲ್ಲಿ ಜವಳಿ ಕ್ಷೇತ್ರದಲ್ಲಿ ₹19,000ಕೋಟಿ ಗಿಂತ ಹೆಚ್ಚು ಬಂಡವಾಳವನ್ನು ನಿರೀಕ್ಷಿಸಲಾಗಿದೆ. 7.5 ಲಕ್ಷಕ್ಕೂ ಹೆಚ್ಚು ಉದ್ಯೋಗಾವಕಾಶಗಳನ್ನು ಸೃಷ್ಟಿಸಲಿದೆ ಎಂದು ನಿರೀಕ್ಷಿಸಲಾಗಿದೆ.

ಸಂಪುಟದ ನಿರ್ಧಾರವನ್ನು ಸ್ವಾಗತಿಸಿರುವ ಉಡುಪು ರಫ್ತು ಉತ್ತೇಜನಾ ಪರಿಷತ್ತಿನ (ಎಇಪಿಸಿ) ಅಧ್ಯಕ್ಷ ಎ. ಶಕ್ತಿವೇಲ್, ಇದು ಜವಳಿ ಉದ್ಯಮದ ದಿಸೆಯನ್ನೇ ಬದಲಾಯಿಸಲಿದೆ ಎಂದಿದ್ದಾರೆ.

ವಿಮಾನ ಖರೀದಿ; ₹21 ಸಾವಿರ ಕೋಟಿ ಯೋಜನೆಗೆ ಅನುಮೋದನೆ: ಭಾರತದ ವಾಯಪಡೆಗೆ 56 ಸಾರಿಗೆ ವಿಮಾನ ಖರೀದಿಸುವ ₹21,000 ಕೋಟಿ ಮೊತ್ತದ ಯೋಜನೆಗೆ ಸಂಪುಟದ ಭದ್ರತಾ ವ್ಯವಹಾರಗಳ ಸಮಿತಿಯು ಬುಧವಾರ ಒಪ್ಪಿಗೆ ನೀಡಿದೆ. ವಾಯುಪಡೆಯಲ್ಲಿ ಈಗ ಅವ್ರೊ ಸಾರಿಗೆ ವಿಮಾನ ತುಕಡಿ ಇದೆ. ಅದರ ಬದಲಿಗೆ ಸಿ-295ಎಂಡಬ್ಲ್ಯು ವಿಮಾನ ಖರೀದಿಸಲಾಗುವುದು. ಬಹಳ ಕಾಲದಿಂದ ಈ ಯೋಜನೆಯು ಬಾಕಿ ಇತ್ತು.

ಒಪ್ಪಂದಕ್ಕೆ ಸಹಿ ಹಾಕಿದ 48 ತಿಂಗಳಲ್ಲಿ 16 ವಿಮಾನಗಳನ್ನು ಸ್ಪೇನ್ ಪೂರೈಸಲಿದೆ. ಇತರ 40 ವಿಮಾನಗಳನ್ನು ಟಾಟಾ-ಏರ್‌ಬಸ್ ಕಂಪನಿಯು ಮುಂದಿನ 10 ವರ್ಷಗಳೊಳಗೆ ಪೂರೈಸಲಿದೆ. ಈ ವಿಮಾನಗಳ ತಯಾರಿಕೆ ಭಾರತದಲ್ಲಿಯೇ ಆಗಲಿದೆ.

ಪಂಜಾಬ್ ಆ್ಯಂಡ್ ಸಿಂಧ್ ಬ್ಯಾಂಕ್ ಪರಿಶೀಲನಾ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಂಜಾಬ್ ಆ್ಯಂಡ್ ಸಿಂಧ್ ಬ್ಯಾಂಕ್‌ನ ಕಾರ್ಯನಿರ್ವಾಹಕ ನಿರ್ದೇಶಕ ಕೊಳ್ಳೇಗಾಲ ವಿ. ರಾಘವೇಂದ್ರ ಅವರು ಬುಧವಾರ ಬೆಂಗಳೂರಿನಲ್ಲಿ ಪರಿಶೀಲನಾ ಸಭೆ ನಡೆಸಿದರು. ಬ್ಯಾಂಕ್‌ನ ಅಧಿಕಾರಿಗಳನ್ನು ಹಾಗೂ ಗ್ರಾಹಕರನ್ನು ಭೇಟಿ ಮಾಡಿದರು. ಸ್ಥಳೀಯ ಶಾಖೆಗಳ ಪರಿಶೀಲನಾ ಸಭೆಯನ್ನು ಸಹ ನಡೆಸಲಾಯಿತು.


‘ಆತ್ಮನಿರ್ಭರ ಭಾರತ’ ಯೋಜನೆಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ, ಬ್ಯಾಂಕ್‌ನಿಂದ ಒದಗಿಸುತ್ತಿರುವ ಸೇವೆಗಳ ಬಗ್ಗೆ ಗ್ರಾಹಕರಿಂದ ಮಾಹಿತಿ ಪಡೆದುಕೊಂಡರು. ತಮ್ಮ ಬ್ಯಾಂಕ್ ಜೂನ್ ತ್ರೈಮಾಸಿಕದಲ್ಲಿ ₹ 174 ಕೋಟಿ ನಿವ್ವಳ ಲಾಭ ಗಳಿಸಿದೆ. ಈ ಅವಧಿಯಲ್ಲಿ ಎಲ್ಲಾ ಮಾನದಂಡಗಳಲ್ಲಿಯೂ ಉತ್ತಮ ಕಾರ್ಯದಕ್ಷತೆ ತೋರಿದೆ ಎಂದು ರಾಘವೇಂದ್ರ ಅವರು ತಿಳಿಸಿದರು.

ಆಗಸ್ಟ್‌ನಲ್ಲಿ ತಯಾರಿಕೆ ಶೇ 8ರಷ್ಟು ಇಳಿಕೆ: ಮಾರುತಿ

ನವದೆಹಲಿ (ಪಿಟಿಐ): 2020ರ ಆಗಸ್ಟ್‌ಗೆ ಹೋಲಿಸಿದರೆ 2021ರ ಆಗಸ್ಟ್‌ನಲ್ಲಿ ವಾಹನಗಳ ತಯಾರಿಕೆಯು ಸೆಮಿಕಂಡಕ್ಟರ್ ಕೊರತೆಯಿಂದಾಗಿ ಶೇಕಡ 8ರಷ್ಟು ಇಳಿಕೆ ಆಗಿದೆ ಎಂದು ಮಾರುತಿ ಸುಜುಕಿ ಇಂಡಿಯಾ ಕಂಪನಿಯು ಬುಧವಾರ ತಿಳಿಸಿದೆ.

ಕಳೆದ ವರ್ಷದ ಆಗಸ್ಟ್‌ನಲ್ಲಿ 1.23 ಲಕ್ಷ ವಾಹನಗಳು ತಯಾರಾಗಿದ್ದವು. ಈ ವರ್ಷದ ಆಗಸ್ಟ್‌ನಲ್ಲಿ 1.13 ಲಕ್ಷ ವಾಹನಗಳು ತಯಾರಾಗಿವೆ ಎಂದು ಕಂಪನಿಯು ಷೇರುಪೇಟೆಗೆ ಮಾಹಿತಿ ನೀಡಿದೆ. ಜುಲೈನಲ್ಲಿ ಕಂಪನಿಯ ಒಟ್ಟಾರೆ ತಯಾರಿಕೆಯು ಶೇ 58ರಷ್ಟು ಹೆಚ್ಚಾಗಿತ್ತು.

ಹೊಸ ವಾಹನಗಳಲ್ಲಿ ಬ್ಲೂಟೂತ್ ಕನೆಕ್ಟಿವಿಟಿ, ಡ್ರೈವರ್ ಅಸಿಸ್ಟ್, ನ್ಯಾವಿಗೇಷನ್ ಹಾಗೂ ಹೈಬ್ರಿಡ್ ಎಲೆಕ್ಟ್ರಾನಿಕ್ ವ್ಯವಸ್ಥೆಗಳ ಅಳವಡಿಕೆ ಆಗುತ್ತಿರುವುದರಿಂದ ಜಾಗತಿಕವಾಗಿ ವಾಹನ ಉದ್ಯಮದಲ್ಲಿ ಸೆಮಿಕಂಡಕ್ಟರ್ ಬಳಕೆ ಹೆಚ್ಚಾಗುತ್ತಿದೆ.



ಪ್ರಯಾಣಿಕ ವಾಹನಗಳ ತಯಾರಿಕೆಯು 1.21 ಲಕ್ಷದಿಂದ 1.11 ಲಕ್ಷಕ್ಕೆ ಇಳಿಕೆ ಆಗಿದೆ. ಕಾಂಪ್ಯಾಕ್ಟ್ ಕಾರುಗಳ ತಯಾರಿಕೆಯು 67,348ರಿಂದ 47,640ಕ್ಕೆ ಇಳಿಕೆ ಆಗಿದೆ ಎಂದು ಕಂಪನಿಯು ಮಾಹಿತಿ ನೀಡಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ		ಕೋಕ	10500-26000	ಚಾಲಿ	40069-44499
ಬಂಟ್ವಾಳ		ಹೊಸತು	32500-47000	ರಾಶಿ	39419-52899
ಕೋಕ	10000-22500	**ಸಿದ್ದಾಪುರ**		**ಶಿವಮೊಗ್ಗ ಎಪಿಎಂಸಿ**	
ಹೊಸತು	23500-47000	ಬಿಳಿಗೋಟು	33119-38099	ಬೆಟ್ಟೆ	52000-58099
ಹಳತು	42500-50500	ಚಾಲಿ	42099-44699	ಗೊರಬಲು	17069-43309
ಕುಮಟ		ಕೋಕ	28699-39599	ನ್ಯೂ ವೆರೈಟಿ	45209-50009
ಚಿಪ್ಪು	34019-37171	ಕೆಂಪುಗೋಟು	32299-35299	ರಾಶಿ	46099-57899
ಕೋಕ	23019-36809	ರಾಶಿ	47289-51419	ಸರಕು	50000-76896
ಫ್ಯಾಕ್ಟರಿ	16699-23569	ತಟ್ಟಿಬೆಟ್ಟೆ	36889-49809	**ರಾಮನಗರ ರೇಷ್ಮೆ**	
ಹಳೆಚಾಲಿ	43099-44109	**ಶಿರಸಿ**		ಮಿಶ್ರ ತಳಿ	271-488
ಹೊಸಚಾಲಿ	4209944569	ಬೆಟ್ಟೆ	29629-49999	ದ್ವಿತಳಿ	256-523
ಪುತ್ತೂರು		ಬಿಳಿಗೋಟು	26099-39879		

ಮುಂಬೈ ಧಾರಣೆ

ಶೇಂಗಾ

8-9-2021

ಜಾವಾ 70/80(ಹೊಸ)	10300-10350
ಜಾವಾ 80/90(ಹೊಸ)	9500-9550
ದಪ್ಪ ಮಧ್ಯಪ್ರದೇಶ(ಹೊಸ)	10250-10300
ದಪ್ಪ ಗುಜರಾತ್(ಹೊಸ)	9400-9500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1585 (1590)
ಒಂದು ವಾರದ ಡೆಲಿವರಿ	1580 (1585)
ಸೋಯಾ ಕಚ್ಚಾ	1347 (1355)
ಪಾಮ್ ವಾರದ ಡೆಲಿವರಿ	1241 (1253)
ಸೂರ್ಯಕಾಂತಿ ಎಣ್ಣೆ ಕಚ್ಚಾ	1380 (1390)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
46,950 (47,300)
ಬೆಳ್ಳಿ ಕೆ.ಜಿ 64,350 (64,200)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಎಂಎಫ್, ಎಫ್‌ಡಿ ಸೇವೆಗೆ ಅಮೆಜಾನ್ ಪೇ ಸಿದ್ಧತೆ

ನವದೆಹಲಿ (ಪಿಟಿಐ): ಅಮೆಜಾನ್ ಪೇ ಇಂಡಿಯಾ ತನ್ನ ಗ್ರಾಹಕರಿಗೆ ಮ್ಯೂಚುವಲ್ ಫಂಡ್ ಮತ್ತು ನಿಶ್ಚಿತ ಠೇವಣಿಗಳಲ್ಲಿ (ಎಫ್.ಡಿ.) ಹೂಡಿಕೆ ಮಾಡುವ ಸೇವೆ ನೀಡಲು ಮುಂದಾಗಿದೆ. ತನ್ನ ಪ್ರತಿಸ್ಪರ್ಧಿ ಗೂಗಲ್ ಪೇ ಇದೇ ಬಗೆಯ ಸೌಲಭ್ಯಕ್ಕೆ ಚಾಲನೆ ನೀಡಿದ ಕೆಲವೇ ದಿನಗಳಲ್ಲಿ ಅಮೆಜಾನ್ ಈ ನಿರ್ಧಾರ ಮಾಡಿದೆ.

ಅಮೆಜಾನ್ ಪೇ ಇಂಡಿಯಾ, ಹೂಡಿಕೆ ಪ್ಲಾಟ್‌ಫಾರ್ಮ್ Kuvera.in (ಕುವೇರಾ) ಜೊತೆ ಒಪ್ಪಂದ ಮಾಡಿಕೊಳ್ಳುವುದಾಗಿ ಬುಧವಾರ ಘೋಷಿಸಿದೆ. ಗ್ರಾಹಕರು ಮ್ಯೂಚುವಲ್ ಫಂಡ್ ಮತ್ತು ಎಫ್.ಡಿ.ಗಳಲ್ಲಿ ಹೂಡಿಕೆ ಮಾಡಬಹುದು ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ.

ಠೇವಣಿ ಆಯ್ಕೆಯನ್ನು ನೀಡಲು ಗೂಗಲ್ ಪೇ, ಈಕ್ವಿಟಾಸ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಜೊತೆ ಒಪ್ಪಂದ ಮಾಡಿಕೊಂಡಿದೆ. ಅಮೆಜಾನ್ ಪೇ ತನ್ನ ಮೂಲಕ ಗ್ರಾಹಕರು ಠೇವಣಿ ಇರಿಸಬಹುದಾದ ಬ್ಯಾಂಕುಗಳು ಯಾವುವು ಎಂಬ ವಿವರ ನೀಡಿಲ್ಲ ಗೂಗಲ್ ಪೇ ಮತ್ತು ಬ್ಯಾಂಕ್ ನಡುವಿನ ಒಪ್ಪಂದದಿಂದ ಹಣಕಾಸು ವ್ಯವಸ್ಥೆಯ ಮೇಲೆ ಆಗಲಿರುವ ಪರಿಣಾಮಗಳ ಕುರಿತು ಆರ್‌ಬಿಐ ಪರಿಶೀಲನೆ ನಡೆಸುತ್ತಿದೆ ಎಂದು ವರದಿಗಳು ಹೇಳಿವೆ.

ಸಮೀಕ್ಷೆ ನಡೆಸಿ ಪಟ್ಟಿ ತಯಾರಿಸಲಾಗುವುದು: ನಿರಾಣಿ

‘ಕೈಗಾರಿಕಾ ಜಮೀನು ಅನ್ಯ ಉದ್ದೇಶಕ್ಕೆ ಬಳಸಿದರೆ ವಾಪಸ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೈಗಾರಿಕಾ ಉದ್ದೇಶಗಳಿಗಾಗಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ) ಮೂಲಕ ಪಡೆದ ಜಮೀನು ಬಳಕೆ ಮಾಡದವರಿಗೆ ನೋಟಿಸ್ ನೀಡಲಾಗುವುದು ಎಂದು ಕೈಗಾರಿಕಾ ಸಚಿವ ಮುರುಗೇಶ ನಿರಾಣಿ ತಿಳಿಸಿದರು.

ಇದಕ್ಕಾಗಿ ಸಮೀಕ್ಷೆ ನಡೆಸಿ, ಬಳಕೆ ಮಾಡದವರ ಪಟ್ಟಿ ತಯಾರಿಸಲಾಗುವುದು. 15 ದಿನಗಳಲ್ಲಿ ಉತ್ತರ ನೀಡುವಂತೆ ಅವರಿಗೆ ನೋಟಿಸ್ ನೀಡಲಾಗುವುದು. ನೋಟಿಸಿಗೆ 15 ದಿನಗಳಲ್ಲಿ ಸಮರ್ಪಕ ಉತ್ತರ ಬಾರದೇ ಇದ್ದರೆ ಮತ್ತೊಂದು ನೋಟಿಸ್ ನೀಡಲಾಗುವುದು. ಅದಕ್ಕೂ ಉತ್ತರ ನೀಡದೇ ಇದ್ದರೆ ಜಮೀನು ವಾಪಸ್ ಪಡೆಯಲಾಗುವುದು ಎಂದು ಸುದ್ದಿಗೋಷ್ಠಿಯಲ್ಲಿ ಎಚ್ಚರಿಕೆ ನೀಡಿದರು.

ಅಲ್ಲದೆ, ಕೈಗಾರಿಕಾ ಉದ್ದೇಶಕ್ಕೆ ಜಮೀನು ಪಡೆದು ಅನ್ಯ ಉದ್ದೇಶಕ್ಕೆ ಬಳಸಿಕೊಂಡಿದ್ದರೆ ಅಂತಹ ಜಮೀನನ್ನೂ ಹಿಂದಕ್ಕೆ ಪಡೆಯಲಾಗುವುದು ಎಂದರು.


ನಿರಾಣಿ

ಕೆಲವರು ಕೈಗಾರಿಕಾ ಉದ್ದೇಶಗಳಿಗಾಗಿ ಪಡೆದ ಜಮೀನಿನಲ್ಲಿ ಶೇ 100 ರಷ್ಟು ಕೆಲಸವನ್ನು ಪೂರ್ಣಗೊಳಿಸಿದ್ದರೆ, ಇನ್ನು ಕೆಲವರು ಶೇ 20 ರಷ್ಟು ಮಾತ್ರ ಕೆಲಸ ಆರಂಭಿಸಿದ್ದಾರೆ. ರಾಜ್ಯದಲ್ಲಿ ಯಾವ ಯಾವ ಕಡೆ ಜಮೀನು ಖಾಲಿ ಬಿಡಲಾಗಿದೆ ಎಂಬುದರ ಬಗ್ಗೆ ಇಲಾಖೆ ವತಿಯಿಂದ ಸಮೀಕ್ಷೆ ನಡೆಸಲಾಗುವುದು. ಯಾರನ್ನೂ ರಕ್ಷಿಸುವುದಿಲ್ಲ ಎಂದು ನಿರಾಣಿ ಹೇಳಿದರು.

ಎಫ್‌ಡಿಐ ರಾಜ್ಯಕ್ಕೆ ಮೊದಲ ಸ್ಥಾನ: ಈ ವರ್ಷದ ಮೊದಲ ಮೂರು ತಿಂಗಳಲ್ಲಿ ರಾಜ್ಯ ₹62,085 ಕೋಟಿ ವಿದೇಶಿ ನೇರ ಬಂಡವಾಳ (ಎಫ್‌ಡಿಐ) ಆಕರ್ಷಿಸುವ ಮೂಲಕ ದೇಶದಲ್ಲೇ ಮೊದಲ ಸ್ಥಾನದಲ್ಲಿದೆ. ಹೂಡಿಕೆಗೆ ಕರ್ನಾಟಕ ನೆಚ್ಚಿನ ತಾಣವಾಗಿದೆ. ಮಹಾರಾಷ್ಟ್ರ ಮತ್ತು ಗುಜರಾತ್ ರಾಜ್ಯಗಳನ್ನೂ ಹಿಂದಕ್ಕೆ ಹಾಕಿದೆ ಎಂದು ವಿವರಿಸಿದರು.

‘ರಾಜ್ಯವು 2019-20 ರಲ್ಲಿ ₹30,745 ಕೋಟಿ, 2020-21 ರಲ್ಲಿ ₹56,884 ಕೋಟಿ, 2021-22 ರಲ್ಲಿ ₹62,085 ಕೋಟಿ ಬಂಡವಾಳವನ್ನು ಆಕರ್ಷಿಸಿದೆ. ಕೈಗಾರಿಕಾ ಬೆಳವಣಿಗೆಗೆ ನಮ್ಮ ಸರ್ಕಾರ ಸಾಕಷ್ಟು ವಿಶೇಷ ಗಮನಹರಿಸಿದೆ. ದೇಶದಲ್ಲಿ ಒಟ್ಟಾರೆ ವಿದೇಶಿ ಹೂಡಿಕೆಯಲ್ಲಿ ರಾಜ್ಯದ ಪಾಲು ಶೇ 48 ರಷ್ಟಿದೆ’ ಎಂದರು.

ರಾಷ್ಟ್ರೀಯ ಹೂಡಿಕೆ ಉತ್ತೇಜನ ಮತ್ತು ಪೂರಕ ಸೌಲಭ್ಯ ಒದಗಿಸುವ ಏಜೆನ್ಸಿ ‘ಇನ್ವೆಸ್ಟ್ ಇಂಡಿಯಾ’ದ ರಾಜ್ಯವಾರು ಐಪಿಎ (ಹೂಡಿಕೆ ಪ್ರಚಾರ ಏಜೆನ್ಸಿ) ಶ್ರೇಯಾಂಕದಡಿ ಕರ್ನಾಟಕ ಉದ್ಯೋಗ ಮಿತ್ರ ಹೆಚ್ಚು ಅಂಕಗಳನ್ನು ಪಡೆಯುವ ಮೂಲಕ ಅತ್ಯುತ್ತಮ ನಿರ್ವಹಣೆ ಮಾಡಿದೆ ಎಂದು ನಿರಾಣಿ ಹೇಳಿದರು.

ದೇಶದ ಒಟ್ಟು 20 ರಾಜ್ಯಗಳ ಸಾಧನೆಯನ್ನು ಪರಿಗಣಿಸಿ ಈ ಶ್ರೇಯಾಂಕ ನೀಡಲಾಗಿದೆ. ಹೂಡಿಕೆ ಉತ್ತೇಜನ ಪ್ರಚಾರಕ್ಕೆ ಸಂಬಂಧಿಸಿದ ಒಟ್ಟು 8 ವಿಭಾಗಗಳ ಪೈಕಿ 4 ರಲ್ಲಿ ಕರ್ನಾಟಕ ಉದ್ಯೋಗ ಮಿತ್ರ ಶೇ 100 ಅಂಕಗಳಿಸಿದೆ ಎಂದರು.

ಎಲ್‌ಐಸಿ: ಶೇ 20 ವಿದೇಶಿ ಹೂಡಿಕೆ?

ನವದೆಹಲಿ (ರಾಯಿಟರ್ಸ್): ಎಲ್‌ಐಸಿಯಲ್ಲಿ ವಿದೇಶಿ ಸಾಂಸ್ಥಿಕ ಹೂಡಿಕೆದಾರರಿಗೆ ಶೇಕಡ 20ರಷ್ಟು ಷೇರುಗಳನ್ನು ಖರೀದಿಸಲು ಅವಕಾಶ ಕಲ್ಪಿಸುವ ಬಗ್ಗೆ ಕೇಂದ್ರ ಸರ್ಕಾರವು ಪರಿಶೀಲನೆ ನಡೆಸುತ್ತಿದೆ ಎಂದು ಮೂಲಗಳು ತಿಳಿಸಿವೆ. ಎಲ್‌ಐಸಿ ಷೇರುಗಳನ್ನು ಸಾರ್ವಜನಿಕರಿಗೆ ಖರೀದಿಗೆ ಮುಕ್ತವಾಗಿಸುವ ಪ್ರಕ್ರಿಯೆಯು (ಐಪಿಒ) ಭಾರತದ ಅತಿದೊಡ್ಡ ಐಪಿಒ ಆಗಲಿದೆ ಎಂಬ ನಿರೀಕ್ಷೆ ಇದೆ.

ಈಗಿರುವ ನಿಯಮಗಳ ಅನ್ವಯ, ವಿದೇಶಿ ಸಾಂಸ್ಥಿಕ ಹೂಡಿಕೆದಾರರಿಗೆ ಖಾಸಗಿ ವಿಮಾ ಕಂಪನಿಗಳಲ್ಲಿ ಶೇ 74ರವರೆಗೆ, ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಶೇ 20ರವರೆಗೆ ಷೇರುಪಾಲು ಹೊಂದಲು ಅವಕಾಶ ಇದೆ. ಆದರೆ ಎಲ್‌ಐಸಿಯಲ್ಲಿ ಷೇರುಪಾಲು ಹೊಂದಲು ಅವಕಾಶ ಇಲ್ಲ. ಈಗ ಅವಕಾಶ ಕಲ್ಪಿಸಿದರೆ, ವಿದೇಶಿ ಪಿಂಚಣಿ ನಿಧಿಗಳಿಗೆ, ವಿಮಾ ಕಂಪನಿಗಳಿಗೆ, ಮ್ಯೂಚುವಲ್ ಫಂಡ್ ಕಂಪನಿಗಳಿಗೆ ಎಲ್‌ಐಸಿ ಐಪಿಒನಲ್ಲಿ ಪಾಲ್ಗೊಳ್ಳಲು ಅವಕಾಶ ಸಿಗುತ್ತದೆ.

ಭಾರತದ ಮುಡಿಗೆ ಒಟ್ಟು 19 ಪದಕ • ಶೂಟರ್ ಲೇಖರಾಗೆ ಒಂದು ಚಿನ್ನ, ಒಂದು ಕಂಚು

ಪ್ಯಾರಾಲಿಂಪಿಕ್ಸ್ ಸಾಧಕರಿಗೆ ಸನ್ಮಾನ

ನವದೆಹಲಿ (ಪಿಟಿಐ): ಟೋಕಿಯೊ ಪ್ಯಾರಾಲಿಂಪಿಕ್ಸ್‌ನಲ್ಲಿ ಪದಕಗಳನ್ನು ಗೆದ್ದ ಕ್ರೀಡಾಪಟುಗಳನ್ನು ಕೇಂದ್ರ ಕ್ರೀಡಾ ಸಚಿವ ಅನುರಾಗ್ ಠಾಕೂರ್ ಬುಧವಾರ ಸನ್ಮಾನಿಸಿದರು. ಪ್ಯಾರಿಸ್ ಪ್ಯಾರಾಲಿಂಪಿಕ್ಸ್‌ನಲ್ಲಿ ಇನ್ನಷ್ಟು ಸಾಧನೆ ಮಾಡಲು ಕ್ರೀಡಾಪಟುಗಳಿಗೆ ಪ್ರೋತ್ಸಾಹ ನೀಡಲಾಗುವುದು ಎಂದು ಅವರು ತಿಳಿಸಿದರು.

ಈ ಬಾರಿ ಪ್ಯಾರಾಲಿಂಪಿಕ್ಸ್‌ನಲ್ಲಿ ಭಾರತ ಗರಿಷ್ಠ ಸಾಧನೆ ಮಾಡಿದ್ದು ಐದು ಚಿನ್ನ ಸೇರಿದಂತೆ ಒಟ್ಟು 19 ಪದಕಗಳನ್ನು ಗೆದ್ದುಕೊಂಡಿದೆ. ಶೂಟರ್ ಅವನಿ ಲೇಖರಾ ಒಂದು ಚಿನ್ನ ಮತ್ತು ಕಂಚಿನ ಪದಕ ಗೆದ್ದುಕೊಂಡಿದ್ದು ಸಿಂಘರಾಜ್ ಅಡಾನ ಬೆಳ್ಳಿ ಮತ್ತು ಕಂಚಿನ ಪದಕ ಗಳಿಸಿದ್ದಾರೆ. ಒಟ್ಟು 17 ಮಂದಿ ವಿವಿಧ ಕ್ರೀಡೆಗಳ ವಿವಿಧ ವಿಭಾಗಗಳಲ್ಲಿ ಚಾಂಪಿಯನ್ನರಾಗಿದ್ದಾರೆ.

‘ದೇಶಕ್ಕಾಗಿ ಪದಕ ಗೆಲ್ಲುವುದು ನನ್ನ ಬಹುದೊಡ್ಡ ಆಸೆಯಾಗಿತ್ತು. ಇದಕ್ಕಾಗಿ ಕಠಿಣ ಪರಿಶ್ರಮಪಟ್ಟಿದ್ದೆ. ಪ್ಯಾರಾಲಿಂಪಿಕ್ಸ್‌ನಲ್ಲಿ ಸಾಧನೆ ಮಾಡಿದ್ದು ಅತ್ಯಂತ ಖುಷಿ ತಂದಿದೆ’ ಎಂದು ಅವನಿ ಲೇಖರಾ ಹೇಳಿದರು. ಕ್ರೀಡಾ ಇಲಾಖೆಯ ರಾಜ್ಯ ಸಚಿವ ನಿಶಿತ್ ಪ್ರಮಾಣಿಕ್, ಮಾಜಿ ಕ್ರೀಡಾ ಸಚಿವ ಕಿರಣ್ ರಿಜಿಜು, ಇಲಾಖೆಯ ಕಾರ್ಯದರ್ಶಿ ರವಿ ಮಿತ್ತಲ್, ಭಾರತ ಕ್ರೀಡಾ ಪ್ರಾಧಿಕಾರದ ಮಹಾ ನಿರ್ದೇಶಕ ಸಂದೀಪ್ ಪ್ರಧಾನ್, ಭಾರತ ಪ್ಯಾರಾಲಿಂಪಿಕ್ ಸಮಿತಿ ಅಧ್ಯಕ್ಷೆ ದೀಪಾ ಮಲಿಕ್ ಮುಂತಾದವರು ಇದ್ದರು.



ಪದಕ ಗೆದ್ದ ಕ್ರೀಡಾಪಟುಗಳ ಜೊತೆ ಕೇಂದ್ರದ ಮಾಜಿ ಕ್ರೀಡಾ ಸಚಿವ ಕಿರಣ್ ರಿಜಿಜು, ಈಗಿನ ಕ್ರೀಡಾ ಸಚಿವ ಅನುರಾಗ್ ಠಾಕೂರ್ ಮತ್ತು ಕ್ರೀಡಾ ಇಲಾಖೆಯ ರಾಜ್ಯ ಸಚಿವ ನಿಶಿತ್ ಪ್ರಮಾಣಿಕ್ —ಪಿಟಿಐ ಚಿತ್ರ

ಬಿಲಿಯರ್ಡ್ಸ್: ಕಾರ್ತಿಕ್‌ಗೆ ಜಯ

ಬೆಂಗಳೂರು: ಹರೀಶ್ ಮತ್ತು ಬಿ.ಸಿ. ಕಾರ್ತಿಕ್, ರಾಜ್ಯ ರ‍್ಯಾಂಕಿಂಗ್ ಬಿಲಿಯರ್ಡ್ಸ್ ಮತ್ತು ಸ್ನೂಕರ್ ಟೂರ್ನಿಯ ಎರಡನೇ ಸುತ್ತಿನಲ್ಲಿ ಭರ್ಜರಿ ಜಯ ಗಳಿಸಿದರು.

ಬುಧವಾರ ನಡೆದ ಪುರುಷರ ವಿಭಾಗದ ಪಂದ್ಯಗಳಲ್ಲಿ ಕಾರ್ತಿಕ್ 68-40, 71-08, 57-29ರಲ್ಲಿ ಕೆ.ಎಸ್. ಅಭಿಲಾಷ್ ವಿರುದ್ಧ ಜಯ ಗಳಿಸಿದರೆ ಹರೀಶ್ 63-32, 71-35, 68-47ರಲ್ಲಿ ರಾಜೀವ್ ಎದುರು ಗೆದ್ದರು.

ತೌಸಿಫ್ ಖಾನ್ 52-40, 38-61, 52-40, 63-43ರಲ್ಲಿ ಡೆನ್ಜಿಲ್ ಥಾಮಸ್ ಎದುರು ಜಯ ಗಳಿಸಿದರು. ಜಾಸಿಮ್ 11-62, 62-14, 84-33, 32-59, 63-33ರಲ್ಲಿ ಸತೀಶ್ ವಿರುದ್ಧ, ಪ್ರವೀಣ್ ಮಾನೆ 66-15, 40-62, 58-18, 59-38ರಲ್ಲಿ ರಘು ಆರ್.ಬಿ ವಿರುದ್ಧ, ಕಿರಣ್ ರಾಜ್ 14-54, 27-43, 42-21, 53-45, 62-40ರಲ್ಲಿ ವಿಶ್ವನಾಥ್ ರೆಡ್ಡಿ ವಿರುದ್ಧ, ಪೃಥ್ವಿ 35-58, 58-10, 55-25, 63-47ರಲ್ಲಿ ಆದೇಶ್ ಎದುರು ಜಯ ಗಳಿಸಿದರು.

ಜಸ್ವಂತ್ ವಿರುದ್ಧ ಪ್ರಭಾಕರ್ 86-57, 56-41, 74-08ರಲ್ಲಿ, ಜೊಹೆಬ್ ಯೂಸುಫ್ ವಿರುದ್ಧ ನವೀನ್ ಕುಮಾರ್ 75-10, 60-14, 37-49, 75-29ರಲ್ಲಿ, ಶ್ರೀ ವಿಷ್ಣು ವಿರುದ್ಧ ಅಭಿರಾಮ್ 45-73, 17-45, 53-38, 76-05, 78-28ರಲ್ಲಿ, ನರೇಶ್ ವಿರುದ್ಧ ಸತೀಶ್ 34-55, 31-61, 62-09, 53-39, 69-41ರಲ್ಲಿ, ಅನುಷ್ ಜೈನ್ ವಿರುದ್ಧ ಯೋಗೇಶ್ 72-38, 66-29, 72-42ರಲ್ಲಿ, ಸತ್ಯನಾರಾಯಣ ವಿರುದ್ಧ ನದೀಮ್ ಅಜೀಜ್ 61-30, 61-08, 69-60ರಲ್ಲಿ ಗೆಲುವು ಸಾಧಿಸಿದರು.

ಗಿರೀಶ್ 55-29, 57-33, 59-14ರಲ್ಲಿ ಶಿವ ಮಂಜು ವಿರುದ್ಧ, ನಿಖಿಲ್ ದೇವ್ 50-38, 60-36, 22-56, 85-48ರಲ್ಲಿ ರಂಜಿತ್ ವಿರುದ್ಧ, ರಾಜ್ 59-28, 72-05, 16-67, 61-45ರಲ್ಲಿ ಮನು ಕುಮಾರ್ ವಿರುದ್ಧ, ನಂದಕಿಶೋರ್ 31-56, 59-09, 54-50, 66-11ರಲ್ಲಿ ಕಿರಣ್ ಕುಮಾರ್ ವಿರುದ್ಧ, ವಿನೋದ್ 68-16, 43-55, 57-52, 43-20ರಲ್ಲಿ ಸುಪ್ರೀತ್ ವಿರುದ್ಧ, ಅರವಿಂದ್ ವೆಂಕಟೇಶ್ 57-43, 28-59, 65-25, 62-16ರಲ್ಲಿ ವರುಣ್ ರಾವ್ ವಿರುದ್ಧ, ಭರತ್ ಶೈಲೇಶ್ 57-12, 63-32, 61-36ರಲ್ಲಿ ದೀಪಕ್ ಮಲ್ಲಿಕಾರ್ಜುನ್ ವಿರುದ್ಧ ಗೆಲುವು ದಾಖಲಿಸಿದರು.

ಆನ್‌ಲೈನ್ ಚೆಸ್: ಭಾರತದ ಶುಭಾರಂಭ

ಚೆನ್ನೈ (ಪಿಟಿಐ): ವಿಶ್ವನಾಥನ್ ಆನಂದ್ ನೇತೃತ್ವದ ಭಾರತ ತಂಡವು ಫಿಡೆ ಆನ್‌ಲೈನ್ ಚೆಸ್ ಒಲಿಂಪಿಯಾಡ್‌ನಲ್ಲಿ ಶುಭಾರಂಭ ಮಾಡಿದೆ.

ಬುಧವಾರ ಆರಂಭವಾದ ಟೂರ್ನಿಯಲ್ಲಿ ಭಾರತ ತಂಡವು ಈಜಿಪ್ಟ್, ಸ್ವೀಡನ್ ತಂಡಗಳನ್ನು ಮಣಿಸಿದರೆ, ಫ್ರಾನ್ಸ್ ಎದುರು ಡ್ರಾ ಸಾಧಿಸಿತು. ಮೂರು ಸುತ್ತುಗಳ ಬಳಿಕ ಐದು ಪಾಯಿಂಟ್ಸ್ ಗಳಿಸಿ ಎರಡನೇ ಸ್ಥಾನದಲ್ಲಿತ್ತು. ಹಂಗರಿ (6 ಪಾಯಿಂಟ್ಸ್) ಮೊದಲ ಮತ್ತು ಫ್ರಾನ್ಸ್ (4) ಮೂರನೇ ಸ್ಥಾನಗಳಲ್ಲಿದ್ದವು.

ಹೋದ ವರ್ಷದ ಟೂರ್ನಿಯಲ್ಲಿ ಭಾರತ ತಂಡವು ರಷ್ಯಾ ಜೊತೆಗೆ ಜಂಟಿ ಚಾಂಪಿಯನ್ ಆಗಿತ್ತು.

ಬಿ ಗುಂಪಿನಲ್ಲಿರುವ ಭಾರತ ಮೊದಲ ಪಂದ್ಯದಲ್ಲಿ ಈಜಿಪ್ಟ್ ತಂಡವನ್ನು 6-0ಯಿಂದ ಸೋಲಿಸಿತು. ಎರಡನೇ ಪಂದ್ಯದಲ್ಲಿ ಫ್ರಾನ್ಸ್ ಎದುರು 3-3ರ ಡ್ರಾ ಬಳಿಕ ಸ್ವೀಡನ್ ಎದುರು 4-2ರಿಂದ ಗೆದ್ದು ಸಂಭ್ರಮಿಸಿತು.

ವಿನೇಶಾ ಪೋಗಟ್‌ಗೆ ಮೊಣಕೈ ಶಸ್ತ್ರಚಿಕಿತ್ಸೆ



ನವದೆಹಲಿ (ಪಿಟಿಐ): ಭಾರತದ ಮಹಿಳಾ ಕುಸ್ತಿಪಟು ವಿನೇಶಾ ಪೋಗಟ್ ಅವರು ಬುಧವಾರ ಬಲ ಮೊಣಕೈ ಶಸ್ತ್ರಚಿಕಿತ್ಸೆಗೆ ಒಳಗಾದರು.

ಏಷ್ಯನ್ ಚಾಂಪಿಯನ್ ಆಗಿರುವ 27 ವರ್ಷದ ಅವರು ಆಗಸ್ಟ್ 31ರಂದು ನಡೆದಿದ್ದ ವಿಶ್ವಚಾಂಪಿಯನ್‌ಷಿಪ್ ಟ್ರಯಲ್ಸ್‌ನ ಮಧ್ಯದಲ್ಲೇ ಹಿಂದೆ ಸರಿದಿದ್ದರು. ಆದರೆ ಅದಕ್ಕೆ ಕಾರಣ ಗಾಯ ಆಗಿರಲಿಲ್ಲ. ತಲೆನೋವಿನ ಹಿನ್ನೆಲೆಯಲ್ಲಿ ತಾನು ಕಣಕ್ಕಿಳಿಯಲಿಲ್ಲ ಎಂದು ಹೇಳಿಕೊಂಡಿದ್ದರು.

‘ಮೊಣಕೈ ಶಸ್ತ್ರಚಿಕಿತ್ಸೆ ಆಗಿದೆ. ಎಷ್ಟು ಬಾರಿ ಬಿದ್ದರೂ ಮತ್ತೆ ಎದ್ದು ನಿಲ್ಲುತ್ತೇನೆ’ ಎಂದು ವಿನೇಶಾ ಟ್ವೀಟ್ ಮಾಡಿದ್ದಾರೆ. ಆಸ್ಪತ್ರೆಯಲ್ಲಿರುವ ಚಿತ್ರವನ್ನು ಟ್ವಿಟರ್‌ನಲ್ಲಿ ಹಂಚಿಕೊಂಡಿದ್ದಾರೆ. ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಕ್ವಾರ್ಟರ್‌ಫೈನಲ್‌ನಲ್ಲಿ ನಿರ್ಗಮಿಸಿದ ಅವರನ್ನು ಕಳೆದ ತಿಂಗಳು ಅಶಿಸ್ತಿನ ಕಾರಣಕ್ಕಾಗಿ ಭಾರತ ಕುಸ್ತಿ ಫೆಡರೇಷನ್ ಅಮಾನತು ಮಾಡಿತ್ತು. ಬಳಿಕ ಎಚ್ಚರಿಕೆ ನೀಡಿ ಸ್ಪರ್ಧೆಗೆ ಅವಕಾಶ ಮಾಡಿಕೊಟ್ಟಿತ್ತು.

ಜಿಲ್ಲಾ ಮೌಂಟೇನ್ ಬೈಕ್ ಸೈಕ್ಲಿಂಗ್ 19ರಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಲ್ಲಾ ಅಮೆಚೂರ್ ಸೈಕ್ಲಿಂಗ್ ಸಂಸ್ಥೆ ಆಯೋಜಿಸಿರುವ ಮೌಂಟೇನ್ ಬೈಕ್ ಸೈಕ್ಲಿಂಗ್ ಚಾಂಪಿಯನ್‌ಷಿಪ್ ಕಂಬಳಗೋಡಿನಲ್ಲಿರುವ ಡಾನ್ ಬೋಸ್ಕೊ ಎಂಜಿನಿಯರಿಂಗ್ ಕಾಲೇಜು ಆವರಣದಲ್ಲಿ ಇದೇ 19ರಂದು ನಡೆಯಲಿದೆ.

ರಾಜ್ಯ ಮಟ್ಟದ ಸ್ಪರ್ಧೆ ಇದೇ 25 ಮತ್ತು 26ರಂದು ಬಾಗಲಕೋಟೆ ಜಿಲ್ಲೆಯ ಬೀಳಗಿಯಲ್ಲಿ ನಡೆಯಲಿದೆ.

ಅದಕ್ಕಾಗಿ ಆಯ್ಕೆಯೂ ಇಲ್ಲಿ ನಡೆಯಲಿರುವುದರಿಂದ ಆ ಸ್ಪರ್ಧೆಯ ಎಲ್ಲ ನಿಯಮಗಳು ಅನ್ವಯವಾಗಲಿವೆ. ಪಾಲ್ಗೊಳ್ಳುವವರು ಎರಡು ಬ್ರೇಕ್ ಹೊಂದಿರುವ ಎಂ.ಟಿ.ಬಿ. ಸೈಕಲ್ ಹೊಂದಿರಬೇಕು. ಹೆಲ್ಮೆಟ್ ಕಡ್ಡಾಯ.

ಮಾಹಿತಿಗೆ ಜಿಲ್ಲಾ ಸಂಸ್ಥೆಯ ಗೌರವ ಕಾರ್ಯದರ್ಶಿ ಚಿಕ್ಕರಂಗಸ್ವಾಮಿ (9844385510) ಅವರನ್ನು ಸಂಪರ್ಕಿಸುವಂತೆ ತಿಳಿಸಲಾಗಿದೆ.

ಉದಕಮಂಡಲ ರೇಸ್

ಟ್ಯೂಡೋರ್ ಗೆಲ್ಲುವ ನಿರೀಕ್ಷೆ

ಡೇಸ್ ಬೆಸ್ಟ್ ಪ್ಲೇಟ್ ಗುರುವಾರ ಚೆನ್ನೈನಲ್ಲಿ ಏರ್ಪಡಿಸಿರುವ ಉದಕಮಂಡಲ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಈ ರೇಸ್‌ನಲ್ಲಿ ಟ್ಯೂಡೋರ್ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 2.00ಕ್ಕೆ ಏರ್ಪಡಿಸಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಸೋಲ್‌ಮೇಟ್ 8, ಫ್ಯಾಷನ್ ಆಫ್ ಸ್ಟಾರ್ಸ್ 6, ಎಲಿಗೆಂಟ್ ಟಚ್ 5
2ನೇ ರೇಸ್: ಟ್ಯೂಡರ್ 1, ಸ್ಕೈ ಲೈಟ್ 3, ವಿಂಡ್ ಸಿಂಬಲ್ 2
3ನೇ ರೇಸ್: ಸಿರೋನ 1, ಗ್ಲೋರಿಯಸ್ ಸನ್‌ಲೈಟ್ 3, ಮೂನ್‌ಲೈಟ್ ನೈಟ್ 9
4ನೇ ರೇಸ್: ಅಮೆಂಡ್‌ಮೆಂಟ್ 7, ಬಟರ್‌ಫ್ಲೈ 1, ರಿಪ್ಲಿಂಗ್ ವಾಟರ್ಸ್ 6
5ನೇ ರೇಸ್: ಪ್ರೊಪಲಾಡಿ 1, ಬ್ಲೂಪೆಟೆಂಟ್ 3, ಕೆಟಲಿಸ್ಟ್ 4
6ನೇ ರೇಸ್: ಡೈಮಂಡ್ ಅಂಡ್ ಪರ್ಲ್ಸ್ 1, ಹಲ್ಲುಸಿನೇಟ್ 7, ವೇಟುಗೋ 3
7ನೇ ರೇಸ್: ವ್ರಾಂಡ 2, ಇನ್‌ಕ್ರೆಡಿಬಲ್ ಸ್ಟಾರ್ 1, ಪಿರೇಟ್ಸ್ ಲವ್ 4

ಉತ್ತಮ ಬೆಟ್: ಸಿರೋನ

ಜಾಕ್‌ಪಾಟ್	ಮಿನಿ ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	4,5,6,7	3,4,5	5,6,7

ಫುಟ್‌ಬಾಲ್: ಯಂಗ್ ಜೆಮ್ಸ್ ತಂಡಕ್ಕೆ ಭರ್ಜರಿ ಗೆಲುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಘಟಿತ ಆಟವಾಡಿದ ಯಂಗ್ ಜೆಮ್ಸ್ ತಂಡದವರು ಇಲ್ಲಿ ನಡೆಯುತ್ತಿರುವ ಕೆಎಸ್‌ಎಫ್‌ಎ ಸ್ಪೋರ್ಟಿಂಗ್ ಪ್ಲಾನೆಟ್ ಟ್ರೋಫಿ ಮಹಿಳಾ ‘ಎ’ ಡಿವಿಷನ್ ಪಂದ್ಯದಲ್ಲಿ ಭರ್ಜರಿ ಜಯ ಗಳಿಸಿದರು. ಬುಧವಾರ ನಡೆದ ಪಂದ್ಯದಲ್ಲಿ 9-0ಯಿಂದ ಯಂಗ್ ಸ್ಟಾರ್ ತಂಡವನ್ನು ಪರಾಭವಗೊಳಿಸಿದರು.

ವಿಜೇತ ತಂಡದ ಪರ ಅಕ್ಷಿತಾ (10ನೇ ಮತ್ತು 35ನೇ ನಿಮಿಷ), ಶ್ರೇಯಾ (16 ಮತ್ತು 40ನೇ ನಿ.), ಆಲಿಯಾ (19 ಮತ್ತು 30+2ನೇ ನಿ.) ತಲಾ ಎರಡು ಗೋಲು ದಾಖಲಿಸಿ ಮಿಂಚಿದರು. ಶ್ರೀ ಶಕ್ತಿ (3ನೇ ನಿ.) ನಾದಿಯಾ ಮಾರ್ಟಿನ್ (22ನೇ ನಿ.) ಮತ್ತು ವಸುಧಾ (47ನೇ ನಿ.) ಕೂಡ ಕಾಲ್ಚಳಕ ತೋರಿದರು.

ಮತ್ತೊಂದು ಪಂದ್ಯದಲ್ಲಿ ಯುನೈಟೆಡ್ ಎಫ್‌ಸಿ ಕೊಡಗು ತಂಡವು 2-0ಯಿಂದ ಬೆಂಗಳೂರು ಪ್ಯಾಂಥರ್ಸ್ ಎದುರು ಗೆದ್ದಿತು. ಕೊಡಗು ತಂಡದ ನಿಹಾರಿಕಾ (9ನೇ ನಿ.) ಮತ್ತು ಜಯಶ್ರೀ (19ನೇ ನಿ.) ಗೋಲು ಹೊಡೆದರು.

ಗುರುವಾರ ನಡೆಯುವ ಪಂದ್ಯಗಳಲ್ಲಿ ಬೆಂಗಳೂರು ಬ್ಲೂಸ್ ಎಫ್‌ಸಿ- ಜೋಸ್ ಯುನೈಟೆಡ್, ಪಯೋನಿಯರ್ ವಿಮೆನ್ಸ್ ಮತ್ತು ಪಿಎಎಸ್‌ಎಸ್ ನಡುವೆ ಪೈಪೋಟಿ ನಡೆಯಲಿದೆ.



ಯುನೈಟೆಡ್ ಎಫ್‌ಸಿ ಕೊಡಗು ತಂಡದ ಜಯಶ್ರೀ ಧರ್ಮ (ಎಡ) ಮತ್ತು ಬೆಂಗಳೂರು ಪ್ಯಾಂಥರ್ಸ್‌ನ ಚೇತನಾ ನಡುವೆ ಚೆಂಡಿಗಾಗಿ ಪೈಪೋಟಿ – ಪ್ರಜಾವಾಣಿ ಚಿತ್ರ

ಟಿ20 ವಿಶ್ವಕಪ್: ವಿರಾಟ್ ನಾಯಕತ್ವದ ತಂಡ ಪ್ರಕಟ; 15 ಆಟಗಾರರ ಆಯ್ಕೆ

ಆಫ್‌ಸ್ಪಿನ್ನರ್ ಅಶ್ವಿನ್‌ಗೆ ಸ್ಥಾನ

ನವದೆಹಲಿ (ಪಿಟಿಐ): ಅನುಭವಿ ಆಫ್‌ಸ್ಪಿನ್ನರ್ ರವಿಚಂದ್ರನ್ ಅಶ್ವಿನ್ ಅವರನ್ನು ಟ್ವೆಂಟಿ–20 ವಿಶ್ವಕಪ್ ಟೂರ್ನಿಯಲ್ಲಿ ಆಡಲಿರುವ ಭಾರತ ತಂಡಕ್ಕೆ ಆಯ್ಕೆ ಮಾಡಲಾಗಿದೆ.

ಬುಧವಾರ ನಡೆದ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಆಯ್ಕೆ ಸಮಿತಿ ಸಭೆಯಲ್ಲಿ 15 ಆಟಗಾರರನ್ನು ಆಯ್ಕೆ ಮಾಡಲಾಯಿತು.

34 ವರ್ಷದ ಅಶ್ವಿನ್ 2017ರ ನಂತರ ಸೀಮಿತ ಓವರ್‌ಗಳ ಕ್ರಿಕೆಟ್‌ನಲ್ಲಿ ಆಡಿಲ್ಲ.

ಯುವ ವಿಕೆಟ್‌ಕೀಪರ್ ಇಶಾನ್ ಕಿಶನ್, ಎಡಗೈ ಸ್ಪಿನ್ನರ್ ಅಕ್ಷರ್ ಪಟೇಲ್ ಮತ್ತು ವರುಣ್ ಚಕ್ರವರ್ತಿ ಅವರಿಗೆ ಸ್ಥಾನ ಲಭಿಸಿದೆ. ಇಶಾನ್ ಮತ್ತು ವರುಣ್ ಅವರು ಕಳೆದ ಐಪಿಎಲ್‌ನಲ್ಲಿ ಮಾಡಿದ ಸಾಧನೆಯ ಆಧಾರದಲ್ಲಿ ಆಯ್ಕೆಯಾಗಿದ್ದಾರೆ. ಆದರೆ, ಲೆಗ್‌ಸ್ಪಿನ್ನರ್ ಯಜುವೇಂದ್ರ ಚಾಹಲ್, ದೀಪಕ್ ಚಾಹರ್ ಅವರನ್ನು ಸೇರ್ಪಡೆ ಮಾಡಲಾಗಿಲ್ಲ. ಆರಂಭಿಕ ಬ್ಯಾಟ್ಸ್‌ಮನ್, ಈಚೆಗೆ ಶ್ರೀಲಂಕಾ ಎದುರಿನ ಸರಣಿಯಲ್ಲಿ ಭಾರತದ ಸೀಮಿತ ಓವರ್‌ಗಳ ತಂಡಕ್ಕೆ ನಾಯಕರಾಗಿದ್ದ ಶಿಖರ್ ಧವನ್ ಅವರನ್ನೂ ಕೈಬಿಡಲಾಗಿದೆ.

ಅಕ್ಟೋಬರ್ 17ರಿಂದ ಟಿ20 ವಿಶ್ವಕಪ್ ಟೂರ್ನಿಯು ಯುಎಇ ಮತ್ತು ಓಮನ್‌ನಲ್ಲಿ ನಡೆಯಲಿದೆ. ಭಾರತವೇ ಈ ಟೂರ್ನಿಗೆ ಆತಿಥ್ಯ ವಹಿಸಲಿದೆ.

‘ತಂಡಕ್ಕೆ ಅಶ್ವಿನ್ ಆಸ್ತಿಯಿದ್ದಂತೆ. ಐಪಿಎಲ್‌ನಲ್ಲಿ ಅವರು ಚೆನ್ನಾಗಿ ಆಡಿದ್ದಾರೆ. ಅವರ ಅನುಭವದ ಆಟವು ತಂಡಕ್ಕೆ ಉತ್ತಮ ಫಲಿತಾಂಶ ಪಡೆಯಲು ನೆರವಾಗಲಿದೆ. ತಂಡದಲ್ಲಿ ಆಯ್ಕೆಯಾಗಿರುವ ಏಕೈಕ ಆಫ್‌ಸ್ಪಿನ್ನರ್ ಅವರಾಗಿದ್ದಾರೆ’ ಎಂದು ಆಯ್ಕೆ ಸಮಿತಿ ಮುಖ್ಯಸ್ಥ ಚೇತನ್ ಶರ್ಮಾ ಹೇಳಿದರು.

ತಂಡ: ವಿರಾಟ್ ಕೊಹ್ಲಿ (ನಾಯಕ), ರೋಹಿತ್ ಶರ್ಮಾ (ಉಪನಾಯಕ), ಕೆ.ಎಲ್. ರಾಹುಲ್, ಸೂರ್ಯಕುಮಾರ್ ಯಾದವ್, ರಿಷಭ್ ಪಂತ್ (ವಿಕೆಟ್‌ಕೀಪರ್), ಇಶಾನ್ ಕಿಶನ್ (ವಿಕೆಟ್‌ಕೀಪರ್), ಹಾರ್ದಿಕ್ ಪಾಂಡ್ಯ, ರವೀಂದ್ರ ಜಡೇಜ, ರಾಹುಲ್ ಚಾಹರ್, ರವಿಚಂದ್ರನ್ ಅಶ್ವಿನ್, ಅಕ್ಷರ್ ಪಟೇಲ್, ವರುಣ್ ಚಕ್ರವರ್ತಿ, ಜಸ್‌ಪ್ರೀತ್ ಬೂಮ್ರಾ, ಭುವನೇಶ್ವರ್ ಕುಮಾರ್, ಮೊಹಮ್ಮದ್ ಶಮಿ.

ಕಾಯ್ದಿರಿಸಿದ ಆಟಗಾರರು: ಶ್ರೇಯಸ್ ಅಯ್ಯರ್, ಶಾರ್ದೂಲ್ ಠಾಕೂರ್ ದೀಪಕ್ ಚಾಹರ್.


ಆರ್. ಅಶ್ವಿನ್ –ಪಿಟಿಐ ಚಿತ್ರ

ಹೊನಲು ಬೆಳಕಿನ ಗೋಪುರದ ಉದ್ಘಾಟನೆ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಅಳವಡಿಸಲಾಗಿರುವ ಗಾಲ್ವನೈಸ್ಡ್ ಯೂನಿಪೋಲ್ ಹೈಮಾಸ್ಟ್ ಫ್ಲಡ್ ಲೈಟ್ ಗೋಪುರಗಳನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಗುರುವಾರ ಉದ್ಘಾಟಿಸುವರು.

1995–96ರಲ್ಲಿ ಮೊದಲ ಬಾರಿಗೆ ಇಲ್ಲಿ ಹೊನಲು ಬೆಳಕಿನ ಸ್ತಂಭಗಳನ್ನು ಅಳವಡಿಸಲಾಗಿತ್ತು.

ಇದೀಗ ಎಲ್‌ಇಡಿ ಬಲ್ಬ್‌ಗಳನ್ನು ಅಳವಡಿಸಬಹುದಾದ ಅತ್ಯಾಧುನಿಕ ವ್ಯವಸ್ಥೆಯನ್ನು ಮಾಡಲಾಗಿದೆ. ಇದಕ್ಕಾಗಿ ಅಂದಾಜು ₹4.8 ಕೋಟಿ ವೆಚ್ಚ ಮಾಡಲಾಗಿದೆ. ಕಳೆದ ಆರು ತಿಂಗಳ ಅವಧಿಯಲ್ಲಿ ನಡೆದ ಕಾಮಗಾರಿಯಲ್ಲಿ ಸಂಪೂರ್ಣಗೊಳಿಸಲಾಗಿದೆ ಎಂದು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಸಂಜೆ 6 ಗಂಟೆಗೆ ನಡೆಯುವ ಕಾರ್ಯಕ್ರಮದಲ್ಲಿ ರಾಜ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಚಿವ ಕೆ.ಸಿ. ನಾರಾಯಣಗೌಡ ಹಾಜರಿರುವರು.

ಭಾರತ ತಂಡಕ್ಕೆ ಧೋನಿ ಮಾರ್ಗದರ್ಶಕ!



ನವದೆಹಲಿ (ಪಿಟಿಐ): ಟಿ20 ವಿಶ್ವಕಪ್ ಟೂರ್ನಿಯಲ್ಲಿ ಆಡಲಿರುವ ಭಾರತ ತಂಡಕ್ಕೆ ಮಹೇಂದ್ರಸಿಂಗ್ ಧೋನಿ ಅವರನ್ನು ಮಾರ್ಗದರ್ಶಕರನ್ನಾಗಿ ನೇಮಕ ಮಾಡಲಾಗಿದೆ. ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ)ಯ ಈ ನಡೆಯು ಕ್ರಿಕೆಟ್ ವಲಯದಲ್ಲಿ ಅಚ್ಚರಿ ಮೂಡಿಸಿದೆ.

‘ಮಾಜಿ ನಾಯಕ ಮಹೇಂದ್ರಸಿಂಗ್ ಧೋನಿ ಅವರನ್ನು ಭಾರತ ತಂಡದ ಮಾರ್ಗದರ್ಶಕರನ್ನಾಗಿ ನೇಮಕ ಮಾಡಲಾಗಿದೆ’ ಎಂದು ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ತಿಳಿಸಿದ್ದಾರೆ.

‘ದುಬೈನಲ್ಲಿ ಅವರೊಂದಿಗೆ ಮಾತನಾಡಿದೆ. ವಿಶ್ವಕಪ್ ನಲ್ಲಿ ತಂಡಕ್ಕೆ ಮಾರ್ಗದರ್ಶಕರಾಗಿರಲು ಒಪ್ಪಿಕೊಂಡಿದ್ದಾರೆ. ಮಂಡಳಿಯಲ್ಲಿರುವ ಪದಾಧಿಕಾರಿಗಳೊಂದಿಗೆ ಮಾತನಾಡಿದೆ. ಅವರೆಲ್ಲರೂ ಸಂತಸದಿಂದ ಸಹಮತ ಸೂಚಿಸಿದರು’ ಎಂದು ಶಾ ಹೇಳಿದರು.

40 ವರ್ಷದ ಧೋನಿ ಹೋದ ವರ್ಷ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ವಿದಾಯ ಹೇಳಿದ್ದರು. ಅವರು ಸದ್ಯ ಐಪಿಎಲ್ ಟೂರ್ನಿಯ ಚೆನ್ನೈ ಸೂಪರ್ ಕಿಂಗ್ಸ್ ತಂಡದ ನಾಯಕರಾಗಿದ್ದಾರೆ.

2007ರಲ್ಲಿ ದಕ್ಷಿಣ ಆಫ್ರಿಕಾದಲ್ಲಿ ನಡೆದಿದ್ದ ಟಿ20 ವಿಶ್ವಕಪ್ ಟೂರ್ನಿ ಮತ್ತು 2011ರಲ್ಲಿ ಏಕದಿನ ವಿಶ್ವಕಪ್ ವಿಜೇತ ಭಾರತ ತಂಡವನ್ನು ಧೋನಿ ಮುನ್ನಡೆಸಿದ್ದರು.


ಪ್ರಶಸ್ತಿಯೊಂದಿಗೆ ಆರಾಧ್ಯ ದ್ವಿವೇದಿ


ಅನ್ವಿ ಪುನಗಂಟಿ

ಟೆನಿಸ್: ಆರಾಧ್ಯ, ಅನ್ವಿಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರಾಧ್ಯ ದ್ವಿವೇದಿ ಮತ್ತು ಅನ್ವಿ ಪುನಗಂಟಿ ಅವರು ರಾಜ್ಯ ಲಾನ್ ಟೆನಿಸ್ ಸಂಸ್ಥೆ ಆಯೋಜಿಸಿರುವ ಎಐಟಿಎ ಸಿಎಸ್–3 ಟೂರ್ನಿಯ 14ವರ್ಷದೊಳಗಿನವರ ವಿಭಾಗದಲ್ಲಿ ಕ್ರಮವಾಗಿ ಬಾಲಕರ ಮತ್ತು ಬಾಲಕಿಯರ ವಿಭಾಗದ ಪ್ರಶಸ್ತಿ ತಮ್ಮದಾಗಿಸಿಕೊಂಡರು.

ಬಾಲಕರ ವಿಭಾಗದ ಫೈನಲ್‌ನಲ್ಲಿ ಆರಾಧ್ಯ 6-4, 6-3ರಲ್ಲಿ ಸಂಚಿತ್ ಸುಧೀರ್ ರಾಜು ವಿರುದ್ಧ ಗೆಲುವು ಸಾಧಿಸಿದರು.

ಸೆಮಿಫೈನಲ್‌ನಲ್ಲಿ ಸಂಚಿತ್, ಮೂರನೇ ಶ್ರೇಯಾಂಕದ ಪ್ರಜ್ವಲ್ ಹೆಗ್ಗೆರೆ ವಿರುದ್ಧ ಜಯ ಸಾಧಿಸಿದ್ದರು. ಆದರೆ ಫೈನಲ್‌ನಲ್ಲಿ ಆರಾಧ್ಯ ಸಂಪೂರ್ಣ ಮೇಲುಗೈ ಸಾಧಿಸಿದರು.

ಮೊದಲ ಸೆಟ್‌ನ ಆರಂಭದಲ್ಲಿ 1–2ರ ಹಿನ್ನಡೆಯಲ್ಲಿದ್ದ ಸಂಚಿತ್ ನಂತರ 4–3ರ ಮುನ್ನಡೆ ಸಾಧಿಸಿದರು. ಆದರೆ ಆ ಮೇಲೆ ಆರಾಧ್ಯ ಸತತ ಮೂರು ಗೇಮ್ ಗೆದ್ದು ಸೆಟ್ ತಮ್ಮದಾಗಿಸಿಕೊಂಡರು.

ಎರಡನೇ ಸೆಟ್‌ನಲ್ಲಿ ಆರಂಭದಲ್ಲೇ ಆರಾಧ್ಯ 5–2ರ ಮುನ್ನಡೆ ಗಳಿಸಿದರು. ಸಿಲಿಕಾನ್ ಸಿಟಿ ಅಕಾಡೆಮಿ ಶಾಲೆಯ ಎಂಟನೇ ತರಗತಿ ವಿದ್ಯಾರ್ಥಿಯಾಗಿರುವ ಅವರು ನಂತರ ಒಂದು ಗೇಮ್ ಬಿಟ್ಟುಕೊಟ್ಟರೂ ಛಲ ಬಿಡದೆ ಕಾದಾಡಿ ಸೆಟ್ ಮತ್ತು ಪಂದ್ಯ ಗೆದ್ದುಕೊಂಡರು. ಇದು 14 ವರ್ಷದೊಳಗಿನವರ ವಿಭಾಗದಲ್ಲಿ ಅವರ ಎರಡನೇ ಪ್ರಶಸ್ತಿಯಾಗಿದೆ.

ಬಾಲಕಿಯರ ವಿಭಾಗದಲ್ಲಿ ಅಗ್ರ ಶ್ರೇಯಾಂಕದ ಅನ್ವಿ ಒಂದು ಗೇಮ್ ಕೂಡ ಬಿಟ್ಟುಕೊಡದೆ 6-0, 6-0ರಲ್ಲಿ ಅದಿತಿ ಬಾಲಮುರುಘನ್ ವಿರುದ್ಧ ಜಯಿಸಿ ಪ್ರಶಸ್ತಿ ಗೆದ್ದುಕೊಂಡರು. ಡಿಪಿಎಸ್ ದಕ್ಷಿಣ ಶಾಲೆಯ 12ನೇ ತರಗತಿ ವಿದ್ಯಾರ್ಥಿನಿಯಾಗಿರುವ ಅವರಿಗೂ ಈ ವಯೋಮಾನದ ವಿಭಾಗದಲ್ಲಿ ಇದು ಎರಡನೇ ಪ್ರಶಸ್ತಿಯಾಗಿದೆ.

ಫಲಿತಾಂಶಗಳು: 14 ವರ್ಷದೊಳಗಿನ ಬಾಲಕರ ವಿಭಾಗದ ಫೈನಲ್: ಆರಾಧ್ಯ ದ್ವಿವೇದಿ ಅವರಿಗೆ ಸಂಚಿತ್ ರಾಜು ವಿರುದ್ಧ 6-4, 6-3ರಲ್ಲಿ ಜಯ. ಸೆಮಿಫೈನಲ್: ಆರಾಧ್ಯ ದ್ವಿವೇದಿಗೆ ನಿಖಿಲ್ ಶ್ರೀನಿವಾಸ್ ವಿರುದ್ಧ, ಸಂಚಿತ್ ರಾಜುಗೆ ಪ್ರಜ್ವಲ್ ಹೆಗ್ಗೆರೆ ವಿರುದ್ಧ ಜಯ. **ಬಾಲಕಿಯರ ವಿಭಾಗದ ಫೈನಲ್:** ಅನ್ವಿ ಪುನಗಂಟಿಗೆ ಅದಿತಿ ಬಾಲಮುರುಘನ್ ವಿರುದ್ಧ 6-0, 6-0 ಅಂತರದಲ್ಲಿ ಜಯ. ಸೆಮಿಫೈನಲ್‌ನಲ್ಲಿ ಅನ್ವಿಗೆ ಅದಿತಿ ರಂಗಾ ವಿರುದ್ಧ, ಅದಿತಿಗೆ ಕಾವ್ಯಾ ಸರವಣನ್ ಎದುರು ಗೆಲುವು.

ವರ್ಚುವಲ್ ಮಾಧ್ಯಮ ಸಂವಾದದಲ್ಲಿ ಅಭಿಮತ

ಆರಂಭಿಕ ಬ್ಯಾಟ್ಸ್‌ಮನ್ ಕೆ.ಎಲ್. ರಾಹುಲ್ ಆಟಕ್ಕೆ ಮಾರುಹೋಗಿರುವುದಾಗಿ ಇಂಗ್ಲೆಂಡ್ ಮಧ್ಯಮ ವೇಗಿ ತಿಳಿಸಿದ್ದು ವಿರಾಟ್ ಕೊಹ್ಲಿ ಅವರನ್ನೂ ಕೊಂಡಾಡಿದ್ದಾರೆ.

‘ಭಾರತದ್ದು ವಿಶ್ವದರ್ಜೆ ಬ್ಯಾಟಿಂಗ್’

ಬೆಂಗಳೂರು: ಭಾರತದ ಬ್ಯಾಟಿಂಗ್ ಕ್ರಮಾಂಕವು ವಿಶ್ವದರ್ಜೆಯದ್ದಾಗಿದೆ. ರೋಹಿತ್ ಶರ್ಮಾ ಅವರಿಗೆ ಬೌಲಿಂಗ್ ಮಾಡುವುದು ಸವಾಲಿನ ಕೆಲಸ ಎಂದು ಇಂಗ್ಲೆಂಡ್ ಕ್ರಿಕೆಟ್ ತಂಡದ ಮಧ್ಯಮವೇಗಿ ಮಾರ್ಕ್ ವುಡ್ ಹೇಳಿದ್ದಾರೆ.

ಬುಧವಾರ ವರ್ಚುವಲ್ ಮಾಧ್ಯಮ ಸಂವಾದದಲ್ಲಿ ಮಾತನಾಡಿದ ಅವರು, ‘ಭಾರತದ ಪ್ರತಿಯೊಬ್ಬ ಬ್ಯಾಟ್ಸ್‌ಮನ್ ಕ್ರೀಸ್‌ಗೆ ಬಂದಾಗಲೂ ನಮ್ಮ ಮನದಲ್ಲಿ ಆ ಆಟಗಾರ ಶ್ರೇಷ್ಠ ಎಂಬ ಭಾವನೆ ಇರುತ್ತದೆ. ಅದರಲ್ಲೂ ರೋಹಿತ್ ಎದುರು ಜಗತ್ತಿನಯಾವುದೇ ವಾತಾವರಣದಲ್ಲಿ ಬೌಲಿಂಗ್ ಮಾಡುವುದು ಕಷ್ಟವೇ. ಅಷ್ಟು ಚುರುಕಾಗಿ ಚೆಂಡಿನ ಗತಿ ಅರಿತು ಪ್ರತಿಕ್ರಿಯಿಸುತ್ತಾರೆ’ ಎಂದರು.


ಮಾರ್ಕ್ ವುಡ್

‘ಕೆ.ಎಲ್. ರಾಹುಲ್ ಆಟದ ಶೈಲಿಗೆ ನಾನು ಮಾರುಹೋಗಿದ್ದೇನೆ. ಆಫ್ ಸ್ಟಂಪ್ ಆಚೆಯ ಎಸೆತಗಳನ್ನು ಬಿಟ್ಟ ರೀತಿ ಮತ್ತು ಕೆಲವು ಉತ್ತಮ ಹೊಡೆತಗಳು ಸುಂದರವಾಗಿದ್ದವು. ಪೂಜಾರ, ವಿರಾಟ್ ಅವರಂತೂ ಶ್ರೇಷ್ಠ ಬ್ಯಾಟ್ಸ್‌ಮನ್‌ಗಳು. ಅವರಿಗೆ ಬೌಲಿಂಗ್ ಮಾಡುವುದು ಕಠಿಣ ಸವಾಲು‘ ಎಂದರು.

ಶುಕ್ರವಾರ ಮ್ಯಾಂಚೆಸ್ಟರ್‌ನಲ್ಲಿ ಆರಂಭವಾಗಲಿರುವ ಕೊನೆಯ ಪಂದ್ಯ ತಂಡಕ್ಕೆ ಮಹತ್ವದ್ದು. ಸರಣಿ ಸಮಗೊಳಿಸಿಕೊಳ್ಳುವುದಾಗಿ ವುಡ್ಸ್ ಹೇಳಿದರು.

ಅಮೆರಿಕ ಓಪನ್: ಮೆಡ್ವೆಡೆವ್, ಸಬಲೆಂಕಾ ಜಯಭೇರಿ

ನಾಲ್ಕರ ಘಟ್ಟಕ್ಕೆ ಲೇಲಾ

ನ್ಯೂಯಾರ್ಕ್ (ಎಪಿ): ಅಪರಿಮಿತ ಉತ್ಸಾಹದ ಗಣಿ, ಯುವ ಪ್ರತಿಭೆ ಲೇಲಾ ಫರ್ನಾಂಡಸ್ ಅವರು ಅಮೆರಿಕ ಓಪನ್ ಟೆನಿಸ್ ಟೂರ್ನಿಯಲ್ಲಿ ಗೆಲುವಿನ ಅಭಿಯಾನ ಮುಂದುವರಿಸಿದ್ದಾರೆ. ಖ್ಯಾತನಾಮ ಆಟಗಾರ್ತಿಯರಿಗೆ ಸೋಲಿನ ರುಚಿ ತೋರಿಸುತ್ತ ಸಾಗಿರುವ ಕೆನಡಾದ 19ರ ಹರೆಯದ ಪೋರಿ, ಸೆಮಿಫೈನಲ್‌ಗೆ ಲಗ್ಗೆಯಿಟ್ಟಿದ್ದಾರೆ.

ಅರ್ಥರ್ ಆ್ಯಷ್ ಕ್ರೀಡಾಂಗಣದಲ್ಲಿ ಮಂಗಳವಾರ ರಾತ್ರಿ ನಡೆದ ಎಂಟರಘಟ್ಟದ ಹಣಾಹಣಿಯಲ್ಲಿ ಲೇಲಾ ಅವರು ಐದನೇ ಕ್ರಮಾಂಕದ ಎಲಿನಾ ಸ್ವಿಟೋಲಿನಾ ಎದುರು 6-3, 3-6, 7-6 (5)ರಿಂದ ಗೆದ್ದರು.

ಇದರೊಂದಿಗೆ ರಷ್ಯಾದ ಮರಿಯಾ ಶರಪೋವಾ (2005 ರಲ್ಲಿ) ಬಳಿಕ ಟೂರ್ನಿಯ ನಾಲ್ಕರ ಘಟ್ಟ ತಲುಪಿದ ಅತಿ ಕಿರಿಯ ಆಟಗಾರ್ತಿ ಎನಿಸಿಕೊಂಡರು.

ಟೂರ್ನಿಯ ಈ ಹಿಂದಿನ ಪಂದ್ಯಗಳಲ್ಲಿ ಅಮೆರಿಕ ಓಪನ್ ಮಾಜಿ ಚಾಂಪಿಯನ್‌ಗಳಾದ ಜಪಾನ್‌ನ ನವೊಮಿ ಒಸಾಕ ಮತ್ತು ಆ್ಯಂಜೆಲಿಕ್ ಕರ್ಬರ್ ಅವರಿಗೆ ಎಡಗೈ ಆಟಗಾರ್ತಿ ಲೇಲಾ ಆಘಾತ ನೀಡಿದ್ದರು.

ಮೊದಲ ಸೆಟ್‌ನಲ್ಲಿ ಸುಲಭವಾಗಿ ಗೆದ್ದ ಲೇಲಾ ಅವರು ಎರಡನೇ ಸೆಟ್‌ನಲ್ಲಿ ಉಕ್ರೇನ್‌ನ ಅನುಭವಿ ಆಟಗಾರ್ತಿಯ ಎದುರು ಮಣಿಯಬೇಕಾಯಿತು.

ಆದರೆ ಮೂರನೇ ಸೆಟ್‌ನಲ್ಲಿ 5–2ರ ಆರಂಭದ ಮುನ್ನಡೆ ಗಳಿಸಿದ ಲೇಲಾ ಸುಲಭವಾಗಿ ಗೆಲ್ಲುತ್ತೇನೆ ಎಂದುಕೊಂಡರು. ಆದರೆ ಸೆಟ್‌ಅನ್ನು ಸ್ವಿಟೋಲಿನಾ ಟೈಬ್ರೇಕ್‌ವರೆಗೆ ಕೊಂಡೊಯ್ದರು. ಆದರೆ ಛಲಬಿಡದ ಲೇಲಾ ಸೆಟ್ ಹಾಗೂ ಪಂದ್ಯ ಗೆದ್ದು ಬೀಗಿದರು. ಗುರುವಾರ ನಡೆಯುವ ಸೆಮಿಫೈನಲ್‌ನಲ್ಲಿ ಕೆನಡಾದ 73ನೇ ರ‍್ಯಾಂಕಿನ ಆಟಗಾರ್ತಿಗೆ ಎರಡನೇ ಕ್ರಮಾಂಕದ ಅರಿನಾ ಸಬಲೆಂಕಾ ಸವಾಲು ಎದುರಾಗಿದೆ.



ಪಂದ್ಯ ಗೆದ್ದ ಲೇಲಾ ಫರ್ನಾಂಡಸ್ ಸಂತಸ– ಎಎಫ್‌ಪಿ ಚಿತ್ರ

ಅಲ್ಕರಾಜ್ ಅಭಿಯಾನ ಅಂತ್ಯ

ಸ್ಪೇನ್‌ನ 18ರ ಪ್ರಾಯದ ಕಾರ್ಲೋಸ್ ಅಲ್ಕರಾಜ್ ಅವರ ಅಭಿಯಾನ ಮಂಗಳವಾರ ಅಂತ್ಯಗೊಂಡಿತು. ಅವರು ಕಾಲಿನ ಗಾಯದ ಕಾರಣ ಕ್ವಾರ್ಟರ್‌ಫೈನಲ್ ಪಂದ್ಯದ ಮಧ್ಯೆಯೇ ಹಿಂದೆ ಸರಿದರು. ಈ ವೇಳೆ ಅವರ ಎದುರಾಳಿ ಕೆನಡಾದ ಫೆಲಿಕ್ಸ್ ಅಗರ್ ಅಲಿಯಾಸಿಮ್ 6-3, 3-1ರಿಂದ ಮುನ್ನಡೆಯಲ್ಲಿದ್ದರು. ಹೀಗಾಗಿ ಅಗರ್ ಸೆಮಿಫೈನಲ್ ತಲುಪಿದರು.

ಅಮೆರಿಕದ ಆ್ಯಂಡ್ರೆ ಅಗಾಸಿ (1988) ಬಳಿಕ ಟೂರ್ನಿಯ ಕ್ವಾರ್ಟರ್‌ಫೈನಲ್ ಪ್ರವೇಶಿಸಿದ ಅತಿ ಕಿರಿಯ ಆಟಗಾರ ಎನಿಸಿಕೊಂಡಿದ್ದರು ಅಲ್ಕರಾಜ್.

ಮುಂದಿನ ಹಣಾಹಣಿಯಲ್ಲಿ ಅಗರ್ ಅವರು ರಷ್ಯಾದ ಡ್ಯಾನಿಲ್ ಮೆಡ್ವೆಡೆವ್ ಎದುರು ಸೆಣಸುವರು. ಎರಡನೇ ರ‍್ಯಾಂಕಿನ ಮೆಡ್ವೆಡೆವ್ ಮತ್ತೊಂದು ಕ್ವಾರ್ಟರ್‌ಫೈನಲ್‌ನಲ್ಲಿ 6-3, 6-0, 4-6, 7-5ರಿಂದ ನೆದರ್ಲೆಂಡ್ಸ್‌ನ ಬೊಟಿಚ್ ವ್ಯಾನ್ ಡಿ ಜಾಂಡ್‌ಸ್ಕಲ್ಪ್ ಅವರನ್ನು ಮಣಿಸಿದರು.

ನಾಲ್ಕರ ಘಟ್ಟದಲ್ಲಿ ಮೆಡ್ವೆಡೆವ್ ವಿಜೇತರಾದರೆ ವಿಶ್ವದ ಅಗ್ರ ಕ್ರಮಾಂಕದ ಆಟಗಾರ ನೊವಾಕ್ ಜೊಕೊವಿಚ್ ಎದುರು ಮುಖಾಮುಖಿಯಾಗುವ ಸಾಧ್ಯತೆಯಿದೆ. 2019ರ ಅಮೆರಿಕ ಓಪನ್ ರನ್ನರ್ ಅಪ್ ಆಗಿರುವ 25 ವರ್ಷದ ಮೆಡ್ವೆಡೆವ್ ಅವರು, ಈ ವರ್ಷದ ಆಸ್ಟ್ರೇಲಿಯಾ ಓಪನ್‌ನಲ್ಲಿ ಸರ್ಬಿಯಾ ಆಟಗಾರನಿಗೆ ಮಣಿದಿದ್ದರು.

ರ‍್ಯಾಂಕಿಂಗ್ 9ನೇ ಸ್ಥಾನಕ್ಕೆ ಬೂಮ್ರಾ

ದುಬೈ (ಪಿಟಿಐ): ಇಂಗ್ಲೆಂಡ್ ಎದುರಿನ ನಾಲ್ಕನೇ ಟೆಸ್ಟ್‌ನಲ್ಲಿ ಪರಿಣಾಮಕಾರಿ ಬೌಲಿಂಗ್ ಮಾಡಿದ್ದ ಭಾರತದ ಜಸ್‌ಪ್ರೀತ್ ಬೂಮ್ರಾ ಅವರು ಐಸಿಸಿ ಟೆಸ್ಟ್ ರ‍್ಯಾಂಕಿಂಗ್‌ನ ಬೌಲರ್‌ಗಳ ವಿಭಾಗದಲ್ಲಿ ಒಂಬತ್ತನೇ ಸ್ಥಾನಕ್ಕೇರಿದ್ದಾರೆ.


ಬೂಮ್ರಾ

ಓವಲ್‌ನಲ್ಲಿ ನಡೆದ ಈ ಪಂದ್ಯದಲ್ಲಿ ವೇಗಿ ಬೂಮ್ರಾ ಎದುರಾಳಿ ತಂಡದ ಒಲಿ ಪೋಪ್ ಮತ್ತು ಜಾನಿ ಬೇಸ್ಟೊ ಅವರನ್ನು ಬೌಲ್ಡ್ ಮಾಡಿದ್ದರು. ಭಾರತ ಪಂದ್ಯವನ್ನು 157 ರನ್‌ಗಳಿಂದ ಗೆದ್ದುಕೊಂಡಿತ್ತು. ಶಾರ್ದೂಲ್ ಠಾಕೂರ್ ಅವರು ಬ್ಯಾಟ್ಸ್‌ಮನ್‌ಗಳ ವಿಭಾಗದಲ್ಲಿ 59 ಸ್ಥಾನಗಳ ಬಡ್ತಿ ಪಡೆದು 79ನೇ ಸ್ಥಾನಕ್ಕೇರಿದ್ದಾರೆ. ಬೌಲಿಂಗ್ ವಿಭಾಗದಲ್ಲಿ ಅವರು 49ನೇ ಸ್ಥಾನದಲ್ಲಿದ್ದಾರೆ.

ಬೌಲರ್‌ಗಳ ಪೈಕಿ ಆಸ್ಟ್ರೇಲಿಯಾದ ಪ್ಯಾಟ್ ಕಮಿನ್ಸ್ ಅಗ್ರಸ್ಥಾನದಲ್ಲಿದ್ದು, ಭಾರತದ ಆರ್. ಅಶ್ವಿನ್ ಎರಡನೇ ಸ್ಥಾನದಲ್ಲಿ ಮುಂದುವರಿದಿದ್ದಾರೆ.

ಆಲ್‌ರೌಂಡರ್‌ಗಳ ಪಟ್ಟಿಯಲ್ಲಿ ಅಶ್ವಿನ್ ಅವರು ಒಂದು ಸ್ಥಾನ ಕುಸಿತ ಕಂಡು ಐದನೇ ಸ್ಥಾನದಲ್ಲಿದ್ದಾರೆ. ಜಡೇಜ ಮೂರನೇ ಸ್ಥಾನದಲ್ಲಿ ಸ್ಥಿರವಾಗಿದ್ದಾರೆ. ಅಗ್ರ 10 ಮಂದಿ ಬ್ಯಾಟ್ಸ್‌ಮನ್‌ಗಳ ಪಟ್ಟಿಯಲ್ಲಿ ಯಾವುದೇ ಬದಲಾವಣೆ ಆಗಿಲ್ಲ. ಇಂಗ್ಲೆಂಡ್‌ನ ಜೋ ರೂಟ್ ಮೊದಲ ಸ್ಥಾನದಲ್ಲಿದ್ದರೆ, ಭಾರತದ ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಕ್ರಮವಾಗಿ ಐದು ಮತ್ತು ಆರನೇ ಸ್ಥಾನದಲ್ಲಿ ಮುಂದುವರಿದಿದ್ದಾರೆ.

ಸಿದ್ದಿ ಕ್ರೀಡಾಪಟುಗಳ ಜತೆ ಸಚಿವರ ಸಂವಾದ

ಬೆಂಗಳೂರು: ಸಿದ್ದಿ ಸಮುದಾಯದ 24 ಕ್ರೀಡಾಪಟುಗಳ ಜತೆ ಕ್ರೀಡೆ ಮತ್ತು ಯುವ ಸಬಲೀಕರಣ ಸಚಿವ ನಾರಾಯಣಗೌಡ ಬುಧವಾರ ಸಂವಾದ ನಡೆಸಿದರು.

ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ, ಹಳಿಯಾಳ, ಯಲ್ಲಾಪುರ, ಮುಂಡಗೋಡದಲ್ಲಿರುವ ಸಿದ್ದಿ ಸಮುದಾಯದ 400 ವಿದ್ಯಾರ್ಥಿಗಳ ಪೈಕಿ 24 ವಿದ್ಯಾರ್ಥಿಗಳನ್ನು ಹೆಚ್ಚಿನ ತರಬೇತಿಗಾಗಿ ಆಯ್ಕೆ ಮಾಡಲಾಗಿದೆ. ‘ಕ್ರೀಡಾ ವಿಜ್ಞಾನ ಕೇಂದ್ರದ ತಂಡ ವಿದ್ಯಾರ್ಥಿಗಳನ್ನು ವೈಜ್ಞಾನಿಕವಾಗಿ ಪರೀಕ್ಷೆ ನಡೆಸಿ ಆಯ್ಕೆ ಮಾಡಿದೆ’ ಎಂದು ಸಚಿವರು ಹೇಳಿದರು.

‘ಮುಂದಿನ ಒಲಿಂಪಿಕ್ ಗಮನದಲ್ಲಿಟ್ಟುಕೊಂಡು ಕ್ರೀಡಾ ವಿಜ್ಞಾನ ಕೇಂದ್ರದ ಮೂಲಕ ಕ್ರೀಡಾ ಪ್ರತಿಭಾನ್ವೇಷಣೆ ನಡೆಸಲಾಗುತ್ತಿದೆ. ಈ ರೀತಿ ಆಯ್ದೆಯಾದವರಿಗೆ ಅಂತರರಾಷ್ಟ್ರೀಯ ಗುಣಮಟ್ಟದ ತರಬೇತಿ ನೀಡಲಾಗುವುದು. ರಾಜ್ಯದ ಪ್ರತಿಷ್ಠಿತ ವಿದ್ಯಾನಗರ ಮತ್ತು ಇತರ ಕಡೆಗಳಲ್ಲಿರುವ ಕ್ರೀಡಾ ವಸತಿ ನಿಲಯದಲ್ಲಿ ಈ ವಿದ್ಯಾರ್ಥಿಗಳಿಗೆ ವಸತಿ ಸೌಲಭ್ಯ ಕಲ್ಪಿಸಲಾಗುವುದು. ಕ್ರೀಡಾ ವಿಜ್ಞಾನ ಕೇಂದ್ರದ ಮೂಲಕ ಆಯ್ಕೆಯಾದವರಿಗೆ ನೇರವಾಗಿ ಕ್ರೀಡಾ ವಸತಿ ನಿಲಯದಲ್ಲಿ ಪ್ರವೇಶ ನೀಡಲಾಗುವುದು’ ಎಂದರು.

‘ಸಿದ್ದಿ ಜನಾಂಗದ ವಿದ್ಯಾರ್ಥಿಗಳು ದೈಹಿಕವಾಗಿ ಮತ್ತು ಮಾನಸಿಕವಾಗಿ ಸದೃಢರು. ಕ್ರೀಡೆಯಲ್ಲೂ ಅವರಿಗೆ ಹೆಚ್ಚಿನ ಆಸಕ್ತಿ ಇದೆ. ಕಬಡ್ಡಿ, ಬಾಕ್ಸಿಂಗ್, ಅಥ್ಲೆಟಿಕ್ಸ್‌ನಲ್ಲಿ ಹೆಚ್ಚು ಸಮರ್ಥರಿದ್ದಾರೆ. ಕ್ರೀಡಾ ತರಬೇತಿ ಜತೆಗೆ ಅವರ ವಿದ್ಯಾಭ್ಯಾಸಕ್ಕೂ ಅಗತ್ಯ ವ್ಯವಸ್ಥೆ ಮಾಡಬೇಕು’ ಎಂದು ನಾರಾಯಣಗೌಡ ಸೂಚಿಸಿದರು.

ಸಂವಾದದ ವೇಳೆ ಸಚಿವರ ಪ್ರಶ್ನೆಗೆ ಉತ್ತರಿಸಿದ ಸಿದ್ದಿ ವಿದ್ಯಾರ್ಥಿಗಳು, ‘ಕ್ರೀಡೆಯಲ್ಲಿ ಆಸಕ್ತಿ ಇದ್ದು, ಉತ್ತಮ ಅವಕಾಶ ಮತ್ತು ತರಬೇತಿ ಸಿಕ್ಕಿದರೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಬಂಗಾರದ ಪದಕ ಗೆದ್ದು ದೇಶದ ಕೀರ್ತಿ ಬೆಳಗುವುದಾಗಿ’ ಹೇಳಿದರು.

1666 ದೈಹಿಕ ಶಿಕ್ಷಕರಿಗೆ ತರಬೇತಿ

‘ಗ್ರಾಮೀಣ ಮಟ್ಟದಲ್ಲೇ ಕ್ರೀಡಾಪಟುಗಳನ್ನು ತಯಾರು ಮಾಡಲು ಸರ್ಕಾರ ಮಹತ್ವದ ನಿರ್ಧಾರ ತೆಗೆದುಕೊಂಡಿದ್ದು, ಇದಕ್ಕಾಗಿ 1,666 ದೈಹಿಕ ಶಿಕ್ಷಕರಿಗೆ ಗುಣಮಟ್ಟದ ವೈಜ್ಞಾನಿಕ ತರಬೇತಿ ನೀಡಲಾಗುವುದು’ ಎಂದು ಸಚಿವ ನಾರಾಯಣ ಗೌಡ ಹೇಳಿದರು. ಇಲಾಖೆ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಕ್ರೀಡಾ ವಿಜ್ಞಾನ ಕೇಂದ್ರದ ಮೂಲಕ ಗ್ರಾಮೀಣ ಮಟ್ಟದ ಕ್ರೀಡಾ ಪ್ರತಿಭೆಗಳನ್ನು ಗುರುತಿಸಲಾಗುತ್ತಿದೆ ಎಂದರು.

ಜೀವ್‌ಗೆ ‘ದುಬೈ ಗೋಲ್ಡನ್ ವೀಸಾ’

ದುಬೈ (ಪಿಟಿಐ): ಭಾರತದ ಜೀವ್ ಮಿಲ್ಖಾ ಸಿಂಗ್ ಅವರು 10 ವರ್ಷಗಳ ಅವಧಿಗೆ ಪ್ರತಿಷ್ಠಿತ ದುಬೈ ಗೋಲ್ಡನ್ ವೀಸಾ ಪಡೆದ ವಿಶ್ವದ ಮೊದಲ ಗಾಲ್ಫ್ ಆಟಗಾರ ಎನಿಸಿಕೊಂಡಿದ್ದಾರೆ. ಕ್ರೀಡೆಯಲ್ಲಿ ತೋರಿದ ಅತ್ಯುತ್ತಮ ಸಾಧನೆಗಳನ್ನು ಪರಿಗಣಿಸಿ ಅವರಿಗೆ ಈ ಗೌರವ ನೀಡಲಾಗಿದೆ.

49 ವರ್ಷದ ಜೀವ್ ಅವರು ಸುದೀರ್ಘ ಅವಧಿಗೆ ದುಬೈ ಒಡನಾಟ ಹೊಂದಿದ್ದು, ಹಲವು ಟೂರ್ನಿಗಳಲ್ಲಿ ಭಾಗವಹಿಸಿದ್ದು ಅಲ್ಲದೆ ನಗರದಲ್ಲಿ ಅನೇಕ ಸ್ನೇಹಿತರನ್ನು ಸಂಪಾದಿಸಿದ್ದಾರೆ.

‘ದುಬೈ ಸರ್ಕಾರವು ನನ್ನನ್ನು ಗೋಲ್ಡನ್ ವೀಸಾಗೆ ಪರಿಗಣಿಸಿರುವುದು ನನಗೆ ನಿಜಕ್ಕೂ ಗೌರವ ಸಂಗತಿ. ಮತ್ತು ಇಲ್ಲಿ ಇನ್ನೂ ಅನೇಕ ವಿಶೇಷ ನೆನಪುಗಳನ್ನು ಉಳಿಸಲು ಎದುರು ನೋಡುತ್ತಿದ್ದೇನೆ’ ಎಂದು ಜೀವ್ ತಿಳಿಸಿದ್ದಾರೆ.


ಜೀವ್ ಮಿಲ್ಖಾ ಸಿಂಗ್

2001ರ ದುಬೈ ಡಸರ್ಟ್ ಕ್ಲಾಸಿಕ್ ಟೂರ್ನಿಯಲ್ಲಿ ನಾಲ್ಕು ಸುತ್ತುಗಳನ್ನು ಪೂರ್ಣಗೊಳಿಸಿದ್ದ ಜೀವ್ ಅವರು ವಿಶ್ವದಾಖಲೆ ಸ್ಥಾಪಿಸಿದ್ದರು.

ಯೂರೋಪಿಯನ್ ಹಾಗೂ ಜಪಾನ್ ಟೂರ್ನಿಗಳಲ್ಲಿ ತಲಾ ನಾಲ್ಕು ಬಾರಿ ಮತ್ತು ಏಷ್ಯನ್ ಟೂರ್ನಿಗಳಲ್ಲಿ ಆರು ಬಾರಿ ಅವರು ಪ್ರಶಸ್ತಿ ಜಯಿಸಿದ್ದಾರೆ.

‘1993ರಲ್ಲಿ ಮೊದಲ ಬಾರಿ ನಾನು ದುಬೈಗೆ ಬಂದೆ ಎನಿಸುತ್ತದೆ. ಇಲ್ಲಿರುವ ಎಲ್ಲ ಗಳಿಗೆಯನ್ನೂ ಆನಂದಿಸಿದ್ದೇನೆ’ ಎಂದು ಜೀವ್ ಹೇಳಿದ್ದಾರೆ.

ಜೀವ್ ಅವರು ಭಾರತದ ದಿಗ್ಗಜ ಅಥ್ಲೀಟ್ ದಿವಂಗತ ಮಿಲ್ಖಾ ಸಿಂಗ್ ಅವರ ಪುತ್ರ. ಇತ್ತೀಚೆಗೆ ಭಾರತದ ಟೆನಿಸ್ ಆಟಗಾರ್ತಿ ಸಾನಿಯಾ ಮಿರ್ಜಾ ಕೂಡ ದುಬೈ ಗೋಲ್ಡನ್ ವೀಸಾ ಪಡೆದಿದ್ದರು.

ಪ್ಯಾರಾಲಿಂಪಿಯನ್ ದೇವೇಂದ್ರ ಜಜಾರಿಯಾ, ಬಾಕ್ಸಿಂಗ್ ತಾರೆ ಸರಿತಾ ದೇವಿಗೆ ಸ್ಥಾನ

ಕ್ರೀಡಾ ಪ್ರಶಸ್ತಿ ಆಯ್ಕೆ ಸಮಿತಿಯಲ್ಲಿ ವೆಂಕಟೇಶ್ ಪ್ರಸಾದ್

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ತಂಡದ ಮಾಜಿ ಆಟಗಾರ, ಕರ್ನಾಟಕದ ವೆಂಕಟೇಶ್ ಪ್ರಸಾದ್ ಮತ್ತು ಮೂರು ಬಾರಿಯ ಪ್ಯಾರಾಲಿಂಪಿಕ್ ಪದಕ ವಿಜೇತ ಜಾವೆಲಿನ್ ಥ್ರೊ ಪಟು ದೇವೇಂದ್ರ ಜಜಾರಿಯಾ ಅವರು ಈ ವರ್ಷದ ಕ್ರೀಡಾ ಪ್ರಶಸ್ತಿಗಳ ಆಯ್ಕೆ ಸಮಿತಿಯಲ್ಲಿ ಸ್ಥಾನ ಪಡೆದಿದ್ದಾರೆ.

ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಮುಕುಂದಕಮ್ ಶರ್ಮಾ ಅವರನ್ನು ಸಮಿತಿಯ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿದೆ.

ಮಾಜಿ ಶೂಟರ್ ಅಂಜಲಿ ಭಾಗವತ್, ಮಹಿಳಾ ಕ್ರಿಕೆಟ್ ತಂಡದ ಮಾಜಿ ನಾಯಕಿ ಅಂಜುಮ್ ಚೋಪ್ರಾ ಮತ್ತು ಮಾಜಿ ವಿಶ್ವ ಚಾಂಪಿಯನ್ ಬಾಕ್ಸರ್ ಎಲ್. ಸರಿತಾ ದೇವಿ ಕೂಡ ಸಮಿತಿಯಲ್ಲಿದ್ದಾರೆ ಎಂದು ಕ್ರೀಡಾ ಸಚಿವಾಲಯವು ಸುತ್ತೋಲೆಯಲ್ಲಿ ತಿಳಿಸಿದೆ.


ವೆಂಕಟೇಶ್ ಪ್ರಸಾದ್– ಪ್ರಜಾವಾಣಿ ಚಿತ್ರ

ಹಾಕಿ ಕೋಚ್ ಬಲದೇವ್ ಸಿಂಗ್, ಭಾರತ ಕ್ರೀಡಾ ಪ್ರಾಧಿಕಾರದ (ಸಾಯ್) ಪ್ರಧಾನ ನಿರ್ದೇಶಕ ಸಂದೀಪ್ ಪ್ರಧಾನ್ ಮತ್ತು ಪತ್ರಕರ್ತರಾದ ವಿಜಯ್ ಲೋಕಪಾಲಿ ಮತ್ತು ವಿಕ್ರಾಂತ್ ಗುಪ್ತಾ ಸಮಿತಿಯಲ್ಲಿ ಇದ್ದಾರೆ.


ದೇವೇಂದ್ರ ಜಜಾರಿಯಾ– ಪಿಟಿಐ ಚಿತ್ರ

ಜಜಾರಿಯಾ ಅವರು ಟೋಕಿಯೊ ಪ್ಯಾರಾಲಿಂಪಿಕ್ಸ್‌ನಲ್ಲಿ ಬೆಳ್ಳಿ ಪದಕ ಗೆದ್ದಿದ್ದರು. 2004 ಹಾಗೂ 2016ರ ಕೂಟಗಳಲ್ಲಿ ಅವರು ಚಿನ್ನದ ಪದಕಗಳನ್ನು ಕೊರಳಿಗೇರಿಸಿಕೊಂಡಿದ್ದರು. ಪ್ರಶಸ್ತಿ ವಿಜೇತರನ್ನು ನಿರ್ಧರಿಸಲು ಆಯ್ಕೆ ಸಮಿತಿಯು ಕೆಲವೇ ದಿನಗಳಲ್ಲಿ ಸಭೆ ಸೇರಲಿದೆ. ಒಲಿಂಪಿಕ್ ಮತ್ತು ಪ್ಯಾರಾಲಿಂಪಿಕ್ ಕ್ರೀಡಾಕೂಟಗಳಲ್ಲಿ ಭಾರತದ ಅಥ್ಲೀಟ್‌ಗಳ ಸಾಮರ್ಥ್ಯ ಗಮನಿಸಿದ ಬಳಿಕ ಪ್ರಶಸ್ತಿ ನೀಡಲು ಸರ್ಕಾರ ನಿರ್ಧರಿಸಿದ ನಂತರ ಈ ವರ್ಷದ ಪ್ರಶಸ್ತಿ ಘೋಷಿಸುವಲ್ಲಿ ವಿಳಂಬವಾಗಿದೆ.

ಉದ್ದೀಪನ ಮದ್ದು; ನಿಷೇಧ ಅವಧಿ ಪೂರ್ಣಗೊಂಡವರು ಪ್ರಶಸ್ತಿಗೆ ಅರ್ಹರು

ಉದ್ದೀಪನ ಮದ್ದು ಸೇವಿಸಿ ಸಿಕ್ಕಿಬಿದ್ದು ನಿಷೇಧ ಅವಧಿ ಪೂರ್ಣಗೊಳಿಸಿದ ಅಥ್ಲೀಟ್‌ಗಳು ಮತ್ತು ಕೋಚ್‌ಗಳೂ ಪ್ರಶಸ್ತಿಗಳಿಗೆ ಅರ್ಹರಾಗಿರುತ್ತಾರೆ ಎಂದು ಕ್ರೀಡಾ ಸಚಿವಾಲಯ ತಿಳಿಸಿದೆ.

2012ರಲ್ಲಿ ಅವರ ‘ಉದ್ದೇಶಪೂರ್ವಕವಲ್ಲದ‘ ಡೋಪಿಂಗ್ ನಿಯಮ ಉಲ್ಲಂಘಿಸಿದ ಕಾರಣ ಬಾಕ್ಸರ್ ಅಮಿತ್ ಪಂಘಲ್ ಅವರು ಪ್ರಶಸ್ತಿಯಿಂದ ವಂಚಿತರಾಗಿದ್ದರು. ಇಂತಹ ಅಥ್ಲೀಟ್‌ಗಳಿಗೆ ಈ ನಿಯಮ ಅನುಕೂಲವಾಗಲಿದೆ. ಡೋಪಿಂಗ್ ಅಪರಾಧಗಳಿಗೆ ಶಿಕ್ಷೆಗೊಳಗಾದ ಕ್ರೀಡಾಪಟುಗಳು ತಮ್ಮ ಅಮಾನತು ಅವಧಿ ಮುಗಿಸಿದ ಬಳಿಕ ಪ್ರಶಸ್ತಿಗೆ ಅರ್ಹರಾಗಿರುತ್ತಾರೆ. ಆದರೆ ಅಮಾನತು ಅವಧಿಯಲ್ಲಿ ಅವರು ತೋರಿದ ಸಾಧನೆಗಳನ್ನು ಪರಿಗಣಿಸಲಾಗುವುದಿಲ್ಲವೆಂದು ಸಚಿವಾಲಯದ ಸುತ್ತೋಲೆಯಲ್ಲಿ ತಿಳಿಸಲಾಗಿದೆ.